ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮಂಗಳೂರು

ಬುಧವಾರ, 6 ಮೇ 2026

ಸಂಪುಟ 48, ಸಂಚಿಕೆ 48 ಪುಟಗಳು 14+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital

ಕಿರುಸುದ್ದಿ

ಉಪಚುನಾವಣೆಯಲ್ಲಿ ಕಾಂಗ್ರೆಸ್ ಹಣ ಹೆಂಡ ಹಂಚಿ ಗೆಲುವು: ಬೊಮ್ಮಾಯಿ ಟೀಕೆ

• **ಮಡಿಕೇರಿ:** ಪಂಚ ರಾಜ್ಯಗಳ ಚುನಾವಣೆಗಳ ಪೈಕಿ 3 ರಾಜ್ಯಗಳಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ್ದು, ಕರ್ನಾಟಕದಲ್ಲಿ 2028ರಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲು ಪ್ರೇರಣೆಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಕೊಡಗಿನ ಮಾದಾಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೇ 9 ರಂದು ಚಿತ್ರದುರ್ಗದಲ್ಲಿ ಆಯೋಜಿತ ಯಡಿಯೂರಪ್ಪ ಅಭಿನಂದನೋತ್ಸವದ ಮೂಲಕ ಕರ್ನಾಟಕದಲ್ಲಿ ಬಿಜೆಪಿ ಚುನಾವಣಾ ರಣಕಹಳೆ ಊದಲಿದೆ, ಆ ವಿಜಯೋತ್ಸವದ ಬಳಿಕ ಕಾಂಗ್ರೆಸ್ ಸರ್ಕಾರದ ಪತನಕ್ಕೆ ದಿನಗಣನೆ ಪ್ರಾರಂಭವಾಗಲಿದೆ ಎಂದರು. ಕಳೆದ 15 ವರ್ಷಗಳ ಕಾಲ ಪಶ್ಚಿಮ ಬಂಗಾಳದಲ್ಲಿ ದುರಾಡಳಿತ ನಡೆಸಿದ್ದ ಮಮತಾ ಬ್ಯಾನರ್ಜಿಯ ಸರ್ವಾಧಿಕಾರವನ್ನು ಅಂತ್ಯಗೊಳಿಸಿದ ಮೋದಿ, ಅಮಿತ್ ಶಾ ಜೋಡಿಯ ಕಾರ್ಯತಂತ್ರ ಭಾರತೀಯರ ಮೆಚ್ಚುಗೆ ಗಳಿಸಿದೆ, ಕರ್ನಾಟಕ ಉಪಚುನಾವಣೆ ಸಂದರ್ಭ ಮತದಾನಕ್ಕೆ 2 ದಿನಗಳಿರುವಾಗ ಕಾಂಗ್ರೆಸ್ ಪಕ್ಷ ಹಣ, ಹೆಂಡ ಹಂಚುವ ಮೂಲಕ ಕರಾಳರಾತ್ರಿಯ ನೆನಪನ್ನು ತಂದು ಕುಟಿಲ ತಂತ್ರದಿಂದ ಚುನಾವಣೆ ಗೆದ್ದಿದೆ ಎಂದರು.

ಮೇ 10-16: ಶ್ರೀಮದ್ ಭಾಗವತ ಸಪ್ತಾಹ ಪ್ರವಚನ

• **ಮಂಗಳೂರು:** ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಅಸೋಸಿಯೇಶನ್ ಕೊಡಿಯಾಲ್‌ಬೈಲ್ ಮಂಗಳೂರು ಮತ್ತು ತುಳುನಾಡು ಎಜುಕೇಶನಲ್ ಟ್ರಸ್ಟ್ ಮಂಗಳೂರು ವತಿಯಿಂದ ಮೇ 10ರಿಂದ 16ರವರೆಗೆ ಪ್ರತಿದಿನ ಸಂಜೆ 5.30ರಿಂದ 7.30ರವರೆಗೆ ಕೊಡಿಯಾಲ್‌ಬೈಲ್‌ನ ಎಸ್‌ಕೆಡಿಬಿ ಆವರಣದಲ್ಲಿರುವ ಶಾರದಾ ವಿದ್ಯಾಲಯದ ಧ್ಯಾನ ಮಂದಿರದಲ್ಲಿ ಶ್ರೀಮದ್ ಭಾಗವತ ಸಪ್ತಾಹ ಪ್ರವಚನ ಆಯೋಜಿಸಲಾಗಿದೆ. ಪ್ರಸಿದ್ಧ ಪ್ರವಚನಕಾರ ಹುಬ್ಬಳ್ಳಿ ಡಾ. ಶ್ರೀಹರಿ ಆಚಾರ್ಯ ವಾಳ್ವೇಕರ್ ಅವರು ಪ್ರವಚನ ನೀಡುವರು. ಪ್ರತಿದಿನ ಸಂಜೆ 5ರಿಂದ ವಿವಿಧ ಮಾತೃ ಮಂಡಳಿಯವರಿಂದ ಶ್ರೀ ಭಗವನ್ನಾಮ ಸಂಕೀರ್ತನೆ ಕಾರ್ಯಕ್ರಮವಿದೆ. ವಿವಿಧ ಮಠಾಧೀಶರು ಆಗಮಿಸಿ, ಆಶೀರ್ವದಿಸಲಿದ್ದಾರೆ. ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ ಎಂದು ತುಳುನಾಡು ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಬಿ. ಪುರಾಣಿಕ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಪ್ರವಚನಕಾರರು ಸಾಹಿತ್ಯ, ವ್ಯಾಕರಣ, ನ್ಯಾಯ, ವೇದಾಂತ, ತರ್ಕಶಾಸ್ತ್ರ ಪಾರಂಗತರಾಗಿದ್ದಾರೆ. ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದಿಂದ ಪಿಎಚ್‌ಡಿ ಪದವಿ ಪಡೆದಿದ್ದಾರೆ. ಎಸ್‌ಕೆಡಿಬಿ ಅಸೋಸಿಯೇಶನ್ ಪ್ರತಿವರ್ಷ ಪ್ರವಚನ ಸಂಯೋಜಿಸುತ್ತಿದೆ. ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿಗಳು ಕಲಿಯುವ ಆಸಕ್ತಿಯಿದ್ದು, ಬಡತನದ ತೊಂದರೆಗೀಡಾಗಿ ವಿದ್ಯಾಭ್ಯಾಸದಿಂದ ವಂಚಿತರಾದರೆ ನಮ್ಮ ಸಂಸ್ಥೆಗಳಲ್ಲಿ ದತ್ತು ಪಡೆದು ಸಹಾಯ ನೀಡುತ್ತೇವೆ ಎಂದರು. ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಅಸೋಸಿಯೇಶನ್ ಅಧ್ಯಕ್ಷ ಬಿ. ಸುಬ್ರಹ್ಮಣ್ಯ ರಾವ್, ಕೋಶಾಧಿಕಾರಿ ಸುಧಾಕರ ರಾವ್ ಪೇಜಾವರ, ಸದಸ್ಯ ಪ್ರಭಾಕರ ರಾವ್ ಪೇಜಾವರ ಉಪಸ್ಥಿತರಿದ್ದರು.



ಸಾಲಿಗ್ರಾಮ ಪಟ್ಟಣಪಂಚಾಯತ್ ವ್ಯಾಪ್ತಿಯ ಪಶು ಆಸ್ಪತ್ರೆ ವ್ಯಾಪ್ತಿ ಹಾಗೂ ಕೋಟದ ಶಾಂಭವಿ ಶಾಲಾ ಮೈದಾನ ಸಮೀಪ ಮಂಗಳವಾರ ಮಧ್ಯಾಹ್ನ ಬೆಂಕಿ ಅನಾಹುತ ಸಂಭವಿಸಿದ್ದು, ಭಾರೀ ಪ್ರಮಾಣದಲ್ಲಿ ಹಸಿರು ನಾಶವಾಗಿದೆ. ಶಾಂಭವಿ ಶಾಲಾ ಮುಖ್ಯೋಪಾಧ್ಯಾಯ ದಿವಾಕರ್ ರಾವ್, ಕೋಟ ಪಶು ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಸೂರಜ್, ಕೋಟ, ಸಾಲಿಗ್ರಾಮ ಪಂಚಾಯತ್‌ನ ಸಿಬ್ಬಂದಿಗಳಾದ ನಿತೀನ್, ವಿಜಯ ಮತ್ತು ಆಕಾಶ, ಗ್ರಾಮಸ್ಥರಾದ ನಾಗರಾಜ ಪ್ರಭು, ಪ್ರದೀಪ್ ಪುತ್ರನ್ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾದರು.

ಉಡುಪಿ ಜಿಲ್ಲೆಯಲ್ಲಿ ಮುಂಗಾರು ಭತ್ತದ ಬಿತ್ತನೆ ಗುರಿ ಹೆಚ್ಚಳ
ಅನ್ನದಾತರ ಮೊಗದಲ್ಲಿ ಹೊಸ ಭರವಸೆ

▸ ಸುದೀಪ್ ರಾಜ್ ಸುಳ್ಯ



ದಿಗಂತ ವಿಶೇಷ

• **ಉಡುಪಿ:** ಕರಾವಳಿಯ ಜೀವನಾಡಿ ಕೃಷಿಯಾದ ಭತ್ತದ ಬೇಸಾಯಕ್ಕೆ ಜಿಲ್ಲೆಯಲ್ಲಿ ಮತ್ತೆ ಚಾಲನೆ ಸಿಕ್ಕಿದೆ. ಮುಂಗಾರು ಮಳೆಯ ಆಗಮನಕ್ಕೆ ದಿನಗಣನೆ ಆರಂಭವಾಗುತ್ತಿದ್ದಂತೆಯೇ, ಕೃಷಿ ಇಲಾಖೆ ಈ ಬಾರಿ ಭತ್ತದ ಬಿತ್ತನೆ ಪ್ರದೇಶದ ಗುರಿಯನ್ನು ಗಮನಾರ್ಹವಾಗಿ ಏರಿಕೆ ಮಾಡಿದೆ. ಜಿಲ್ಲೆಯಾದ್ಯಂತ ಕೃಷಿ ಚಟುವಟಿಕೆಗಳು ಗರಿಗೆದರಿದ್ದು, ರೈತ ಸಂಪರ್ಕ ಕೇಂದ್ರಗಳು ರೈತರಿಗೆ ಬಿತ್ತನೆ ಬೀಜ ವಿತರಿಸುವಲ್ಲಿ ನಿರತವಾಗಿವೆ.

ಹೆಚ್ಚಾದ ಕೃಷಿ ವ್ಯಾಪ್ತಿ: ಈ ಬಾರಿಯ ಗುರಿ 37,742 ಹೆಕ್ಟೇರ್

ಕಳೆದ ಸಾಲಿನಲ್ಲಿ ಜಿಲ್ಲೆಯಲ್ಲಿ ಭತ್ತದ ಬಿತ್ತನೆಯ ಗುರಿ ಮತ್ತು ಸಾಧನೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದ್ದರೂ, ಈ ಬಾರಿ ಕೃಷಿ ಇಲಾಖೆ ದೃಢವಾದ ಹೆಜ್ಜೆ ಇರಿಸಿದೆ. ಕಳೆದ ಬಾರಿ 35,000 ಹೆಕ್ಟೇರ್ ಗುರಿಯ ಪೈಕಿ 25,996 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಭತ್ತ ಬೆಳೆಯಲಾಗಿತ್ತು. ಆದರೆ, ಈ ವರ್ಷ 2026-27ನೇ ಸಾಲಿನಲ್ಲಿ ಈ ಗುರಿಯನ್ನು ಬರೋಬ್ಬರಿ 37,742 ಹೆಕ್ಟೇರ್‌ಗೆ ಏರಿಸಲಾಗಿದೆ. ಕಳೆದ ಬಾರಿಯ ನೈಜ ಸಾಧನೆಗಿಂತ ಸುಮಾರು 11 ಸಾವಿರ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಕೃಷಿ ವಿಸ್ತರಿಸುವ ಬೃಹತ್ ಗುರಿ ಇದಾಗಿದೆ.

ಗುರಿ ತಲುಪಲು ಇಲಾಖೆಯ ಸಿದ್ಧತೆ

ಈ ಬೃಹತ್ ಬಿತ್ತನೆ ಗುರಿಯನ್ನು ತಲುಪಲು ಕೃಷಿ ಇಲಾಖೆಯು ವ್ಯವಸ್ಥಿತವಾಗಿ ಯೋಜನೆ ರೂಪಿಸಿದೆ.

> ಮಳೆಗಾಲ ಶೀಘ್ರವೇ ಆರಂಭವಾಗಲಿದ್ದು, ಕೃಷಿ ಚಟುವಟಿಕೆ ಆರಂಭವಾಗಿದೆ. ಈಗಾಗಲೇ ಬಿತ್ತನೆ ಬೀಜ ವಿತರಣೆ ಕಾರ್ಯ ಆರಂಭವಾಗಿದೆ. ಆಗಸ್ಟ್- ಸೆಪ್ಟೆಂಬರ್ ವರೆಗೂ ಬಿತ್ತನೆ ಬೀಜ ಪಡೆಯಲು ಅವಕಾಶವಿದೆ. ಅದಕ್ಕೆ ಬೇಕಾದ ಗೊಬ್ಬರ, ಕೀಟನಾಶಕವನ್ನು ದಾಸ್ತಾನು ಇಡಲಾಗಿದೆ.
> ■ ಪೂರ್ಣಿಮಾ, ಕೃಷಿ ನಿರ್ದೇಶಕರು, ಉಡುಪಿ

ಜಿಲ್ಲೆಯ ರೈತರಿಗೆ ಅತ್ಯುತ್ತಮ ತಳಿಯಾದ ಎಂಒ-4 (ಭದ್ರಾ) ಬಿತ್ತನೆ ಬೀಜವನ್ನು ಹೇರಳವಾಗಿ ದಾಸ್ತಾನು ಮಾಡಲಾಗಿದೆ. ಈಗಾಗಲೇ ಮೇ ಮಾಹೆಯಿಂದಲೇ ಬೀಜ ವಿತರಣೆ ಪ್ರಕ್ರಿಯೆ ಆರಂಭವಾಗಿದ್ದು, ಜಿಲ್ಲಾದ್ಯಂತ ಇರುವ ರೈತ ಸಂಪರ್ಕ ಕೇಂದ್ರಗಳಿಗೆ ಹಂತಹಂತವಾಗಿ ಬೀಜಗಳನ್ನು ಸರಬರಾಜು ಮಾಡಲಾಗುತ್ತಿದೆ.ರೈತರಿಗೆ ಯಾವುದೇ ರೀತಿಯ ಬೀಜದ ಕೊರತೆಯಾಗದಂತೆ ಕರ್ನಾಟಕ ರಾಜ್ಯ ಬಿತ್ತನೆ ಬೀಜ ನಿಗಮದಿಂದ ಹೆಚ್ಚುವರಿ ದಾಸ್ತಾನನ್ನು ಸಹ ಕಾಯ್ದಿರಿಸಲಾಗಿದೆ.

ಬೀಜ ವಿತರಣೆಯಲ್ಲಿ ಸಮರ್ಪಕ ನಿರ್ವಹಣೆ

ಸದ್ಯದ ಮಾಹಿತಿಯಂತೆ ಜಿಲ್ಲೆಯಲ್ಲಿ ಸುಮಾರು 537 ಕ್ವಿಂಟಾಲ್ ಭತ್ತದ ಬಿತ್ತನೆ ಬೀಜಗಳು ವಿತರಣೆಗೆ ಸಿದ್ಧವಾಗಿವೆ. ಈಗಾಗಲೇ ನೂರಾರು ರೈತರು ಇದರ ಪ್ರಯೋಜನ ಪಡೆದಿದ್ದು, ಬಿತ್ತನೆ ಕಾರ್ಯ ಚುರುಕುಗೊಂಡಿದೆ. ಕೇವಲ ಬೀಜ ಮಾತ್ರವಲ್ಲದೆ, ಕೃಷಿಗೆ ಪೂರಕವಾದ ರಸಗೊಬ್ಬರ , ಅಗತ್ಯ ಕೀಟನಾಶಕಗಳನ್ನು ಜಿಲ್ಲೆಯಲ್ಲಿ ಸಮರ್ಪಕವಾಗಿ ದಾಸ್ತಾನು ಇರಿಸಲಾಗಿದ್ದು, ರೈತರು ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳವರೆಗೂ ಸೌಲಭ್ಯಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ರೈತರಿಗೆ ದೊರೆಯುವ ಸಬ್ಸಿಡಿ ವಿವರ

ಬಿತ್ತನೆ ಬೀಜ ಖರೀದಿಸುವ ರೈತರಿಗೆ ಸರ್ಕಾರ ಭರ್ಜರಿ ಸಬ್ಸಿಡಿ ನೀಡುತ್ತಿದೆ. ಮಾರುಕಟ್ಟೆಯಲ್ಲಿ ಕೆಜಿಗೆ 49 ರೂ. ಬೆಲೆ ಇರುವ ಭತ್ತದ ಬಿತ್ತನೆ ಬೀಜಕ್ಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಪ್ರತಿ ಕೆ.ಜಿ.ಗೆ 12 ರೂ. ಹಾಗೂ ಸಾಮಾನ್ಯ ವರ್ಗದ ರೈತರಿಗೆ ಪ್ರತಿ ಕೆ.ಜಿ.ಗೆ 8 ರೂ. ಸಬ್ಸಿಡಿ ನಿಗದಿಪಡಿಸಲಾಗಿದೆ. ರೈತರು ತಮ್ಮ ಜಮೀನಿನ ಪಹಣಿ ಆಧಾರದ ಮೇಲೆ ಒಬ್ಬರು ಗರಿಷ್ಠ 125 ಕೆ.ಜಿ. ವರೆಗೂ ಸಬ್ಸಿಡಿ ದರದಲ್ಲಿ ಬೀಜಗಳನ್ನು ಖರೀದಿಸಬಹುದಾಗಿದೆ.

ಅಭಿನಂದನೆ ಸಲ್ಲಿಸಿದ ಎಂಎಲ್ಸಿ ಕಿಶೋರ್ ಕುಮಾರ್ ಪುತ್ತೂರು

• **ಪುತ್ತೂರು:** ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಸಾಧಿಸಿರುವ ಅಭೂತಪೂರ್ವ ಗೆಲುವನ್ನು ಉಡುಪಿ-ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಹರ್ಷ ವ್ಯಕ್ತಪಡಿಸಿದ್ದಾರೆ. ಈ ಐತಿಹಾಸಿಕ ಗೆಲುವಿಗಾಗಿ ಅಹೋರಾತ್ರಿ ಶ್ರಮಿಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಪಕ್ಷದ ರಾಷ್ಟ್ರೀಯ ನಾಯಕ ನಿತಿನ್ ನಬೀನ್ ಅವರಿಗೆ ಅವರು ವಿಶೇಷ ಅಭಿನಂದನೆ ಸಲ್ಲಿಸಿದ್ದಾರೆ. ಅಲ್ಲದೆ ಕಮಲ ಅರಳಿಸಲು ಹಗಲಿರುಳು ಶ್ರಮಿಸಿದ ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತ ಬಂಧುಗಳಿಗೂ ಅವರು ತಮ್ಮ ಹೃತ್ಪೂರ್ವಕ ಕೃತಜ್ಞತೆ ತಿಳಿಸಿದ್ದಾರೆ.



ಪಶ್ಚಿಮ ಬಂಗಾಳದಲ್ಲಿ ಕಳೆದ 15 ವರ್ಷಗಳ ತೃಣಮೂಲ ಕಾಂಗ್ರೆಸ್‌ನ ಕೆಟ್ಟ ಆಡಳಿತದಿಂದ ಜನತೆ ಸಂಪೂರ್ಣ ಬೇಸತ್ತಿದ್ದರು. ಬಿಜೆಪಿ ಶೇ.45.84ರಷ್ಟು ಬೃಹತ್ ಮತ ಹಂಚಿಕೆಯೊಂದಿಗೆ ಬರೋಬ್ಬರಿ 206 ಸ್ಥಾನಗಳನ್ನು ಗೆದ್ದು ಐತಿಹಾಸಿಕ ಸಾಧನೆ ಮಾಡಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಭವಾನಿಪುರ ಕ್ಷೇತ್ರದಲ್ಲಿ 15,105 ಮತಗಳ ಭಾರೀ ಅಂತರದಿಂದ ಮಣಿಸಿದ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರ ಸಾಧನೆ ಅತ್ಯಂತ ಪ್ರಶಂಸಾರ್ಹ. ಇದು ಕೇವಲ ಬಿಜೆಪಿಯ ಗೆಲುವಲ್ಲ, ಬದಲಾಗಿ ಪ್ರತಿಯೊಬ್ಬ ನಾಗರಿಕನ ಮತ್ತು ಸನಾತನಿಯ ಗೆಲುವು' ಎಂಬ ಸುವೇಂದು ಅಧಿಕಾರಿ ಅವರ ಮಾತುಗಳು ಬಂಗಾಳದ ಹೊಸ ರಾಜಕೀಯ ಶಕೆಗೆ ಮುನ್ನುಡಿ ಬರೆದಿವೆ ಎಂದರು.

ಅಸ್ಸಾಂನಲ್ಲಿಯೂ ಬಿಜೆಪಿ ಶೇ.37.81 ಮತ ಪಡೆದು ಏಕಾಂಗಿಯಾಗಿ 82 ಸ್ಥಾನ ಗೆದ್ದುಕೊಂಡಿದ್ದು, ತನ್ನ ಮಿತ್ರಪಕ್ಷಗಳೊಂದಿಗೆ ಎನ್.ಡಿ.ಎ. ಒಕ್ಕೂಟದ ಮೂಲಕ ಒಟ್ಟು 102 ಸ್ಥಾನ ಗೆಲ್ಲುವ ಮುಖಾಂತರ ಸತತ 3ನೇ ಬಾರಿಗೆ ಅಧಿಕಾರ ಹಿಡಿದು ಹ್ಯಾಟ್ರಿಕ್ ಸಾಧಿಸಿದೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಜಲುಕಬಾರಿ ಕ್ಷೇತ್ರದಿಂದ ಸತತ 6ನೇ ಬಾರಿಗೆ 80 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಿರುವುದು ಅವರ ಅಭೂತಪೂರ್ವ ಜನಪ್ರಿಯತೆಯನ್ನು ಎತ್ತಿ ತೋರಿಸುತ್ತದೆ. 'ನಮ್ಮ ಮೇಲೆ ವಿಶ್ವಾಸವಿಟ್ಟ ಅಸ್ಸಾಂನ ಜನತೆಗೆ ಧನ್ಯವಾದಗಳು, ಚುನಾವಣೆಯಲ್ಲಿ ನೀಡಿದ ಪ್ರತಿಯೊಂದು ಭರವಸೆಯನ್ನೂ ನಾವು ಈಡೇರಿಸುತ್ತೇವೆ' ಎಂದು ಘೋಷಿಸಿದ ಹಿಮಂತ ಬಿಸ್ವಾ ಶರ್ಮಾ ಅವರ ಸಮರ್ಥ ನಾಯಕತ್ವವು ಇಡೀ ಈಶಾನ್ಯ ಭಾರತದಲ್ಲಿ ಬಿಜೆಪಿಗೆ ಅತಿ ದೊಡ್ಡ ಶಕ್ತಿಯಾಗಿದೆ ಎಂದು ಕಿಶೋರ್ ಕುಮಾರ್ ಕೊಂಡಾಡಿದ್ದಾರೆ.

ಇದೇ ರೀತಿ ಪುದುಚೇರಿಯಲ್ಲಿಯೂ ಎನ್.ಡಿ.ಎ. ಒಕ್ಕೂಟವು ಗೆದ್ದು ಮತ್ತೊಮ್ಮೆ ಭರ್ಜರಿಯಾಗಿ ಅಧಿಕಾರಕ್ಕೆ ಮರಳಿದ್ದು, ಬಿಜೆಪಿ 4 ಸ್ಥಾನಗಳಲ್ಲಿ ಜಯಭೇರಿ ಬಾರಿಸುವ ಮೂಲಕ ತನ್ನ ಪ್ರಾಬಲ್ಯ ಮೆರೆದಿದೆ. ಒಟ್ಟಾರೆಯಾಗಿ ಹಿಂಸಾಚಾರ ಮತ್ತು ಓಲೈಕೆಯ ರಾಜಕಾರಣವನ್ನು ಬದಿಗೊತ್ತಿ, ಬಿಜೆಪಿಯ 'ಅಭಿವೃದ್ಧಿ ಪರ' ಸಂಕಲ್ಪಕ್ಕೆ ಅತಿ ದೊಡ್ಡ ಆಶೀರ್ವಾದ ನೀಡಿರುವ ಮೂರೂ ರಾಜ್ಯಗಳ ಪ್ರಜ್ಞಾವಂತ ಮತದಾರರಿಗೆ ಅವರು ವಿಶೇಷ ಕೃತಜ್ಞತೆ ಸಲ್ಲಿಸಿದ್ದಾರೆ.

ರಾಜ್ಯದಲ್ಲಿ ಮೇ 25ರಿಂದ ಮುಂಗಾರು ಮಳೆ

• **ಕಾಸರಗೋಡು:** ಮುಂಗಾರು ಮಳೆ ಕೇರಳಕ್ಕೆ ಮೇ 25ರಂದು ಆಗಮಿಸಲಿದೆ. ಮೇ 18ರಿಂದ ಇದರ ಸೂಚನೆಗಳು ಉಂಟಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಮುಂಗಾರುಮಳೆಸುರಿಯುವುದರೊಂದಿಗೆ ಪ್ರಸ್ತುತ ಅನುಭವಗೊಂಡಿರುವ ಅತೀ ತೀವ್ರ ಉಷ್ಣತೆಗೆ ಪರಿಹಾರ ವಾಗಲಿದೆ. ಇದೀಗ ಕೆಲವೆಡೆ ಸುರಿಯುತ್ತಿರುವ ಬೇಸಿಗೆ ಮಳೆ ಮೇ 15ರ ವರೆಗೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಮಾರ್ಚ್ 1ರಿಂದ ಏಪ್ರಿಲ್ 29ರ ವರೆಗೆ ಕೇರಳದಲ್ಲಿ 136.3 ಮಿಲ್ಲಿ ಮೀಟರ್ ಮಳೆ ಲಭಿಸಬೇಕಾಗಿತ್ತು. ಆದರೆ 73.5 ಮಿಲ್ಲಿ ಮೀಟರ್ ಮಾತ್ರವೇ ಸುರಿದಿದೆ. ಈ ಮೂಲಕ 46 ಶೇಕಡಾ ಮಳೆ ಕಡಿಮೆಯಾಗಿದೆ. ಕಲ್ಲಿಕೋಟೆ, ಪತ್ತನಂತಿಟ್ಟ ಜಿಲ್ಲೆಗಳಲ್ಲಿ ಸಾಮಾನ್ಯ ರೀತಿಯಲ್ಲಿ ಬೇಸಿಗೆ ಮಳೆ ಲಭಿಸಿದೆ.

ಕೇರಳದ ಕೆಲವೆಡೆಗಳಲ್ಲಿ ಮೇ 7ರ ವರೆಗೆ ಗುಡುಗು ಮಿಂಚು ಸಹಿತ ಮಳೆ ಸುರಿಯುವ ಸಾಧ್ಯತೆ ಇದೆ. ಅಲ್ಲದೆ ಗಂಟೆಗೆ 40ರಿಂದ 50 ಕಿಲೋ ಮೀಟರ್ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯೂ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ತಿಳಿಸಿದೆ.

ನೀರು ಪೂರೈಕೆ ಅವಧಿ ಕಡಿಮೆ | ಎತ್ತರದ ಪ್ರದೇಶಗಳಿಗೆ ತಲುಪುತ್ತಿಲ್ಲ ನೀರು
ಅಳಪೆ ಉತ್ತರದಲ್ಲಿ ನೀರು ಸರಬರಾಜು ಅಸಮರ್ಪಕ

▸ ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ವಾರ್ಡ್ ನಂಬರ್ 51
ಅಳಪೆ ಉತ್ತರ

• **ಮಂಗಳೂರು:** ಎತ್ತರ ತಗ್ಗು, ಗುಡ್ಡ ಪ್ರದೇಶಗಳನ್ನು ಒಳಗೊಂಡಿರುವ ಅಳಪೆ ಉತ್ತರ ವಾರ್ಡ್‌ನ ಸರಿಪಳ್ಳ ಸಹಿತ ವಿವಿಧ ಕಡೆ ಜನತೆ ನೀರಿನ ಸಮಸ್ಯೆ ಅನುಭವಿಸುತ್ತಿದ್ದಾರೆ. ಪಡೀಲು, ಕೊಡಕ್ಕಲ್, ಕೆಂಬಾರು, ಮೇಘನಗರ, ಅಳಪೆ, ಸರಿಪಳ್ಳ, ಕನ್ನಗುಡ್ಡೆ, ನೂಜಿ, ಕಂಡೇವು, ಪ್ರಶಾಂತ್ ನಗರ, ನಿಡ್ಡೇಲ್, ಶಿವನಗರ ಪ್ರದೇಶಗಳನ್ನು ಒಳಗೊಂಡಿರುವ ಅಳಪೆ ಉತ್ತರ ವಾರ್ಡ್‌ನ ಕೆಲ ಪ್ರದೇಶಗಳಲ್ಲಿ ಇತ್ತೀಚಿನ ದಿನಗಳಲ್ಲಿ ನೀರಿನ ಸಮಸ್ಯೆ ಹೆಚ್ಚಳವಾಗಿದೆ.

ಅಳಪೆ ಉತ್ತರ ವಾರ್ಡ್‌ನ ಸರಿಪಳ್ಳ, ಕನ್ನಗುಡ್ಡೆ, ಶಿವನಗರ, ನೂಜಿ ಪರಿಸರದಲ್ಲಿ ನೀರು ಪೂರೈಕೆ ಸಮರ್ಪಕವಾಗಿ ಆಗುತ್ತಿಲ್ಲ. ಇದರಿಂದಾಗಿ ಈ ಭಾಗದ ಜನತೆ ನೀರಿಗಾಗಿ ಪರದಾಡುವ ಸ್ಥಿತಿ ಉಂಟಾಗಿದೆ. ಮಂಗಳೂರು ಮಹಾನಗರ ಪಾಲಿಕೆ ಪೈಪ್‌ಲೈನ್‌ನಲ್ಲಿ ಪೂರೈಕೆಯಾಗುವ ನೀರು ಗುಡ್ಡ ಪ್ರದೇಶಗಳಿಗೆ ತಲುಪುತ್ತಿಲ್ಲ.

ಈ ವಾರ್ಡ್‌ಗೆ ಸರಿಪಳ್ಳ ಹಾಗೂ ಪಡೀಲ್ ಟ್ಯಾಂಕ್‌ನಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಸರಿಪಳ್ಳ ಟ್ಯಾಂಕ್‌ನಿಂದ ಸರಿಪಳ್ಳ, ಕನ್ನಗುಡ್ಡೆ, ನೂಜಿ, ನಿಡ್ಡೇಲ್ ಪರಿಸರಕ್ಕೆ ಬೆಳಗ್ಗಿನ ವೇಳೆ ನೀರು ಬರುತ್ತಿದೆ. ಪಡೀಲ್ ಟ್ಯಾಂಕ್‌ನಿಂದ ಮೇಘನಗರ, ಅಳಪೆ, ಕೊಡಕ್ಕಲ್, ಶಿವನಗರ ಪ್ರದೇಶಗಳಿಗೆ ನೀರು ಪೂರೈಕೆ ಆಗುತ್ತಿದೆ. ಇಲ್ಲಿ ಮಧ್ಯಾಹ್ನ 2.30ರಿಂದ ರಾತ್ರಿ 12ರವರೆಗೆ ನೀರು ಪೂರೈಕೆಗೆ ಸಮಯ ನಿಗದಿಯಾಗಿದೆ. ಈ ಅವಧಿಯಲ್ಲಿ ಎರಡು ಕಡೆಗಳಿಗೆ ಸಮಯ ಹಂಚಿಕೆ ಮಾಡಿ ನೀರು ಬಿಡಲಾಗುತ್ತಿದೆ. ಕೆಲವು ಕಡೆಗಳಿಗೆ ನೀರು ಬರುವಾಗಲೇ ಸಂಜೆ 5 ಗಂಟೆ ಆಗುತ್ತದೆ ಎನ್ನುತ್ತಾರೆ ಸ್ಥಳೀಯರು.

ಈ ವಾರ್ಡ್‌ನ ಹೆಚ್ಚಿನ ಪ್ರದೇಶಗಳು ಗುಡ್ಡಗಳಿಂದ ಆವೃತವಾಗಿರುವ ಕಾರಣ ಇಲ್ಲಿಗೆ ಟ್ಯಾಂಕರ್ ಮೂಲಕ ನೀರು ಪೂರೈಸುವುದು ಕಷ್ಟಸಾಧ್ಯವಾಗಿದೆ. ಟ್ಯಾಂಕರ್ ನೀರು ಅವಶ್ಯಕತೆ ಇದ್ದಲ್ಲಿ ಮನಪಾ ಜೆಇಗಳು ಒದಗಿಸಿಕೊಡುತ್ತಾರೆ. ನಿಡ್ಡೇಲ್ ಪ್ರದೇಶಕ್ಕೆ ಟ್ಯಾಂಕರ್ ಮೂಲಕ ನೀರು ನೀಡಲಾಗುತ್ತಿದೆ. ಕನ್ನಗುಡ್ಡೆ, ಸರಿಪಳ್ಳದಲ್ಲಿ ಕೊಳವೆಬಾವಿಗಳಿವೆ. ಈ ವಾರ್ಡ್‌ನಲ್ಲಿ ಸರಕಾರಿ ಬಾವಿಗಳು ಇಲ್ಲ.

ಅಳಪೆ ಉತ್ತರ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಪೈಪ್‌ಲೈನ್ ಕಾಮಗಾರಿಗಳು ಅರ್ಧಂಬರ್ಧ ಮಾತ್ರ ಆಗಿದೆ. ಜಲಸಿರಿಯಡಿ ಶೇ. 50ರಷ್ಟು ಕೆಲಸಗಳು ಮಾತ್ರ ಪೂರ್ಣಗೊಂಡಿವೆ. ಕೆಲವೆಡೆ ಜಲಸಿರಿ ಪೈಪ್‌ಲೈನ್ ಮೂಲಕ ನೀರಿನ ಸಂಪರ್ಕ ಆಗಿದೆ. ಪಡೀಲ್‌ನಲ್ಲಿ ಬೃಹತ್ ಟ್ಯಾಂಕ್ ನಿರ್ಮಾಣವಾಗಿದೆ.



ಕೊಡಕ್ಕಲ್‌ನಲ್ಲಿ ತಡೆಗೋಡೆ ಕಾಮಗಾರಿ ನಡೆದಿದೆ

ಕೃತಕ ನೆರೆ

ಪಂಪ್‌ವೆಲ್‌ನಂತೆ ಪಡೀಲ್‌ನಲ್ಲೂ ಮಳೆಗಾಲದಲ್ಲಿ ಕೃತಕ ನೆರೆ ಸಾಮಾನ್ಯ ಎಂಬಂತಾಗಿದೆ. ಒಂದೆರಡು ಗಂಟೆಗಳ ಕಾಲ ಭಾರಿ ಮಳೆ ಸುರಿದಾಗ ಪಡೀಲ್, ಕೊಡಕ್ಕಲ್ ಪ್ರದೇಶದಲ್ಲಿ ತೋಡಿನಿಂದ ನೀರು ಉಕ್ಕಿ ರಾಷ್ಟ್ರೀಯ ಹೆದ್ದಾರಿ ಜಲಾವೃತಗೊಳ್ಳುತ್ತದೆ. ಪಡೀಲು, ಕೊಡಕ್ಕಲ್, ನೂಜಿ ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗುತ್ತದೆ.

> ನಮ್ಮ ಪ್ರದೇಶದಲ್ಲಿ ಮನಪಾ ಪೈಪ್‌ಲೈನ್‌ನಲ್ಲಿ ಕಳೆದ ಎರಡು ತಿಂಗಳಿನಿಂದ ನೀರು ಬರುತ್ತಿಲ್ಲ. ಈ ಬಗ್ಗೆ ಮನಪಾ ಅಧಿಕಾರಿಗಳಿಗೆ ತಿಳಿಸಿದರೂ ಪ್ರಯೋಜನ ಆಗಿಲ್ಲ. ನಾವು ಮನಪಾಗೆ ನೀರಿನ ಬಿಲ್ ಪಾವತಿಸುತ್ತಿದ್ದೇವೆ. ಆದರೆ, ಮನಪಾ ನಮಗೆ ನೀರು ಒದಗಿಸು ತ್ತಿಲ್ಲ. ನಾವು ಈಗ ಬೋರ್ ವೆಲ್ ನೀರು ಉಪ ಯೋಗಿಸುತ್ತಿದ್ದು, ಅದು ಕುಡಿಯಲು ಸಾಧ್ಯವಾಗುತ್ತಿಲ್ಲ. ಮನಪಾ ಅಧಿಕಾರಿಗಳು ಇನ್ನಾದರೂ ನಮಗೆ ಕುಡಿಯುವ ನೀರು ಒದಗಿಸಬೇಕು.
> ■ ಲೀನಾ ಡಿಸೋಜ, ಕನ್ನಗುಡ್ಡೆ ನೂಜಿ ನಿವಾಸಿ

ಒಳಚರಂಡಿ ಸೋರಿಕೆ

ಪಡೀಲ್ ಸುತ್ತಲಿನ ಪ್ರದೇಶದಲ್ಲಿ ಒಳಚರಂಡಿ ಸೋರಿಕೆ ಸಮಸ್ಯೆ ಇದೆ. ಇಲ್ಲಿ 10 ವರ್ಷ ಹಳೆಯದಾದ ಮ್ಯಾನ್ ಹೋಲ್‌ಗಳು ಓವರ್ ಫ್ಲೋ ಆಗುತ್ತಿದೆ. ಈ ಪ್ರದೇಶದಲ್ಲಿ ಮನೆಗಳು, ವಾಣಿಜ್ಯ ಕಟ್ಟಡಗಳು ಇತ್ತೀಚೆಗಿನ ವರ್ಷಗಳಲ್ಲಿ ಭಾರಿ ಪ್ರಮಾಣದಲ್ಲಿ ಹೆಚ್ಚಳಗೊಂಡಿದ್ದು, ಒಳಚರಂಡಿ ಲೈನ್ ಹಳೆಯದೇ ಇದೆ. ಇದರಿಂದಾಗಿ ಯುಜಿಡಿ ಸೋರಿಕೆಯಿಂದ ಇಲ್ಲಿನ ಜನತೆ ತೊಂದರೆ ಅನುಭವಿಸುತ್ತಿದ್ದಾರೆ.

> ಅಳಪೆ ಉತ್ತರ ವಾರ್ಡ್‌ನ ಸರಿಪಳ್ಳ ಭಾಗದಲ್ಲಿ ನೀರಿನ ಸಮಸ್ಯೆ ಇದೆ. ಈ ವಾರ್ಡ್‌ನ ಎತ್ತರದ ಪ್ರದೇಶಗಳಿಗೆ ನೀರು ತಲುಪುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ನೀರಿನ ಸಮಸ್ಯೆ ಹೆಚ್ಚಳವಾಗಿದೆ. ಪಡೀಲು ಸುತ್ತಲಿನ ಪ್ರದೇಶದಲ್ಲಿ ಮಳೆಗಾಲದಲ್ಲಿ ಕೃತಕ ನೆರೆ ತಡೆಯಲು ಪಡೀಲು, ಕೊಡಕ್ಕಲ್, ನಿಡ್ಡೇಲ್ ಪ್ರದೇಶಗಳಲ್ಲಿ ರಾಜಕಾಲುವೆಗೆ ತಡೆಗೋಡೆ ನಿರ್ಮಿಸಲಾಗಿದೆ. ಪ್ರಸ್ತುತ ರಾಜಕಾಲುವೆಗಳ ಹೂಳು ತೆಗೆಯಲಾಗುತ್ತಿದೆ. ನಮ್ಮ ವಾರ್ಡ್‌ನಲ್ಲಿ ಮಳೆಗಾಲದಲ್ಲಿ ಮನೆಗೆ ಗುಡ್ಡ ಕುಸಿಯುವ ಸಮಸ್ಯೆಯಿದೆ. ವಿವಿಧ ಕಡೆ ಗುಡ್ಡ ಕುಸಿಯದಂತೆ ಈಗಾಗಲೇ ತಡೆಗೋಡೆ ನಿರ್ಮಿಸಲಾಗಿದೆ. ಕುಲಶೇಖರ-ಕೊಡಕ್ಕಲ್ ರಸ್ತೆ 20 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟೀಕರಣಗೊಂಡಿದೆ. ಸೂರ್ಯನಗರ, ಕಂಡೇವು, ಶಿವನಗರ, ಪ್ರಶಾಂತ್‌ಬಾಗ್, ಕೆಂಬಾರು ಪ್ರದೇಶಗಳಲ್ಲಿ ರಸ್ತೆ ನಿರ್ಮಿಸಲಾಗಿದೆ. ಪಡೀಲು ಉದ್ಯಾನವನ ಅಭಿವೃದ್ಧಿಪಡಿಸಲಾಗಿದೆ. ಪಡೀಲಿನ ಬೈರಾಡಿಕೆರೆ ಅಭಿವೃದ್ಧಿ ಕಾರ್ಯ ನಡೆದಿದೆ.



> ■ ರೂಪಶ್ರೀ ಪೂಜಾರಿ , ಅಳಪೆ ಉತ್ತರ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್

ಮಂಗಳೂರು
ಬುಧವಾರ, 6 ಮೇ 2026
ಸಂಪುಟ 48, ಸಂಚಿಕೆ 48 ಪುಟಗಳು 14+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಭಾರತದ ಕಟ್ಟುನಿಟ್ಟಿನ ನಿಯಮ | ೧೦
ಮೇ 8ರಿಂದ ಮಾವು, ಹಲಸು ಮೇಳ | ೦೫
ಪಶ್ಚಿಮ ಬಂಗಾಳ ವೀಕ್ಷಕರಾಗಿ ಶಾ ನೇಮಕ | ೧೦

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಮೂಲ

ದಿನದ ಮಾತು

ಕಳಂಕವನ್ನು ಮನಸ್ಸಿನಿಂದ ತೊಡೆದು ಹಾಕಿ ಬಾಳುವುದೇ ಒಳ್ಳೆಯ ನಡತೆ.
▲ ನೀತಿಮಂಜರಿ

ಬೇರೆಯವರಾಗಿದ್ದರೆ ಅದೆಷ್ಟು ಮೆರೆಯುತ್ತಿದ್ದರೊ

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು

• ಪುಟ ೬

ಕಿರುಸುದ್ದಿ

ಸಿಎಂ ಇಂದು ಮೈಸೂರಿಗೆ

• **ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇ 6ರಂದು ಮೈಸೂರಿಗೆ ಭೇಟಿ ನೀಡಲಿದ್ದಾರೆ. ಬುಧವಾರ ಬೆಳಗ್ಗೆ 10.55ಕ್ಕೆ ವಿಶೇಷ ವಿಮಾನದ ಮೂಲಕ ಬೆಂಗಳೂರಿನಿಂದ ಮೈಸೂರಿಗೆ ಆಗಮಿಸಲಿದ್ದಾರೆ. ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ, ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತ್ಯುತ್ಸವ ಸಮಿತಿ ವತಿಯಿಂದ ನಗರದ ಕಲಾಮಂದಿರದಲ್ಲಿ ಆಯೋಜಿಸಿರುವ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ, 2025–26ನೇ ಸಾಲಿನ ಕಾಯಕಯೋಗಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ರಾತ್ರಿ 7 ಗಂಟೆಗೆ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ ಮೈಸೂರಿನಲ್ಲಿ ವಾಸ್ತವ್ಯ ಮಾಡುವರು. ಮೇ 7 ರ ಬೆಳಗ್ಗೆ 11.25ಕ್ಕೆ ಮೈಸೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

ಕಬ್ಬು ಬೆಂಬಲ ಬೆಲೆ ಕ್ವಿಂಟಾಲ್‌ಗೆ ₹365

• **ಹೊಸದಿಲ್ಲಿ:** ಕೇಂದ್ರ ಸರ್ಕಾರವು 2026–27ರ ಸಕ್ಕರೆ ಹಂಗಾಮಿಗೆ(ಅಕ್ಟೋಬರ್‌ನಿಂದ ಆರಂಭ) ಕಬ್ಬಿನ ಕನಿಷ್ಠ ಖರೀದಿ ಬೆಲೆಯಾದ ನ್ಯಾಯಸಮ್ಮತ ಹಾಗೂ ಲಾಭ ದಾಯಕ ದರವನ್ನು(ಎಫ್‌ಆರ್‌ಪಿ) ಕ್ವಿಂಟಾಲ್‌ಗೆ 10 ರೂ. ಹೆಚ್ಚಿಸಿ 365ಕ್ಕೆ ನಿಗದಿಪಡಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿ(ಸಿಸಿಇಎ) ಈ ನಿರ್ಧಾರ ಕೈಗೊಂಡಿದೆ.

• ಪುಟ ೧೦

ಭಾರೀ ಗೆಲುವಿಗೆ ಮೋದಿ ಅಭಿನಂದಿಸಿದ ಟ್ರಂಪ್

• ಪುಟ ೭

ಸೋಲಿಂದ ಹತಾಶರಾಗದಿರಿ: ಬಿ.ವೈ.ವಿಜಯೇಂದ್ರ

• ಪುಟ ೫

ಕಾನೂನು ಹೋರಾಟಕ್ಕೆ ಸಿದ್ಧತೆ: ಡಿಸಿಎಂ ಡಿಕೆಶಿ

• ಪುಟ ೫

ಕೋರ್ಟ್ ಆದೇಶ ಅವಮಾನಿಸುವುದು ಸಲ್ಲ

• ಪುಟ ೭

ಯುಎಇ ಮೇಲಿನ ಇರಾನ್ ದಾಳಿಗೆ ಭಾರತ ಖಂಡನೆ

• ಪುಟ ೧೦

ಮೇ 11ರಿಂದ ಯುಜಿಸಿಇಟಿ ದಾಖಲೆ ಪರಿಶೀಲನೆ

• ಪುಟ ೭

ನಾನು ಸೋತಿಲ್ಲ, ರಾಜೀನಾಮೆ ನೀಡಲ್ಲ ಎಂದ ಮಮತಾ

ಗಾದಿ ಬಿಡದ ದೀದಿ

• **ಹೊಸದಿಲ್ಲಿ:** ದೇಶದ ಹಿತಾಸಕ್ತಿಗೆ ಪೂರಕವಾದ ಕೇಂದ್ರದ ಎಲ್ಲಾ ನಡೆಗಳಿಗೂ ಬೆನ್ನು ಮಾಡಿದ ಕುಖ್ಯಾತಿಯ ಪಶ್ಚಿಮ ಬಂಗಾಳದ ನಿಕಟಪೂರ್ವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಇದೀಗ ಹೊಸ ಅಪಸ್ವರವೆತ್ತಿದ್ದಾರೆ. ಪ.ಬಂಗಾಳದಲ್ಲಿ ಬಿಜೆಪಿ ಅಭೂತಪೂರ್ವ ಜನಾದೇಶ ಪಡೆದಿದೆ. ಮಮತಾ ಬ್ಯಾನರ್ಜಿ ಸ್ವಕ್ಷೇತ್ರದಲ್ಲಿ ಪರಾಭವಗೊಂಡಿದ್ದಾರೆ. ಆದರೆ ಈ ವಾಸ್ತವ ಒಪ್ಪಲು ನಿರಾಕರಿಸಿರುವ ಮಮತಾ ಬ್ಯಾನರ್ಜಿ ತಾನು ಸೋತೇ ಇಲ್ಲ ಎನ್ನುವ ಮೂಲಕ ಜನಾದೇಶವನ್ನೇ ಶಂಕಿಸಿದ್ದಾರೆ ಮತ್ತು ಅಪಮಾನಿಸಿದ್ದಾರೆ.

ಮುಖ್ಯಮಂತ್ರಿ ಹುದ್ದೆಗೆ ತಾನು ರಾಜೀನಾಮೆ ನೀಡಲ್ಲ, ತಾನು ಸೋತಿಲ್ಲ. ತಾನು ರಾಜಭವನಕ್ಕೆ ತೆರಳುವುದಿಲ್ಲ. ಇಂತಹ ಪ್ರಶ್ನೆಯೇ ಉದ್ಭವಿಸಿಲ್ಲ. ನಾವು ಚುನಾವಣೆಯಲ್ಲಿ ಸೋತಿಲ್ಲ. ಅವರು ನಮ್ಮನ್ನು ಪರಾಭವಗೊಳಿಸಲು ಯತ್ನಿಸಿದರು. ಅಧಿಕೃತವಾಗಿ ಚುನಾವಣಾ ಆಯೋಗ ಮುಖೇನ ಅವರು ನಮ್ಮನ್ನು ಸೋಲಿಸಬಲ್ಲರು. ಆದರೆ ನೈತಿಕವಾಗಿ ನಾವು ಚುನಾವಣೆ ಗೆದ್ದಿದ್ದೇವೆ ಎಂದು ಕೋಲ್ಕತ್ತಾದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಈ ಮೂಲಕ ದೇಶದ ಚುನಾವಣಾ ಆಯೋಗ, ಮತದಾನ ವ್ಯವಸ್ಥೆ, ಸಾಂವಿಧಾನಿಕ ಸಂಸ್ಥೆಗಳನ್ನು ಅಪಮಾನಿಸಿದ್ದಾರೆ.

➡ಪುಟ ೨

ಮುಖ್ಯಮಂತ್ರಿ ಕುರ್ಚಿಯಿಂದ ಮಮತಾ ಇಳಿಯಲೇಬೇಕು

ರೂಢಿಯಲ್ಲಿರುವ ನಿಯಮಾವಳಿ ಪ್ರಕಾರ ಮಮತಾ ಬ್ಯಾನರ್ಜಿ ಮುಖ್ಯಮಂತ್ರಿ ಗಾದಿಯಿಂದ ಕೆಳಗಿಳಿಯಬೇಕು ಅಥವಾ ರಾಜೀನಾಮೆ ನೀಡಬೇಕು ಮತ್ತು ಹೊಸ ಸರಕಾರ ಪ್ರಮಾಣವಚನ ಸ್ವೀಕರಿಸುವ ತನಕ ಹಂಗಾಮಿ ಸಿಎಂ ಆಗಿ ಮುಂದುವರಿಯಬೇಕು.

➡ಪುಟ ೨

ಯಾರ ಜತೆ ಟಿವಿಕೆ ಮೈತ್ರಿ

ಸ್ಟಾಲಿನ್, ವಿಜಯನ್ ರಾಜೀನಾಮೆ

ಮೇ 9ಕ್ಕೆ ಬಂಗಾಳದಲ್ಲಿ ಪ್ರಮಾಣ?

ಕೇರಳದಲ್ಲಿ ಯಾರು ಸಿಎಂ?

• ಪುಟ೧೦



ಸಂಪುಟಕ್ಕೆ ಭಾರೀ ಸೋಲು: 22 ಟಿಎಂಸಿ ಸಚಿವರ ಪತನ

• ಪುಟ೧೦

2 ವಿಭಿನ್ನ ಕ್ಷೇತ್ರಗಳಿಂದ ಸತತ 2 ಬಾರಿ ಹಾಲಿ ಸಿಎಂ ಮಣಿಸಿದ ಸುವೇಂದು!

ಟಿಎಂಸಿ ನಾಯಕಿ ಮಮತಾರನ್ನು ಸುವೇಂದು ಅಧಿಕಾರಿ ಎರಡನೇ ಬಾರಿ ಸೋಲಿಸಿದ್ದಾರೆ.



2021ರಲ್ಲಿ ನಂದಿಗ್ರಾಮ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಮಮತಾರನ್ನು ಸೋಲಿಸಿದ್ದ ಅಧಿಕಾರಿ, 2026ರಲ್ಲಿ ಮಮತಾರ ಭದ್ರಕೋಟೆ ಮತ್ತು ಸ್ವಂತ ಕ್ಷೇತ್ರ ಭವಾನಿಪುರ ಕ್ಷೇತ್ರದಲ್ಲೇ 15,000 ಮತಗಳ ಅಂತರದಿಂದ ಜಯಿಸಿದ್ದಾರೆ. ಹಾಲಿ ಮುಖ್ಯಮಂತ್ರಿಯೊಬ್ಬರನ್ನು 2 ವಿಭಿನ್ನ ಕ್ಷೇತ್ರಗಳಲ್ಲಿ ಸತತ ಎರಡನೇ ಬಾರಿ ಸೋಲಿಸಿದ ಮೊದಲ ರಾಜಕಾರಣಿಯೆಂಬ ದಾಖಲೆಯನ್ನು ಸುವೇಂದು ಭಾರತದ ಇತಿಹಾಸದಲ್ಲಿ ಬರೆದಿದ್ದಾರೆ.

➡ಪುಟ ೨

ಹಿಂಸಾಚಾರ: ನಾಲ್ವರ ಬಲಿ

ಬಂಗಾಳ ಚುನಾವಣೆಯಲ್ಲಿ 15 ವರ್ಷಗಳ ಟಿಎಂಸಿ ಆಡಳಿತ ಪತನಗೊಂಡ 24 ಗಂಟೆಗಳೊಳಗೆ ಭಾರೀ ಹಿಂಸಾಚಾರ ಭುಗಿಲೆದ್ದಿದೆ. ತಮ್ಮ ಗೂಂಡಾಗಿರಿ ಆಡಳಿತವು ಅಧಿಕಾರ ಕಳೆದುಕೊಂಡಿದ್ದನ್ನು ಜೀರ್ಣಿಸಲಾಗದೆ ಟಿಎಂಸಿ ಗೂಂಡಾ ಕಾರ್ಯಕರ್ತರು ಬಿಜೆಪಿ ಕಾರ್ಯಕರ್ತರ ಮೇಲೆ ಹಿಂಸಾಚಾರ ನಡೆಸಿದ ಪ್ರಕರಣ ದಾಖಲಾಗಿವೆ.

➡ಪುಟ ೨

21 ವರ್ಷ ಬಳಿಕ ತೆರೆದ ದುರ್ಗಾ ದೇವಸ್ಥಾನ!



• **ಆಸನ್ಸೋಲ್:** ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೇರುತ್ತಲೇ ಬಂಗಾಳಿ ಹಿಂದು ಸಂಸ್ಕೃತಿಯ ಪುನರುತ್ಥಾನ ಆರಂಭವಾಗಿದೆ. ಆಸನ್ಸೋಲ್‌ನಲ್ಲಿ 21 ವರ್ಷಗಳಿಂದ ಮುಚ್ಚಿರುತ್ತಿದ್ದ ದುರ್ಗಾಮಾತಾ ದೇವಸ್ಥಾನವನ್ನು ಪುನಃ ತೆರೆಯಲಾಗಿದೆ. ತಾವು ಶಾಸಕರಾದರೆ ದೇವಸ್ಥಾನ ಪುನಃ ತೆರೆಯುವುದಾಗಿ ಆಶ್ವಾಸನೆ ನೀಡಿದ್ದ ನೂತನ ಬಿಜೆಪಿ ಶಾಸಕ ಕೃಷ್ಣೇಂದು ಮುಖರ್ಜಿ ದೇವಸ್ಥಾನ ತೆರೆಸಿ ತಮ್ಮ ಮಾತು ಉಳಿಸಿಕೊಂಡಿದ್ದಾರೆ. ದುರ್ಗಾ ಮತ್ತು ಕಾಳಿ ಪೂಜೆಯಂತಹ ಪ್ರಮುಖ ಹಬ್ಬಗಳಂದು ತೆರೆಯಲಾಗುತ್ತಿದ್ದ ದೇವಸ್ಥಾನ ಈಗ ಎಲ್ಲಾ ದಿನಗಳಲ್ಲೂ ಭಕ್ತರಿಗೆ ತೆರೆದಿರಲಿದೆ.

➡ಪುಟ ೨

ಚು.ಆಯೋಗಕ್ಕೆ ಸಿದ್ದರಾಮಯ್ಯ ಒತ್ತಾಯ

ಫೊರೆನ್ಸಿಕ್ ಲ್ಯಾಬ್‌ಗೆ ಅಂಚೆಮತ ಕಳುಹಿಸಿ



• **ಬೆಂಗಳೂರು:** ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಯಲ್ಲಿ ಕ್ರಿಮಿನಲ್ ಸಂಚು ನಡೆದಿದ್ದು, ಅಂಚೆ ಮತಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಚುನಾವಣಾ ಆಯೋಗವನ್ನು ಒತ್ತಾಯಿಸಲಾಗುವುದು ಹಾಗೂ ಈ ವಿಚಾರದಲ್ಲಿ ಟಿ.ಡಿ.ರಾಜೇಗೌಡ ಅವರ ಬೆನ್ನಿಗೆ ಕಾಂಗ್ರೆಸ್ ನಿಲ್ಲಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿನ ಮರು ಮತ ಎಣಿಕೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಸೋಲುಂಟಾಗಿರುವ ಕುರಿತು ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,



ಕಾಂಗ್ರೆಸ್‌ನ ರಾಜೇಗೌಡ ಅವರು ಕಳೆದ ಚುನಾವಣೆಯಲ್ಲಿ 201 ಮತಗಳ ಅಂತರದಲ್ಲಿ ಗೆದ್ದಿದ್ದರು. ಅವರಿಗೆ 59,171 ಮತಗಳು ಬಂದಿದ್ದವು. ಅವರ ಎದುರಾಳಿ ಬಿಜೆಪಿಯ ಜೀವರಾಜ್ ಅವರಿಗೆ 58,970 ಮತಗಳು ಬಂದಿದ್ದವು. ಇವಿಎಂನಲ್ಲಿ ರಾಜೇಗೌಡರಿಗೆ 58,602 ಮತಗಳು ಬಂದಿದ್ದವು. ಅಂಚೆಯಲ್ಲಿ 569 ಮತಗಳು ಬಂದಿದ್ದವು. ಜೀವರಾಜ್ ಅವರಿಗೆ ಇವಿಎಂನಲ್ಲಿ 58,278 ಮತಗಳು ಬಂದಿದ್ದವು. ಅಂಚೆಯಲ್ಲಿ 692 ಮತಗಳು ಬಂದಿದ್ದವು. ಇವೆಲ್ಲವೂ ಅರ್ಹ ಮತಗಳೆಂದು ಚುನಾವಣಾಧಿಕಾರಿಗಳು, ಏಜೆಂಟ್‌ಗಳು ಸಹಿ ಮಾಡಿ ಫಲಿತಾಂಶ ಘೋಷಿಸಿದ್ದರು ಎಂದು ತಿಳಿಸಿದರು.

ವೋಟ್ ಡಕಾಯಿತಿ: ಫಲಿತಾಂಶ ಘೋಷಣೆ ಆದ ಬಳಿಕ ಜೀವರಾಜ್ ಅವರು ಅಕ್ರಮ ಆಗಿದೆ ಎಂದು ಹೈಕೋರ್ಟ್‌ನಲ್ಲಿ ಮರು ಎಣಿಕೆಗೆ ದಾವೆ ಹೂಡಿದ್ದರು.

➡ಪುಟ ೨

ಎಣಿಕೆ ಮಾಡಿದ ಬಳಿಕ ಎಲ್ಲಾ ದಾಖಲಾತಿಗಳನ್ನು ಟ್ರಂಕ್‌ನಲ್ಲಿಡಲಾಗುತ್ತದೆ. ಮತ ಎಣಿಕೆಯಾಗುವಾಗ ಬಿಜೆಪಿ ಸರ್ಕಾರವಿತ್ತು. ಕೇಂದ್ರದಲ್ಲೂ ಅವರ ಸರ್ಕಾರ ಇತ್ತು. ಬಿಜೆಪಿಯವರು ಸಿಬ್ಬಂದಿ ಮೂಲಕ ಮತಪತ್ರಗಳನ್ನು ತಿದ್ದಿರುವುದು ಖಚಿತವಾಗಿದೆ. ಇದು ಕ್ರಿಮಿನಲ್ ಸಂಚು.
■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಜೀವರಾಜ್ ವಿರುದ್ಧದ ಎಫ್‌ಐಆರ್‌ಗೆ ಹೈ ತಡೆ

• **ಬೆಂಗಳೂರು:** ಅಂಚೆ ಮತಗಳ ಮರು ಎಣಿಕೆಯಲ್ಲಿ ಚಿಕ್ಕಮಗಳೂರಿನ ಶೃಂಗೇರಿಯ ಬಿಜೆಪಿ ಶಾಸಕರಾಗಿ ಆಯ್ಕೆಯಾಗಿರುವ ಡಿ.ಎನ್. ಜೀವರಾಜ್ ವಿರುದ್ಧ ದುರುದ್ದೇಶಪೂರ್ವಕವಾಗಿ ಎಫ್ ಐಆರ್ ದಾಖಲಿಸಲಾಗಿದೆ ಎಂದು



ಮೌಖಿಕವಾಗಿ ಮಂಗಳವಾರ ಹೇಳಿರುವ ಹೈಕೋರ್ಟ್ ಪ್ರಕರಣಕ್ಕೆ ತಡೆ ನೀಡಿದೆ. ಮತ ತಿರುಚಿದ ಆರೋಪದ ಮೇಲೆ ಕಾಂಗ್ರೆಸ್ ಏಜೆಂಟ್ ಸುಧೀರ್ ಮುರೊಳ್ಳಿ ದೂರಿನ ಆಧಾರದಲ್ಲಿ ಚಿಕ್ಕಮಗಳೂರು ಟೌನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಜೀವರಾಜ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾ. ವಿ.ಶ್ರೀಶಾನಂದ ಅವರ ರಜಾಕಾಲೀನ ಏಕಸದಸ್ಯ ಪೀಠ ನಡೆಸಿತು.

➡ಪುಟ ೨

ಬೆಳಗಾವಿಯಲ್ಲಿ ಮಾಜಿ ಸಂಸದ ಪ್ರಭಾಕರ ಕೋರೆ ಮಾಹಿತಿ

ಅಭಿಮಾನೋತ್ಸವಕ್ಕೆ 10 ಲಕ್ಷ ಜನ

• **ಬೆಳಗಾವಿ:** ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಜನಸೇವೆಗೆ ಪದಾರ್ಪಣೆ ಮಾಡಿ 50 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಅಭಿಮಾನೋತ್ಸವ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ



10 ಲಕ್ಷ ಅಭಿಮಾನಿಗಳು ಸೇರುವ ನಿರೀಕ್ಷೆ ಇದೆ ಎಂದು ಕೆಎಲ್‌ಇ ಮಾಜಿ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಹೇಳಿದರು.

ಬೆಳಗಾವಿಯ ಕನ್ನಡ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ ನಾಯಕ, ಹುಟ್ಟು ಹೋರಾಟಗಾರ ಬಿ.ಎಸ್.ಯಡಿಯೂರಪ್ಪ ಅವರಿಗೆ ಗೌರವ ಸಲ್ಲಿಸಲು ಮೇ 9ರಂದು ಚಿತ್ರದುರ್ಗದಲ್ಲಿ ದೊಡ್ಡ ಮಟ್ಟದಲ್ಲಿ ಅಭಿಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

➡ಪುಟ ೨



ಪ್ರತಿಯೊಬ್ಬರಿಗೂ ಆಹ್ವಾನ

ದಕ್ಷಿಣ ಭಾರತದಲ್ಲಿ ಬಿಜೆಪಿ ಭದ್ರಕೋಟೆ ಕಟ್ಟಿದ ಜನ ನಾಯಕನಿಗೆ ಸಲ್ಲಿಸುವ ಈ ಗೌರವ ಸಮರ್ಪಣೆಯಲ್ಲಿ ಪ್ರತಿಯೊಬ್ಬರೂ ಭಾಗಿಯಾಗುವಂತೆ ಅವರು ಆಹ್ವಾನ ನೀಡಿದರು.

ರಾಜ್ಯಪಾಲರ ಭೇಟಿ ಬಳಿಕ ಸಿಎಂ ಸಿದ್ದರಾಮಯ್ಯಗೆ ಸಲಹೆ

ಗೆದ್ದವರಿಗೆ ಗೌರವ ಕೊಡಿ: ಅಶೋಕ

• **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹುಚ್ಚು ಹೇಳಿಕೆ ಕೊಡುವುದು ಒಳ್ಳೆಯದಲ್ಲ; ಗೆದ್ದವರಿಗೆ ಸಂವಿಧಾನ ತಿಳಿಸಿದಂತೆ ಗೌರವ ಕೊಡುವುದು ಕರ್ತವ್ಯ. ಅದನ್ನು ಉಲ್ಲಂಘಿಸುವುದು ಅಕ್ಷಮ್ಯ ಅಪರಾಧ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಮಂಗಳವಾರ ರಾಜ್ಯಪಾಲರಿಗೆ ಶಾಸಕ ಆರಗ ಜ್ಞಾನೇಂದ್ರ ಮತ್ತು ಮರು ಮತಎಣಿಕೆ ಬಳಿಕ ಶೃಂಗೇರಿಯಿಂದ ಶಾಸಕರಾಗಿ ಆಯ್ಕೆಯಾಗಿರುವ ಡಿ.ಎನ್.ಜೀವರಾಜ್ ಅವರ ಜತೆ ಮನವಿ ಸಲ್ಲಿಸಿದ ಬಳಿಕ ಮಾಧ್ಯಮಗಳ ಜತೆ ಮಾತನಾಡಿದರು. ಮನವಿ ಸಂಬಂಧ ರಾಜ್ಯ ಸರಕಾರಕ್ಕೆ ಪತ್ರ ಬರೆಯುವುದಾಗಿ ರಾಜ್ಯಪಾಲರು ಹೇಳಿದ್ದಾರೆ ಎಂದರು. ಸಂವಿಧಾನದತ್ತವಾಗಿ ವಿಧಾನಸಭಾಧ್ಯಕ್ಷರು ಶಾಸಕತ್ವದ ಪ್ರಮಾಣವಚನ ಬೋಧಿಸಬೇಕು. ಇಲ್ಲವಾದರೆ ರಾಜ್ಯಪಾಲರು ಪ್ರಮಾಣವಚನ ಬೋಧಿಸಬೇಕು. ಇಲ್ಲಿಯೇ ನಾವು ಪ್ರತಿಜ್ಞಾವಿಧಿ ಪಡೆಯುತ್ತೇವೆ. ಹಾಗಾದರೆ, ವಿಧಾನಸಭಾಧ್ಯಕ್ಷರಿಗೆ ಏನು ಗೌರವ ಉಳಿಯಲಿದೆ ಎಂದು ಕೇಳಿದರು.

➡ಪುಟ ೨



ತಮಿಳುನಾಡಿನಲ್ಲಿ ಚಿತ್ರನಟ ವಿಜಯ್ ದಿಢೀರ್ ಆಗಿ ಹೆಚ್ಚು ಸ್ಥಾನ ಪಡೆದರೂ ಅವರಿಗೆ ಬಹುಮತ ಸಿಕ್ಕಿಲ್ಲ. ಕಾಂಗ್ರೆಸ್ಸಿನವರು ಎಲ್ಲಿ ಊಟ ಚೆನ್ನಾಗಿ ಸಿಗುತ್ತದೋ ಅಲ್ಲಿಗೆ ಓಡಿ ಹೋಗುತ್ತಾರೆ. ಅವರಿಗೆ ನೀತಿ, ನಿಯತ್ತು, ನ್ಯಾಯ, ಧರ್ಮ ಏನೂ ಇಲ್ಲ.
■ ಆರ್.ಅಶೋಕ, ವಿಧಾನಸಭೆ ಪ್ರತಿಪಕ್ಷ ನಾಯಕ

ರಾಜ್ಯದಲ್ಲಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ತನ್ನಿ: ಎಚ್‌ಡಿಕೆ

• **ತುಮಕೂರು:** ರಾಜ್ಯದ ಈಗಿನ ಸರ್ಕಾರದ ಆಡಳಿತಕ್ಕೆ ಜನ ಬೇಸತ್ತಿದ್ದಾರೆ. ಮುಂದಿನ



ದಿನಗಳಲ್ಲಿ ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯ ಜನಪರವಾದ, ಜನರಿಗೆ ಗೌರವ ತರುವಂತಹ ಸರ್ಕಾರ ತರಲು ರಾಜ್ಯದ ಜನರು ಆಶೀರ್ವಾದ ಮಾಡಬೇಕು ಎಂದು ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದರು.

ತುಮಕೂರು ತಾಲೂಕು ಮುಳುಕುಂಟೆ ಗ್ರಾಮದಲ್ಲಿ ಮಂಗಳವಾರ ನಡೆದ ವಿಜಯಚೌಡೇಶ್ವರಿ ದೇವಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿದ್ದ ಅವರು ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

➡ಪುಟ ೨

ಫಲಿತಾಂಶದ ಕೌತುಕಗಳು

ಪಂಚರಾಜ್ಯಗಳ ಚುನಾವಣೆ ದೇಶದ ರಾಜಕಾರಣದಲ್ಲಿ ಮಹತ್ವದ ಬದಲಾವಣೆಯನ್ನೇ ತೋರಿದೆ. ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಆಡಳಿತ ವಿರೋಧಿ ಅಲೆಗೆ ಆಡಳಿತಾರೂಢ ಪಕ್ಷ ಧೂಳೀಪಟವಾಗಿದೆ. ಈ ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಹೀನಾಯ ಸೋಲು ಅನುಭವಿಸಿದ್ದಾರೆ. ಘಟಾನುಘಟಿಗಳ ಸೋಲಿನ ನಡುವೆ ಅಪರೂಪದ ವ್ಯಕ್ತಿಗಳು ಗೆದ್ದು ವಿಧಾನಸಭೆ ಪ್ರವೇಶಿಸಲು ಸಿದ್ಧರಾಗಿದ್ದಾರೆ. ಹೀಗೆ ಪಂಚರಾಜ್ಯಗಳ ಫಲಿತಾಂಶ ವೇಳೆ ಕಂಡ ಕುತೂಹಲದ ವಿದ್ಯಮಾನಗಳ ಸಣ್ಣ ನೋಟ ಇಲ್ಲಿದೆ.

ಬಿಸ್ವಾಸ್ ಒಬ್ಬರೇ ವಿಶ್ವಾಸ ಉಳಿಸಿಕೊಂಡ ಸಿಎಂ



ಕೇರಳದಲ್ಲಿ ಎಡರಂಗದ ಪಿಣರಾಯಿ ವಿಜಯನ್, ತಮಿಳುನಾಡಿನಲ್ಲಿ ಎಂ.ಕೆ. ಸ್ಟಾಲಿನ್ ಹಾಗೂ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ನಾಯಕಿ ಮಮತಾ ಆಡಳಿತ ಪತನಗೊಂಡಿದ್ದು, ಮೂವರು ತಮ್ಮ ಸಿಎಂ ಹುದ್ದೆ ಖಾಲಿ ಮಾಡಿದ್ದಾರೆ. ಆದರೆ ಅಸ್ಸಾಂನಲ್ಲಿ ಮಾತ್ರ ಹಿಮಂತ ಬಿಸ್ವ ಶರ್ಮಾ ಸಿಎಂ ಸ್ಥಾನ ಉಳಿಸಿ ಕೊಳ್ಳುವ ಮೂಲಕ ಸಾಧನೆ ಮೆರೆದಿದ್ದಾರೆ. ವಿಜಯನ್, ಸ್ಟಾಲಿನ್, ಮಮತಾರಷ್ಟು ರಾಜಕೀಯ ಅನುಭವ ಇಲ್ಲದ ಹಿಮಂತ ಸತತ 2ನೇ ಬಾರಿಗೆ ಆಯ್ಕೆಯಾಗಿದ್ದಾರೆ.

ಒಂದೇ ಒಂದು ಮತದ ಗೆಲುವು

ಮನೆಗೆಲಸದಾಕೆಗೆ ಒಲಿದ ಅದೃಷ್ಟ

• ಪುಟ೧೦

ಹೊಸ ದಿಗಂತ
ಬುಧವಾರ, 6 ಮೇ 2026, ಮಂಗಳೂರು

ಬಿಜೆಪಿ ಅಜೇಯ ದಂಡಯಾತ್ರೆಯ ಒಳಗುಟ್ಟು

ಪ್ರಾದೇಶಿಕ ಗಡಿಗಳನ್ನು ದಾಟಿ ರಾಷ್ಟ್ರೀಯ ಶಕ್ತಿಯಾಗಿ ಬೆಳೆದ ಕಮಲ ಪಕ್ಷದ ಭಾರತ ದರ್ಶನ

ಜನಸಂಘವಾಗಿ ಹುಟ್ಟಿದ ಭಾರತೀಯ ಜನತಾ ಪಕ್ಷ(ಬಿಜೆಪಿ) ಇಡೀ ದೇಶವನ್ನು ಹೇಗೆ ಆವರಿಸಿತು? ರಾಷ್ಟ್ರೀಯತೆಯನ್ನೇ ಉದ್ದೇಶವಾಗಿರಿಸಿ, ಹಿಂದುತ್ವವನ್ನೇ ಆಧರಿಸಿ ದೊಡ್ಡ ರಾಜಕೀಯ ಶಕ್ತಿಯಾಗಿ ಹೇಗೆ ಪರಿವರ್ತಿತವಾಯಿತು? ಎಂಬುದಕ್ಕೆ ಉತ್ತರವು ಒಂದು ಸೂಕ್ಷ್ಮವಾಗಿ ರೂಪಿಸಲಾದ ನಾಯಕತ್ವ ಮಾದರಿಯಲ್ಲಿದೆ. ಇದು ಸಿದ್ಧಾಂತ ಆಧಾರಿತ ತರಬೇತಿ, ಸಂಘಟನಾ ಶಿಸ್ತಿನ ಸಂಯೋಜನೆ, ಚುನಾವಣಾ ತಂತ್ರಗಳು ಮತ್ತು ಬಲವಾದ ಕೇಂದ್ರ ಮಾರ್ಗದರ್ಶನವನ್ನು ಒಳಗೊಂಡಿದೆ. ಪ್ರಮುಖವಾಗಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಸೇರಿದಂತೆ ಕೇಂದ್ರ ನಾಯಕರ ನಿರ್ಣಾಯಕ ಪಾತ್ರವು ಅಡಕವಾಗಿದೆ. ಅಂತೆಯೇ, ಬಿಜೆಪಿ ದೀರ್ಘಕಾಲೀನ ತಂತ್ರದ ಪ್ರಮುಖ ಆಯಾಮವೆಂದರೆ, ರಾಜ್ಯಗಳಲ್ಲಿ ಹೊಸ ಹಾಗೂ ಕಡಿಮೆ ಪರಿಚಿತ ಮುಖಗಳನ್ನು ಮುಖ್ಯಮಂತ್ರಿಗಳಾಗಿ ಉತ್ತೇಜಿಸುವುದು. ಪ್ರಾದೇಶಿಕವಾಗಿ ಯುವ ಮತ್ತು ಭವಿಷ್ಯದ ನಾಯಕರನ್ನು ಬೆಳೆಸಲು ಪ್ರಾಮುಖ್ಯತೆ ನೀಡಲಾಗುತ್ತಿರುವುದು ಬಿಜೆಪಿ ರಾಷ್ಟ್ರೀಯ ಶಕ್ತಿಯಾಗಿ ಬೆಳೆಯಲು ಕಾರಣವಾಗಿದ್ದು, ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.



ಭವಿಷ್ಯಮುಖಿ ಮಾದರಿ



- ಭಾರತೀಯ ಜನತಾ ಪಕ್ಷ ನಾಯಕತ್ವ ತಂತ್ರವು ಸಂಯೋಜಿತ ಮತ್ತು ವ್ಯವಸ್ಥಿತ
- ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರ ಪಾತ್ರ ಮಹತ್ವದ್ದು
- ಯೋಗಿ ಆದಿತ್ಯನಾಥ್, ಭೂಪೇಂದ್ರ ಪಟೇಲ್, ಹಿಮಂತ ಬಿಸ್ವಾ ಶರ್ಮಾ ಮುಂತಾದ ನಾಯಕರು ಈ ಮಾದರಿಯ ಫಲಿತಾಂಶ
- ಹೊಸ ಮುಖಗಳನ್ನು ಮುಂದಿರಿಸುವ ಮೂಲಕ ಬಿಜೆಪಿ ತನ್ನ ಭವಿಷ್ಯದ ನಾಯಕತ್ವವನ್ನು ನಿರ್ಮಿಸುತ್ತಿದೆ, ಇದೇ ಅದರ ಪ್ರಮುಖ ಬಲ

1 ಕಾರ್ಯಕರ್ತರ ಆಧಾರಿತ ರಾಜಕಾರಣದಿಂದ ದೇಶವ್ಯಾಪಿ ನಾಯಕತ್ವ ಬೆಳೆಸಿದ ಬಿಜೆಪಿ

2 ದೇಶದೆಲ್ಲೆಡೆ ಅಧಿಕಾರವನ್ನು ಬಲಪಡಿಸಲು ರಾಜ್ಯ ನಾಯಕತ್ವಕ್ಕೆ ವಿಶೇಷ ಆದ್ಯತೆ

3 ಪಕ್ಷದ ಭವಿಷ್ಯ ರೂಪಿಸಲು ಹೊಸ ಮುಖಗಳ ಮೇಲೆ ದಿಟ್ಟ ಭರವಸೆ

4 ಹೊಸ ಮುಖಗಳು, ಹಿರಿಯ ನಾಯಕರ ಮಾರ್ಗದರ್ಶನ ನಾಯಕತ್ವ ನಿರ್ಮಾಣದ ರಹಸ್ಯ

5 ಕೇಡರ್, ಕಮಾಂಡ್ ಮತ್ತು ಸಮೀಕರಣ: ಬಿಜೆಪಿಯ ರಾಜಕೀಯ ವಿಸ್ತರಣೆಯ ಸೂತ್ರ

ಬಿಜೆಪಿಯ ನಾಯಕತ್ವ ಮಾದರಿ

ಭಾರತೀಯ ಜನತಾ ಪಕ್ಷದ(ಬಿಜೆಪಿ) ಉದಯವು ಕೇವಲ ಚುನಾವಣಾ ಜಯವಲ್ಲ, ಇದು ಒಂದು ಸಂಘಟನಾ ಕ್ರಾಂತಿ. ವಂಶಪಾರಂಪರ್ಯ ಅಥವಾ ಒಂದೇ ವ್ಯಕ್ತಿಯ ಆಕರ್ಷಣೆಯ ಮೇಲೆ ಅವಲಂಬಿತವಾಗಿರುವ ಹಲವಾರು ಪಕ್ಷಗಳಿಂದ ವಿಭಿನ್ನವಾಗಿ, ಬಿಜೆಪಿ ಬಹುಮಟ್ಟದ ನಾಯಕತ್ವ ವ್ಯವಸ್ಥೆಯನ್ನು ನಿರ್ಮಿಸಿದೆ. ಈ ಮಾದರಿಯ ಹೃದಯಭಾಗದಲ್ಲಿ ಸಿದ್ಧಾಂತದ ಏಕತೆ, ಕಾರ್ಯಕರ್ತರ ಆಧಾರಿತ ಸಂಘಟನಾ ಶಕ್ತಿ ಮತ್ತು ಕೇಂದ್ರದ ಪ್ರಭಾವವಿದ್ದರೂ ಸ್ಥಳೀಯವಾಗಿ ಹೊಂದಿಕೊಳ್ಳುವ ನಾಯಕತ್ವ ರಚನೆ ಇದೆ. ಇದರ ಮೂಲಕ ಪಕ್ಷವು ಕೇವಲ ಚುನಾವಣೆ ಗೆಲ್ಲುವುದಷ್ಟೇ ಅಲ್ಲ, ವಿಭಿನ್ನ ರಾಜ್ಯಗಳಲ್ಲಿ ಆಡಳಿತವನ್ನು ನಿರಂತರವಾಗಿ ಕಾಯ್ದುಕೊಳ್ಳಲು ಸಾಧ್ಯವಾಗಿದೆ.

ಯೋಗಿ, ಬಿಸ್ವಾ ಆಡಳಿತದ ವ್ಯಾಪ್ತಿ ಮೀರಿದ ಪ್ರಭಾವ

ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಮತ್ತು ಅಸ್ಸಾಂ ಸಿಎಂ ಹಿಮಂತ ಬಿಸ್ವಾ ಶರ್ಮಾ ಇಬ್ಬರೂ ತಮ್ಮ ರಾಜ್ಯಗಳ ಗಡಿಗಳನ್ನು ಮೀರಿ ರಾಷ್ಟ್ರ ರಾಜಕೀಯದಲ್ಲಿ ಪ್ರಭಾವ ಬೀರುತ್ತಿರುವ ನಾಯಕರು. ಅಸ್ಸಾಂನಲ್ಲಿ ಬಿಸ್ವಾ ಶರ್ಮಾ ನೇತೃತ್ವದಲ್ಲಿ ಮದರಸಾಗಳ ರದ್ದು, ಏಕರೂಪ ನಾಗರಿಕ ಸಂಹಿತೆ(ಏನಾಸಂ)ಜಾರಿಗೆ ಚುರುಕು, ಗಡಿ ಭದ್ರತೆ ಮತ್ತು ಅಕ್ರಮ ವಲಸಿಗರ ವಿರುದ್ಧ ಕಠಿಣ ನಿಲುವು ಗಮನಾರ್ಹ. ಇನ್ನೊಂದೆಡೆ ಉತ್ತರ ಪ್ರದೇಶದಲ್ಲಿ ಯೋಗಿ ಆಡಳಿತವು ಕಠಿಣ ಕಾನೂನು–ಸುವ್ಯವಸ್ಥೆಗೆ ಒತ್ತು ನೀಡಿ, ಸಂಘಟಿತ ಅಪರಾಧದ ವಿರುದ್ಧ ದಿಟ್ಟ ಕ್ರಮ, ಮಾಫಿಯಾ ಆಸ್ತಿ ಜಪ್ತಿ, ವೇಗದ ನ್ಯಾಯಾಂಗ ಕ್ರಮಗಳು, ಹೂಡಿಕೆ ಆಕರ್ಷಣೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಿದೆ. ಅಪರಾಧ ನಿಯಂತ್ರಣಕ್ಕಾಗಿ 3 ಸಾವಿರಕ್ಕೂ ಹೆಚ್ಚು ಎನ್‌ಕೌಂಟರ್‌ಗಳು ಆಡಳಿತದ ದೃಢತೆಯನ್ನು ತೋರಿಸುತ್ತದೆ. ಈ ಇಬ್ಬರು ನಾಯಕರು ತಮ್ಮ ರಾಜ್ಯಗಳಲ್ಲಿ ದಕ್ಷ ಆಡಳಿತ ಮಾದರಿಯನ್ನು ರೂಪಿಸಿ, ಉಳಿದ ರಾಜ್ಯಗಳ ಜನರಿಗೆ ನಮ್ಮಲ್ಲೂ ಈ ರೀತಿ ಇರಬಾರದೇ ಎಂದು ಮನಸ್ಸಲ್ಲಿ ಮೂಡಿರುವುದು ಬಿಜೆಪಿಗೆ ಸಹಕಾರಿಯಾಗಿದೆ.



ಮೋದಿ–ಶಾ ಜುಗಲ್‌ಬಂದಿ

ನರೇಂದ್ರ ಮೋದಿ ಮತ್ತು ಅಮಿತ್ ಶಾ ನಡುವಿನ ಸಹಕಾರವು ಬಿಜೆಪಿಯ ನಾಯಕತ್ವ ತಂತ್ರವನ್ನು ಸಂಪೂರ್ಣವಾಗಿ ಮರುರೂಪಿಸಿದೆ. ಪಕ್ಷದಲ್ಲಿ ತಂತ್ರಾತ್ಮಕ ಆಯ್ಕೆ ಮತ್ತು ಆಯ್ಕೆ ಹಾಗೂ ನಾಯಕತ್ವ ನಿರ್ಮಾಣ ಪ್ರಧಾನ ವಿಷಯಗಳಾಗಿವೆ. ಮೋದಿ–ಶಾ ಯುಗದ ಅತ್ಯಂತ ಗಮನಾರ್ಹ ಲಕ್ಷಣವೆಂದರೆ, ನಿರೀಕ್ಷಿಸದ ಅಥವಾ ಕಡಿಮೆ ಪರಿಚಿತ ನಾಯಕರನ್ನು ಮುಖ್ಯಮಂತ್ರಿಗಳಾಗಿ ನೇಮಿಸುವ ಧೈರ್ಯ. ಉದಾಹರಣೆಗೆ, ಯೋಗಿ ಆದಿತ್ಯನಾಥ್ 2017ರಲ್ಲಿ ಉತ್ತರ ಪ್ರದೇಶದಲ್ಲಿ ಸಾಮಾನ್ಯ ಆಯ್ಕೆಯಾಗಿರಲಿಲ್ಲ. ಆದರೆ, ಅವರ ನೇಮಕ ಒಂದು ಲೆಕ್ಕಾಚಾರದ ರಾಜಕೀಯ ಹೆಜ್ಜೆಯಾಯಿತು.

ಹೊಸ ಮುಖಗಳ ಆಯ್ಕೆ ಉದ್ದೇಶವೇನು?

ನಾಯಕತ್ವ ನಿರ್ಮಾಣದಲ್ಲಿ ಬಿಜೆಪಿ ಹೊಸ ಮುಖಗಳಿಗೆ ಆದ್ಯತೆ ನೀಡುವುದು ದೀರ್ಘಕಾಲಿಕ ರಾಜಕೀಯ ತಂತ್ರದ ಭಾಗವಾಗಿದೆ. ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರ ಮಾರ್ಗದರ್ಶನದಲ್ಲಿ, ಪಕ್ಷವು ವ್ಯಕ್ತಿ ಆಧಾರಿತ ರಾಜಕೀಯಕ್ಕಿಂತ ಸಂಘಟನೆ ಆಧಾರಿತ ನಾಯಕತ್ವವನ್ನು ರೂಪಿಸಲು ಪ್ರಯತ್ನಿಸುತ್ತದೆ. ಹೊಸ ಮುಖಗಳನ್ನು ಮುಂದಿರಿಸುವ ಮೂಲಕ ಆಡಳಿತ ವಿರೋಧದ ಅಲೆ ಕಡಿಮೆ ಮಾಡಿ, ಶುದ್ಧ ಇಮೇಜ್ ಹೊಂದಿರುವ ನಾಯಕರನ್ನು ಪರಿಚಯಿಸುವುದು ಪ್ರಮುಖ ಉದ್ದೇಶವಾಗಿದೆ. ಇದರಿಂದ ಯುವ ಮತದಾರರು ಮತ್ತು ಮಧ್ಯಮ ವರ್ಗದ ಬೆಂಬಲವನ್ನು ಗಳಿಸಲು ಸಹಕಾರಿ ಆಗುತ್ತದೆ. ಇದೇ ವೇಳೆ, ಹೊಸ ನಾಯಕತ್ವವು ಕೇಂದ್ರದ ನಿರ್ಧಾರಗಳಿಗೆ ಹೊಂದಿಕೊಳ್ಳುವ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ರಾಜ್ಯಗಳಲ್ಲಿ ಶಿಸ್ತುಬದ್ಧ ಆಡಳಿತವನ್ನು ಒದಗಿಸಲು ಸಹಾಯಕವಾಗುತ್ತದೆ. ಆದರೆ, ಅನುಭವದ ಕೊರತೆ ಮತ್ತು ಸ್ಥಳೀಯ ಸಾಮಾಜಿಕ ಸಮೀಕರಣಗಳನ್ನು ನಿರ್ವಹಿಸುವಲ್ಲಿ ಸವಾಲುಗಳು ಎದುರಾಗಬಹುದು.


- ಆಡಳಿತ ವಿರೋಧಿ ಅಲೆ ಪರಿಣಾಮವನ್ನು ಕಡಿಮೆ ಮಾಡುವುದು
- ಕ್ಲೀನ್ ಇಮೇಜ್ ಮತ್ತು ಭ್ರಷ್ಟಾಚಾರ ವಿರೋಧಿ ಸಂದೇಶ ಬಲಪಡಿಸುವುದು
- ಯುವ ಮತ್ತು ಹೊಸ ಮತದಾರರನ್ನು ಆಕರ್ಷಿಸುವುದು
- ಸಂಘಟನೆಗೆ ನಿಷ್ಠೆಯುಳ್ಳ ನಾಯಕರನ್ನು ಬೆಳೆಸುವುದು
- ಕೇಂದ್ರ ನಾಯಕತ್ವದ ನಿಯಂತ್ರಣ ಮತ್ತು ಸಮನ್ವಯ ಹೆಚ್ಚಿಸುವುದು
- ದೀರ್ಘಕಾಲಿಕ ನಾಯಕತ್ವ ನಿರ್ಮಾಣ ಮಾಡುವುದು

ಒಟ್ಟಿನಲ್ಲಿ, ಹೊಸ ಮುಖಗಳಿಗೆ ಆದ್ಯತೆ ನೀಡುವುದು ಬಿಜೆಪಿಯ ವಿಸ್ತರಣಾ ರಾಜಕೀಯ ಮತ್ತು ಸ್ಥಿರ ಆಡಳಿತ ಗುರಿಗಳನ್ನು ಸಾಧಿಸಲು ರೂಪಿಸಿರುವ ವ್ಯವಸ್ಥಿತ ತಂತ್ರವಾಗಿದೆ.

ಹೊಸ ಮುಖಗಳ ತಂತ್ರಗಾರಿಕೆ

ಬಿಜೆಪಿಯ ದೀರ್ಘಕಾಲೀನ ತಂತ್ರದ ಪ್ರಮುಖ ಅಂಶವೆಂದರೆ ಹೊಸ ಮುಖ್ಯಮಂತ್ರಿಗಳೊಂದಿಗೆ ಪ್ರಯೋಗ ಮಾಡುವುದು.

ಗುಜರಾತ್‌ನಲ್ಲಿ ಭೂಪೇಂದ್ರ ಪಟೇಲ್



ಗುಜರಾತ್‌ನಲ್ಲಿ ನರೇಂದ್ರ ಮೋದಿ ರಾಷ್ಟ್ರ ರಾಜಕೀಯಕ್ಕೆ ತೆರಳಿದ ನಂತರ ಹಲವು ನಾಯಕತ್ವ ಬದಲಾವಣೆಗಳು ನಡೆದವು. ಗುಜರಾತ್‌ನಲ್ಲಿ ಬಿಜೆಪಿ ನಾಯಕತ್ವ ಬದಲಾವಣೆ, ಪಕ್ಷದ "ಹೊಸ ಮುಖಗಳ" ತಂತ್ರವನ್ನು ಸ್ಪಷ್ಟವಾಗಿ ತೋರಿಸುತ್ತದೆ. ವಿಜಯ್ ರೂಪಾಣಿ ಅವರನ್ನು ಬದಲಿಸಿ, ತೀರಾ ಲೋ–ಪ್ರೊಫೈಲ್ ನಾಯಕರಾದ ಭೂಪೇಂದ್ರ ಪಟೇಲ್ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ತರಲಾಗಿದ್ದು ಅಚ್ಚರಿ ಮೂಡಿಸಿತು. ಈ ಕ್ರಮವು ವ್ಯಕ್ತಿಪರ ಜನಪ್ರಿಯತೆಯಿಗಿಂತ ಸಂಘಟನಾ ನಿಷ್ಠೆ, ಆಡಳಿತ ಸಾಮರ್ಥ್ಯ ಮತ್ತು ಸಾಮಾಜಿಕ ಸಮೀಕರಣಗಳಿಗೆ ಹೆಚ್ಚಿನ ಮಹತ್ವ ನೀಡುವುದನ್ನು ಸೂಚಿಸುತ್ತದೆ. ಪಟೇಲ್ ಸಮುದಾಯದ ಪ್ರತಿನಿಧಿತ್ವವನ್ನು ಬಲಪಡಿಸುವ ಮೂಲಕ, ಪ್ರಮುಖ ಮತದಾರ ವರ್ಗವನ್ನು ಸಮತೋಲನದಲ್ಲಿಡುವ ಪ್ರಯತ್ನವೂ ಇದರಲ್ಲಿ ಕಾಣುತ್ತದೆ. ಜತೆಗೆ, ಹೊಸ ನಾಯಕತ್ವದ ಮೂಲಕ ಆಡಳಿತ ವಿರೋಧಿ ಅಲೆ ಮತ್ತು ಗುಂಪು ರಾಜಕಾರಣವನ್ನು ಕಡಿಮೆ ಮಾಡಿತು. ಪಟೇದಾರ್ ಸಮುದಾಯದ ಬೆಂಬಲವನ್ನು ಬಲಪಡಿಸಿತು. ಹೊಸ ಆಡಳಿತದ ಚಿತ್ರಣ ನೀಡಿತು. ಮೋದಿ–ಶಾ ಶೈಲಿಯ ಈ ನಿರ್ಧಾರ, ಕೇಂದ್ರದ ನಿಯಂತ್ರಣದಲ್ಲೇ ರಾಜ್ಯ ನಾಯಕತ್ವವನ್ನು ಪುನರ್‌ವ್ಯವಸ್ಥೆಗೊಳಿಸುವ ತಂತ್ರದ ಭಾಗವಾಗಿದೆ.

ಉತ್ತರಾಖಂಡದಲ್ಲಿ ಧಾಮಿ



ಉತ್ತರಾಖಂಡದಲ್ಲಿ ಬಿಜೆಪಿ ನಾಯಕತ್ವ ಬದಲಾವಣೆ, ಹೊಸ ಮುಖಗಳಿಗೆ ಪಕ್ಷ ನೀಡುವ ಆದ್ಯತೆಯನ್ನು ಸ್ಪಷ್ಟಪಡಿಸಿದೆ. ಕಡಿಮೆ ಅವಧಿಯಲ್ಲಿ ತ್ರಿವೇಂದ್ರ ಸಿಂಗ್ ರಾವತ್, ತೀರ್ಥ ಸಿಂಗ್ ರಾವತ್ ನಂತರ ಪುಷ್ಕರ್ ಸಿಂಗ್ ಧಾಮಿ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ತರಲಾಗಿದೆ. ಈ ಸರಣಿ ಬದಲಾವಣೆಗಳು ಆಡಳಿತದ ಮೇಲೆ ಜನಾಭಿಪ್ರಾಯ, ಸಂಘಟನೆಯ ಆಂತರಿಕ ಅಸಮಾಧಾನ ಮತ್ತು ಚುನಾವಣಾ ಲೆಕ್ಕಾಚಾರಗಳ ಪರಿಣಾಮವಾಗಿವೆ. ವಿಶೇಷವಾಗಿ ಧಾಮಿ ಅವರನ್ನು ಆಯ್ಕೆ ಮಾಡಿರುವುದು ಯುವ ನಾಯಕತ್ವದ ಮೇಲಿನ ನಂಬಿಕೆಯನ್ನು ತೋರಿಸುತ್ತದೆ. ಹೊಸ ಮುಖದ ಮೂಲಕ ಆಡಳಿತ ವಿರೋಧಿ ಅಲೆ ಕಡಿಮೆ ಮಾಡುವ ಜತೆಗೆ, ಯುವ ಮತದಾರರನ್ನು ಸೆಳೆಯುವ ಪ್ರಯತ್ನವೂ ಇದರಲ್ಲಿ ಕಾಣುತ್ತದೆ. ಇದೇ ವೇಳೆ, ಕೇಂದ್ರದ ಮಾರ್ಗದರ್ಶನದಲ್ಲಿ ರಾಜ್ಯ ರಾಜಕಾರಣವನ್ನು ಪುನರ್‌ವ್ಯವಸ್ಥೆಗೊಳಿಸುವ ತಂತ್ರ ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಅಸ್ಸಾಂನಲ್ಲಿ ಹಿಮಂತ ಬಿಸ್ವಾ



ಅಸ್ಸಾಂನಲ್ಲಿ ಬಿಜೆಪಿ ನಾಯಕತ್ವ ಬದಲಾವಣೆ ತಂತ್ರವು ಹೊಸ ಮುಖ ಮತ್ತು ಸ್ಥಳೀಯ ಪ್ರಭಾವ ಎರಡನ್ನೂ ಸಮತೋಲನಗೊಳಿಸುವ ರೀತಿಯಲ್ಲಿ ನಡೆದಿದೆ. ದೀರ್ಘಾವಧಿ ಮುಖ್ಯಮಂತ್ರಿಯಾಗಿದ್ದ ಸರ್ಬಾನಂದ ಸೋನಾವಾಲ್ ಅವರನ್ನು ಬದಲಿಸಿ, ಹಿಮಂತ ಬಿಸ್ವಾ ಶರ್ಮಾ ಅವರನ್ನು ಅಧಿಕಾರಕ್ಕೆ ತರಲಾಗಿದೆ. ಶರ್ಮಾ ಪೂರ್ವದಲ್ಲಿ ಕಾಂಗ್ರೆಸ್‌ನಿಂದ ಬಂದವರಾದರೂ, ಬಿಜೆಪಿ ಚೌಕಟ್ಟಿನಲ್ಲಿ ವೇಗವಾಗಿ ಬೆಳೆಯುವ ಮೂಲಕ ಪ್ರಬಲ ಪ್ರಾದೇಶಿಕ ನಾಯಕನಾಗಿ ಹೊರಹೊಮ್ಮಿದರು. ಈ ನಿರ್ಧಾರವು ಕೇವಲ ಹೊಸ ಮುಖದ ಆಯ್ಕೆಯಲ್ಲ, ಚುನಾವಣಾ ತಂತ್ರಗಾರಿಕೆ ಅನ್ವಯ ಸಂಘಟನಾ ಕೌಶಲ ಮತ್ತು ಮೈತ್ರಿ ರಾಜಕೀಯದಲ್ಲಿ ಶರ್ಮಾ ಅವರ ಸಾಮರ್ಥ್ಯವನ್ನು ಗುರುತಿಸಿದ ಹೆಜ್ಜೆಯಾಗಿದೆ. ಅಸ್ಸಾಂನಲ್ಲಿ ಜಾತಿ ಸಮೀಕರಣ, ಪ್ರಾದೇಶಿಕ ಗುರುತು ಮತ್ತು ರಾಷ್ಟ್ರೀಯ ಭದ್ರತೆ ವಿಷಯಗಳನ್ನು ಸಮರ್ಥವಾಗಿ ನಿರ್ವಹಿಸಲು ಅವರ ನಾಯಕತ್ವ ಬಳಸಲಾಗಿದೆ.

ಮಧ್ಯಪ್ರದೇಶದಲ್ಲಿ ಯಾದವ್



ಮಧ್ಯ ಪ್ರದೇಶದಲ್ಲಿ ದೀರ್ಘಾವಧಿ ನಾಯಕತ್ವ ಹೊಂದಿದ್ದ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಮುಂದುವರಿಸಬಹುದಾದ ಪರಿಸ್ಥಿತಿಯಿದ್ದರೂ, ಪಕ್ಷವು ಅಚ್ಚರಿಯ ನಿರ್ಧಾರವಾಗಿ ಮೋಹನ್ ಯಾದವ್ ಅವರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿತು. ಈ ಆಯ್ಕೆ ವ್ಯಕ್ತಿಪರ ಜನಪ್ರಿಯತೆಯಿಗಿಂತ ಸಂಘಟನಾ ನಿಷ್ಠೆ, ಸೈದ್ಧಾಂತಿಕ ಬದ್ಧತೆ ಮತ್ತು ಸಾಮಾಜಿಕ ಸಮೀಕರಣಗಳಿಗೆ ಆದ್ಯತೆ ನೀಡುವುದನ್ನು ಸೂಚಿಸುತ್ತದೆ. ಯಾದವ ಸಮುದಾಯದ ಪ್ರಾತಿನಿಧ್ಯದ ಮೂಲಕ ಹೊಸ ಮತದಾರ ವರ್ಗವನ್ನು ಆಕರ್ಷಿಸುವ ಪ್ರಯತ್ನವೂ ಇದರಲ್ಲಿ ಕಾಣಿಸುತ್ತದೆ. ಜತೆಗೆ, ದೀರ್ಘಾವಧಿ ಆಡಳಿತದ ವಿರುದ್ಧ ಹುಟ್ಟಬಹುದಾದ ಆಡಳಿತ ವಿರೋಧ ಅಲೆ ಕಡಿಮೆ ಮಾಡಿ, ಪಕ್ಷದ ಚಿತ್ರವನ್ನು ಹೊಸದಾಗಿ ರೂಪಿಸುವ ಉದ್ದೇಶವೂ ಇದೆ. ಒಟ್ಟಿನಲ್ಲಿ, ಮಧ್ಯ ಪ್ರದೇಶದಲ್ಲಿ ಹೊಸ ಮುಖದ ಆಯ್ಕೆ ಬಿಜೆಪಿ ದಿಟ್ಟ ಹಾಗೂ ಲೆಕ್ಕಾಚಾರದ ರಾಜಕೀಯ ಹೆಜ್ಜೆಯಾಗಿದೆ.

ಉತ್ತರ ಪ್ರದೇಶದಲ್ಲಿ ಯೋಗಿ



ಉತ್ತರ ಪ್ರದೇಶದಲ್ಲಿ ನಾಯಕತ್ವ ಬದಲಾವಣೆ ತಂತ್ರದಲ್ಲಿ ಹೊಸ ಮುಖಗಳಿಗೆ ಆದ್ಯತೆ ಪ್ರಮುಖ ಅಂಶವಾಗಿ ಹೊರಹೊಮ್ಮಿದೆ. ಸಾಂಪ್ರದಾಯಿಕ ಜಾತಿ ಸಮೀಕರಣಗಳಿಗಿಂತ ಕಾರ್ಯಕ್ಷಮತೆ, ಆಡಳಿತ ಸಾಮರ್ಥ್ಯ ಮತ್ತು ಸಂಘಟನೆಗೆ ನಿಷ್ಠೆ ಇರುವ ನಾಯಕರನ್ನು ಮುಂದಿರಿಸುವ ನೀತಿಯನ್ನು ಪಕ್ಷ ಅನುಸರಿಸಿದೆ. ಯೋಗಿ ಆದಿತ್ಯನಾಥ್ ಅವರ ನೇಮಕವೇ ಇದಕ್ಕೆ ಉದಾಹರಣೆ. ಸಂಘಪರ ಹಿನ್ನೆಲೆ, ಕಠಿಣ ಆಡಳಿತ ಶೈಲಿ ಮತ್ತು ಸ್ಪಷ್ಟ ಐಡಿಯಾಲಜಿಯೊಂದಿಗೆ ಹೊಸ ಮಾದರಿಯ ನಾಯಕತ್ವವನ್ನು ಸ್ಥಾಪಿಸಿದರು. ಈ ತಂತ್ರದ ಉದ್ದೇಶ ಸ್ಥಳೀಯ ಅಸಮಾಧಾನವನ್ನು ಕಡಿಮೆ ಮಾಡುವುದು, ಭ್ರಷ್ಟಾಚಾರ ವಿರೋಧಿ ಭಾವನೆ ಬಲಪಡಿಸುವುದು ಮತ್ತು ಯುವ ಮತದಾರರನ್ನು ಆಕರ್ಷಿಸುವುದು. ಜತೆಗೆ, ಕೇಂದ್ರ ನಾಯಕತ್ವದ ನಿಯಂತ್ರಣ ಬಲಪಡಿಸಿ ರಾಜ್ಯದಲ್ಲಿ ಸಮನ್ವಯ ಸಾಧಿಸಲು ಸಹಾಯಕವಾಗಿದೆ. ಒಟ್ಟಿನಲ್ಲಿ, ಹೊಸ ಮುಖಗಳ ಮೇಲೆ ಹೂಡಿಕೆ ಬಿಜೆಪಿ ದೀರ್ಘಕಾಲಿಕ ರಾಜಕೀಯ ಸ್ಥಿರತೆಯನ್ನು ಗುರಿಯಾಗಿಸಿಕೊಂಡ ತಂತ್ರವಾಗಿದೆ.

ವಿವಿಧ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ನಾಯಕತ್ವ ವೈಫಲ್ಯ

ದೇಶದ ವಿವಿಧ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ನಾಯಕತ್ವ ವೈಫಲ್ಯವು ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಚರ್ಚೆಯ ಕೇಂದ್ರ ವಿಷಯವಾಗಿದೆ. ಇದು ಕೇವಲ ಚುನಾವಣಾ ಸೋಲುಗಳ ವಿಷಯವಲ್ಲ; ಸಂಘಟನಾ ದುರ್ಬಲತೆ, ಸ್ಪಷ್ಟವಾದ ನಾಯಕತ್ವದ ಕೊರತೆ, ತಂತ್ರಗಾರಿಕೆಯ ಅಭಾವ ಮತ್ತು ಜನರೊಂದಿಗೆ ಸಂಪರ್ಕ ಕಡಿಮೆಯಾಗಿರುವುದು ಸೇರಿದಂತೆ ಹಲವು ಅಂಶಗಳ ಸಮೂಹ ಫಲಿತಾಂಶವಾಗಿದೆ. ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.

ವಿಪಕ್ಷಗಳ ಸಂಕಷ್ಟದ ಸ್ವರೂಪ

ಭಾರತದಲ್ಲಿ ಸಶಕ್ತ ಪ್ರಜಾಪ್ರಭುತ್ವಕ್ಕೆ ಬಲವಾದ ಆಡಳಿತದ ಜತೆಗೆ ಬಲವಾದ ವಿರೋಧ ಪಕ್ಷಗಳೂ ಅಗತ್ಯ. ಆದರೆ, ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಹಳೇ ಪಕ್ಷ ಕಾಂಗ್ರೆಸ್ ಸೇರಿದಂತೆ ಅನೇಕ ವಿರೋಧ ಪಕ್ಷಗಳು ನಾಯಕತ್ವದ ಪ್ರಶ್ನೆಯಲ್ಲಿ ಸಂಕಷ್ಟವನ್ನು ಎದುರಿಸುತ್ತಿವೆ.

ವೈಫಲ್ಯಕ್ಕೆ ಮುಖ್ಯ ಕಾರಣ?



- ಏಕೀಕೃತ ನಾಯಕತ್ವದ ಕೊರತೆ
- ಸ್ಪಷ್ಟ ರಾಜಕೀಯ ಸಂದೇಶದ ಅಭಾವ
- ತಲಮಟ್ಟದ ಸಂಘಟನಾ ದುರ್ಬಲತೆ

ಕಾಂಗ್ರೆಸ್ ಸವಾಲುಗಳು

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ದೀರ್ಘಕಾಲ ದೇಶವನ್ನು ಆಡಳಿತ ನಡೆಸಿದ ಪಕ್ಷವಾಗಿದ್ದರೂ, ಇತ್ತೀಚೆಗೆ ಅದು ನಾಯಕತ್ವದ ಸಂಕಷ್ಟಕ್ಕೆ ಒಳಗಾಗಿದೆ.

- ರಾಷ್ಟ್ರೀಯ ಮಟ್ಟದಲ್ಲಿ ನಾಯಕತ್ವದ ಶೂನ್ಯತೆ
- ರಾಹುಲ್ ಗಾಂಧಿ ಅವರನ್ನು ಪ್ರಭಾವಿ ಪರ್ಯಾಯ ನಾಯಕನಾಗಿ ಸ್ಥಾಪಿಸುವಲ್ಲಿ ಸವಾಲುಗಳು
- ನಿರ್ಧಾರಾತ್ಮಕ ನಾಯಕತ್ವದ ಕೊರತೆ
- ರಾಜ್ಯ ಮಟ್ಟದಲ್ಲಿ ಬಲವಾದ ಮುಖಗಳ ಅಭಾವ

ರಾಜ್ಯವಾರು ವಿಶ್ಲೇಷಣೆ



ಪಶ್ಚಿಮ ಬಂಗಾಳ
- ಏಕ ನಾಯಕತ್ವದ ಅವಲಂಬನೆ
- ಮಮತಾ ಬ್ಯಾನರ್ಜಿ ಅವರ ಸುತ್ತಲೇ ರಾಜಕೀಯ ಸೀಮಿತ
- ಎರಡನೇ ಸಾಲಿನ ನಾಯಕತ್ವದ ಕೊರತೆ
- ಆಂತರಿಕ ಸಂಘರ್ಷ
- ರಾಷ್ಟ್ರೀಯ ವಿಸ್ತರಣೆ ವಿಫಲ



ಉತ್ತರ ಪ್ರದೇಶ
- ವಿಪಕ್ಷಗಳ ಸಂಘಟನೆ ಕುಸಿತ
- ಸಮಾಜವಾದಿ ಪಕ್ಷ: ಅಖಿಲೇಶ್ ಮೇಲೆ ಹೆಚ್ಚು ಅವಲಂಬನೆ
- ಬಿಎಸ್‌ಪಿ: ಮಾಯಾವತಿ ರಾಜಕೀಯದಲ್ಲಿ ಸಕ್ರಿಯತೆ ಕುಸಿತ



ಮಹಾರಾಷ್ಟ್ರ
- ಶಿವಸೇನೆ ವಿಭಜನೆ
- ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷದಲ್ಲಿ(ಎನ್‌ಸಿಪಿ) ಒಳಬೇಗುದಿ
- ನಾಯಕತ್ವದ ದ್ವಂದ್ವ
- ಮತದಾರರಲ್ಲಿ ಗೊಂದಲ
- ಸಂಘಟನಾ ದುರ್ಬಲತೆ



ದಿಲ್ಲಿ
- ಆಮ್ ಆದ್ಮಿ ಪಕ್ಷ ಸೀಮಿತ ವಿಸ್ತರಣೆ
- ರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಣೆ ಸವಾಲು
- ಸ್ಥಳೀಯ ನಾಯಕತ್ವದ ಮಿತಿ



ತಮಿಳುನಾಡು
- ಡಿಎಂಕೆಗೆ ರಾಜ್ಯ ಮಟ್ಟದಲ್ಲಿ ಬಲವಾದ ನಾಯಕತ್ವ
- ಆದರೆ, ರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವ ಸೀಮಿತ

ನಾಯಕತ್ವ ವೈಫಲ್ಯದ ಪ್ರಮುಖ ಕಾರಣಗಳು

1. **ವಂಶಪಾರಂಪರ್ಯ ರಾಜಕೀಯ:** ಕುಟುಂಬ ಆಧಾರಿತ ನಾಯಕತ್ವದಿಂದ ಹೊಸ ಮುಖಗಳ ಬೆಳವಣಿಗೆಗೆ ತಡೆ
2. **ಸಂಘಟನಾ ದುರ್ಬಲತೆ:** ತಲಮಟ್ಟದ ಕಾರ್ಯಕರ್ತರ ಕೊರತೆ
3. **ತಂತ್ರದ ಕೊರತೆ:** ಚುನಾವಣಾ ತಂತ್ರಗಾರಿಕೆಯಲ್ಲಿ ಸ್ಪಷ್ಟತೆ ಇಲ್ಲ.
4. **ನಾಯಕತ್ವದ ಸ್ಪರ್ಧೆ:** ಆಂತರಿಕ ಗುಂಪುಗಾರಿಕೆಯಿಂದ ಪಕ್ಷಗಳು ದುರ್ಬಲ

ವಿಪಕ್ಷಗಳ ಮುಂದಿರುವ ಸವಾಲುಗಳು

- ರಾಷ್ಟ್ರೀಯ ಮಟ್ಟದಲ್ಲಿ ಏಕತೆ
- ವಿಶ್ವಾಸಾರ್ಹ ನಾಯಕತ್ವ ನಿರ್ಮಾಣ
- ತಲಮಟ್ಟದ ಸಂಘಟನೆ ಪುನರ್ ನಿರ್ಮಾಣ
- ಯುವ ನಾಯಕತ್ವಕ್ಕೆ ಉತ್ತೇಜನ

ದೇಶದಲ್ಲಿನ ವಿರೋಧ ಪಕ್ಷಗಳ ನಾಯಕತ್ವ ವೈಫಲ್ಯವು ಒಂದು ಬಹುಮಟ್ಟದ ಸಮಸ್ಯೆಯಾಗಿದೆ. ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳು ತಮ್ಮ ಸಂಘಟನಾ ಮತ್ತು ನಾಯಕತ್ವದ ಬಲವನ್ನು ಪುನರ್ ನಿರ್ಮಿಸಬೇಕಿದೆ.

ಪ್ರಜಾಪ್ರಭುತ್ವದಲ್ಲಿ ಬಲವಾದ ವಿರೋಧ ಪಕ್ಷಗಳು ಅಗತ್ಯವಾಗಿದ್ದು, ನಾಯಕತ್ವದ ಪುನರ್ ನಿರ್ಮಾಣವೇ ಅದರ ಮುಖ್ಯ ಕೀಲಿಕೈ ಆಗಬೇಕಿದೆ.

ಭವಿಷ್ಯದಲ್ಲಿ ಯಾರು ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸುತ್ತಾರೋ, ಅವರು ಭಾರತೀಯ ರಾಜಕೀಯದಲ್ಲಿ ಹೊಸ ದಿಕ್ಕನ್ನು ನಿರ್ಧರಿಸಲಿದ್ದಾರೆ.

ಕಳಂಕರಹಿತ ಆಡಳಿತಕ್ಕೆ ಒಲಿದ ಗೆಲುವು: ಸಂಸದ ಕಾರಜೋಳ

ಚಿತ್ರದುರ್ಗ: ಪಂಚ ರಾಜ್ಯಗಳಲ್ಲಿ ಮೂರು ರಾಜ್ಯದಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಕಳಂಕರಹಿತ ಪ್ರಧಾನಿ ಮೋದಿಯವರ ಆಡಳಿತದಿಂದ ಗೆಲುವು ಸಿಕ್ಕಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ, ಸಂಸದರಾದ ಗೋವಿಂದ ಕಾರಜೋಳ ಹೇಳಿದ್ದಾರೆ.

ಚಿತ್ರದುರ್ಗ ನಗರದಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಶ್ಚಿಮ ಬಂಗಾಳದ ಜನರಿಂದ ಸಮಗ್ರತೆ ಉಳಿಸುವ ಕೆಲಸವಾಗಿದೆ. ಬಾಂಗ್ಲಾ ದೇಶ ಅರಾಜಕತೆ ಸೃಷ್ಟಿಸುವ ಹೆಬ್ಬಾಗಿಲಾಗಿತ್ತು. ಬಂಗಾಳದಿಂದ ಪಾಕ್, ಬಾಂಗ್ಲಾದ ನುಸುಳುಕೋರರು ಬರುತ್ತಿದ್ದರು. ಬಿಜೆಪಿ ಪಕ್ಷದಿಂದ ತಡೆಗಟ್ಟುವ ಕೆಲಸ ಮಾಡಲಾಗುತ್ತದೆ. ಹಿಂದುಗಳ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿತ್ತು. ಮೋದಿ ನೇತೃತ್ವದ ಸರ್ಕಾರ ಎಲ್ಲದಕ್ಕೂ ಉತ್ತರ ನೀಡಲಿದೆ ಎಂದ ಅವರು, ಕರ್ನಾಟಕದಲ್ಲಿ ಎರಡು ಕಡೆಯಲ್ಲಿ ನಡೆದ ಉಪ ಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳು ಸೋತಿದ್ದಾರೆ. ಉಪಚುನಾವಣೆ ಫಲಿತಾಂಶವನ್ನು ನಾವು ಗೌರವಿಸುತ್ತೇವೆ ಎಂದರು.



ಶೃಂಗೇರಿ ಮರು ಮತ ಎಣಿಕೆ ವೇಳೆ ವೋಟ್ ಚೋರಿ ಎಂದು ಸಿಎಂ ಆರೋಪ ವಿಚಾರಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ್ದೇ ಆಡಳಿತ ಇದೆ. ಚುನಾವಣಾ ಆಯೋಗ ಒಂದು ಸ್ವಾಯತ್ತ ಸಂಸ್ಥೆ ಆಗಿದೆ. ಅವರ ಮೇಲೆ ವಿಶ್ವಾಸವಿಲ್ಲ ಎಂದರೆ ಸಂವಿಧಾನದ ಮೇಲೆ ವಿಶ್ವಾಸವಿಲ್ಲ ಎಂದರ್ಥ. ಬ್ಯಾಲೆಟ್ ಬೇಕು. ಇವಿಎಂ ಬೇಡ ಎಂದು ಹೇಳುತ್ತಾರೆ. ನನ್ನನ್ನು 334 ಮತಗಳಿಂದ ಸೋಲಿಸಿದ್ದೇವೆಂದು ಘೋಷಿಸಿದರು ಎಂದರು. ಬಾಗಲಕೋಟೆ, ಬಾದಾಮಿ, ಹುನಗುಂದದಲ್ಲೂ ಅದೇ ರೀತಿ ಸೋಲಿಸಿದರು. ಮರು ಮತ ಎಣಿಕೆಗೆ ಸಹ ಅವಕಾಶ ಕಲ್ಪಿಸಲಿಲ್ಲ. ಆಗ ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರ ಬಹುಮತದಿಂದ ಅಧಿಕಾರಕ್ಕೆ ಬಂದಿತ್ತು. ಕಾಂಗ್ರೆಸ್‌ನವರು ಚೋರಿ ಮಾಡಲು ಬ್ಯಾಲೆಟ್ ಬೇಡುತ್ತಾರೆ ಎಂದು ತಿಳಿಸಿದರು.

ತಂಪೆರೆದ ಮಳೆರಾಯ



ಬೆಳಗಾವಿ ನಗರದಲ್ಲಿ ಮಂಗಳವಾರ ಸುರಿದ ಮಳೆ ತಂಪೆರೆದಿದ್ದು, ನೀರಿನಿಂದ ಆವೃತ್ತವಾದ ರಸ್ತೆಯೊಂದರಲ್ಲಿ ವಾಹನ ಸವಾರರು ಸಾಗಿದ್ದು ಹೀಗೆ...

ಟಿವಿಕೆ ಜತೆ ಕಾಂಗ್ರೆಸ್ ಮೈತ್ರಿ ಮಾಡಿಕೊಳ್ಳದಿರುವುದೇ ಒಳಿತು

ಬೆಂಗಳೂರು: ಕಾಂಗ್ರೆಸ್ ಪಕ್ಷವು ಟಿವಿಕೆ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿದ್ದರೆ, ಟಿವಿಕೆ ಈಗಿರುವಂತೆ ಯಶಸ್ವಿಯಾಗುತ್ತಿರಲಿಲ್ಲ ಎಂದು ರಾಜ್ಯಸಭಾ ಸದಸ್ಯ ಲಹರ್‌ಸಿಂಗ್ ಸಿರೋಯಾ ಹೇಳಿದ್ದಾರೆ.



ಕೆಲವು ಕಾಂಗ್ರೆಸ್ ನಾಯಕರು ಡಿಎಂಕೆ ಜೊತೆಗಿನ ಮೈತ್ರಿಯನ್ನು ಮುರಿದು ಟಿವಿಕೆ ಜೊತೆ ಮೈತ್ರಿ ಮಾಡಿಕೊಂಡಿದ್ದರೆ, ಚೆನ್ನಾಗಿ ಕೆಲಸ ಮಾಡಿ ಅಧಿಕಾರ ಹಂಚಿಕೊಳ್ಳಬಹುದಿತ್ತು ಎನ್ನುತ್ತಿರುವುದಕ್ಕೆ ಲಹರ್‌ಸಿಂಗ್ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿದ್ದಾರೆ.

ಇದಕ್ಕೆ ವಿರುದ್ಧವಾಗಿ ನಡೆಯುವ ಸಾಧ್ಯತೆಯೇ ಹೆಚ್ಚು. ಕಾಂಗ್ರೆಸ್ ಇತಿಹಾಸವನ್ನು ಗಮನಿಸಿದರೆ, ಕಾಂಗ್ರೆಸ್ ಪಕ್ಷವು ಟಿವಿಕೆ ಪಕ್ಷದೊಂದಿಗೆ ಜೊತೆ ಮೈತ್ರಿ ಮಾಡಿಕೊಂಡಿದ್ದರೆ, ಟಿವಿಕೆ ಈಗಿರುವಂತೆ ಯಶಸ್ವಿಯಾಗುತ್ತಿರಲಿಲ್ಲ. ದುರದೃಷ್ಟದ ನೆರಳು ಅವರ ಮೇಲೆ ಬೀಳುತ್ತಿತ್ತು. ಬಿಹಾರ ಮತ್ತು ಉತ್ತರ ಪ್ರದೇಶದಂತಹ ಇತರ ರಾಜ್ಯಗಳಲ್ಲಿ ಕಾಂಗ್ರೆಸ್ ಮೈತ್ರಿ ಪಾಲುದಾರರನ್ನು ಹಾನಿಗೊಳಿಸಿದಂತೆ ಟಿವಿಕೆ ಸ್ಥಾನ ಕಡಿಮೆಯಾಗುತ್ತಿತ್ತು ಎಂದು ವಿಶ್ಲೇಷಿಸಿದ್ದಾರೆ.

ಅಧಿಕಾರದಲ್ಲಿ ಪಾಲು ಮತ್ತು ಗೌರವ ಬೇಕು ಎಂದು ಹೇಳುವ ಮೂಲಕ ತಮಿಳುನಾಡಿನಲ್ಲಿ ಡಿಎಂಕೆ ವಿರುದ್ಧ ನಿರಂತರವಾಗಿ ನಿರೂಪಣೆಯನ್ನು ನಿರ್ಮಿಸಿದ್ದು ಕಾಂಗ್ರೆಸ್‌ನಲ್ಲಿ ರಾಹುಲ್ ಗಾಂಧಿಯೊಂದಿಗೆ ನಿಕಟ ಸಂಬಂಧ ಹೊಂದಿದ್ದ ಕೆಲವು ಜನರು ಎಂಬುದು ಸ್ಪಷ್ಟವಾಗಿದೆ. ಅವರು ಸೃಷ್ಟಿಸಿದ ಅಪಶ್ರುತಿ ಕ್ರಮೇಣ ದೊಡ್ಡದಾಯಿತು ಮತ್ತು ಡಿಎಂಕೆಯನ್ನು ಮುಳುಗಿಸಿತು ಎಂದು ಅಭಿಪ್ರಾಯಿಸಿದ್ದಾರೆ.

ಪಿ.ಚಿದಂಬರಂ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರಂತಹ ಜನರು ಈ ಮೈತ್ರಿ ನಡೆಯಲು ಬಿಡಲಿಲ್ಲ ಎಂದು ಸಾಮಾಜಿಕ ಮಾಧ್ಯಮದಲ್ಲಿ ದೂಷಿಸಲಾಗುತ್ತಿದೆ ಎಂದು ಲಹರ್ ಸಿಂಗ್ ಸಿರೋಯಾ ಹೇಳಿದ್ದಾರೆ.

ಕಿರುಸುದ್ದಿ

ಜಿಲ್ಲಾಡಳಿತದಿಂದ ಬೇಜವಾಬ್ದಾರಿ ಪ್ರದರ್ಶನ: ಈಶ್ವರಪ್ಪ ಆಕ್ರೋಶ

ಶಿವಮೊಗ್ಗ: ಜಿಲ್ಲೆಯಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಅನುಮತಿ ನೀಡುವ ಮೂಲಕ ಜಿಲ್ಲಾಡಳಿತ ತನ್ನ ಬೇಜವಾಬ್ದಾರಿ ಪ್ರದರ್ಶಿಸಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಆಕ್ರೋಶ ವ್ಯಕ್ತಪಡಿಸಿದರು. ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸಾಗರ ತಾಲೂಕಿನ ಬೇಸೂರು ಗ್ರಾಮದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಅಣು ವಿದ್ಯುತ್ ಸ್ಥಾವರವನ್ನು ಪರಿಸರಕ್ಕಾಗಿ ನಾವು ಮತ್ತು ರಾಷ್ಟ್ರಭಕ್ತರ ಬಳಗ ತೀವ್ರವಾಗಿ ವಿರೋಧಿಸುತ್ತದೆ. ಪಶ್ಚಿಮಘಟ್ಟದ ಸೂಕ್ಷ್ಮ ಪ್ರದೇಶವಾದ ಈ ಭಾಗದಲ್ಲಿ ಬೃಹತ್ ಯೋಜನೆಗಳನ್ನು ಹೊರುವ ಧಾರಣ ಸಾಮರ್ಥ್ಯವಿಲ್ಲ. ಪಂಪ್ಡ್ ಸ್ಟೋರೇಜ್, ಚಕ್ರಾ, ವರಾಹಿ, ಲಿಂಗನಮಕ್ಕಿ, ಹಿರೇಭಾಸ್ಕರ, ಮೇಲೇನೂರು, ಸಾವೇಹಕ್ಲು, ಮಾಣಿ ಜಲಾಶಯದಂತಹ ಪರಿಸರ ಮಾರಕ ಯೋಜನೆಗಳು ಜಾರಿಗೊಂಡಿವೆ. ಈಗ ಸಾಗರ ಸಮೀಪದ ಬೇಸೂರಿನಲ್ಲಿ ಎನ್‌ಟಿಪಿಎಲ್ ಮಾರಕ ಅಣು ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಲಿದೆ ಎಂಬ ಅಧಿಕೃತ ಮಾಹಿತಿ ದೊರೆತಿದೆ ಎಂದರು.



ಟಿಎಂಸಿ ನಾಶದಿಂದ ದೇಶಕ್ಕೆ ಒಳಿತು: ಮುನಿರತ್ನ

ಚಿತ್ರದುರ್ಗ: ಅಪ್ಪ ಮಂತ್ರಿ, ಅಮ್ಮ ಲೋಕಸಭಾ ಸದಸ್ಯರು ಇಷ್ಟಾದರೂ ಸಹ ಇನ್ನೊಬ್ಬ ಮಂತ್ರಿಯ ಬಳಿ ಹೋಗಿ ತನ್ನ ಮಗನ ಗೆಲುವಿಗಾಗಿ ಅಂಗಲಾಚಬೇಕಾದ ಪರಿಸ್ಥಿತಿ ದಾವಣಗೆರೆ ದಕ್ಷಿಣದಲ್ಲಿ ಉಂಟಾಗಿತ್ತು ಎಂದು ಬೆಂಗಳೂರಿನ ರಾಜ ರಾಜೇಶ್ವರಿ ನಗರದ ಶಾಸಕ ಮುನಿರತ್ನ ಟೀಕಿಸಿದರು.

ಚಿತ್ರದುರ್ಗ ನಗರದಲ್ಲಿ ಮೇ 9ರಂದು ನಡೆಯಲಿರುವ ಯಡಿಯೂರಪ್ಪರವರ ಅಭಿಮಾನೋತ್ಸವ ಸಮಾರಂಭದ ಪೂರ್ವಭಾವಿ ಸಿದ್ಧತೆಯನ್ನು ಪರಿಶೀಲಿಸಲು ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಪಂಚ ರಾಜ್ಯ ಚುನಾವಣೆಯಲ್ಲಿ ಪ್ರಮುಖವಾಗಿ ಪಶ್ಚಿಮ ಬಂಗಾಳ ಅದು ಒಂದು ರಾಜ್ಯ ಎನ್ನುವುದಕ್ಕಿಂತ ದೇಶಕ್ಕೆ ಹಿಡಿದಂತಹ ಕೆಟ್ಟ ವ್ಯಕ್ತಿ ಕೆಟ್ಟ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ಹೊರಟ ತೃಣ ಮೂಲ ಕಾಂಗ್ರೆಸ್‌ನ್ನು ಕಿತ್ತಾಕಿರುವುದು ದೇಶಕ್ಕೆ ಒಳ್ಳೆಯದಾಗಿದೆ ಎಂದರು.

ಅತ್ತೆಗೆ ಚಾಕುವಿನಿಂದ ಇರಿದ ಅಳಿಯ

ಬೆಳಗಾವಿ: ಜಿಲ್ಲೆಯ ಸವದತ್ತಿ ತಾಲೂಕಿನ ಆಲದಕಟ್ಟಿ ಗ್ರಾಮದಲ್ಲಿ ವ್ಯಕ್ತಿಯೊಬ್ಬ ವಿಡಿಯೋ ಕಾಲ್‌ನಲ್ಲಿ ಮಗುವನ್ನು ತೋರಿಸಿಲ್ಲ ಎನ್ನುವ ಕಾರಣಕ್ಕೆ ಅತ್ತೆಗೆ ಚಾಕುವಿನಿಂದ ಇರಿದು ವಾಟ್ಸ್‌ಆ್ಯಪ್ ಸ್ಟೇಟಸ್ ಇಟ್ಟುಕೊಂಡಿರುವ ಘಟನೆಯೊಂದು ನಡೆದಿದೆ. ಅರವಿಂದ ಗವಳಿ ಅತ್ತೆಗೆ ಚಾಕು ಇರಿದ ಅಳಿಯ. ಮಹಾದೇವಿ (45) ಚಾಕು ಇರಿತಕ್ಕೊಳಗಾದ ಮಹಿಳೆ. ಸದ್ಯ ಮಹಾದೇವಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿ ಅರವಿಂದ ಗವಳಿಯನ್ನು ಪೊಲೀಸರು ಬಂಧಿಸಿದ್ದಾರೆ. ಅರವಿಂದ ಗವಳಿಯ ಪತ್ನಿಗೆ ಎರಡು ತಿಂಗಳ ಹಿಂದೆಯಷ್ಟೇ ಹೆರಿಗೆಯಾಗಿದ್ದು, ಆಕೆ ತವರು ಮನೆಯಲ್ಲಿದ್ದಳು. ಅಲ್ಲಿಯೂ ಪತ್ನಿಗೆ ಮಾನಸಿಕ ಕಿರುಕುಳ ನೀಡುತ್ತಿದ್ದ ಅರವಿಂದ, ಪದೇ ಪದೆ ವಿಡಿಯೋ ಕಾಲ್ ಮಾಡಿ ಮಗುವನ್ನು ತೋರಿಸುವಂತೆ ಪಟ್ಟು ಹಿಡಿಯುತ್ತಿದ್ದ. ಇದಕ್ಕೆ ಪ್ರತಿಕ್ರಿಯಿಸಿದ್ದ ಅತ್ತೆ ಮಹಾ ದೇವಿ, ಕೆಲಸ ಬಿಟ್ಟು ಸದಾ ಮೊಬೈಲ್ ಹಿಡಿದು ಕೂರಲು ಸಾಧ್ಯವಿಲ್ಲ. ದಿನಕ್ಕೆ ಒಂದು ಬಾರಿ ಮಾತ್ರ ಕಾಲ್ ಮಾಡು ಎಂದು ಬುದ್ಧಿ ಹೇಳಿದ್ದರು. ಸಿಟ್ಟಾದ ಅರವಿಂದ ಅತ್ತೆಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದಲ್ಲದೆ, ಅತ್ತೆಯು ನಮ್ಮ ಮನೆಯ ಬಾಗಿಲಿಗೆ ಬಂದರೆ ನಿನ್ನನ್ನು ಸುಮ್ಮನೆ ಬಿಡಲ್ಲ ಎಂದು ಎಚ್ಚರಿಸಿದ್ದರು.



ಕಾರ್ಯಕರ್ತರಿಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಕಿವಿಮಾತು

ಸೋಲಿಂದ ಹತಾಶರಾಗದಿರಿ

ದಾವಣಗೆರೆ: ಚುನಾವಣೆಯಲ್ಲಿ ತಂತ್ರಗಾರಿಕೆಯೂ ಇರುತ್ತದೆ, ಕುತಂತ್ರಗಾರಿಕೆಯೂ ಇರುತ್ತದೆ. ಆದರಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ. ನಮ್ಮ ಕಾರ್ಯಕರ್ತರು ಉಪಚುನಾವಣೆ ಸೋಲಿನಿಂದ ಹತಾಶರಾಗಬೇಕಿಲ್ಲ. ಮುಂಬರುವ ದಿನಗಳಲ್ಲಿ ಬಿಜೆಪಿ ಗತವೈಭವ ರಾಜ್ಯದಲ್ಲಿ ಮರುಕಳಿಸಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಮಂಗಳವಾರ ದಾವಣಗೆರೆ ದಕ್ಷಿಣ ಕ್ಷೇತ್ರದ ಪರಾಜಿತ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ನಿವಾಸಕ್ಕೆ ಭೇಟಿ ನೀಡಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಸಾಮಾನ್ಯವಾಗಿ ಉಪಚುನಾವಣೆಗಳಲ್ಲಿ ಜನರ ಒಲವು ಆಡಳಿತ ಪಕ್ಷದ ಪರವಾಗಿ ಇರುತ್ತದೆ. ಆದರೂ ನಾವು ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಫಲಿತಾಂಶದ ಬಗ್ಗೆ ಸಾಕಷ್ಟು ನಿರೀಕ್ಷೆ ಹೊಂದಿದ್ದೆವು. ಅನುಕಂಪ, ಆಡಳಿತ ಯಂತ್ರದ ದುರುಪಯೋಗ ಕಾಂಗ್ರೆಸ್ ಗೆಲುವಿಗೆ ಸಹಕಾರಿಯಾಗಿವೆ. ಕಾರ್ಯಕರ್ತರು ಚುನಾವಣೆಯಲ್ಲಿನ ಹಿನ್ನಡೆ ಬಗ್ಗೆ ಚಿಂತಿಸದೆ, ಇನ್ನಷ್ಟು ಪಕ್ಷ ಸಂಘಟನೆಯಲ್ಲಿ ತೊಡಗಬೇಕು ಎಂದು ಸಲಹೆ ನೀಡಿದರು.

ಎರಡೂ ಕ್ಷೇತ್ರಗಳಲ್ಲಿ ಈ ಬಾರಿ ಬಿಜೆಪಿ ಅಭ್ಯರ್ಥಿ ಗೆಲ್ಲಲು ಒಳ್ಳೆಯ ವಾತಾವರಣ ನಿರ್ಮಾಣವಾಗಿತ್ತು. ಪಕ್ಷದ ಕಾರ್ಯಕರ್ತರು, ಸ್ಥಳೀಯ ಮುಖಂಡರು ಹಗಲಿರುಳು ಶ್ರಮ ಹಾಕಿದ್ದಾರೆ. ಎಂ.ಪಿ.ರೇಣುಕಾಚಾರ್ಯ, ಜಿ.ಎಂ.ಸಿದ್ದೇಶ್ವರ್ ಸೇರಿದಂತೆ ಎಲ್ಲ ಮುಖಂಡರು ಭಿನ್ನಾಭಿಪ್ರಾಯ ಬದಿಗಿಟ್ಟು ತನು-ಮನ-ಧನದೊಂದಿಗೆ ಸಹಕರಿಸಿದ್ದಾರೆ. ದಾವಣಗೆರೆ ದಕ್ಷಿಣದ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಕೂಡ ಜನಾನುರಾಗಿಯಾಗಿ ಚುನಾವಣೆ ಗೆಲ್ಲಲೇಬೇಕೆಂಬ ಹಠದಿಂದ ಶಕ್ತಿಮೀರಿ ಹೋರಾಡಿದ್ದಾರೆ. ಆದರೂ ನಿರೀಕ್ಷಿತ ಮಟ್ಟದಲ್ಲಿ ಮತ ಬಂದಿಲ್ಲ. ಅದೃಷ್ಟ ನಮ್ಮ ಕೈಹಿಡಿಯಲಿಲ್ಲ ಎನ್ನಬಹುದಷ್ಟೇ ಎಂದರು.

ಶ್ರೀನಿವಾಸ ದಾಸಕರಿಯಪ್ಪ, ಬಿ.ಜಿ.ಅಜಯ ಕುಮಾರ್‌ಗೆ ಒಳ್ಳೆಯ ರಾಜಕೀಯ ಭವಿಷ್ಯವಿದೆ. ಕಾರ್ಯಕರ್ತರು ಸೋಲಿನಿಂದ ಎದೆಗುಂದಬೇಕಿಲ್ಲ. ಬಿ.ಎಸ್.ಯಡಿಯೂರಪ್ಪನವರು ಇಂತಹ ಅನೇಕ ಸವಾಲು ಎದುರಿಸಿದ್ದಾರೆ. ಅನೇಕ ರೀತಿಯಲ್ಲಿ ಹೋರಾಟ ಮಾಡಿ ಪಕ್ಷವನ್ನು ಈ ಮಟ್ಟಕ್ಕೆ ಬೆಳೆಸಿದ್ದಾರೆ. 10 ವರ್ಷದ ಹಿಂದೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಶಾಸಕ ಆಯ್ಕೆಯಾಗುವುದನ್ನು ಊಹೆ ಮಾಡಿಕೊಳ್ಳುವಂತಿರಲಿಲ್ಲ. ಮಮತಾ ಬ್ಯಾನರ್ಜಿಯವರು ಅಧಿಕಾರ ಮದದಿಂದ ಹಿಂದೂಗಳಿಗೆ ಅಪಮಾನ ಮಾಡುತ್ತಿದ್ದರು. ನಮ್ಮ ಕಾರ್ಯಕರ್ತರ ಶ್ರಮ, ಪ್ರಧಾನಿ ಮೋದಿಯವರ ಜನಪ್ರಿಯತೆ, ಗೃಹಸಚಿವ ಶಾ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ನೇತೃತ್ವದಲ್ಲಿ ಪಶ್ಚಿಮ ಬಂಗಾಳದಲ್ಲಿ ಕಮಲ ಅರಳಿದೆ. ಮುಂದೆ ರಾಜ್ಯದಲ್ಲೂ ನಿಶ್ಚಿತವಾಗಿ ಅಧಿಕಾರಕ್ಕೆ ಬರುತ್ತೇವೆ ಎಂದರು. ಪಕ್ಷದ ಜಿಲ್ಲಾಧ್ಯಕ್ಷ ಎನ್.ರಾಜಶೇಖರ, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಮಾಜಿ ಮೇಯರ್ ಬಿ.ಜಿ.ಅಜಯ ಕುಮಾರ, ಧೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ, ಮುಖಂಡರಾದ ಪಿ.ಸಿ.ಶ್ರೀನಿವಾಸ ಭಟ್, ದೊಗ್ಗಳ್ಳಿ ವೀರೇಶ ಹಾಜರಿದ್ದರು.



ಶ್ರೀನಿವಾಸ್ ಕುಟುಂಬಕ್ಕೆ ಧೈರ್ಯ ತುಂಬಿದ ಬಿವೈವಿ

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಅಲ್ಪ ಮತಗಳ ಅಂತರದಲ್ಲಿ ಸೋಲನುಭವಿಸಿದ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ಟಿ.ದಾಸಕರಿಯಪ್ಪ ನಿವಾಸಕ್ಕೆ ಮಂಗಳವಾರ ಸಂಜೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿ ನೀಡಿ, ಶ್ರೀನಿವಾಸ್ ಮತ್ತು ಕುಟುಂಬ ವರ್ಗಕ್ಕೆ ಧೈರ್ಯ ತುಂಬಿದರು. ಚುನಾವಣೆಯಲ್ಲಿ ಸೋಲು-ಗೆಲುವು ಸಾಮಾನ್ಯ. ನಮ್ಮ ನಿರೀಕ್ಷೆಯಂತೆ ಕನಿಷ್ಟ 70 ಸಾವಿರ ಮತ ಬರಬೇಕಿತ್ತು. ಈ ಸೋಲಿನಿಂದ ಎದೆಗುಂದಬೇಡಿ. ಪಕ್ಷ ಹಾಗೂ ನಾವೆಲ್ಲರೂ ನಿಮ್ಮ ಜೊತೆಗಿದ್ದೇವೆ. ನಿಮಗೆ ರಾಜಕೀಯದಲ್ಲಿ ಮುಂದೆ ಉಜ್ವಲ ಭವಿಷ್ಯವಿದೆ. ಎಲ್ಲವನ್ನೂ ಮರೆತು, ಮತ್ತೆ ಪಕ್ಷ ಸಂಘಟನೆಯಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ತೊಡಗಿಕೊಳ್ಳಿ ಎಂದು ಬಿ.ವೈ.ವಿಜಯೇಂದ್ರ ಸ್ಫೂರ್ತಿ ಮಾತುಗಳನ್ನಾಡಿದರು.

ಕಬ್ಬನ್‌ಪಾರ್ಕ್‌ನಲ್ಲಿ 10 ದಿನ ಮಾರಾಟ ಮೇಳ

ಮೇ 8ರಿಂದ ಮಾವು, ಹಲಸು ಮಾರಾಟ

ಬೆಂಗಳೂರು: ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಹಾಗೂ ತೋಟಗಾರಿಕೆ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಮೇ 8 ರಿಂದ 17ರವರೆಗೆ ಕಬ್ಬನ್ ಉದ್ಯಾನವನದಲ್ಲಿ ಮಾವು ಮತ್ತು ಹಲಸು ಪ್ರದರ್ಶನ ಹಾಗೂ ಮಾರಾಟ ಮೇಳ ಆಯೋಜಿಸಲಾಗಿದೆ ಎಂದು ಮಂಡಳಿ ಅಧ್ಯಕ್ಷ ಡಾ. ಬಿ.ಸಿ.ಮುದ್ದುಗಂಗಾಧರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇಳದಲ್ಲಿ ಕಾರ್ಬೈಡ್ ಮುಕ್ತ, ಸಹಜವಾಗಿ ಮಾಗಿದ ಮಾವು ಹಾಗೂ ಹಲಸು ಹಣ್ಣುಗಳನ್ನು ರೈತರಿಂದಲೇ ನೇರವಾಗಿ ಖರೀದಿಸುವ ಅವಕಾಶ ಕಲ್ಪಿಸಲಾಗುತ್ತಿದೆ. ರೈತರಿಗೆ ಯೋಗ್ಯ ಬೆಲೆ ಹಾಗೂ ಗ್ರಾಹಕರಿಗೆ ತಾಜಾ ಹಣ್ಣುಗಳು ಸಮರ್ಪಕ ದರದಲ್ಲಿ ದೊರೆಯುವಂತೆ ಮಾಡುವುದೇ ಈ ಮೇಳದ ಉದ್ದೇಶವಾಗಿದೆ ಎಂದು ಹೇಳಿದರು.

70ಕ್ಕೂ ಹೆಚ್ಚು ಮಳಿಗೆಗಳು: ಮೇಳದಲ್ಲಿ ಬಾದಾಮಿ, ಮಲ್ಲಿಕಾ, ರಸಪೂರಿ, ಸೇಂದೂರಾ, ಚಾಲ್ತಿ, ಕೇಸರ್ ಹಾಗೂ ಜಿಐ ಮಾನ್ಯತೆ ಪಡೆದ ಕರಿ ಇಶಾಡ್ ಸೇರಿದಂತೆ ಹಲವು ಮಾವಿನ ತಳಿಗಳು, ಜತೆಗೆ ರುದ್ರಾಕ್ಷಿ, ಶಿವರಾತ್ರಿ, ಏಕಾದಶಿ, ತೂಬಗೆರೆ ಸೇರಿದಂತೆ ಹಲಸಿನ ವಿವಿಧ ತಳಿಗಳು ಲಭ್ಯವಿರಲಿವೆ. ರಾಮನಗರ, ಮಂಡ್ಯ, ತುಮಕೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳ ರೈತರು ಭಾಗವಹಿಸುತ್ತಿದ್ದು, 70ಕ್ಕೂ ಹೆಚ್ಚು ಮಳಿಗೆಗಳಿಗೆ ಅವಕಾಶ ನೀಡಲಾಗಿದೆ.



ಶೇ.70ಕ್ಕೂ ಹೆಚ್ಚು ನಷ್ಟ

ಈ ವರ್ಷ ಶೇ.60-70 ಬೆಳೆ ನಷ್ಟವಾಗಿದ್ದು, ಇತ್ತೀಚಿನ ಮಳೆಯಿಂದ ಮತ್ತಷ್ಟು ಹಾನಿಯಾಗಿದೆ. ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಶೇ.33ಕ್ಕಿಂತ ಹೆಚ್ಚು ನಷ್ಟವಾದ ಬೆಳೆಗಳಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ನೆರವು ಒದಗಿಸಲಾಗುತ್ತಿದೆ. ಇದರೊಂದಿಗೆ ಮಾಡಿಕೆರೆ ಮಾವು ಅಭಿವೃದ್ಧಿ ಕೇಂದ್ರದ ಪ್ಯಾಕ್‌ಹೌಸ್ ಮೂಲಕ 11 ಟನ್ ಮಾವು ಹಣ್ಣುಗಳನ್ನು ಅಮೆರಿಕಾ, ಜರ್ಮನಿ ಮತ್ತು ಯುಕೆಗೆ ರಫ್ತು ಮಾಡಲಾಗಿದ್ದು, ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಕುರಿತು ರೈತರಿಗೆ ತರಬೇತಿ ನೀಡಲಾಗುತ್ತಿದೆ.

ಕಾನೂನು ಹೋರಾಟಕ್ಕೆ ಸಿದ್ಧತೆ: ಡಿಸಿಎಂ

ಕಾಂಗ್ರೆಸ್ ಅಭ್ಯರ್ಥಿ ಅಂಚೆ ಮತ ತಿದ್ದಿ ಅಸಿಂಧುಗೊಳಿಸಿದ್ದು ಸರಿಯಲ್ಲ: ಡಿಸಿಎಂ

ಬೆಂಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಬಿದ್ದಿರುವ ಅಂಚೆ ಮತಗಳನ್ನು ತಿದ್ದುವ ಮೂಲಕ ಮರುಎಣಿಕೆಯಲ್ಲಿ ಅಸಿಂಧುಗೊಳಿಸಲಾಗಿದೆ. ಇಡೀ ದೇಶದಲ್ಲಿ ಇಂತಹ ಅಪರಾಧ ನಡೆದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪಿಸಿದ್ದಾರೆ.



ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ಶೃಂಗೇರಿ ಕ್ಷೇತ್ರದ ಮರು ಮತಎಣಿಕೆ ಕುರಿತ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, ಇದರ ವಿರುದ್ಧ ಕಾನೂನು ಹೋರಾಟ ಮಾಡುತ್ತೇವೆ ಎಂದರು.

ಚುನಾವಣೆ ಮತ ಎಣಿಕೆ ಸಮಯದಲ್ಲಿ ಪ್ರತಿ ಅಂಚೆ ಮತವನ್ನು ತೆರೆದು ಎರಡೂ ಪಕ್ಷಗಳ ಏಜೆಂಟರು ಹಾಗೂ ಅಧಿಕಾರಿಗಳಿಗೆ ತೋರಿಸಿ ಅದನ್ನು ಮಾನ್ಯ ಮಾಡಿ ಎಣಿಕೆ ಮಾಡಲಾಗಿರುತ್ತದೆ. ಈ ರೀತಿ ಮತ ಎಣಿಕೆ ಮಾಡಿದ ಬಳಿಕ ಬಿಜೆಪಿ ಅಭ್ಯರ್ಥಿ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು ಅಂಚೆ ಮತಗಳನ್ನು ತಿದ್ದಲಾಗಿದೆ. ಹೀಗಾಗಿಯೇ ಅವರು ನಿರ್ದಿಷ್ಟ ಮತಗಳ ಬಂಡಲ್ ಅನ್ನೇ ಮರು ಎಣಿಕೆ ಮಾಡಿ ಎಂದು ಪಟ್ಟು ಹಿಡಿದಿದ್ದರು ಎಂದು ವಿವರಿಸಿದರು.

ಅಧಿಕಾರಿಗಳು ಹಾಗೂ ಬಿಜೆಪಿ ಅಭ್ಯರ್ಥಿ ಈ ಅಕ್ರಮದಲ್ಲಿ ಭಾಗಿಯಾಗಿದ್ದು, ಗಂಭೀರ ವಾದ ತನಿಖೆ ನಡೆಯಬೇಕಿದೆ. ಚುನಾವಣಾ ಆಯೋಗವು ಈ ವಿಚಾರದಲ್ಲಿ ನ್ಯಾಯ ಒದಗಿಸಬೇಕಿದೆ. ಇದು ದೇಶದಲ್ಲೇ ಅತಿ ದೊಡ್ಡ ಷಡ್ಯಂತ್ರವಾಗಿದೆ ಎಂದು ಹೇಳಿದರು.

ಬಾಲ್ಯವಿವಾಹಕ್ಕೆ ನಕಲಿ ಶಾಲಾ ದೃಢೀಕರಣ ಪತ್ರ

ಕೊಪ್ಪಳ: ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ತಾಳಕೇರಿ ಗ್ರಾಮದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಗೆ ಬಾಲ್ಯವಿವಾಹವನ್ನು ಮಾಡಲು ನಕಲಿ ಶಾಲಾ ದೃಢೀಕರಣ ಪತ್ರವನ್ನು ನೀಡಿದವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಡಿಸಿ ಡಾ.ಸುರೇಶ ಬಿ. ಇಟ್ನಾಳ ತಿಳಿಸಿದ್ದಾರೆ.

ಯಲಬುರ್ಗಾ ತಾಲೂಕಿನ ತಾಳಕೇರಿ ಗ್ರಾಮದ ಈಶ್ವರ ದೇವಸ್ಥಾನದಲ್ಲಿ ಆಯೋಜಿಸಿದ್ದ ಸಾಮೂಹಿಕ ವಿವಾಹದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಯೊಬ್ಬಳ ವಿವಾಹಕ್ಕಾಗಿ ನಕಲಿ ಶಾಲಾ ದೃಢೀಕರಣ ಪತ್ರ ನೀಡಿದ್ದ ಬಗ್ಗೆ ವರದಿಯಾಗಿರುತ್ತದೆ. ಈ ಬಗ್ಗೆ ಪರಿಶೀಲಿಸಿದ್ದು, ನಕಲಿ ಸಮಿತಿಯ ವಿರುದ್ಧ ಶಾಲಾ ದೃಢೀಕರಣ ಪತ್ರವನ್ನು ನೀಡಿದ ಬಾಲಕಿಯ ಪಾಲಕರು ಹಾಗೂ ಈಶ್ವರ ದೇವಸ್ಥಾನ ಸಮಿತಿಯ ಭಾರತೀಯ ನ್ಯಾಯ ಸಂಹಿತಿ, ಬಾಲ್ಯವಿವಾಹ ನಿಷೇಧ ಕಾಯ್ದೆಯಡಿಯಲ್ಲಿ ಬೇವೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಪ್ರಾಣಾಪಾಯದಿಂದ ಪಾರಾದ 21 ಪ್ರಯಾಣಿಕರು

ಕೆಎಸ್‌ಆರ್‌ಟಿಸಿ ಬಸ್‌ಗೆ ಬೆಂಕಿ

ರಾಣೇಬೆನ್ನೂರು: ಬ್ರೇಕ್ ಲೈನರ್ ಜಾಮ್ ಆಗಿ ಹತ್ತಿಕೊಂಡ ಬೆಂಕಿಯಿಂದಾಗಿ ಕೆಎಸ್‌ಆರ್‌ಟಿಸಿ ಬಸ್ ಕ್ಷಣಾರ್ಧದಲ್ಲೇ ಸಂಪೂರ್ಣ ಸುಟ್ಟು ಕರಕಲಾದ ಘಟನೆ ತಾಲೂಕಿನ ದೇವರಗುಡ್ಡ ಬಳಿ ಮಂಗಳವಾರ ಬೆಳಗಿನ ಜಾವ ನಡೆದಿದೆ.

ಚಾಲಕನ ಸಮಯ ಪ್ರಜ್ಞೆಯಿಂದ ಅದೃಷ್ಟವಶಾತ್ ಬಸ್‌ನಲ್ಲಿದ್ದ 21 ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕೆಎಸ್‌ಆರ್‌ಟಿಸಿಯ ಬೆಂಗಳೂರಿನ ಕೇಂದ್ರೀಯ ಬಸ್ ಘಟಕದ ಬೆಂಗಳೂರು ಟು ಗದಗ ಪಲ್ಲಕ್ಕಿ ಬಸ್ ನಾನ್‌ಎಸಿ ಸ್ಲೀಪರ್ ಬಸ್ ಬೆಂಕಿಗಾಹುತಿ ಯಾಗಿದೆ. ಇದು ಬೆಂಗಳೂರಿನಿಂದ ಗದಗಿಗೆ ಹೊರಟಿತ್ತು. ರಾಣೇಬೆನ್ನೂರ ಬಸ್ ನಿಲ್ದಾಣಕ್ಕೆ ಬೆಳಗ್ಗೆ 6 ಗಂಟೆಗೆ ಬಂದು ಪ್ರಯಾಣಿಕರನ್ನು ಇಳಿಸಿ, ಇಲ್ಲಿಂದ ಗುತ್ತಲ ಮಾರ್ಗವಾಗಿ ಗದಗಿಗೆ ಹೊರಟಿದ್ದ ಸಮಯದಲ್ಲಿ ದೇವರಗುಡ್ಡದ ಬಳಿ ಬ್ರೇಕ್ ಲೈನರ್ ಚಕ್ರಕ್ಕೆ ತಿಕ್ಕಿ ಜಾಮ್ ಆಗಿದೆ. ಇದರಿಂದ ಬೆಂಕಿ ಹತ್ತಿಕೊಂಡಿದೆ. ಬಸ್ ಚಾಲಕ ಕೂಡಲೇ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಮೊದಲು ಕೆಳಗೆ ಇಳಿಸಿದ್ದಾನೆ. ಅಷ್ಟರಲ್ಲಿ ಟೈರ್‌ಗೆ ಬೆಂಕಿ ಆವರಿಸಿ ಬ್ಲಾಸ್ಟ್ ಆಗಿದೆ. ಆಗ ಕ್ಷಣಾರ್ಧದಲ್ಲಿಯೆ ಬಸ್ ತುಂಬಾ ಬೆಂಕಿ ಆವರಿಸಿಕೊಂಡು ಧಗಧಗನೇ ಉರಿದು ಹೋಗಿದೆ.

ಚಾಲಕ ಅಗ್ನಿಶಾಮಕ ದಳದವರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಬಂದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಅಷ್ಟರಲ್ಲಿ ಬಸ್ ಸಂಪೂರ್ಣ ಸುಟ್ಟು ಹೋಗಿದೆ. ಘಟನಾ ಸ್ಥಳಕ್ಕೆ ಸಾರಿಗೆ ಸಂಸ್ಥೆ ಜಿಲ್ಲಾ ನಿಯಂತ್ರಣಾಧಿಕಾರಿ ವಿಜಯಕುಮಾರ ಜಿ., ಮುಖ್ಯ ತಾಂತ್ರಿಕ ಅಧಿಕಾರಿ ಸಿದ್ದೇಶ್ವರ ಹೆಬ್ಬಾಳ, ಡಿಪೋ ಮ್ಯಾನೇಜರ್ ಪಾಟೀಲ್, ಡಿವೈಎಸ್ಪಿ ಲೋಕೇಶ ಜೆ., ಗ್ರಾಮೀಣ ಠಾಣೆ ಇನ್‌ಸ್ಪೆಕ್ಟರ್ ನಾಗಯ್ಯ ಕಾಡದೇವರಮಠ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



> ಬೆಂಕಿಗಾಹುತಿಯಾಗಿರುವ ಬಸ್ ಅದು ಹೊಸ ಬಸ್ ಆಗಿದ್ದು, ಕೇವಲ ಎರಡೇ ಸಾರಿ ಅದು ಓಡಿರುವುದು. ರಾಜ್ಯದಲ್ಲಿಯೇ ಇದೇ ಪ್ರಥಮಬಾರಿಗೆ ಸಾರಿಗೆಯ ಪಲ್ಲಕ್ಕಿ ಬಸ್ ಈ ರೀತಿ ಬೆಂಕಿಗಾಹುತಿಯಾಗಿದೆ. ಈ ಬಗ್ಗೆ ಪರಿಶೀಲನೆ ಮಾಡಲಾಗುವುದು. ಚಾಲಕ ಫಕ್ಕೀರಪ್ಪ ಗಾಡದ ಹಾಗೂ ನಿರ್ವಾಹಕ ಸಣ್ಣವೀರಪ್ಪ ಅಂಗಡಿ ಅವರ ಚಾಣಾಕ್ಷತನದಿಂದ ಎಲ್ಲ ಪ್ರಯಾಣಿಕರನ್ನು ಕೆಳಗಿಳಿಸಿ ಯಾವುದೇ ಪ್ರಾಣಹಾನಿಯಾಗದಂತೆ ನೋಡಿಕೊಂಡಿರುವುದು ನಿಜಕ್ಕೂ ಶ್ಲಾಘನೀಯ.
>
> ■ **ಜಯಕುಮಾರ ಜಿ,** ಸಾರಿಗೆ ಸಂಸ್ಥೆಯ ಜಿಲ್ಲಾ ನಿಯಂತ್ರಣಾಧಿಕಾರಿ, ಹಾವೇರಿ

ಬರದನಾಡು ವಿಜಯಪುರದಲ್ಲಿ ಮೊದಲ ಹಂತದಲ್ಲಿ 100 ಎಕರೆ ಪ್ರದೇಶದಲ್ಲಿ ಬೆಳೆ ಬೆಳೆದು ಯಶಸ್ವಿಯಾದ ಕೃಷಿಕರು

ಕ್ಯಾಲಿಫೋರ್ನಿಯಾ ದ್ರಾಕ್ಷಿ ಬೆಳೆದು ಮಾದರಿಯಾದ ರೈತರು

▶ ದೇವಿತಾ.ಸಿ.ಎಸ್.

ಬೆಂಗಳೂರು: ಬರದನಾಡು ಎಂದು ಗುರುತಿಸಿಕೊಂಡಿದ್ದ ವಿಜಯಪುರದ ನೆಲದಲ್ಲಿ ಒಂದು ಕಾಲದಲ್ಲಿ ನೀರಿನ ಹನಿ ಕೂಡ ದೊಡ್ಡ ಕನಸಾಗಿತ್ತು. ಒಣಗಿದ ಮಣ್ಣು, ಬಿರುಬಿಸಿಲು ಮತ್ತು ಕಡಿಮೆ ಬೆಳೆಗಳ ನಡುವೆ ರೈತನ ಬದುಕು ಸದಾ ಹೋರಾಟದಂತೆಯೇ ಸಾಗುತ್ತಿತ್ತು. ಆದರೆ ಸಮಯದ ಜತೆಗೆ ಸಿದ್ದೇಶ್ವರ ಶ್ರೀಗಳ ಆಶಯದಂತೆ ನೀರಾವರಿ ಯೋಜನೆಗಳು ಬಂದಂತೆ ರೈತರು ತಮ್ಮ ಶ್ರಮ ಮತ್ತು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಕೃಷಿಯನ್ನು ಲಾಭದಾಯಕ ವೃತ್ತಿಯನ್ನಾಗಿ ರೂಪಿಸಿದ್ದಾರೆ.

ದಿಗಂತ ವಿಶೇಷ

ಅಂತಹ ಬರಪೀಡಿತ ಪ್ರದೇಶವೆಂದು ಹೆಸರಾಗಿದ್ದ ವಿಜಯಪುರ ಜಿಲ್ಲೆಯ ತಿಕೋಟಾ ಭಾಗದಲ್ಲಿ ಇಂದು ಕ್ಯಾಲಿಫೋರ್ನಿಯಾ ಮಟ್ಟದ ದ್ರಾಕ್ಷಿ ಬೆಳೆಗಾಗಿ ಗುರುತಿಸಿ ಕೊಳ್ಳುತ್ತಿರುವುದು ನಿಜಕ್ಕೂ ಪ್ರೇರಣಾದಾಯಕ. ಈ ಪರಿವರ್ತನೆಯ ಪ್ರಮುಖ ಹಂತವಾಗಿ ತಿಕೋಟಾದಲ್ಲಿ ಆರಾ-36 (ARD¬-36) ದ್ರಾಕ್ಷಿ ತಳಿ ಪರಿಚಯವಾಗಿದೆ. ಕ್ಯಾಲಿಫೋರ್ನಿಯಾದಲ್ಲಿ ಬೆಳೆಯುವ ಈ ಉನ್ನತ ಗುಣಮಟ್ಟದ ತಳಿಯನ್ನು ಕೃಷ್ಣವೇಣಿ ಎಫ್‌ಪಿಒ ಮುಖಾಂತರ, ರೈತರಾದ ಈರಪ್ಪ ಬಗಲಿ, ಪಿಂಟು ಕೊಣ್ಣೂರ, ಅಶೋಕ ಬಾಬರ ಅವರು ಮೊದಲ ಹಂತದಲ್ಲಿ ಸುಮಾರು 100 ಎಕರೆ ಪ್ರದೇಶದಲ್ಲಿ ಯಶಸ್ವಿಯಾಗಿ ಬೆಳೆದಿದ್ದಾರೆ. ಮಹಾರಾಷ್ಟ್ರದ ನಾಸಿಕ್ನ ಸಹ್ಯಾದ್ರಿ ಫಾರ್ಮ್ಸ್ ಜತೆಗಿನ ಸಹಯೋಗವು ಈ ಯೋಜನೆಗೆ ಮತ್ತಷ್ಟು ಬಲ ನೀಡಿದ್ದು, ರೈತರಿಗೆ ತರಬೇತಿ, ಶೇಖರಣಾ ವ್ಯವಸ್ಥೆ, ಸಂಸ್ಕರಣಾ ಘಟಕಗಳು ಮತ್ತು ರಫ್ತು ಮಾರ್ಗಗಳನ್ನು ಒದಗಿಸುವ ಮೂಲಕ, ಈ ಬೆಳೆಯನ್ನು ಜಾಗತಿಕ ಮಾರುಕಟ್ಟೆಗೆ ತಲುಪಿಸುವ ದಾರಿಯನ್ನು ಸುಗಮಗೊಳಿಸಿದೆ.



1000 ಎಕರೆಗಳಿಗೆ ವಿಸ್ತರಿಸುವ ಗುರಿ

ಮುಂದಿನ ಹಂತದಲ್ಲಿ ಈ ಬೆಳೆ ಪ್ರದೇಶವನ್ನು 1000 ಎಕರೆಗಳಿಗೆ ವಿಸ್ತರಿಸುವ ಯೋಜನೆ ರೂಪಿಸಲಾಗಿದ್ದು, ಇದು ವಿಜಯಪುರ ಜಿಲ್ಲೆಯನ್ನು ದ್ರಾಕ್ಷಿ ಉತ್ಪಾದನೆಯ ಪ್ರಮುಖ ಕೇಂದ್ರವನ್ನಾಗಿ ಮಾಡಲಿದೆ. ಇದರೊಂದಿಗೆ ಶೀತಗೃಹ (ಕೋಲ್ಡ್ ಸ್ಟೋರೇಜ್) ಪ್ಯಾಕಿಂಗ್ ಘಟಕಗಳು ಮತ್ತು ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕಾ ಘಟಕಗಳನ್ನು ಸ್ಥಾಪಿಸುವ ಚಿಂತನೆಯನ್ನು ಮಾಡಲಾಗಿದೆ.

ಆರಾ -36 ದ್ರಾಕ್ಷಿ ತಳಿ ಮಾಹಿತಿ

ಆರಾ-36 (ARD-36) ದ್ರಾಕ್ಷಿ ತಳಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಪಡಿಸಲಾದ ಉನ್ನತ ಗುಣಮಟ್ಟದ ಟೇಬಲ್ ಗ್ರೇಪ್ ತಳಿ ಆಗಿದ್ದು, ಕ್ಯಾಲಿಫೋರ್ನಿಯಾ, ಬ್ರೆಜಿಲ್, ದಕ್ಷಿಣ ಆಫ್ರಿಕಾ ಸೇರಿದಂತೆ ಹಲವು ದೇಶಗಳಲ್ಲಿ ಪ್ರಯೋಗಾತ್ಮಕವಾಗಿ ಮತ್ತು ವಾಣಿಜ್ಯವಾಗಿ ಬೆಳೆಯಲಾಗುತ್ತಿದೆ. ಇದು ರಫ್ತು ಮಾರುಕಟ್ಟೆಗೆ ಸೂಕ್ತವಾದ ಪ್ರೀಮಿಯಂ ಕೆಂಪು ಬೀಜರಹಿತ ದ್ರಾಕ್ಷಿ ತಳಿಯಾಗಿದ್ದು, ಈ ದ್ರಾಕ್ಷಿ ತಳಿ ಉತ್ತಮ ಗುಣಮಟ್ಟ, ರುಚಿ ಹಾಗೂ ದೀರ್ಘಾವಧಿ ಸಂಗ್ರಹ ಸಾಮರ್ಥ್ಯ ಹೊಂದಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆಯನ್ನು ಪಡೆದಿದ್ದು, ಸಾಮಾನ್ಯ ದ್ರಾಕ್ಷಿಗಿಂತ ಮೂರು ಪಟ್ಟು ಹೆಚ್ಚಿನ ಬೆಲೆ ದೊರೆಯುತ್ತಿರುವುದು ರೈತರ ಆರ್ಥಿಕ ಸ್ಥಿತಿಗೆ ಮಹತ್ತರ ಬದಲಾವಣೆಯನ್ನು ತಂದಿದೆ.



> ತಿಕೋಟಾದ ಈ ಯಶೋಗಾಥೆ ಕೇವಲ ವಿಜಯಪುರಕ್ಕಷ್ಟೇ ಸೀಮಿತವಾಗದೆ, ರಾಜ್ಯದ ಇತರೆ ಭಾಗಗಳಿಗೂ ಮಾದರಿಯಾಗಿದೆ. ಒಮ್ಮೆ ಪೂಜ್ಯ ಸಿದ್ದೇಶ್ವರ ಶ್ರೀಗಳು ಈ ಭೂಮಿಗೆ ಒಂದು ಬೊಗಸೆ ನೀರು ಕೊಡಿ, ಇದು ಕ್ಯಾಲಿಫೋರ್ನಿಯಾವನ್ನು ಮೀರಿಸುತ್ತದೆ ಎಂದಿದ್ದರು. ಇಂದು ಸ್ವಾಮೀಜಿ ಅವರ ಕನಸನ್ನು ನನಸಾಗಿದೆ. ಈ ಸಾಧನೆಯನ್ನು ಸ್ವಾಮಿಜಿ ಅವರಿಗೆ ಅರ್ಪಣೆ ಮಾಡಲಾಗುತ್ತದೆ.
>
> ■ **ಎಂ.ಬಿ ಪಾಟೀಲ್,** ಕೈಗಾರಿಕಾ ಸಚಿವ

ಇವಿಎಂ ಬಳಕೆ ಕುರಿತು ಕಾಂಗ್ರೆಸ್ ವರ್ತನೆ ಸರಿಯಿಲ್ಲ: ಸೋಮಣ್ಣ

ಬೆಂಗಳೂರು: ಕಾಂಗ್ರೆಸ್ ಅವರು ಇವಿಎಂ ಸರಿಯಿಲ್ಲ ಎಂದು ಹೇಳುತ್ತಿದ್ದರು, ಈಗ ಕೇರಳದಲ್ಲಿ ಕಾಂಗ್ರೆಸ್ ಗೆದ್ದಿದೆ ಯಾಕೆ ಮಾತನಾಡಲಿಲ್ಲ. ಹಾಗಾದರೆ ಗೆದ್ದಾಗ ಸರಿಯಿದೆ, ಸೋತಾಗ ಇವಿಎಂ ಸರಿಯಿಲ್ಲವೇ ಎಂದು ಕೇಂದ್ರ ರೈಲ್ವೆ ಇಲಾಖೆ ರಾಜ್ಯ ಸಚಿವ ವಿ.ಸೋಮಣ್ಣ ಪ್ರಶ್ನಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಸಹಾಯವಾಣಿ, ಮಹಿಳಾ ಪರ ಯೋಜನೆ, ಜಲಜೀವನ್ ಮಿಷನ್, ಪಿ.ಎಂ. ಕಿಸಾನ್ ಯೋಜನೆ, ಪಿ.ಎಂ.ಆವಾಜ್ ಯೋಜನೆ, ಗ್ರಾಮ ಸಡಕ್ ಮತ್ತು ಶಿಕ್ಷಣ ಮೂಲಸೌಕರ್ಯ ಯೋಜನೆ ಮುಂತಾದ ಪ್ರಧಾನಿ ನರೇಂದ್ರ ಮೋದಿ ಅವರ ಜನಪರ ಯೋಜನೆಯನ್ನು ಮಮತಾ ಬ್ಯಾನಜೀ ಅವರು ತಿರಸ್ಕಾರ ಮಾಡಿದರು. ಹಾಗೇ ತನ್ನದೇ ಸಾಮ್ರಾಜ್ಯ ಕಟ್ಟಿಕೊಂಡು ರಾಜ್ಯವನ್ನು ಹಾಳು ಮಾಡಿದರು. ಅದಕ್ಕೆ ಪಶ್ಚಿಮ ಬಂಗಾಳದ ಜನರು ತಕ್ಕ ಶಾಸ್ತಿ ಮಾಡಿದ್ದಾರೆ ಎಂದರು.



ಕೇರಳದಲ್ಲಿ ಬಿಜೆಪಿಗೆ ಮೂರು ಸೀಟು ಬಂದಿರುವ ಮೂಲಕ ಕೇರಳದಲ್ಲಿ ಬಿಜೆಪಿಯ ಖಾತೆ ತೆರೆಯಲಾಗಿದೆ. ಮುಂದಿನ ದಿನಗಳಲ್ಲಿ ಸಂಪೂರ್ಣ ಕೇರಳದಲ್ಲಿ ಬಿಜೆಪಿ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಜ್ಯದ ಉಪ ಚುನಾವಣೆ ಬಗ್ಗೆ ಅತಿಯಾದ ಆತ್ಮವಿಶ್ವಾಸ ಹೊಂದಿದ್ದೆವು, ಎಲ್ಲಾ ನಾಯಕರು ಜೊತೆಗೂಡಿ ಕೆಲಸ ಮಾಡಬೇಕಿತ್ತು. ಮುಂದಿನ ದಿನಗಳಲ್ಲಿ ತಪ್ಪುಗಳನ್ನು ಸರಿಪಡಿಸುತ್ತೇವೆ ಎಂದು ಹೇಳಿದರು.

ಸಂಪಾದಕೀಯ

ಆರೋಪ ಹತಾಶೆಯದ್ದು, ಆದರೆ ಶ್ರದ್ಧೆ?

ಎಲ್ಲಾ ಪಕ್ಷಗಳೂ ಚುನಾವಣೆಯನ್ನು ಪರಿಶ್ರಮ ಮತ್ತು ನಿಷ್ಠೆಯಿಂದ ಎದುರಿಸುತ್ತವೆ. ಗೆಲ್ಲಲು ಸಾಧ್ಯವಿರುವ ಎಲ್ಲವನ್ನೂ ಮಾಡುತ್ತವೆ. ಆದರೆ ಫಲಿತಾಂಶದ ನಂತರ ಕೆಲವು ಪಕ್ಷಗಳ ಹೇಳಿಕೆಗಳು ಹುಚ್ಚುಹುಚ್ಚಾಗಿರುತ್ತವೆ! ಮೊನ್ನೆಯ ಪಂಚರಾಜ್ಯ ಚುನಾವಣಾ ಫಲಿತಾಂಶಗಳಲ್ಲೂ ಇಂಥ ಹೇಳಿಕೆಗಳು ಕೇಳಿಬಂದಿವೆ. ಸಾಮಾನ್ಯವಾಗಿ ಇವಿಎಂಗಳ ಮೇಲೆ ಆರೋಪ ಮಾಡುತ್ತಿದ್ದವರಿಗೆ ಈ ಚುನಾವಣೆ ಹೊಸ ಕಂಟೆಂಟ್ ಒಂದನ್ನು ಕೊಟ್ಟಿದೆ. ಅದಕ್ಕೆಲ್ಲಾ ಕಾರಣವಾಗಿದ್ದು ಬಿಜೆಪಿ ಅಸ್ಸಾಂ ಮತ್ತು ಪ. ಬಂಗಾಳಗಳಲ್ಲಿ ದಾಖಲಿಸಿದ ಅಭೂತಪೂರ್ವ ವಿಜಯ. ಚುನಾವಣಾ ಸಮೀಕ್ಷೆಗಳನ್ನು ತಲೆಕೆಳಗಾಗಿಸಿ, ಸೆಕ್ಯುಲರ್‌ವಾದಿಗಳ ಕಣ್ಣು ಕೆಂಪಾಗಿಸಿದ ಪಶ್ಚಿಮ ಬಂಗಾಳದ ವಿಜಯ ಸಹಜವಾಗಿ ಕೆಲ ಪಕ್ಷಗಳಿಗೆ ಆಘಾತ ತಂದಿರುತ್ತದೆ. ಹಿಂದೆ ಕಾಂಗ್ರೆಸ್ ಅಥವಾ ಉಳಿದ ಯಾವುದೇ ಪಕ್ಷಗಳ ಕೈಯಲ್ಲಿದ್ದ ಅಧಿಕಾರ ಬಿಜೆಪಿ ಕೈಗೆ ಬರುತ್ತಿದ್ದಂತೆ ಆರೋಪ ಇವಿಎಂ ಯಂತ್ರದ ಮೇಲಾಗುತ್ತಿತ್ತು. ಇದೀಗ ಇಂಥ ಹಾಸ್ಯಾಸ್ಪದವಾದ ಆರೋಪಗಳು ನೇರವಾಗಿ ಚುನಾವಣಾ ಆಯೋಗದ ಮೇಲೆ ನಡೆಯುತ್ತಿವೆ.

ಕೇಂದ್ರ ಸರ್ಕಾರ ಎಸ್‌ಐಆರ್ ಮೂಲಕ ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡಿರುವುದೇ ಬಿಜೆಪಿ ಗೆಲ್ಲಲು ಕಾರಣ ಎಂದು ಆರೋಪಿಸಲಾಗುತ್ತಿದೆ. ಕಾಲಕಾಲಕ್ಕೆ ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ನಡೆಸುವುದು ಮತದಾನ ಪದ್ಧತಿಯನ್ನು ಅನುಸರಿಸುವ ಎಲ್ಲಾ ದೇಶಗಳಲ್ಲಿರುವ ಸಾಮಾನ್ಯ ಪ್ರಕ್ರಿಯೆ. ಮತದಾರರ ಪಟ್ಟಿಯ ಆಧಾರದ ಮೇಲೆ ಸಾಕ್ಷಾತ್ ಭಗವಂತನಿಗೂ ಆತನ ಮತದಾರರ ಮನಸನ್ನು ತಿಳಿಯಲು ಸಾಧ್ಯವಿಲ್ಲ. ಆದರೆ ವಿರೋಧಪಕ್ಷಗಳಿಗೆ ಅದು ಸಾಧ್ಯವಾಗಿದೆ! ಪಶ್ಚಿಮ ಬಂಗಾಳದಲ್ಲಿ ಸೋತ ಮಮತಾ ಬ್ಯಾನರ್ಜಿಯವರಂತೂ ಮತದಾರರ ಪಟ್ಟಿಯ ಪರಿಷ್ಕರಣೆಯಿಂದ ಕನಿಷ್ಠ ನೂರು ಸೀಟುಗಳನ್ನಾದರೂ ಬಿಜೆಪಿ ಅಕ್ರಮವಾಗಿ ಗಳಿಸಿದೆ ಎಂದು ಆರೋಪಿಸಿದ್ದಾರೆ. ಪಟ್ಟಿಯ ಪರಿಷ್ಕರಣೆ ತಮಿಳುನಾಡಿನಲ್ಲೂ ನಡೆದಿದೆ. ಟಿವಿಕೆ ಪಕ್ಷಕ್ಕೆ ಯಾರಿಂದಲೂ ಊಹಿಸಲು ಸಾಧ್ಯವಾಗದ ಪ್ರಮಾಣದಲ್ಲಿ ಸೀಟುಗಳು ಸಿಕ್ಕಿವೆ. ಕೇರಳದಲ್ಲೂ ಪರಿಷ್ಕರಣೆ ನಡೆದಿದೆ. ಅಲ್ಲಿ ಕಾಂಗ್ರೆಸ್ ಗೆದ್ದಿದೆ. ಈ ಆರೋಪಗಳ ಆಧಾರದಲ್ಲಿ ತಮಿಳುನಾಡು ಮತ್ತು ಕೇರಳದಲ್ಲೂ ಬಿಜೆಪಿ ಜಯಗಳಿಸಬೇಕಿತ್ತು. ಚುನಾವಣಾ ಪ್ರಕ್ರಿಯೆಗಳು ಆರಂಭವಾದಂದಿನಿಂದಲೂ ಆಯೋಗವನ್ನು ಟೀಕಿಸುತ್ತಾ ಬಂದ ಮಮತಾಗೆ ಸೋಲಿನ ಭೀತಿ ಮೊದಲಿನಿಂದಲೂ ಇತ್ತು. ಅದರ ಜೊತೆಗೆ ಚುನಾವಣೆಯಲ್ಲಿ ಕೇಂದ್ರ ನೌಕರರನ್ನು ಬಳಸಬಾರದು ಎಂಬ ಹಠವನ್ನೂ ಹೂಡಿದರು. ಬಹುಶಃ ಟಿಎಂಸಿ ಗೂಂಡಾಗಳು ಮಾತ್ರ ಭಾಗವಹಿಸಬೇಕು ಎಂಬ ಇರಾದೆ ಅವರಿಗಿತ್ತೋ ಏನೋ! ಆದರೆ ಆಯೋಗಕ್ಕೆ ಬೆಂಬಲ ನೀಡಿದ ನ್ಯಾಯಾಲಯ ಚುನಾವಣೆಯನ್ನು ಆರೋಗ್ಯಪೂರ್ಣವಾಗಿ ನಡೆಸಿತು. ಎಲ್ಲಿ ನಿರ್ಭೀತ ಮತದಾನ ನಡೆಯುತ್ತದೋ ಅಲ್ಲಿ ಫಲಿತಾಂಶ ಕೂಡ ಗುಣಮಟ್ಟಕ್ಕೆ ತಕ್ಕಂತೆ ಬರುತ್ತದೆ. ಇಲ್ಲವಾದಲ್ಲಿ ಸೋಲಿನ ಹತಾಶೆಯಿಂದ ಅಥವಾ ಬುದ್ಧಿಭ್ರಮಣೆಯಿಂದ ಮಾಡಿರುವ ಆರೋಪಗಳೆಂದು ತಳ್ಳಿ ಹಾಕಿಬಿಡಬಹುದು. ಆದರೆ ಇವರ ಮನಸ್ಥಿತಿ ಹೀಗೇಕೆ ಎನ್ನುವುದು ಚಿಂತಿಸಬೇಕಾದ ಸಂಗತಿ. ಸಂವಿಧಾನಬದ್ಧ ಸಂಸ್ಥೆ ವಿರುದ್ಧ ನಿರಾಧಾರ ಆರೋಪಗಳನ್ನು ಮಾಡುವವರು ಸಂವಿಧಾನಕ್ಕೇನು ಗೌರವ ನೀಡಿಯಾರು? ನಂಬಿಕೆ ಮತ್ತು ಶ್ರದ್ಧೆ ಇರಬೇಕಾದದ್ದು ಕೇವಲ ಪ್ರಜೆಗಳಿಗಲ್ಲ, ನಾಯಕರಿಗೂ ಇರಬೇಕು. ಅಂಥವರು ಮಾತ್ರ ನಾಯಕರಾಗಿರಬೇಕು ಎನ್ನುವ ಸಂದೇಶವನ್ನು ಈ ಪ್ರಕರಣದಿಂದ ಅರಿಯಬೇಕು.

ಬೇರೆಯವರಾಗಿದ್ದರೆ ಅದೆಷ್ಟು ಮೆರೆಯುತ್ತಿದ್ದರೋ

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು
vakradanta@gmail.com



ಎರಡೂವರೆ ದಶಕಗಳಿಂದ ಉನ್ನತಾಧಿಕಾರದಲ್ಲೇ ಇದ್ದಾರೆ. ಕಳೆದ ಒಂದು ದಶಕದಿಂದ ಇಡೀ ಭಾರತದ ನಾಯಕತ್ವ ವಹಿಸಿದ್ದಾರೆ. ವಿಶ್ವದ ದೊಡ್ಡ ಪಕ್ಷದ ಪ್ರಶ್ನಾತೀತ ನಾಯಕರು ಎಂದು ಹೇಳಿದರೆ ತಪ್ಪಿಲ್ಲ. ಹೋದಲ್ಲೆಲ್ಲ ಗೆಲುವು ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ವಿಶ್ವಮಟ್ಟದಲ್ಲೂ ಇವರ ಖ್ಯಾತಿಗೇನೂ ಕಡಿಮೆ ಇಲ್ಲ.

ಹೀಗಿದ್ದರೂ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಇಂದಿಗೂ ಜನರ ವಿಶ್ವಾಸ ಗಳಿಸಿರುವುದು ಮತ್ತು ಉಳಿಸಿಕೊಂಡಿರುವುದು ಅವರ ಸರಳ ನಡತೆಯಿಂದ ನಿರಹಂಕಾರದ ನಡೆಯಿಂದ. ಪ್ರತಿ ಚುನಾವಣೆಯ ಫಲಿತಾಂಶದ ನಂತರವೂ ಪ್ರಧಾನಿ ನರೇಂದ್ರ ಮೋದಿ ಬಿಜೆಪಿ ಕಚೇರಿಗೆ ಬಂದು, ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡುತ್ತಾರೆ. ಮೇ 4ರಂದು ಕೂಡ ದೆಹಲಿಯಲ್ಲಿರುವ ಬಿಜೆಪಿ ಕೇಂದ್ರ ಕಚೇರಿಗೆ ಪ್ರಧಾನಿ ಆಗಮಿಸಿದಾಗ, ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನಬೀನ್ ಅವರು ಹಾರ ಹಾಕಲು ಬಂದಾಗ, ಅದೇ ಹಾರವನ್ನು ನಿತಿನ್ ಅವರಿಗೆ ಹಾಕಿ, ಇದು ನಿಮ್ಮ ಗೆಲುವು ಎಂದು ಬೆನ್ನುತಟ್ಟಿದರು.

ಇಷ್ಟೆಲ್ಲ ಅಧಿಕಾರ, ಗೆಲುವಿನ ನಂತರವೂ ನರೇಂದ್ರ ಮೋದಿಯವರಾಗಲಿ, ಅಮಿತ್ ಶಾ ಅವರಾಗಲಿ ಅಹಂಕಾರದ ಮಾತುಗಳನ್ನಾಡಿದ, ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ರೀತಿಯಲ್ಲಿ ಬಂಗಾಳಕ್ಕೆ ಕಾಲಿಟ್ಟು ನೋಡಿ ಎಂಬ ರೀತಿಯ ಧಮಕಿ ಹಾಕಿದ ಉದಾಹರಣೆಗಳಿಲ್ಲ. ಹಾಗೆ ಹೇಳುವುದಾದರೆ ಅವರು ಗುಜರಾತ್‌ನಲ್ಲಿ ಯಾವಾಗಲೋ ಈ ರೀತಿಯ ಧಮಕಿ ಹಾಕಬಹುದಿತ್ತು. ಆದರೆ ಅವರು ಹಾಗೆ ಮಾಡಿದ ಒಂದು ಉದಾಹರಣೆಯೂ ಇಲ್ಲ. ಒಮ್ಮೆ ಕೂಡ ಅವರಿಬ್ಬರೂ ತೂಕ ತಪ್ಪಿದ, ಅಹಂಕಾರದ ಮಾತುಗಳನ್ನು ಆಡುವುದಿಲ್ಲ. ಇಷ್ಟೆಲ್ಲ ಪ್ರಭಾವಶಾಲಿಗಳಾಗಿದ್ದರೂ, ಇಬ್ಬರ ವರ್ತನೆಯಲ್ಲೂ ಕ್ಷಣಕ್ಕೂ ಅಹಂಕಾರ ಇಣುಕಿದ್ದನ್ನು ನೀವು ಕಾಣಲು ಸಾಧ್ಯವಿಲ್ಲ.

ಮೋದಿ ಮತ್ತು ಅಮಿತ್ ಶಾರನ್ನು ಹೋಲಿಸುವುದಾದರೆ ನನಗೆ ಅಮಿತ್ ಶಾ ಹೆಚ್ಚು ಕುತೂಹಲ ಹುಟ್ಟಿಸುತ್ತಾರೆ. ನರೇಂದ್ರ ಮೋದಿಯವರು ಒಂದು ರೀತಿಯಲ್ಲಿ ರಾಜಕೀಯ ಸಂತನಂತೆ ಇದ್ದಾರೆ. ಅವರಿಗೆ ಅಧಿಕಾರ, ಹಣದ ದಾಹ ಯಾವುದೂ ಇದ್ದಂತಿಲ್ಲ. ಸಂಸಾರವೂ ಇಲ್ಲ. ಹಾಗಾಗಿ ಅವರ ಜೀವನ ಶೈಲಿ ಬೇರೆ ರೀತಿಯಲ್ಲಿದೆ. ಆದರೆ ಅಮಿತ್ ಶಾ ಹಾಗಲ್ಲ, ಅವರು ನಮ್ಮ ನಿಮ್ಮ ಹಾಗೆ ಸಂಸಾರಿ. ಸಾಕಷ್ಟು ಹಣವಿದೆ. ಸರ್ವ ಸಂಗ ಪರಿತ್ಯಾಗಿಗಳೇನೂ ಅಲ್ಲ. ಹಾಗಂತ ಅವರು ಯಾವತ್ತೂ ಬಿಂಬಿಸಿಕೊಂಡವರೂ ಅಲ್ಲ.

ಆದರೂ ಒಬ್ಬ ವ್ಯಕ್ತಿ ಹೇಗೆ ಹೀಗಿರಲು ಸಾಧ್ಯ?

ಅಮಿತ್ ಶಾ ಇಷ್ಟವಾಗುವುದು ಅವರ ಬದ್ಧತೆಯ ಕಾರಣಕ್ಕೆ. ಆರೆಸ್ಸೆಸ್‌ನಲ್ಲಿ ಯಾವಾಗಲೂ ವ್ಯಕ್ತಿನಿರ್ಮಾಣದ ಬಗ್ಗೆ ಹೇಳಲಾಗುತ್ತದೆ. ಬಹುಶಃ ಅದಕ್ಕೆ ಉತ್ತಮ ಉದಾಹರಣೆ ಎಂದರೆ ನರೇಂದ್ರ ಮೋದಿ ಮತ್ತು ಅಮಿತ್ ಶಾ. ಕೆಲವರಿಗೆ ಅಮಿತ್ ಶಾರನ್ನು ಈ ಪಟ್ಟಿಗೆ ಸೇರಿಸಿದ್ದರ ಬಗ್ಗೆ ತಕರಾರು ಇರಬಹುದು. ಆದರೆ ಅದಕ್ಕೊಂದು ಕಾರಣವಿದೆ. ಇಷ್ಟು ವರ್ಷದಿಂದ ಅಮಿತ್ ಶಾ ಅವರು ನರೇಂದ್ರ ಮೋದಿಯವರ ಜತೆಗಿದ್ದಾರೆ. ನರೇಂದ್ರ ಮೋದಿಯವರ ರಾಜಕೀಯ ಪಯಣದಲ್ಲಿ, ಅವರ ಯಶಸ್ಸಿನಲ್ಲಿ ಅಮಿತ್ ಶಾ ಅವರ ಕೊಡುಗೆ ದೊಡ್ಡದಿದೆ ಎಂಬುದು ನಿರ್ವಿವಾದ ಸಂಗತಿ. ಎಲ್ಲ ಯಶಸ್ವಿ ಪುರುಷರ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎಂಬ ಮಾತನ್ನು ನರೇಂದ್ರ ಮೋದಿ ಅವರ ಮಟ್ಟಿಗೆ ಅಮಿತ್ ಶಾ ಸುಳ್ಳು ಮಾಡಿದ್ದಾರೆ.



ಬಹುಶಃ ಯಾರಿಗೇ ಆಗಿದ್ದರೂ ಇಷ್ಟು ವರ್ಷದಲ್ಲಿ ಒಮ್ಮೆಯಾದರೂ ಸ್ವಲ್ಪ ಅಹಂಕಾರ ತಲೆಗೆ ಏರಿಯೇ ಏರುತ್ತಿತ್ತು. ಇವರ ಸ್ಥಾನದಲ್ಲಿ ಇನ್ನೊಬ್ಬ ಇದ್ದಿದ್ದರೆ, ನಾನು ಇಷ್ಟೆಲ್ಲ ಮಾಡಿದ್ದೇನೆ, ಜೈಲಿಗೂ ಹೋಗುವಂಥ ಪರಿಸ್ಥಿತಿ ಎದುರಿಸಿದ್ದೇನೆ. ಆದರೂ ಅವರಷ್ಟು ನಾನು ಪ್ರಸಿದ್ಧಿ ಪಡೆಯಲಿಲ್ಲ ಎಂದು ಅನ್ನಿಸದೇ ಇರಲಾರದು. ಯಾವುದೋ ಒಂದು ಕಾರಣಕ್ಕೆ ಮನಸ್ತಾಪ ಬರಬೇಕಿತ್ತು. ಅಂತಹ ಒಂದು ಸಣ್ಣ ಕೊಂಕೂ ಅವರ ನಡುವೆ ಕಾಣಿಸಿಲ್ಲ. ಅವರು ನರೇಂದ್ರ ಮೋದಿಯವರ ಜತೆ ಇದ್ದಾರಲ್ಲ, ಒಬ್ಬರ ವ್ಯಕ್ತಿತ್ವದಲ್ಲಿ ಇದಕ್ಕಿಂತ ದೊಡ್ಡ ಗುಣ ಇನ್ನೇನು ಬೇಕು?

ಭಾರತದ ರಾಜಕೀಯದ 'ಆಧುನಿಕ ಚಾಣಕ್ಯ' ಎಂದೇ ಅಮಿತ್ ಶಾ ಹೆಸರು ಮಾಡಿದ್ದಾರೆ. ಸಂಘಟನಾ ಚತುರತೆ ಮತ್ತು ಚುನಾವಣಾ ತಂತ್ರಗಾರಿಕೆಯಲ್ಲಿ ಅವರಿಗೆ ಯಾರೂ ಸಾಟಿಯಿಲ್ಲ. ಈ ವಿಷಯದಲ್ಲಿ ಯಾರೂ ನರೇಂದ್ರ ಮೋದಿ ಹೆಸರನ್ನು ಹೇಳುವುದೂ ಇಲ್ಲ. ದೇಶದ ರಾಜಕೀಯದಲ್ಲಿ ಬಿಜೆಪಿಯನ್ನು ದೈತ್ಯ ಶಕ್ತಿಯನ್ನಾಗಿ ಬೆಳೆಸುವಲ್ಲಿ ಅಮಿತ್ ಶಾ ಅವರ ಪಾತ್ರ ಅತ್ಯಂತ ಪ್ರಮುಖವಾದದ್ದು. ಅಮಿತ್ ಶಾ ಅವರ ಚುನಾವಣಾ ಗೆಲುವಿನ ಹಿಂದೆ ಕೇವಲ ಅದೃಷ್ಟವಿದೆ ಎಂದು ಅವರ ವಿರೋಧಿಗಳೂ ಕೂಡ ಒಪ್ಪುವುದಿಲ್ಲ. ಚುನಾವಣೆ ಗೆಲ್ಲುವುದು ಬೂತ್ ಮಟ್ಟದಲ್ಲಿ ಎಂಬುದು ಶಾ ಅವರ ಮಂತ್ರ. ಅವರು ಜಾರಿಗೆ ತಂದ 'ಪನ್ನಾ ಪ್ರಮುಖ ಅಥವಾ ಬೂತ್ ಪ್ರಮುಖ' ವ್ಯವಸ್ಥೆಯು ಮತದಾರರ ಪಟ್ಟಿಯ ಪ್ರತಿ ಪುಟಕ್ಕೂ ಒಬ್ಬ ಜವಾಬ್ದಾರಿಯುತ ವ್ಯಕ್ತಿಯನ್ನು ನೇಮಿಸಿ, ಮತದಾನದ ಮೇಲೆ ಹಿಡಿತ ಸಾಧಿಸುವಂತೆ ಮಾಡಿತು. ಅಂಕಿಅಂಶಗಳ ಆಧಾರದ ಮೇಲೆ ಅವರು ಕ್ಷೇತ್ರಗಳನ್ನು ವಿಭಜಿಸುತ್ತಾರೆ. ಯಾವ ವಿಷಯಗಳು ಮತದಾರರನ್ನು ಸೆಳೆಯುತ್ತವೆ, ಯಾವ ಕ್ಷೇತ್ರದಲ್ಲಿ ಬಿಜೆಪಿಗೆ ಹೆಚ್ಚು ಅವಕಾಶವಿದೆ, ಯಾವುದರಲ್ಲಿ ಪ್ರಯತ್ನ ಮಾಡಿದರೆ ಗೆಲ್ಲಬಹುದು ಎಂಬುದನ್ನು ಅವರು ಮೊದಲೇ ಗ್ರಹಿಸುತ್ತಾರೆ.

ನರೇಂದ್ರ ಮೋದಿ ರಜೆ ತೆಗೆದುಕೊಂಡಿದ್ದನ್ನು ನಾವು ನೋಡಿಲ್ಲ ಹಾಗೇ 20 ವರ್ಷಗಳಲ್ಲಿ ಅಮಿತ್ ಶಾ ವಿದೇಶ ಪ್ರವಾಸ ಹೋಗಿದ್ದನ್ನು ನಾವ್ಯಾರೂ ನೋಡಿಲ್ಲ. ಆ ಪ್ರಮಾಣದಲ್ಲಿ ಅವರು ಭಾರತದೊಳಗೆ ಮುಳುಗಿ ಹೋಗಿದ್ದಾರೆ. ಶಾಸಕರು, ಸಂಸದರು, ಕೊನೆಗೆ ಕಾರ್ಪೊರೇಟರ್‌ಗಳು ಕೂಡ ಚುನಾವಣೆ ಪ್ರಚಾರದ ನಂತರ ಫಲಿತಾಂಶಕ್ಕೆ ಸ್ವಲ್ಪ ದಿನಗಳಿದ್ದರೂ ರಿಲ್ಯಾಕ್ಸ್ ಆಗಲೆಂದು ವಿದೇಶಕ್ಕೆ ಓಡುತ್ತಾರೆ. ಆದರೆ ಅಮಿತ್ ಶಾ ಹಾಗಲ್ಲ. ಅವರು ಒಂದು ರಾಜ್ಯದ ಚುನಾವಣೆ ಮುಗಿಯುತ್ತಿದ್ದಂತೆ ಮುಂದೆ ಇನ್ಯಾವ ರಾಜ್ಯದಲ್ಲಿ ಚುನಾವಣೆ ಇದೆ ಎಂದು ಯೋಚಿಸುತ್ತಾರೆ. ಅದಿಲ್ಲವಾದರೆ ಗೃಹ ಸಚಿವರಾಗಿ ಅವರ ಕೆಲಸಗಳತ್ತ ಗಮನ ಹರಿಸುತ್ತಾರೆ. ಇದೆಲ್ಲ ಚುನಾವಣೆ ರಾಜಕೀಯ ತಂತ್ರಗಾರಿಕೆಯ ನಡುವೆಯೂ ಅವರು ದೇಶವನ್ನು ನಕ್ಸಲ್‌ಮುಕ್ತ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಕಾಶ್ಮೀರದಲ್ಲಿ ಕಾನೂನು-ಸುವ್ಯವಸ್ಥೆ ಸರಿಪಡಿಸಿ, ಶಾಂತಿ ನೆಲೆಸುವಂತೆ ಮಾಡಲು ಶ್ರಮಿಸುತ್ತಿದ್ದಾರೆ. ಅಲ್ಲಿ ಭಯೋತ್ಪಾದನೆ ಚಟುವಟಿಕೆ ಗಣನೀಯವಾಗಿ ಹತ್ತಿಕ್ಕಲಾಗಿದೆ. ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ತೆಗೆದಿದ್ದಾರೆ.

ಇದೆಲ್ಲ ವಿಷಯಗಳಲ್ಲೂ ಅವರ ಬದ್ಧತೆ ಇನ್ನೊಬ್ಬರಿಗೆ ಮಾದರಿ.

ಒಂದು ಗುರಿ ನಿಗದಿಪಡಿಸಿದರೆ ಅದನ್ನು ತಲುಪುವವರೆಗೂ ಅವರು ವಿಶ್ರಾಂತಿ ಪಡೆಯುವುದಿಲ್ಲ. ಹೋರಾಡದೆ ಯಾವುದನ್ನೂ ಬಿಟ್ಟುಕೊಡಬಾರದು ಎಂಬ ಮನೋಭಾವ ಅವರದ್ದು. ಸಾಮಾನ್ಯವಾಗಿ ಯಾರೇ ಆಗಿದ್ದರೂ ಪಶ್ಚಿಮ ಬಂಗಾಳದ ಕಡೆ ತಲೆಹಾಕಲು ಹೋಗುತ್ತಿರಲಿಲ್ಲವೇನೋ. ಅಲ್ಲಿನ ಸ್ಥಿತಿಯೇ ಹಾಗಿತ್ತು. ಆದರೆ ಅಮಿತ್ ಶಾ ಹಾಗಲ್ಲ. ಅಸಾಧ್ಯವಾದುದನ್ನು ಸಾಧಿಸುವುದರಲ್ಲೇ ಅವರಿಗೆ ಖುಷಿ ಇದ್ದಂತಿದೆ. ಹಾಗಾಗಿಯೇ ಅವರು ಎಲ್ಲೆಲ್ಲ ಬಿಜೆಪಿ ಅಸ್ತಿತ್ವ ಇರಲಿಲ್ಲವೋ ಅಲ್ಲೆಲ್ಲ ಅದನ್ನು ಸ್ಥಾಪಿಸುವ ಕೆಲಸಕ್ಕೆ ಕೈ ಹಾಕಿದರು. ಈಶಾನ್ಯ ರಾಜ್ಯಗಳಲ್ಲಿ ಬಿಜೆಪಿ ಗೆಲ್ಲಬಹುದು, ಅಲ್ಲೂ ಬಿಜೆಪಿ ಸರ್ಕಾರ ನಡೆಸಬಹುದು ಎಂದು ಕೆಲವು ವರ್ಷಗಳ ಹಿಂದೆ ಯಾರೂ ಊಹಿಸಲೂ ಸಾಧ್ಯವಿರಲಿಲ್ಲ. ಇಂದು ಸಂಪೂರ್ಣ ಈಶಾನ್ಯ ರಾಜ್ಯಗಳಲ್ಲಿ ಬಿಜೆಪಿ ಆವರಿಸಿಕೊಂಡಿದೆ. ಪಶ್ಚಿಮ ಬಂಗಾಳದಲ್ಲೂ ಬಿಜೆಪಿ ಈ ಬಾರಿ ಗೆದ್ದು ಅಧಿಕಾರಕ್ಕೆ ಬರುತ್ತದೆ ಎಂಬುದನ್ನೇ ಹೆಚ್ಚಿನವರು ನಂಬಲು ಸಿದ್ಧರಿರಲಿಲ್ಲ. ಅದರಲ್ಲೂ ಈ ಪರಿಯ ಬಹುಮತದಿಂದ ಗೆಲ್ಲಬಹುದು ಎಂದು ಯಾರೂ ಊಹಿಸಿರಲಿಲ್ಲ. ಆದರೆ ಇದನ್ನು ಸಾಧಿಸಿಯೇ ಸಾಧಿಸುತ್ತೇನೆ ಎಂದು ಪಶ್ಚಿಮ ಬಂಗಾಳಕ್ಕೇ ಹೋಗಿ ಕುಳಿತಿದ್ದರು ಅಮಿತ್ ಶಾ. ಈಗ ಗೆದ್ದ ನಂತರ ಅಲ್ಲಿ ಮುಖ್ಯಮಂತ್ರಿಯನ್ನು ಮಾಡಿ, ಸಂಪುಟ ರಚನೆಯ ಜವಾಬ್ದಾರಿಯನ್ನೂ ಸರಿಯಾಗಿ ಮುಗಿಸುವ ಕೆಲಸವೂ ಅಮಿತ್ ಶಾ ಅವರ ಹೆಗಲೇರಿದೆ.

ಇದನ್ನೇ ಅಲ್ಲವೆ ಬದ್ಧತೆ ಅನ್ನುವುದು. ಅವರಿಗೆ ವರು ನಂಬಿದ ಸಿದ್ಧಾಂತದ ಬಗ್ಗೆ, ಅವರ ಪಕ್ಷದ ಬಗ್ಗೆ, ಅವರ ದೇಶದ ಬಗ್ಗೆ, ನರೇಂದ್ರ ಮೋದಿಯ ಬಗ್ಗೆ ಬದ್ಧತೆಯಿದೆ. ಅವರಿಂದ ಏನಾದರೂ ಕಲಿಯಬೇಕು ಅನ್ನಿಸಿದರೆ ಬದ್ಧತೆಯನ್ನು ಕಲಿಯೋಣ. ಜತೆಗೆ ಅಹಂಕಾರಿಯಾಗದಿರುವುದನ್ನೂ ಕಲಿಯೋಣ. ಮೋದಿ-ಶಾ ಜೋಡಿಯಿಂದ ಪರಸ್ಪರ ಕೂಡಿ, ಪೂರಕವಾಗಿ ಶ್ರೇಯಸ್ಸಿನತ್ತ ಸಾಗುವುದನ್ನು ಕಲಿಯೋಣ. ಶ್ರೇಯಸ್ಸು ಸಾಧಿಸಿಯೂ ಅದರಲ್ಲಿ ಪಾಲಿಗಾಗಿ ಬಡಿದಾಡದಿರುವುದನ್ನು ಕಲಿಯೋಣ.

ಭಾರತೀಯ ರಾಜಕಾರಣದ ಮಹತ್ತರ ತಿರುವು

▸ ಉತ್ಪಲ್ ಕುಮಾರ್

ಈ ಬಾರಿಯ ವಿಧಾನಸಭಾ ಚುನಾವಣೆಯ ಫಲಿತಾಂಶವು ಹಲವಾರು ವಿಧಗಳಲ್ಲಿ ಐತಿಹಾಸಿಕವಾಗಿದೆ. ಇದು ಒಂದು ರೀತಿಯಲ್ಲಿ ರಾಜಕೀಯ ಭೂಕಂಪವನ್ನೇ ಸೃಷ್ಟಿಸಿದೆ. ಪೂರ್ವಕಲ್ಪನೆಗಳನ್ನೆಲ್ಲಾ ಬುಡಮೇಲು ಮಾಡಿದೆ. ಕೆಲವು ಹಳೆಯ ಸಂಕಥನಗಳನ್ನು ಹುಸಿಗೊಳಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ ವಿರೋಧ ಪಕ್ಷಗಳಿಗೆ ಕಠಿಣವಾದ ಸಂದೇಶವೊಂದನ್ನು ರವಾನಿಸಿದೆ. ಅದೆಂದರೆ ಬಿಜೆಪಿಯೀಗ ಕೇವಲ ಬಲಿಷ್ಠ ಪಕ್ಷವಷ್ಟೇ ಅಲ್ಲ, ಭಾರತವನ್ನು ನಿಜವಾಗಿಯೂ ಆಳಲು ಇರುವ ಪಕ್ಷವಾಗಿ ಬಿಟ್ಟಿದೆ.

ಹಲವು ವರ್ಷಗಳಿಂದ ಬುದ್ಧಿಜೀವಿಗಳು ಮತ್ತು ಎಡಪಂಥೀಯರು ಬಿಜೆಪಿಯು 'ಹಿಂದಿ ಬೆಲ್ಟ್'ಗೆ ಸೀಮಿತವಾದ 'ಉತ್ತರ ಭಾರತೀಯ' ಪಕ್ಷ ಎಂದು ಹೀಗಳೆಯುತ್ತಿದ್ದರು. ಈ ವಾದವು ಈಗ ನುಚ್ಚುನೂರಾಗಿದೆ. ಪಶ್ಚಿಮ ಬಂಗಾಳವನ್ನೂ ಗೆಲ್ಲುವ ಮೂಲಕ ಬಿಜೆಪಿ ಈಗ ಉ.ಪ್ರದೇಶ, ಬಿಹಾರ, ಒಡಿಸ್ಸಾ ಮತ್ತು ಅಸ್ಸಾಂ ಸೇರಿದಂತೆ ಪೂರ್ವ ಭಾರತವನ್ನಿಡೀ ವ್ಯಾಪಿಸಿದೆ.

ಪ.ಬಂಗಾಳದ ಗೆಲುವು ಮತ್ತೂ ಒಂದು ವಿಧದಲ್ಲಿ ಮಹತ್ವದ್ದಾಗಿದೆ. ಪ.ಬಂಗಾಳವು ಬಿಜೆಪಿಗೆ ಒಲಿಯದ ಸೈದ್ಧಾಂತಿಕ ಕೋಟೆ ಎಂದು ಭಾವಿಸಲಾಗಿತ್ತು. ಅದು ಎಡಪಂಥೀಯ ವಾದದ, ಜಾತ್ಯತೀತವಾದದ, ಒಟ್ಟಿಕೆ ರಾಜಕಾರಣದ ಆಡುಂಬೊಲವಾಗಿತ್ತು. ಈ ರಾಜ್ಯವು ಬಿಜೆಪಿಗೆ ಸೇರಿದ್ದಲ್ಲ ಎಂಬುದಾಗಿ ಪದೇಪದೇ ನುಡಿಯಲಾಗುತ್ತಿತ್ತು. ಈಗ ನೋಡಿ, ಇದೇ ರಾಜ್ಯದಲ್ಲಿ ಕೇಸರಿ ಧ್ವಜ ಹಾರಾಡುತ್ತಿದೆ.

ಐತಿಹಾಸಿಕವಾಗಿ ಈ ಫಲಿತಾಂಶ ಇನ್ನೂ ಮಹತ್ವದ್ದು. 1970ರ ಬಳಿಕ ಯಾವುದೇ ಏಕೈಕ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದುಕೊಂಡು ಪೂರ್ವದ ಪ್ರಮುಖ ರಾಜ್ಯಗಳನ್ನೂ (ಉ.ಪ್ರದೇಶ, ಬಿಹಾರ, ಬಂಗಾಳ ಮತ್ತು ಒಡಿಸ್ಸಾ) ಆಳಿದ್ದಿಲ್ಲ. ಹಿಂದೆ ಕಾಂಗ್ರೆಸ್ ಕಾಲದಲ್ಲಿ ಇಂತಹ ಪರಿಸ್ಥಿತಿ ಇತ್ತಾದರೂ, ಅಲ್ಲಿಂದ ಬಳಿಕ ಈ ಪ್ರದೇಶವು ವಿವಿಧ ಪ್ರಾದೇಶಿಕ ಪಕ್ಷಗಳ ಆಳ್ವಿಕೆಗೆ ಒಳಪಟ್ಟಿತ್ತು.

ಬಿಜೆಪಿ ಪಾಲಿಗೆ ಪ.ಬಂಗಾಳವು ಅತ್ಯಂತ ಅಭೇದ್ಯ ಕೋಟೆಯಾಗಿ ಪರಿಣಮಿಸಿತ್ತು. ರಾಷ್ಟ್ರೀಯ ಪಕ್ಷವೊಂದು ಈ ರಾಜ್ಯವನ್ನು ಕೊನೆಯದಾಗಿ ಆಳಿದ್ದೆಂದರೆ 1970ರಲ್ಲಿ, ಕಾಂಗ್ರೆಸ್ ಸರಕಾರವಿದ್ದಾಗ. 1977ರಲ್ಲಿ ಸಿಪಿಎಂ ಅಧಿಕಾರಕ್ಕೆ ಬಂತು. ಅಲ್ಲಿಂದ ಬಳಿಕ 34 ವರ್ಷ ಎಡಪಕ್ಷ ಹಾಗೂ ನಂತರ 15 ವರ್ಷ ತೃಣಮೂಲ ಕಾಂಗ್ರೆಸ್ ರಾಜ್ಯಭಾರ ನಡೆಯಿತು. ರಾಷ್ಟ್ರೀಯ ಪಕ್ಷವೊಂದಕ್ಕೆ ಮರಳಿ ಪ.ಬಂಗಾಳದಲ್ಲಿ ಅಧಿಕಾರ ವಹಿಸಿಕೊಳ್ಳಲು 49 ವರ್ಷ ಬೇಕಾಯಿತು. ಹಾಗಾಗಿ ಈಗಿನ ಫಲಿತಾಂಶವು ಅತ್ಯಂತ ಮಹತ್ವದ್ದಾಗಿದೆ.

ಹೊಸ ರಾಜಕೀಯ ವ್ಯವಸ್ಥೆಯ ಉದಯ

1990ರ ದಶಕದಲ್ಲಿ ಬಿಹಾರವು ಲಾಲೂ ಪ್ರಸಾದ್ ಯಾದವ್‌ರ ಜಾತಿ ಆಧಾರಿತ ಮತ್ತು ಸಮಾಜವಾದಿ ರಾಜಕೀಯಕ್ಕೆ ಒಳಪಟ್ಟಿತ್ತು. 1980ರ ದಶಕದಲ್ಲಿ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಆಳ್ವಿಕೆ ಕೊನೆಗೊಂಡು 'ಮಂಡಲ' ರಾಜಕೀಯಕ್ಕೆ ಸಾಕ್ಷಿಯಾಯಿತು. ಒಡಿಸ್ಸಾ ಕೂಡಾ ಕಾಂಗ್ರೆಸ್ ಪ್ರಭಾವದಿಂದ ಹೊರಬಂದು ನವೀನ್ ಪಟ್ನಾಯಕ್ ಅವರ ಪ್ರಭಾವಕ್ಕೆ ಸಿಲುಕಿತು. ಹಾಗಾಗಿ 2026ರ ಚುನಾವಣೆಗಳು ಕೇವಲ ಒಂದು ಗೆಲುವಲ್ಲ. ಇದು ಹೊಸ ರಾಜಕೀಯ ವ್ಯವಸ್ಥೆಯೊಂದು ಉದಯವಾಗುತ್ತಿರುವುದರ ಸಂಕೇತ. ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರಕಾರಗಳು ಆಡಳಿತ ಹೊಂದಾಣಿಕೆ ನಡೆಸುವ ಮೂಲಕ ಪೂರ್ವ ಭಾರತದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಕಾರಣವಾಗಬಲ್ಲವು. ಕಳೆದ ಕೆಲವು ದಶಕಗಳಿಂದ ಪ್ರಗತಿಯನ್ನೇ ಕಾಣದ ಈ ಪ್ರದೇಶಕ್ಕೆ ಹೊಸ ದಿಕ್ಕು ತೋರಬಲ್ಲವು.

ಅಂಗ, ಬಂಗ ಮತ್ತು ಕಳಿಂಗ (ಬಿಹಾರ, ಪ.ಬಂಗಾಳ ಮತ್ತು ಒಡಿಸ್ಸಾ) ನಿಜವಾಗಿ ದೇಶದ ಕೈಗಾರಿಕಾ ಸ್ನೇಹಿ ಹಾಗೂ ಸಂಪನ್ಮೂಲ ಪ್ರದೇಶಗಳಾಗಿದ್ದವು. ಆದರೆ ಸ್ವಾತಂತ್ರ್ಯೋತ್ತರದ ಸಮಾಜವಾದಿ ಚಿಂತನೆಗಳು ಕೈಗಾರಿಕಾ ಸ್ಫೂರ್ತಿಯನ್ನು ಹೊಸಕಿಹಾಕಿದವು. ಪ.ಬಂಗಾಳವು ಎಷ್ಟು ಬಡತನಕ್ಕೆ ಇಳಿಯಿತೆಂದರೆ ಅಲ್ಲಿನ ಜನರು ಉದ್ಯೋಗಕ್ಕಾಗಿ ಬೇರೆ ರಾಜ್ಯಗಳಿಗೆ ವಲಸೆ ಹೋಗಲಾರಂಭಿಸಿದರು. ಒಂದು ಕಾಲದಲ್ಲಿ ನೆರೆಯ ರಾಜ್ಯಗಳಿಂದ ಉದ್ಯೋಗಾಕಾಂಕ್ಷಿಗಳು ಪ.ಬಂಗಾಳಕ್ಕೆ ಬರುತ್ತಿದ್ದುದಿತ್ತು. ಆದರೀಗ ಇಲ್ಲಿಂದಲೇ ಬೇರೆ ರಾಜ್ಯಗಳಿಗೆ ಜನರು ಹೋಗುವುದನ್ನು ಕಾಣಬೇಕಾಯಿತು. ಇನ್ನೀಗ ಕೈಗಾರಿಕಾ ಸ್ನೇಹಿ ನೀತಿಗಳನ್ನು ಹೊಸ ಸರಕಾರವು ಅಳವಡಿಸಿದರೆ ಬಂಗಾಳವು ಪ್ರಗತಿ ಸಾಧಿಸಬಲ್ಲದು ಹಾಗೂ ಅಲ್ಲಿನ ಯುವಕರು ತಮ್ಮ ರಾಜ್ಯದಲ್ಲೇ ಉದ್ಯೋಗ ಕಂಡುಕೊಂಡಾರು.

ಈ ಚುನಾವಣಾ ಫಲಿತಾಂಶವು ರಾಷ್ಟ್ರೀಯ ಭದ್ರತಾ ವಿಚಾರದಲ್ಲೂ ಮಹತ್ವದ್ದಾಗಿದೆ. ಗಡಿ ರಾಜ್ಯಗಳಾದ ಪ.ಬಂಗಾಳ, ಅಸ್ಸಾಂ ಮತ್ತು ತ್ರಿಪುರಾ ಭಾರತದ ಪಾಲಿಗೆ ಮಹತ್ವದ ರಾಜ್ಯಗಳು. ಬಾಂಗ್ಲಾದಿಂದ ಈ ರಾಜ್ಯಗಳಲ್ಲಿ ಅತಿಕ್ರಮಣ ನಡೆಯುವುದು ಹೆಚ್ಚು. ಇನ್ನೀಗ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಸಮನ್ವಯದಿಂದ ಕಾರ್ಯಾಚರಿಸಿ ಅಕ್ರಮ ವಲಸೆಯನ್ನು ತಡೆಯಬಹುದು. ಆ ಮೂಲಕ ಗಡಿ ಪ್ರದೇಶದಲ್ಲಿ ಜನಸಂಖ್ಯಾ ಅಸಮತೋಲನ ಉಂಟಾಗುವುದನ್ನು ನಿಯಂತ್ರಿಸಬಹುದು. ಅಸ್ಸಾಂ ಮತ್ತು ಪ.ಬಂಗಾಳದ ಮತದಾರರು ಬಿಜೆಪಿಗೆ ಮತ ಹಾಕಲು ಈ ರಾಜ್ಯಗಳಲ್ಲಿ ಅಕ್ರಮ ಬಾಂಗ್ಲಾದೇಶಿಯರು ಹೆಚ್ಚುತ್ತಿರುವುದೂ ಕಾರಣವಾಗಿದೆ.

ಮಮತಾ ದುರಾಡಳಿತದ ವಿರುದ್ಧ ರೋಷ

ಪ.ಬಂಗಾಳದ ಜನರು ಬಿಜೆಪಿಗೆ ಮತ ಹಾಕಲು ಹಲವಾರು ಕಾರಣಗಳಿವೆ. ಮಮತಾ ಬ್ಯಾನರ್ಜಿಯವರ 15 ವರ್ಷಗಳ ದುರಾಡಳಿತದ ವಿರುದ್ಧ ಜನರು ರೊಚ್ಚಿಗೆದ್ದುದು ಸ್ಪಷ್ಟವಾಗಿದೆ. ರಾಜ್ಯದ ಹದಗೆಟ್ಟ ಕಾನೂನು ವ್ಯವಸ್ಥೆ, ಅಲ್ಪಸಂಖ್ಯಾತರ ತುಷ್ಟೀಕರಣ ಮೊದಲಾದವುಗಳ ಬಗ್ಗೆ ಜನರು ಆತಂಕಗೊಂಡಿದ್ದರು. ಬಾಂಗ್ಲಾ ದೇಶದಲ್ಲಿ ಆಂತರಿಕ ಸಮರ ಉಂಟಾದ ಬಳಿಕ ಪ.ಬಂಗಾಳಕ್ಕೆ ಬಾಂಗ್ಲಾ ದೇಶೀಯರ ನುಸುಳುವಿಕೆ ಹೆಚ್ಚಾಗಿತ್ತು. ನೆರೆಯ ಬಾಂಗ್ಲಾದಲ್ಲಿ ಹಿಂದು ವಿರೋಧಿ ಭಾವನೆ ಹೆಚ್ಚುತ್ತಾ ಅಲ್ಲಿನ ಹಿಂದುಗಳ ಮೇಲೆ ದಾಳಿಗಳು ನಡೆಯಲಾರಂಭಿಸಿದಂತೆ ಇತ್ತ ಪ.ಬಂಗಾಳದ ಹಿಂದುಗಳಿಗೂ ಆತಂಕ ಹೆಚ್ಚಲಾರಂಭಿಸಿತ್ತು. ಈ ಕಾರಣದಿಂದಲೇ ಪ.ಬಂಗಾಳದ ಹಿಂದು ಮತಗಳೆಲ್ಲಾ ಧ್ರುವೀಕರಣಗೊಂಡವು. ಕೆಲವು ವಿಶ್ಲೇಷಕರು ಬಿಜೆಪಿಯ ಗೆಲುವಿಗೆ ಮತದಾರ ಪಟ್ಟಿ ಪರಿಷ್ಕರಣೆ ಕಾರಣವೆಂದು ಹೇಳುವುದಿದೆ. ಆದರೆ ಅವರು ಇನ್ನೂ ಕೆಲವು ವಾಸ್ತವಾಂಶಗಳನ್ನು ಮರೆಯುತ್ತಾರೆ. ಪ.ಬಂಗಾಳದ ರಾಜಕೀಯವು ಸದಾ ಮೂರು 'ಎಂ'ಗಳ ಸುತ್ತ ಸುತ್ತುತ್ತಿರುತ್ತದೆ. ಮುಸ್ಲಿಂ, ಮಹಿಳಾ ಮತ್ತು ಮತುವಾ. ಈ ಬಾರಿ ಮಹಿಳೆಯರು ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಮಹಿಳೆಯರು ಸಂಪೂರ್ಣವಾಗಿ ಮಮತಾ ವಿರುದ್ಧ ಮತ ಚಲಾಯಿಸಿದರು. ಮತುವಾಗಳು ಕೆಲ ವರ್ಷಗಳ ಹಿಂದಿನಿಂದಲೇ ಬಿಜೆಪಿ ಪರ ವಾಲಲಾರಂಭಿಸಿದ್ದರು. ಟಿಎಂಸಿ ಪರವಾಗಿದ್ದ ಎರಡು 'ಎಂ'ಗಳು ಅದನ್ನು ತೊರೆದ ಬಳಿಕ ತೃಣಮೂಲದ ಪತನ ನಿಶ್ಚಿತವಾಗಿತ್ತು.



ಇತ್ತೀಚಿನ ವಿಧಾನಸಭಾ ಚುನಾವಣೆಯ ಫಲಿತಾಂಶಗಳು ದೇಶದ ರಾಜಕಾರಣದಲ್ಲಿ ಹೊಸದೊಂದು ಮುನ್ನುಡಿ ಬರೆದಿವೆ. ಈ ಫಲಿತಾಂಶ ಹಲವು ವಿಧಗಳಲ್ಲಿ ಮಹತ್ವದ್ದಾಗಿದೆ.

ಹಿಂದು ವಿರೋಧಕ್ಕೆ ಸೋಲು

2026ರ ವಿಧಾನಸಭಾ ಚುನಾವಣೆಗಳ ಫಲಿತಾಂಶವು ಸಾರುತ್ತಿರುವ ಮತ್ತೊಂದು ಸಂದೇಶವೆಂದರೆ ಹಿಂದು ವಿರೋಧಿ ಭಾವನೆಯನ್ನು ಹೊಂದಿರುವ ರಾಜಕೀಯ ಪಕ್ಷಗಳೆಲ್ಲಾ ಜನರಿಂದ ತಿರಸ್ಕರಿಸಲ್ಪಡುತ್ತಿರುವುದು. ಅಲ್ಪಸಂಖ್ಯಾತರ ಪರವಾಗಿರುವುದು ಬೇರೆ ವಿಷಯ. ಆದರೆ ಕೆಲವು ಪಕ್ಷಗಳು ಹಿಂದು ವಿರೋಧವನ್ನೇ ಅತಿರೇಕವಾಗಿ ಪ್ರತಿಪಾದಿಸುತ್ತವೆ. ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಇದನ್ನು ಇನ್ನೂ ಅರಿತುಕೊಂಡಿಲ್ಲ. ಹಿಂದು ವಿರೋಧದ ತಮ್ಮ ದಾರ್ಷ್ಟ್ಯತನಕ್ಕೆ ಅವು ಈಗ ಮತಪೆಟ್ಟಿಗೆಯಲ್ಲಿ ಬೆಲೆ ತೆರುತ್ತಿವೆ.

ಪ.ಬಂಗಾಳದ ಬಿಜೆಪಿ ಗೆಲುವು ಮತ್ತೊಂದು ಕಾರಣಕ್ಕಾಗಿ ಇಮ್ಮಡಿ ಸಂತೋಷ ತರುತ್ತದೆ. ಹಿಂದುತ್ವವನ್ನು ಪ್ರತಿಪಾದಿಸುವ ಪಕ್ಷವು ಹಿಂದುತ್ವಕ್ಕೆ ಜನ್ಮ ನೀಡಿದ ರಾಜ್ಯದಲ್ಲೇ ಗೆಲುವು ಸಾಧಿಸಿದ್ದು ಗಮನಾರ್ಹ. ಬಿಜೆಪಿ ಪಾಲಿಗೆ ಬಂಗಾಳದ ಅಸ್ಮಿತೆ ಮತ್ತು ಬಂಗಾಳದ ಹಿಂದುತ್ವದ ಅಸ್ಮಿತೆ ಪ್ರತ್ಯೇಕವಲ್ಲ. ಅವೆರಡೂ ಒಂದೇ. ಹಿಂದುತ್ವದ ಪ್ರತಿಪಾದಕರಾದ ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ ಮುಂತಾದವರ ಜನ್ಮ ಸ್ಥಾನವಿದು. ಜನಸಂಘ ಸ್ಥಾಪಕರಾದ ಶ್ಯಾಮಪ್ರಸಾದ್ ಮುಖರ್ಜಿಯವರ ಜನ್ಮ ನೆಲವೂ ಹೌದು. ಪ.ಬಂಗಾಳದಲ್ಲಿ ಜಯ ಸಾಧಿಸುವುದು ಬಿಜೆಪಿಯ ಬಹುಕಾಲದ ಗುರಿಯಾಗಿತ್ತು. ಅದನ್ನೀಗ ಸಾಧಿಸಲಾಗಿದೆ.

ಇದೇ ಬಗೆಯ ಹಿಂದು ಧ್ರುವೀಕರಣವು ಅಸ್ಸಾಂನಲ್ಲೂ ಕಂಡುಬರುತ್ತಿದೆ. ಅಲ್ಲಿ ಹಿಮಂತ ಬಿಸ್ವಾ ಶರ್ಮ ಅವರ ನೇತೃತ್ವದಲ್ಲಿ ಬಿಜೆಪಿ ಹ್ಯಾಟ್ರಿಕ್ ಸಾಧಿಸಿದೆ. ಒಂದು ಕಾಲದಲ್ಲಿ ಅಸ್ಸಾಂ ತನ್ನ ಜನಸಂಖ್ಯಾ ಸ್ವರೂಪ ಮತ್ತು ಪ್ರಾದೇಶಿಕ ರಾಜಕೀಯ ಪರಂಪರೆಯಿಂದಾಗಿ ಬಿಜೆಪಿಗೆ ಅಸ್ಪೃಶ್ಯವೆಂಬಂತಿತ್ತು. ಹಿಮಂತ ಬಿಸ್ವಾ ಈಗ ಅಸ್ಸಾಂನ್ನು ಬಿಜೆಪಿಯ ಭದ್ರಕೋಟೆಯನ್ನಾಗಿ ಬದಲಿಸಿದ್ದಾರೆ. ಹಿಂದು ವೋಟ್ ಬ್ಯಾಂಕ್ ರಾಜಕೀಯವು ಬಲಿಷ್ಠವಾಗಿ ಬೆಳೆಯುವುದನ್ನು ಸಂಕೇತಿಸಿದ್ದಾರೆ.

ದಕ್ಷಿಣ ರಾಜ್ಯಗಳ ಚುನಾವಣೆ ಚಿತ್ರಣ ಮಿಶ್ರ ರೂಪದ್ದಾಗಿದೆ. ಕೇರಳದ ಜಯದಿಂದ ಕಾಂಗ್ರೆಸ್ ಸಮಾಧಾನಪಟ್ಟುಕೊಳ್ಳಬಹುದು. ಅಲ್ಲಿ ಆಡಳಿತ ವಿರೋಧಿ ಭಾವನೆಯಿಂದಾಗಿ ಎಡಪಕ್ಷಗಳ ವಿರುದ್ಧ ಜನಾಭಿಪ್ರಾಯ ರೂಪುಗೊಂಡುದರಿಂದ ಕಾಂಗ್ರೆಸ್ ಗೆದ್ದಿದೆ. ತಮಿಳ್ನಾಡಿನಲ್ಲಿ ಇಂಡಿ ಒಕ್ಕೂಟವು ಸೋಲು ಕಂಡಿದೆ. ಚಿತ್ರನಟ ವಿಜಯ್ ಅವರ ರಾಜಕೀಯ ಪ್ರಗತಿಯು ಐತಿಹಾಸಿಕವಾದುದು. ಆ ಮೂಲಕ ತಮಿಳ್ನಾಡು ರಾಜಕೀಯವು ವ್ಯಕ್ತಿಯಾಧಾರಿತ ರಾಜಕೀಯಕ್ಕೆ ತಿರುಗಿದೆ. ತಮಿಳ್ನಾಡಿನಲ್ಲೀ ಹಿಂದೆಯೂ ಕೆಲವು ಸಿನೆಮಾ ತಾರೆಯರು ರಾಜಕೀಯ ಪ್ರವೇಶಿಸಿ ಗೆಲುವು ಸಾಧಿಸಿದ್ದಾರೆ. ಆದರೆ ಜಯಲಲಿತಾ ಸಾವಿನ ಬಳಿಕ ಈ ಟ್ರೆಂಡ್ ಕೊನೆಗೊಂಡಿದೆ ಎಂದು ಭಾವಿಸಲಾಗಿತ್ತು. ಕಮಲ್‌ಹಾಸನ್ ಇಂತಹುದೇ ಪ್ರಯತ್ನ ನಡೆಸಿದ್ದರಾದರೂ ಅದು ಸೋಲು ಕಂಡಿತ್ತು. ಈಗ ಮತ್ತೆ ತಮಿಳ್ನಾಡು ರಾಜಕೀಯದಲ್ಲಿ ಚಿತ್ರನಟರ ಪ್ರವೇಶವಾಗಿದೆ.

ಒಟ್ಟಿನಲ್ಲಿ ವಿಧಾನಸಭಾ ಚುನಾವಣೆಯ ಫಲಿತಾಂಶವು ತೋರಿಸಿಕೊಡುತ್ತಿರುವುದೆಂದರೆ- ದೇಶದಲ್ಲಿ ಈಗ ಬಿಜೆಪಿಯೇ ಮುಖ್ಯ ಪಕ್ಷವಾಗಿದೆ. ಇಂಡಿಕೂಟವು ಇನ್ನಷ್ಟು ಶಿಥಿಲಗೊಂಡಿದೆ. ಕಾಂಗ್ರೆಸ್ ಬದುಕುಳಿದಿದೆಯಾದರೂ ಕುಟುಕು ಜೀವ ಉಳಿಸಿಕೊಂಡಿದೆ. ಉಸಿರಾಡಲು ಬೇಕಾದಷ್ಟು ಆಮ್ಲಜನಕವನ್ನು ಮಾತ್ರ ಕೇರಳದ ಗೆಲುವು ದೊರಕಿಸಿಕೊಟ್ಟಿದೆ.

ಆದರೆ ಕಾಂಗ್ರೆಸ್ ರಾಷ್ಟ್ರೀಯ ಪ್ರಸ್ತುತತೆಯನ್ನು ಕಳೆದು ಕೊಂಡಿದೆ. ಭಾರತದ ರಾಜಕೀಯವು ಹೊಸದೊಂದು ಶಕೆಯನ್ನು ಪ್ರವೇಶಿಸಿದೆ. ಬಿಜೆಪಿ ಈಗ ದೇಶದ ರಾಜಕೀಯದ ಕೇಂದ್ರ ಬಿಂದುವಾಗಿದೆ.

ಬಂಗಾಳದ ಪರಿವರ್ತನೆಯ ಹೊತ್ತಲ್ಲಿ ತ್ರಿಪುರಾದ ನೆನಪು

ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಹದಿನೈದು ವರ್ಷಗಳ ಅನಂತರ ಪಶ್ಚಿಮ ಬಂಗಾಳದಲ್ಲಿ ಆಡಳಿತ ಪಕ್ಷದ ಪರಿವರ್ತನೆಯಾಗಿದೆ. ಮೊದಲ 35 ವರ್ಷಗಳ ಕಾಲ ಅಧಿಕಾರದಲ್ಲಿದ್ದ ವಾಮಪಂಥವು ಪಶ್ಚಿಮ ಬಂಗಾಳವನ್ನು ಅಭಿವೃದ್ಧಿಯ ದೃಷ್ಟಿಯಿಂದ ಕತ್ತಲೆಗೆ ನೂಕಿತ್ತು. ಹೊಸ ಉದ್ದಿಮೆಗಳ ವಿರೋಧಿನೀತಿಯಿಂದ ಪಶ್ಚಿಮಬಂಗಾಳದ ಜನತೆ ಉದ್ಯೋಗವಿಲ್ಲದೆಯೇ ದಿನನಿತ್ಯವೂ ಹೋರಾಟ, ಪ್ರತಿಭಟನೆ ಮೊದಲಾದವುಗಳ ಮೂಲಕ ಹೊಟ್ಟೆ ಹೊರೆದುಕೊಳ್ಳುವ ಸ್ಥಿತಿಗೆ ತಲುಪಿದ್ದರು. ಇಂಥ ವ್ಯವಸ್ಥೆಯಿಂದ ಬೇಸತ್ತ ಜನತೆ ಪರಿವರ್ತನೆಗಾಗಿ ಕಾದಿತ್ತು. ಆ ಸಮಯದಲ್ಲಿ ಮಮತಾ ಬ್ಯಾನರ್ಜಿ ಹೊಸ ಆಶಾಕಿರಣವಾಗಿ ಬಂಗಾಲದ ಜನತೆಯ ಎದುರು ನಿಂತಿದ್ದರು. ಈ ಹಿಂದೆ ಕೇಂದ್ರಸರ್ಕಾರದಲ್ಲಿ ರೈಲ್ವೆ ಸಚಿವಸ್ಥಾನವೇ ಮೊದಲಾದ ಜವಾಬ್ದಾರಿಗಳನ್ನು ನಿರ್ವಹಿಸಿ ಅನುಭವವಿದ್ದ ದೀದಿಯನ್ನು ಸ್ವಯಂ ವಿರೋಧಪಕ್ಷಗಳು ಕೂಡ 'ದುರ್ಗಾ' ಎಂದೇ ಕರೆಯುವಷ್ಟು ಮಮತಾ ಬ್ಯಾನರ್ಜಿಯ ಪ್ರಸಿದ್ಧಿ ಹರಡಿತ್ತು. ಆ ಕಾರಣಕ್ಕಾಗಿ 35 ವರ್ಷಗಳಿಂದ ನೆಲೆಯೂರಿದ್ದ ಎಡಪಂಥದ ಬೇರನ್ನು ಬುಡಸಮೇತ ಕಿತ್ತು ಸರ್ಕಾರವನ್ನು ಸ್ಥಾಪಿಸಿದ್ದ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಕಳೆದ 15 ವರ್ಷಗಳ ಕಾಲ ನಿರಂತರವಾಗಿ ಆಡಳಿತವನ್ನು ಅಲ್ಲಿ ನಡೆಸಿದೆ.

2014ರಲ್ಲಿ ಕೇಂದ್ರದಲ್ಲಿ ಆದ ಬದಲಾವಣೆಯ ಅನಂತರ ಮಮತಾ ಬ್ಯಾನರ್ಜಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ತುಷ್ಟೀಕರಣದ ರಾಜನೀತಿಯನ್ನು ಬಹುವಾಗಿ ನೆಚ್ಚಿಕೊಂಡರು. ಅವರ ಆಡಳಿತದ ಅವಧಿಯಲ್ಲಿ ಬಾಂಗ್ಲಾದೇಶದಿಂದ ನಿರಂತರವಾಗಿ ನುಸುಳುಕೋರರು ಭಾರತವನ್ನು ಪ್ರವೇಶಿಸಿದರು. ಅಷ್ಟೇ ಅಲ್ಲ, ಆಧಾರ್ ಕಾರ್ಡ್, ಮತದಾರಚೀಟಿ ಸೇರಿದಂತೆ ಎಲ್ಲ ಸರ್ಕಾರೀ ದಾಖಲೆಗಳನ್ನೂ ಪಡೆದುಕೊಂಡು, ತಲೆಮಾರಿನಿಂದ ಜೀವಿಸಿಕೊಂಡು ಬಂದಿದ್ದ ಬೆಂಗಾಲಿ ಜನರಿಗಿಂತಲೂ ಸುಲಭವಾಗಿ ಮತ್ತು ಅವರಿಗಿಂತಲೂ ಹೆಚ್ಚಿನ ಸೌಲಭ್ಯಗಳನ್ನು ಪಡೆದುಕೊಳ್ಳತೊಡಗಿದರು. ಇದಕ್ಕೆಲ್ಲ ಕಾರಣವೇನೆಂದರೆ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಆಗಿನ ಮುಖ್ಯಮಂತ್ರಿ ಮಾಡಿದ ತುಷ್ಟೀಕರಣ. ಮಿತಿಮೀರಿದ ಹಿಂದೂ ವಿರೋಧಿ ನೀತಿಯಿಂದ ಈಗಷ್ಟೇ ಬಂಗಾಳ ಎಚ್ಚೆತ್ತುಕೊಂಡಿದೆ. ಏಕಕಂಠದಿಂದ ಪರಿವರ್ತನೆಯ ರಾಗ ಹಾಡಿದೆ.

ಹಾಗೆ ನೋಡಿದರೆ, ಬೆಂಗಾಲಿ ಹಿಂದೂಗಳು ತಮ್ಮ ಸ್ವಂತಿಕೆಯನ್ನು ಕಳೆದುಕೊಂಡು ಬಹಳ ವರ್ಷಗಳಾದವು. ಅವರಿಗೆ ತಾವು ಹಿಂದೂಗಳು ಹಾಗೂ ತಾವು ತಮ್ಮ ಸಂಸ್ಕೃತಿಯನ್ನು, ತಮ್ಮ ಭೂಮಿಯನ್ನು ಉಳಿಸಿಕೊಳ್ಳಬೇಕೆಂಬ ಎಚ್ಚರ ಬರುವುದಕ್ಕೆ ಬಹಳ ವಿಳಂಬವಾಯಿತು. ಬಹಳ ಮೊದಲೇ ಈ ಪ್ರಜ್ಞೆ ಸಮಷ್ಟಿ ಸ್ತರದಲ್ಲಿ ಬರಬೇಕಿತ್ತು. ಬೆಂಗಾಲಿಗಳೇ ಹಾಗೆ. ಅವರಿಗೆ ಕುತ್ತಿಗೆಗೆ ಬರುವವರೆಗೂ ಪಾತ್ರೆಯೊಳಗೆ ಕಾಯಿಸಲು ಇಟ್ಟ ನೀರಿನಲ್ಲಿ ಬಿದ್ದ ಕಪ್ಪೆಯಂತೆ, ಬಿಸಿ ಏರುತ್ತಾ ಇದ್ದರೂ ಅದಕ್ಕೆ ಹೊಂದಿಕೊಳ್ಳುತ್ತಲೇ ಇರುವಷ್ಟು ಉದಾಸೀನರು. ನೋಡೋಣ, ಸರಿ ಹೋಗಬಹುದು ಎಂಬ ಅಮಿತ ಆಶಾವಾದಿಗಳು. ಯಾವ ನೆಲದಿಂದ ಸ್ವಾತಂತ್ರ್ಯಸಂಗ್ರಾಮದ ಸಮಯದಲ್ಲಿ ಬದಲಾವಣೆಯ ಗಾಳಿ ಬೀಸಿತ್ತೋ ಅಂಥ ನೆಲದಲ್ಲಿನ ಬೆಂಗಾಲಿಗಳಿಗೆ ಹೀಗೆ ತಮ್ಮತನವು ಮರೆತುಹೋಗಲು ಮುಖ್ಯ ಕಾರಣ ಮೂವತ್ತೈದು ವರ್ಷಗಳ ವಾಮಪಂಥದವರ ಆಡಳಿತ. ಬೆಂಗಾಲಿಗಳು ಯಾಕೆ ಹೀಗೆ ಎಂಬುದನ್ನು ತ್ರಿಪುರಾದ ಉದಾಹರಣೆಯ ಮೂಲಕ ನೋಡಿದರೆ ಹೆಚ್ಚು ಅರ್ಥವಾಗುತ್ತದೆ.

ತ್ರಿಪುರಾ ರಾಜ್ಯವು 1949 ರಲ್ಲಿ ಭಾರತಕ್ಕೆ ಸೇರ್ಪಡೆಗೊಂಡಿತು. ಅಲ್ಲಿಂದ 1972ರವರೆಗೆ ಕೇಂದ್ರಾಡಳಿತ ರಾಜ್ಯವಾಗಿತ್ತು. 1972ರಲ್ಲಿ ತ್ರಿಪುರಾಕ್ಕೆ ಸ್ವತಂತ್ರ ರಾಜ್ಯದ ಸ್ಥಾನಮಾನ ದೊರಕಿತು. ಅದಾದ ಮೇಲೆ ಮೊದಲ ಐದು ವರ್ಷಗಳ ಕಾಲ ಕಾಂಗ್ರೆಸ್ ಪಕ್ಷ ಆಡಳಿತ ನಡೆಸಿದರೆ, 1977ರಿಂದ 1988ರವರೆಗೆ ನೇತೃತ್ವದ ಕಮ್ಯುನಿಷ್ಟ್ ಪಕ್ಷದ ತೆಕ್ಕೆಯಲ್ಲಿತ್ತು. ಅನಂತರ 1988-93ರವರೆಗೆ ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂತು. ಅಲ್ಲಿಂದ ಮತ್ತೆ 1993ರಲ್ಲಿ ಇಡೀ ತ್ರಿಪುರಾ ಕಮ್ಯುನಿಷ್ಟರ ಆಡಳಿತಕ್ಕೆ ಒಳಪಟ್ಟಿತು. ಸುಮಾರು 25 ವರ್ಷಗಳ ಕಾಲ ನಿರಂತರವಾಗಿ ವಾಮಪಂಥದ ಅಧೀನದಲ್ಲಿ ಇಡೀ ರಾಜ್ಯ ಸಿಕ್ಕಿಕೊಂಡಿತ್ತು. ಮಾಣಿಕ್ ಸರ್ಕಾರ್ ನಾಲ್ಕು ಅವಧಿಗೆ ಮುಖ್ಯಮಂತ್ರಿಯಾಗಿದ್ದು ಇಡೀ ತ್ರಿಪುರಾವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದರು. ವಾಮಪಂಥದವರ ಸಿದ್ಧಾಂತವನ್ನು ಬೆಂಗಾಲಿಗಳ ಕಣಕಣದಲ್ಲೂ ಪ್ರವಹಿಸುವಂತೆ ಮಾಡಿದ ಮಾಣಿಕ್ ಸರ್ಕಾರ್, ಬೆಂಗಾಲಿಗಳ ನಿಜಸ್ವರೂಪವನ್ನು ಒಳಗಿನಿಂದಲೇ ಅಳಿಸಿಬಿಟ್ಟರು.

ಯಾವುದೇ ರಾಜ್ಯದಲ್ಲಿ ವಾಮಪಂಥದವರ ಆಡಳಿತ ಆರಂಭವಾದರೆ ಅಲ್ಲಿ ಅಭಿವೃದ್ಧಿ ಆಗುವುದಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವಂಥದ್ದೇ. ಯಾಕೆಂದರೆ, ವಾಮಪಂಥದವರು ಕಾಲಿಟ್ಟಲ್ಲಿ ಉದ್ಯಮಗಳು ನಾಶವಾಗುತ್ತವೆ. ಹೊಸ ಉದ್ದಿಮೆದಾರರನ್ನು ಕಾರ್ಮಿಕ ವಿರೋಧಿ ನೀತಿಯ ಹೆಸರಿನಲ್ಲಿ ಶೋಷಿಸಿ, ಓಡಿಸಲಾಗುತ್ತದೆ. ನಿತ್ಯನಿರಂತರವಾಗಿ ಪ್ರತಿಭಟನೆಗಳನ್ನು, ಮುಷ್ಕರಗಳನ್ನು ಮಾಡಿಸಿ ಇಡೀ ರಾಜ್ಯದಲ್ಲೆಲ್ಲೂ ಹೊಸ ಉದ್ಯಮಗಳಾಗಲೀ, ಕಾರ್ಖಾನೆಗಳಾಗಲೀ, ಸಂಸ್ಥೆಗಳಾಗಲೀ ಆರಂಭವಾಗದಂತೆ ನೋಡಿಕೊಳ್ಳಲಾಗುತ್ತದೆ. ಆ ಮೂಲಕ ಜನತೆಯನ್ನು ಬಡವರನ್ನಾಗಿಯೇ ಇಟ್ಟು, ಎಲ್ಲದಕ್ಕೂ ಸರ್ಕಾರವನ್ನೇ ಅವಲಂಬಿಸುವಂತೆ ಮಾಡಿ ಪರಾಧೀನ ಸ್ಥಿತಿಯನ್ನು ಕಾಪಿಟ್ಟುಕೊಳ್ಳಲಾಗುತ್ತದೆ. ತ್ರಿಪುರಾದಲ್ಲಿ ಒಟ್ಟೂ 35 ವರ್ಷಗಳ ಕಾಲ ಆಡಳಿತ ನಡೆಸಿದ ವಾಮಪಂಥದ ಸರ್ಕಾರಗಳು ಮಾಡಿದ್ದು ಇದನ್ನೇ.

ನಿಧಾನವಾಗಿ ಜನರಲ್ಲಿ ಸ್ವಾಭಿಮಾನ ಮರೆತುಹೋಗುವಂತೆ ಮಾಡಲಾಗುತ್ತದೆ. ಅತ್ಯಂತ ಕಡಿಮೆ ಸಂಬಳದಲ್ಲಿ ಜನರು ಬದುಕುವ ಸ್ಥಿತಿಯನ್ನು ಸೃಷ್ಟಿಸಲಾಗುತ್ತದೆ. ನೀವು ನಂಬುತ್ತೀರೋ ಇಲ್ಲವೋ, ತ್ರಿಪುರಾದಲ್ಲಿ 2018ರವರೆಗೂ ಒಬ್ಬ ಕೆಳಹಂತದ ಸರ್ಕಾರೀ ದಿನಗೂಲಿ ನೌಕರ ತಿಂಗಳಿಗೆ ನಾಲ್ಕು ಸಾವಿರಕ್ಕಿಂತಲೂ ಕಡಿಮೆ ಸಂಬಳವನ್ನು ಪಡೆಯುತ್ತಿದ್ದ. ತ್ರಿಪುರಾದಲ್ಲಿ ಬಿಜೆಪಿ ಸರ್ಕಾರ ಬಂದು ಏಳನೆಯ ವೇತನ ಆಯೋಗವನ್ನು ಜಾರಿಗೆ ತರುವ ಮೊದಲು ಅಲ್ಲಿ ರಾಜ್ಯಸರ್ಕಾರದ ನಾಲ್ಕನೇ ವೇತನ ಆಯೋಗವೇ ಚಾಲ್ತಿಯಲ್ಲಿತ್ತು. ಇಡೀ ದೇಶ ಏಳನೆಯ ವೇತನ ಆಯೋಗವನ್ನು ಅನುಭವಿಸುತ್ತಿದ್ದರೆ ತ್ರಿಪುರಾ ಮಾತ್ರ ಇನ್ನೂ ಮೂರು ವೇತನ ಆಯೋಗದಷ್ಟು ಹಿಂದಿತ್ತು. ಅಷ್ಟೇ ಅಲ್ಲ, ಅಲ್ಲಿನ ಜನರಿಗೆ ವೇತನ ವೃದ್ಧಿಗೆ ಹೋರಾಟವನ್ನು ಮಾಡುವ ಇಚ್ಛಾಶಕ್ತಿಯೂ ಮೂಡದಷ್ಟು ವಾಮಪಂಥದವರು ಜನರ ಕೈಕಟ್ಟಿಹಾಕಿದ್ದರು. ಸ್ವತಃ ಮಾಣಿಕ್ ಸರ್ಕಾರ್, ವೇತನ ಹೆಚ್ಚಿದಷ್ಟೂ ಜನರು ದುರ್ವ್ಯಸನಗಳಿಗೆ ಖರ್ಚು ಮಾಡುತ್ತಾರೆ. ಹಾಗಾಗಿ ಕಡಿಮೆ ವೇತನದಲ್ಲಿ ಜೀವನ ನಿರ್ವಹಣೆ ಮಾಡುವುದನ್ನು ಕಲಿಯಬೇಕು ಎಂದು ಹೇಳುತ್ತಿದ್ದರು.

ಕೇಂದ್ರದಲ್ಲಿ ಮೋದಿ ಸರ್ಕಾರ ಬಂದು, ಈಶಾನ್ಯ ರಾಜ್ಯಗಳಿಗೆ ಒತ್ತುಕೊಡುವವರೆಗೂ ತ್ರಿಪುರಾದಲ್ಲಿ ಬ್ರಾಡ್ ಗೇಜ್ ವ್ಯವಸ್ಥೆಯಿರಲಿಲ್ಲ. ಮೊಟ್ಟಮೊದಲಿಗೆ ಬ್ರಾಡ್ ಗೇಜ್ ಬಂದಿದ್ದು ಮೋದಿ ಸರ್ಕಾರ ಬಂದ ಮೇಲೆ. ಅಲ್ಲಿಯವರೆಗೂ ಅಸ್ಸಾಂ ಮೂಲಕ ಭಾರತವನ್ನು ಸಂಪರ್ಕಿಸುತ್ತಿದ್ದ ರಾಷ್ಟ್ರೀಯ ಹೆದ್ದಾರಿ ಒಂದೇ ಒಂದು. ಅದು ಮಳೆಗಾಲದಲ್ಲಿ ವಿಪರೀತ ಪ್ರವಾಹ ಮತ್ತು ಭೂಕುಸಿತಕ್ಕೆ ಒಳಗಾಗಿ ಮುಚ್ಚಿದರೆ ಇಡೀ ರಾಜ್ಯ ಭಾರತದಿಂದಲೇ ಸಂಪರ್ಕವನ್ನು ಕಳೆದುಕೊಳ್ಳಬೇಕಿತ್ತು. ವಾಮಪಂಥದವರು ಇಡೀ ತ್ರಿಪುರಾ ಜನತೆಯನ್ನು ಹೇಗೆ ಇರಿಸಿದ್ದರೆಂದರೆ, ನಿಧಾನವಾಗಿ ತಮ್ಮ ಸಂಸ್ಕೃತಿ ಹಾಗೂ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿರುವುದು ಅವರಿಗೇ ತಿಳಿಯುತ್ತಿರಲಿಲ್ಲ. ಸ್ವತಃ ಮಾಣಿಕ್ ಸರ್ಕಾರ್, ನಾಸ್ತಿಕವಾದದ ಪರವಾಗಿ ಮಾತನಾಡುತ್ತಿದ್ದರು.

ನಿತ್ಯವೂ ಕೇಂದ್ರ ಸರ್ಕಾರದ ವಿರುದ್ಧ ಯಾವುದಾದರೊಂದು ರ‍್ಯಾಲಿಯನ್ನು ಸ್ವಯಂ ಆಡಳಿತಪಕ್ಷವೇ ಹಮ್ಮಿಕೊಳ್ಳುತ್ತಾ ಜನರಲ್ಲಿ ತಮ್ಮ ಸರ್ಕಾರಕ್ಕಿಂತ ಉತ್ತಮವಾದುದು ಯಾವುದೂ ಇಲ್ಲ ಎಂಬ ಭ್ರಮೆಯನ್ನು ಹರಡುತ್ತಿತ್ತು. ಎಲ್ಲ ಅನಿಷ್ಟಗಳಿಗೂ ಕೇಂದ್ರಸರ್ಕಾರವನ್ನು ಮಾತ್ರ ದೂರಲಾಗುತ್ತಿತ್ತು. ಅಲ್ಲಿನ ಹಿಂದೂಗಳನ್ನು ಸ್ಥಳೀಯ ಬುಡಕಟ್ಟು ಜನಾಂಗದ ವಿರುದ್ಧ ನಿರಂತರವಾಗಿ ಎತ್ತಿಕಟ್ಟುತ್ತಾ, ಅವರ ನಡುವೆ ಯಾವತ್ತೂ ದ್ವೇಷದ ಭಾವನೆ ಬರುವಂತೆ ಮಾಡಲಾಗುತ್ತಿತ್ತು. ಅದೇ ಅವರ ಸರ್ಕಾರ ಮತ್ತೆ ಮತ್ತೆ ಅಧಿಕಾರಕ್ಕೆ ಬರಲು ಕಾರಣವೂ ಆಗುತ್ತಿತ್ತು. ನಾನೇ ಎಷ್ಟೋ ಇಂಥ ಜನಾಂಗೀಯ ಗಲಭೆಗಳನ್ನು ನೋಡಿದ್ದೇನೆ. ಕಾರಣವೇ ಇಲ್ಲದೇ ಅಲ್ಲಿ ಹಿಂಸಾಚಾರಗಳು ನಡೆಯುತ್ತಿದ್ದವು. ಅದೆಷ್ಟೋ ಜನರ ಹತ್ಯೆ, ಅತ್ಯಾಚಾರಗಳಾದರೂ ಅವು ಪತ್ರಿಕೆಗಳಲ್ಲಿ ಕೂಡ ಬರದಷ್ಟು ವ್ಯವಸ್ಥಿತವಾಗಿ ಮುಚ್ಚಿಹಾಕಲಾಗುತ್ತಿತ್ತು. 2018ರ ಸಮಯದಲ್ಲಿ ಅಲ್ಲಿನ ಜನತೆ ಯಾವಾಗ ವಾಮಪಂಥದವರ ಇಂಥ ಒಡೆದು ಆಳುವ ನೀತಿಯನ್ನು ಮತ್ತು ಕ್ರೌರ್ಯವನ್ನು ಸಹಿಸಿಕೊಳ್ಳಲಾಗದೇ ಪರಿವರ್ತನೆಗೆ ಮನಸ್ಸು ಮಾಡತೊಡಗಿದರೋ, ಆಗ ಹಿಂಸಾಚಾರ ಇನ್ನಷ್ಟು ತೀವ್ರವಾಯಿತು. ಯಾವ ಮಾಣಿಕ್ ಸರ್ಕಾರ್ ಎಂದರೆ ದೇವರು ಎಂಬಂತೆ ಕಾಣಲಾಗುತ್ತಿತ್ತೋ ಅದೇ ಮಾಣಿಕ್ ಸರ್ಕಾರ್ ಇನ್ನಿಲ್ಲದ ಹಿಂಸಾಚಾರಕ್ಕೆ ಆಸ್ಪದವನ್ನು ಕೊಟ್ಟರು. ಆದರೆ ಅದಾಗಲೇ ಅಸ್ಸಾಂನಲ್ಲಿ ಬೀಸಿದ ಪರಿವರ್ತನೆಯ ಬಿರುಗಾಳಿ ತ್ರಿಪುರಾದ ಮೇಲೂ ಪ್ರಭಾವವನ್ನು ಬೀರಿದ್ದರಿಂದ, ಅಲ್ಲಿ ವಾಮಪಂಥದ ಸರ್ಕಾರ ಕೊನೆಗೊಂಡಿತು. ಉಸಿರುಗಟ್ಟಿಸುವ ವಾತಾವರಣದಿಂದ ತ್ರಿಪುರಾ ಈಗ ಸುಧಾರಿಸಿಕೊಂಡು ಭಾರತದ ಉಳಿದ ಭಾಗಗಳಂತೆಯೇ ನೆಮ್ಮದಿಯ ನಿಟ್ಟುಸಿರು ಬಿಡುತ್ತಾ ಪ್ರಗತಿಯತ್ತ ಹೆಜ್ಜೆ ಹಾಕುತ್ತಿದೆ.

ವಾಮಪಂಥದವರ ಸಿದ್ಧಾಂತವನ್ನು ಕಣಕಣದಲ್ಲೂ ಇಳಿಸಿಕೊಂಡಿರುವ ಪಶ್ಚಿಮ ಬಂಗಾಳ ಮತ್ತು ಈಶಾನ್ಯರಾಜ್ಯದ ಜನತೆಗೆ ಇಂದಿಗೂ ವಾಸ್ತವವನ್ನು ತೆರೆದ ಕಣ್ಣಿನಲ್ಲಿ ನೋಡಿ ಗ್ರಹಿಸಲು ಸಾಧ್ಯವಾಗುತ್ತಿಲ್ಲ. ಅಷ್ಟರ ಮಟ್ಟಿಗೆ ಅವರನ್ನು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಬೌದ್ಧಿಕವಾಗಿ ಹಿಂದುಳಿಯುವಂತೆ ಮಾಡಿ ಬ್ರೈನ್ ವಾಶ್ ಮಾಡಲಾಗಿದೆ. ಅದೇ ಕಾರಣಕ್ಕೆ ಪಶ್ಚಿಮ ಬಂಗಾಳದಲ್ಲಿನ ಹಿಂದೂಗಳಿಗೂ ಕೂಡ ತಮ್ಮ ಮೇಲೆ ಆಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸುವುದಕ್ಕೂ ಧ್ವನಿ ಬರುತ್ತಿರಲಿಲ್ಲ. ಕೊನೆಗೂ ಎಚ್ಚೆತ್ತುಕೊಂಡಿರುವ ಅಲ್ಲಿನ ಜನತೆ ಪರಿವರ್ತನೆಯನ್ನು ಆವಾಹಿಸಿಕೊಂಡಿದೆ. ಗೂಂಡಾರಾಜ್ಯದ ಕರಾಳ ಇತಿಹಾಸ ಬದಲಾಗುವುದಕ್ಕೆ ಸಮಯ ಬೇಕಾಗುತ್ತದೆ. ಅದಕ್ಕಿಂತಲೂ ಹೆಚ್ಚಿನ ಸಮಯ ಬೆಂಗಾಲಿಗಳು ತಮ್ಮ ಸ್ವಂತಿಕೆಯನ್ನು ಮತ್ತೆ ಕಂಡುಕೊಳ್ಳುವುದಕ್ಕೆ ಬೇಕಾಗುತ್ತದೆ. ತಮ್ಮ ಪ್ರಾಚೀನ ಬೌದ್ಧಿಕ, ಭೌತಿಕ, ಸಾಂಸ್ಕೃತಿಕ ವೈಭವವನ್ನೇ ಮರೆತಿರುವ ಬೆಂಗಾಲಿಗಳು, ಇನ್ನು ಮುಂದಾದರೂ ಹೊಸ ದಾರಿಯಲ್ಲಿ ನಡೆದು ಮತ್ತೆ ತಮ್ಮ ವೈಭವವನ್ನು ಪುನಃ ಸ್ಥಾಪಿಸಿಕೊಳ್ಳುವಂತಾಗಲಿ.


ಮೇ 11ರಿಂದ ಮೂಲ ದಾಖಲೆ ಪರಿಶೀಲನೆ: ಎಚ್. ಪ್ರಸನ್ನ

ಬೆಂಗಳೂರು: ಪ್ರಸಕ್ತ ಸಾಲಿನ ಯುಜಿಸಿಇಟಿ ಅರ್ಜಿಯಲ್ಲಿ ಅರ್ಹತಾ ಕಂಡಿಕೆಯಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ಮೇ 11ರಿಂದ 22ರವರೆಗೆ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಇಲ್ಲಿನ ಮಲ್ಲೇಶ್ವರದ ಕೆಇಎ ಕಚೇರಿಯಲ್ಲಿ ನಡೆಯುವ ದಾಖಲೆ ಪರಿಶೀಲನೆಗೆ ಅಭ್ಯರ್ಥಿಗಳು ಬರುವ ಮುನ್ನ ವೆಬ್‌ಸೈಟ್‌ನಲ್ಲಿ ನೀಡಿರುವ ಲಿಂಕ್‌ನಲ್ಲಿ ಸ್ಲಾಟ್‌ಬುಕ್ ಮಾಡಿಕೊಂಡು ಬರಬೇಕು. ಮೇ 7ರಿಂದ ಸ್ಲಾಟ್ ಬುಕ್ ಲಿಂಕ್ ತೆರೆದುಕೊಳ್ಳಲಿದೆ ಎಂದು ತಿಳಿಸಿದ್ದಾರೆ. ದಾಖಲೆ ಪರಿಶೀಲನೆಗೆ ಅಭ್ಯರ್ಥಿಗಳೇ ಬರಬೇಕು. ಅವರ ಪರವಾಗಿ ಬೇರೆಯವರು ಬರುವಂತಿಲ್ಲ. ಪರಿಶೀಲನೆ ವೇಳೆ ಸಲ್ಲಿಸಬೇಕಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಇ-ಮಾಹಿತಿ ಪುಸ್ತಕದಲ್ಲಿ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಸಿಇಟಿ-2026 ಪ್ರವೇಶ ಪತ್ರ ಮತ್ತು ಅರ್ಜಿ, ಗುರುತಿನ ಚೀಟಿ (ಆಧಾರ್ ಕಾರ್ಡ್) 10 ಮತ್ತು 12ನೇ ತರಗತಿಯ ಅಂಕಪಟ್ಟಿ, ವ್ಯಾಸಂಗ ಪ್ರಮಾಣ ಪತ್ರ, ಪೋಷಕರ ಪ್ರಮಾಣ ಪತ್ರ, ಅರ್ಹತಾ ಖಂಡಿಕೆಗೆ ಅನುಗುಣವಾಗಿ ಅವಶ್ಯಕವಿರುವ ಇತರೆ ಎಲ್ಲ ಮೂಲ ದಾಖಲೆ ಹಾಗೂ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ತೆಗೆದುಕೊಂಡು ಬರಬೇಕು ಎಂದು ತಿಳಿಸಿದ್ದಾರೆ. ಪರಿಶೀಲನೆಗೆ ಹಾಜರಾಗಿ ಅರ್ಹತೆ ಪಡೆಯುವ ಅಭ್ಯರ್ಥಿಗಳಿಗೆ ಮಾತ್ರ ಆನ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಹಾಗೂ ಆಪ್ಷನ್ ದಾಖಲಿಸಲು ಅವಕಾಶ ನೀಡಲಾಗುತ್ತದೆ. ವೈ ಅರ್ಹತಾ ಕಂಡಿಕೆಯ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗೆ ಹಾಜರಾಗಬೇಕಿಲ್ಲ ಎಂದು ತಿಳಿಸಿದ್ದಾರೆ.

ರಾಮ ಬಾಣ



ತೀವ್ರ ಕಾಯಿಲೆವುಳ್ಳವರಿಗೆ ಪ್ಯಾಲಿಯೇಟಿವ್ ಕೇರ್ ಕೇಂದ್ರ ಸಹಕಾರಿ: ಸಚಿವ ದಿನೇಶ್

ಬೆಂಗಳೂರು: ಮಾರಣಾಂತಿಕ ಅಥವಾ ತೀವ್ರವಾದ ಕಾಯಿಲೆಗಳಿಂದ ಬಳಲುತ್ತ, ಅಂತಿಮ ಹಂತದಲ್ಲಿರುವ ರೋಗಿಗಳಿಗೆ ಪ್ಯಾಲಿಯೇಟಿವ್ ಕೇರ್ ಕೇಂದ್ರ ಅನುಕೂಲವಾಗಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.



ಸರನಂ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಮಲ್ಲೇಶ್ವರ ಕೆಸಿ ಜನರಲ್ ಆಸ್ಪತ್ರೆಯಲ್ಲಿ ಪ್ಯಾಲಿಯೇಟಿವ್ ಕೇರ್ ಯುನಿಟ್ ಉದ್ಘಾಟನೆ ಮಾಡಿದ ಅವರು, ಕೆಸಿ ಜನರಲ್ ಆಸ್ಪತ್ರೆಯಲ್ಲಿ ಪ್ರಾಥಮಿಕವಾಗಿ ಐದು ಬೆಡ್‌ಗಳ ಒಂದು ವಾರ್ಡ್ ನಿರ್ಮಾಣ ಮಾಡಿದ್ದೇವೆ. ಮಾರಣಾಂತಿಕ ಅಥವಾ ತೀವ್ರವಾದ ಕಾಯಿಲೆಗಳಿಂದ ಬಳಲುತ್ತ, ಅಂತಿಮ ಹಂತದಲ್ಲಿರುವ ರೋಗಿಗಳಿಗೆ ಇದು ವಿಶೇಷ ಯೂನಿಟ್ ಆಗಿದೆ. ಕ್ಯಾನ್ಸರ್, ಕಿಡ್ನಿ ವೈಫಲ್ಯ ಸೇರಿದಂತೆ ಇತರ ರೋಗಿಗಳ ಆರೈಕೆಗೆ ಈ ವಾರ್ಡ್ ಸಹಾಯಕವಾಗಿದೆ. ತೀವ್ರವಾದ ನೋವು, ಉಸಿರಾಟ ತೊಂದರೆ, ನರ ಸಂಬಂಧಿ ಕಾಯಿಲೆಯಿಂದ ಬಳಲುವವರು, ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವವರಿಗೆ ಈ ಕೇಂದ್ರ ಅನುಕೂಲವಾಗಿದೆ ಎಂದರು.

ಶಿಥಿಲ ಆಸ್ಪತ್ರೆ ಕಟ್ಟಡಗಳ ವರದಿ ಸಲ್ಲಿಕೆಗೆ ಸುತ್ತೋಲೆ

ಬೆಂಗಳೂರು: ರಾಜ್ಯದಲ್ಲಿ ಅಕಾಲಿಕ ಮಳೆ ಮತ್ತು ಬಿರುಗಾಳಿಯಿಂದ ಶಿಥಿಲಗೊಂಡಿರುವ ಆಸ್ಪತ್ರೆ ಕಟ್ಟಡಗಳಿಂದ ಅವಘಡ ಸಂಭವಿಸದಂತೆ ತಡೆಯಲು ಎಲ್ಲಾ ಜಿಲ್ಲೆಗಳ ಹಳೆಯ ಸರ್ಕಾರಿ ಆಸ್ಪತ್ರೆ ಕಟ್ಟಡಗಳನ್ನು ಕೂಡಲೇ ಪರಿಶೀಲಿಸಿ 15 ದಿನದೊಳಗೆ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿಯವರು ಸುತ್ತೋಲೆ ಹೊರಡಿಸಿದೆ. ಡಿಎಚ್‌ಒ, ಟಿಎಚ್‌ಒ ಮತ್ತು ತಾಲೂಕಾ ನೋಡಲ್ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಸಬ್ ಸೆಂಟರ್, ಪಿಎಚ್‌ಸಿ, ಸಿಎಚ್‌ಸಿ, ತಾಲೂಕು ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಗಳಿಗೆ ಭೇಟಿ ನೀಡಬೇಕು. ಶಿಥಿಲಾವಸ್ಥೆಯಲ್ಲಿರುವ ಕಟ್ಟಡ ಅಥವಾ ವಾರ್ಡ್‌ನಲ್ಲಿರುವ ರೋಗಿಗಳನ್ನು ತಕ್ಷಣ ಸುರಕ್ಷಿತ ಕಟ್ಟಡಕ್ಕೆ ಸ್ಥಳಾಂತರಿಸಬೇಕು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಬಂಗಾಳದಲ್ಲಿ ಮಮತಾ ಗರ್ವಭಂಗ
– ಪತ್ರಿಕೆಯಲ್ಲಿ ಚುನಾವಣಾ ವರದಿಯ ಶೀರ್ಷಿಕೆ
– ಇತಿಹಾಸ ಮರುಕಳಿಸುತ್ತದೆ ಎಂಬ ಮಾತು ಎಂದಿಗೂ ಸುಳ್ಳಲ್ಲ. ಯಕ್ಷಗಾನ ಪ್ರದರ್ಶನದಲ್ಲಿ ನೋಡಿದ ತಾಟಕೀ ಸಂಹಾರ, ರಾವಣ ಗರ್ವಭಂಗ ಪ್ರಸಂಗ ನೆನಪಾಗುತ್ತೆ!

ದಿನ ಭವಿಷ್ಯ

ಮೇಷ
ಸಮಸ್ಯೆ ಪರಿಹಾರ. ಚಿಂತೆ ನಿವಾರಣೆ. ಧನಲಾಭ. ಪ್ರೀತಿಯಲ್ಲಿ ಗುಣಾತ್ಮಕ ಬೆಳವಣಿಗೆ. ಒಟ್ಟಲ್ಲಿ ಈ ದಿನ ನಿಮಗೆ ಪ್ರಗತಿದಾಯಕ.

ವೃಷಭ
ಕುಟುಂಬದ ಹಿತಾಸಕ್ತಿ ಆದ್ಯತೆ ಪಡೆಯಲಿದೆ. ಉದ್ಯೋಗ ಅರಸುವವರಿಗೆ ಶುಭ ಬೆಳವಣಿಗೆ. ಮಾನಸಿಕ ದುಗುಡ ನಿವಾರಣೆ.

ಮಿಥುನ
ಫಲಪ್ರದ ದಿನ. ನಿರೀಕ್ಷೆಗಿಂತ ಹೆಚ್ಚು ಗಳಿಕೆ. ಆಪ್ತರ ಜತೆಗಿನ ಸಂಬಂಧ ಸುಧಾರಣೆ. ಆದರೂ ನಿಮ್ಮ ಮನದಲ್ಲಿ ಏನೋ ಕೊರಗು, ಗೊಂದಲ.

ಕಟಕ
ನಿಮ್ಮ ಒಳ್ಳೆತನ ದುರುಪಯೋಗ ಮಾಡಲು ಇತರರಿಗೆ ಅವಕಾಶ ಕೊಡಬೇಡಿ. ಕೆಲ ವಿಷಯಗಳಲ್ಲಿ ಕಠಿಣ ಧೋರಣೆ ಬೇಕಾದೀತು.

ಸಿಂಹ
ವೃತ್ತಿಯಲ್ಲಿ ಮೇಲಿನವರ ಬೆಂಬಲ. ಒತ್ತಡ ನಿವಾರಣೆ. ಮನೆಯಲ್ಲಿ ಹಿರಿಯರ ಆರೋಗ್ಯ ಕಳವಳಕ್ಕೆ ಕಾರಣವಾಗಬಹುದು.

ಕನ್ಯಾ
ವಿರಳಿತ ಎರಡನ್ನೂ ಇಂದು ಅನುಭವಿಸುವಿರಿ. ವೃತ್ತಿಯಲ್ಲಿ ಏಳಿಗೆ. ಖಾಸಗಿ ಬದುಕಲ್ಲಿ ಬೇಸರದ ಬೆಳವಣಿಗೆ. ಹತ್ತವರ ಕಾಳಜಿ ವಹಿಸಿರಿ.

ತುಲಾ
ಅನಿರೀಕ್ಷಿತ ಧನಪ್ರಾಪ್ತಿ. ಆಪ್ತರ ಜತೆ ಪ್ರವಾಸದ ಸಾಧ್ಯತೆ. ಆರೋಗ್ಯದ ಕಡೆ ಹೆಚ್ಚು ಗಮನ ನೀಡಿ. ಬಂಧು ಜತೆ ಕಲಹವಾದೀತು.

ವೃಶ್ಚಿಕ
ವೈಯಕ್ತಿಕ ಬದುಕಲ್ಲಿ ಬಯಸದ ಬದಲಾವಣೆ ಉಂಟಾದೀತು. ಬೇಸರ ಪಡದಿರಿ. ಹೊಂದಿಕೊಂಡು ಮುನ್ನಡೆಯಿರಿ. ಆರ್ಥಿಕ ಒತ್ತಡ ಹೆಚ್ಚಲಿದೆ.

ಧನು
ಸಮಸ್ಯೆ ಪರಿಹಾರಕ್ಕೆ ಅನ್ಯರ ನೆರವು ಪಡೆಯಲು ಹಿಂಜರಿಕೆ ಬೇಡ. ವ್ಯವಹಾರದಲ್ಲಿ ಪ್ರಗತಿ. ಅಪಥ್ಯ ಆಹಾರ ಸೇವನೆ ಹೊಟ್ಟೆ ಕೆಡಿಸಬಹುದು.

ಮಕರ
ವ್ಯವಹಾರದಲ್ಲಿ ಕೆಲವು ವಿಷಯ ಚಿಂತೆಗೆ ಕಾರಣವಾದೀತು. ಸಮಸ್ಯೆಗೆ ಪರಿಹಾರ ಕೂಡಾ ನಿಮ್ಮ ಬಳಿಯೇ ಇದೆ. ಆತಂಕ ಬೇಡ.

ಕುಂಭ
ಎಲ್ಲ ವಿಧದಲ್ಲೂ ಇಂದು ನಿಮಗೆ ಯಶಸ್ವಿ ದಿನ. ವೃತ್ತಿಯಲ್ಲಿ, ಕೌಟುಂಬಿಕವಾಗಿ ನಿಮಗೆ ಪೂರಕ ಬೆಳವಣಿಗೆ. ಸಮಸ್ಯೆ ಪರಿಹಾರ.

ಮೀನ
ದಿನದ ಆರಂಭ ಕಷ್ಟಕರವಾಗಲಿದೆ. ವೃತ್ತಿ ಮತ್ತು ಕುಟುಂಬದ ಮಧ್ಯೆ ಸಮತೋಲನ ಸಾಧಿಸಿ. ದಿನದಂತ್ಯಕ್ಕೆ ಮಾನಸಿಕ ನಿರಾಳತೆ ಸಿಗಲಿದೆ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 7,0,6,1

ಮುಖ್ಯಮಂತ್ರಿಗಳ ಹೇಳಿಕೆಗೆ ಛಲವಾದಿ ನಾರಾಯಣಸ್ವಾಮಿ ಪ್ರತಿಕ್ರಿಯೆ

ಕೋರ್ಟ್ ಆದೇಶವನ್ನು ಅವಮಾನಿಸುವುದು ಸಲ್ಲ

ಬೆಂಗಳೂರು: ನ್ಯಾಯಾಂಗದ ಆದೇಶವನ್ನೇ ಡಕಾಯಿತಿ ಎಂದು ಕರೆಯುವುದು ನೈತಿಕ ಪತನದ ಪರಮಾವಧಿಯಲ್ಲವೇ? ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಗೆ ಸಾಮಾಜಿಕ ಜಾಲತಾಣದಲ್ಲಿ ಅವರು ಪ್ರತಿಕ್ರಿಯಿಸಿದ್ದಾರೆ. ಕಲ್ಲುಸಕ್ಕರೆ ಕೊಳ್ಳಿರೋ ನೀವೆಲ್ಲ ಇಪ್ಪದೀ ಜಗತ್ತು... ಎಂಬ ದಾಸವರೇಣ್ಯರ ಮಾತಿನ ಅರ್ಥದಂತೆ, ಮೇಲ್ನೋಟಕ್ಕೆ ಸಂವಿಧಾನದ ರಕ್ಷಕರಂತೆ ನಟಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿಜಸ್ವರೂಪ ಮತ್ತೊಮ್ಮೆ ಬಯಲಾಗಿದೆ. ಶೃಂಗೇರಿ ವಿಧಾನಸಭಾ ಕ್ಷೇತ್ರದ ಮತಗಳ ಮರುಎಣಿಕೆ ಕುರಿತು ಹೈಕೋರ್ಟ್ ನೀಡಿದ ಆದೇಶವನ್ನು ಡಕಾಯಿತಿ ಎಂದು ಕರೆಯುವ ಮೂಲಕ ಅವರು ಕೇವಲ ನ್ಯಾಯಾಂಗವನ್ನಷ್ಟೇ ಅಲ್ಲ, ಸಂವಿಧಾನದ ಆಶಯವನ್ನೇ ಅವಮಾನಿಸಿದ್ದಾರೆ ಎಂದಿದ್ದಾರೆ.

ಶೃಂಗೇರಿಯಲ್ಲಿ ಕಳೆದ ಮೂರು ವರ್ಷಗಳಿಂದ ಕಾಂಗ್ರೆಸ್ ಶಾಸಕರು ನಡೆಸುತ್ತಿರುವ ಆಡಳಿತ ಜನರ ನೈಜ ತೀರ್ಪಿನ ಪ್ರತಿಫಲವೋ, ಅಥವಾ ವೋಟ್ ಚೋರಿಯ ಫಲವೋ ಎಂಬ ಪ್ರಶ್ನೆಗೆ ಮರುಎಣಿಕೆಯ ಪ್ರಕ್ರಿಯೆಯೇ ಉತ್ತರ ನೀಡಿದೆ. ಅಕ್ರಮದ ಅಡಿಪಾಯದ ಮೇಲೆ ನಿರ್ಮಿತವಾದ ಅಧಿಕಾರಕ್ಕೆ, ನ್ಯಾಯಾಲಯದ ಪಾರದರ್ಶಕ ಕ್ರಮ ಈಗ ಡಕಾಯಿತಿಯಂತೆ ಕಾಣುತ್ತಿರುವುದು ನೈತಿಕ ದಿವಾಳಿತನದ ಸೂಚಕವಾಗಿದೆ ಎಂದರೆ ತಪ್ಪಾಗಲಾರದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಒಮ್ಮೆ ಇವಿಎಂ ಹ್ಯಾಕಿಂಗ್ ಎಂದು ಆರೋಪ, ಮತ್ತೊಮ್ಮೆ ವೋಟ್ ಚೋರಿ ಎಂಬ ಪ್ರಚಾರ; ಈಗ ನ್ಯಾಯಾಲಯದ ತೀರ್ಪನ್ನೇ ಹೀಯಾಳಿಸುವ ಪ್ರವೃತ್ತಿ ಬಣ್ಣ ಬದಲಾಯಿಸುವಂತೆ ಕಾಣುವ ಇಂತಹ ನಿಲುವುಗಳನ್ನು ಕರ್ನಾಟಕದ ಜನತೆ ಗಮನಿಸುತ್ತಿದ್ದಾರೆ. ಕಾನೂನು ಪದವೀಧರರಾಗಿ ಈ ರೀತಿಯ ಹೇಳಿಕೆ ನೀಡುವುದು ನ್ಯಾಯದ ದಾರಿಯನ್ನು ತಪ್ಪಿಸುವ ನಿಮ್ಮ ವಿಫಲ ಪ್ರಯತ್ನ ಮಾತ್ರ. ಹಳೆಯ ಸುಳ್ಳುಗಳನ್ನು ಮರುಕಳಿಸಿ ಜನರನ್ನು ತಪ್ಪುದಾರಿಗೆಳೆಯುವ ಯತ್ನ ಇನ್ನು ಮುಂದೆ ಫಲಿಸುವುದಿಲ್ಲ ಎಂಬುದಕ್ಕೆ ಇತ್ತೀಚಿನ ವಿವಿಧ ರಾಜ್ಯಗಳ ರಾಜಕೀಯ ಬೆಳವಣಿಗೆಗಳೇ ಇದಕ್ಕೆ ಸಾಕ್ಷಿಯಾಗಿವೆ ಎಂದು ಹೇಳಿದ್ದಾರೆ.

ಮುಖ್ಯಮಂತ್ರಿಗಳೇ ನೆನಪಿರಲಿ, ಇದು ಡಕಾಯಿತಿ ಅಲ್ಲ, ಜನರ ತೀರ್ಪನ್ನು ಹತ್ತಿಕ್ಕಿದ ಅಕ್ರಮದ ವಿರುದ್ಧ ನ್ಯಾಯಾಲಯ ನೀಡಿದ ಎಚ್ಚರಿಕೆಯಾಗಿದೆ. ಶೃಂಗೇರಿಯ ಮತದಾರರ ತೀರ್ಪಿಗೆ ಕೊನೆಗೂ ನ್ಯಾಯ ದೊರಕಿದೆ. ನ್ಯಾಯಕ್ಕೆ ಜಯವಾಗಿದೆ, ಅನ್ಯಾಯಕ್ಕೆ ಸೋಲಾಗಿದೆ ಎಂದು ಛಲವಾದಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

ಕೈಯಲ್ಲಿ ಹಿಡಿವ ಸಂವಿಧಾನ ಗೌರವಿಸುವುದಿಲ್ಲವೇ?



ಹೈಕೋರ್ಟ್ ಆದೇಶದಂತೆ ನಡೆಯುವ ಕಾನೂನುಬದ್ಧ ಪ್ರಕ್ರಿಯೆಯನ್ನು ಡಕಾಯಿತಿ ಎಂದು ಕರೆಯಲು ನಿಮಗೆ ಹೇಗೆ ಧೈರ್ಯ ಬಂತು? ಇದು ನ್ಯಾಯಾಂಗದ ನಿಂದನೆಯಲ್ಲವೇ? ಮರುಎಣಿಕೆ ಎಂದಾಕ್ಷಣ ಕಾಂಗ್ರೆಸ್ ಪಾಳೆಯದಲ್ಲಿ ಕಾಣಿಸುತ್ತಿರುವ ಆತಂಕ ಏನನ್ನು ಸೂಚಿಸುತ್ತದೆ? ಪಾರದರ್ಶಕತೆಯಿಂದ ಭಯಪಡುತ್ತಿರುವುದು ಅಕ್ರಮ ಬಯಲಾಗುವ ಆತಂಕದಿಂದಲ್ಲವೇ? ಕೈಯಲ್ಲಿ ಸಂವಿಧಾನದ ಪ್ರತಿಯನ್ನು ಹಿಡಿದು ನಡೆಯುವ ನಿಮ್ಮ ನಾಯಕರು, ವಿಶೇಷವಾಗಿ ರಾಹುಲ್ ಗಾಂಧಿ ಅದೇ ಸಂವಿಧಾನ ನೀಡಿದ ನ್ಯಾಯಾಂಗದ ಅಧಿಕಾರವನ್ನು ಗೌರವಿಸುತ್ತಾರೆಯೇ? ಎಂದು ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ.

ಗೆದ್ದವರಿಗೆ ಗೌರವ ಕೊಡಿ: ಅಶೋಕ

ಪುಟ 1➜ತಮಿಳುನಾಡಿನಲ್ಲಿ ಚಿತ್ರನಟ ವಿಜಯ್ ದಿಢೀರ್ ಆಗಿ ಹೆಚ್ಚು ಸ್ಥಾನ ಪಡೆದರೂ ಅವರಿಗೆ ಬಹುಮತ ಸಿಕ್ಕಿಲ್ಲ. ಕಾಂಗ್ರೆಸ್ಸಿನವರು ಎಲ್ಲಿ ಊಟ ಚೆನ್ನಾಗಿ ಸಿಗುತ್ತದೋ ಅಲ್ಲಿಗೆ ಓಡಿ ಹೋಗುತ್ತಾರೆ. ಅವರಿಗೆ ನೀತಿ, ನಿಯತ್ತು, ನ್ಯಾಯ, ಧರ್ಮ ಏನೂ ಇಲ್ಲ. ಇಷ್ಟು ದಿನ ನಮ್ಮ ಡಿಎಂಕೆ ಎಂದು ಹಾಡಿ ಹೊಗಳಿದರು. ಈಗ ಕಾಂಗ್ರೆಸ್ಸಿನ ತ.ನಾಡು ಘಟಕವು ವಿಜಯ್‌ಗೆ ಬೆಂಬಲ ನೀಡಬೇಕೆಂದು ತೀರ್ಮಾನಿಸಿದೆ. ಇವರಿಗೆ ನಾಚಿಕೆ ಆಗಬೇಕು ಎಂದು ಟೀಕಿಸಿದರು.

ಇಂಡಿ ಒಕ್ಕೂಟವು ಕಳ್ಳರ ಒಕ್ಕೂಟ ದಂತೆ. ಕಾಂಗ್ರೆಸ್ಸಿನವರನ್ನು ನಂಬಬೇಡಿ ಎಂದು ಮೋದಿ ಅವರು ಬಹಳ ದಿನಗಳಿಂದ ಹೇಳುತ್ತಿದ್ದಾರೆ. ತಮಿಳುನಾಡಿನ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ, ಕಾಂಗ್ರೆಸ್ ಪಕ್ಷವು ಡಿಎಂಕೆಗೆ ಕೈಕೊಡುವುದು ಸ್ಪಷ್ಟವಾಗಿದೆ. ಕಾಂಗ್ರೆಸ್ಸಿನ ಚಿಹ್ನೆ ಕೈ ಎಂಬುದು ಕೈಕೊಡುವ ಗುರುತು. ಇವತ್ತು ಡಿಎಂಕೆಗೆ ಕೈಕೊಡುವ ಗುರುತನ್ನು ತೋರಿಸಲಿದ್ದಾರೆ. ಕಾಂಗ್ರೆಸ್ಸಿಗೆ ಸಿದ್ಧಾಂತ, ನ್ಯಾಯ ನೀತಿ ಇಲ್ಲ; ಗೆದ್ದೆತ್ತಿನ ಬಾಲ ಹಿಡಿಯುವುದೇ ಕಾಂಗ್ರೆಸ್ಸಿನ ಧರ್ಮ ಎಂದು ಆರೋಪಿಸಿದರು. ಚಿನ್ನ, ಗ್ಯಾಸ್, ಸೀರೆ, ಓಲೆ ಕೊಡುವುದಾಗಿ ಹೇಳಿದ್ದಾರೆ. ಒಂದು ವರ್ಷ ಬಿಡಿ. ಏನೆಲ್ಲ ಕೊಡುತ್ತಾರೆ ನೋಡೋಣ.

ವಿಜಯ್ ಅವರ ಸರ್ಕಾರಕ್ಕೆ ಎಲ್ಲಿಂದ ಬೆಂಬಲ ಸಿಗಲಿದೆ? ಕಾಂಗ್ರೆಸ್ಸಿನವರು ಅವರಿಗೆ ಯಾವ ರೀತಿ ಬೆಂಬಲ ನೀಡುತ್ತಾರೆಂದು ನೋಡೋಣ ಎಂದು ಪ್ರಶ್ನೆಗೆ ಉತ್ತರ ನೀಡಿದರು. ಹಿಂದುತ್ವ ತೊಲಗಲಿ ಎಂದು ಹೇಳಿದ ಡಿಎಂಕೆ ನಾಯಕರು ಸೋತಿದ್ದಾರೆ. ಹಿಂದುತ್ವದ ವಿಚಾರಕ್ಕೆ ಬಂದರೆ ಯಾವ ಗತಿ ಆಗುತ್ತದೆ ಎಂಬುದು ಸ್ಟಾಲಿನ್ ಮತ್ತವರ ಸುಪುತ್ರನಿಗೆ ತಮಿಳು ನಾಡಿನ ಜನರು ತೋರಿಸಿದ್ದಾರೆ ಎಂದು ಹೇಳಿದರು.

ಅಭಿಮಾನೋತ್ಸವಕ್ಕೆ 10 ಲಕ್ಷ ಜನ

ಪುಟ 1➜ರಾಜ್ಯದಲ್ಲಿ ಬಿಜೆಪಿ ಸರ್ಕಾರ ತರುವಲ್ಲಿ ಯಡಿಯೂರಪ್ಪ ಅವರ ಶ್ರಮ ಅಪಾರ. ಈ ಸಮಾವೇಶದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಹಾಗೂ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಈ ಬೃಹತ್ ಸಮಾವೇಶಕ್ಕೆ ರಾಜ್ಯಾದ್ಯಂತ ಸುಮಾರು 10 ಲಕ್ಷ ಜನ ಸೇರುವ ನಿರೀಕ್ಷೆಯಿದ್ದು, ಬೆಳಗಾವಿ ಜಿಲ್ಲೆಯಿಂದಲೇ 20 ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಅನಿಲ ಬೆನಕೆ, ಮಾಜಿ ಸಂಸದೆ ಮಂಗಲಾ ಅಂಗಡಿ, ಮಾಜಿ ಶಾಸಕ ಸಂಜಯ ಪಾಟೀಲ್, ಮಾಜಿ ಎಂಎಲ್‌ಸಿ ಮಹಾಂತೇಶ ಕವಟಗಿಮಠ, ಬಿಜೆಪಿ ನಗರಾಧ್ಯಕ್ಷೆ ಗೀತಾ ಸುತಾರ್ ಮೊದಲಾದವರಿದ್ದರು.

ಗಾದಿ ಬಿಡದ ದೀದಿ

ಪುಟ 1➜**ರಾಜೀನಾಮೆ ಪ್ರಶ್ನೆಯೇ ಉದ್ಭವಿಸಲ್ಲ...:** ನಾವು ಬಿಜೆಪಿ ವಿರುದ್ಧ ಹೋರಾಡಿಲ್ಲ, ಬದಲಾಗಿ ಬಿಜೆಪಿಗಾಗಿ ದುಡಿದ ಚುನಾವಣಾ ಆಯೋಗ ವಿರುದ್ಧ ಹೋರಾಡಿದ್ದೇವೆ ಎಂದು ಮಮತಾ ಬ್ಯಾನರ್ಜಿ ಟೀಕಿಸಿದ್ದಾರೆ. ಇವರ ಆರೋಪಗಳನ್ನು ಸಮರ್ಥಿಸಿರುವ ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ, ಕಳೆದ ಮೂರು ತಿಂಗಳಿಂದ ರಾಜ್ಯದಲ್ಲಿ ನೀತಿಸಂಹಿತೆ ಜಾರಿಯಲ್ಲಿದೆ. ಹಾಗಿರುವಾಗ ಸರಕಾರ ನಡೆಸಿದ್ದು ಯಾರು? ಸರಕಾರದ ಮುಖ್ಯ ಕಾರ್ಯದರ್ಶಿಗಳು. ಮೂರು ತಿಂಗಳಿಂದ ಆಕೆ ಮುಖ್ಯಮಂತ್ರಿಯಾಗಿ ದುಡಿದಿಲ್ಲ. ಹೀಗಿರುವಾಗ ಮಮತಾ ರಾಜೀನಾಮೆ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಚಾಣಾಕ್ಷ ಹೇಳಿಕೆ ನೀಡಿದ್ದಾರೆ.

ಸತ್ಯಶೋಧನಾ ಸಮಿತಿ: ರಾಜ್ಯಾದ್ಯಂತ ಚುನಾವಣಾ ನಂತರ ಹಿಂಸಾಚಾರ ನಡೆದಿರುವ ಪ್ರದೇಶಗಳಿಗೆ ಭೇಟಿ ಕೊಡಲು ನಾವು ಹತ್ತು ಸದಸ್ಯರ ಸತ್ಯಶೋಧನಾ ಸಮಿತಿ ರಚಿಸಲಿದ್ದೇವೆ ಎಂದು ಮಮತಾ ಇದೇ ಸಂದರ್ಭ ಘೋಷಿಸಿದರು. ರಾಜರ್‌ಹಟ್ ಕ್ಷೇತ್ರದ ಮರುಎಣಿಕೆಯಲ್ಲಿ ವಿಜಯ ಸಹಿತ 294 ಸದಸ್ಯ ಬಲದ ವಿಧಾನಸಭೆಯಲ್ಲಿ ಬಿಜೆಪಿ ಬರೋಬ್ಬರಿ 207 ಸ್ಥಾನಗಳನ್ನು ಅಭೂತಪೂರ್ವವಾಗಿ ಗೆದ್ದು, ಟಿಎಂಸಿಯ 15 ವರ್ಷಗಳ ಸುದೀರ್ಘ ಅರಾಜಕ ಯುಗಕ್ಕೆ ಅಂತ್ಯ ಹಾಡಿರುವ ಚಾರಿತ್ರಿಕ ವಿದ್ಯಮಾನದ ಮಧ್ಯೆ, ನಿಕಟಪೂರ್ವ ಸಿಎಂ ಮಮತಾ ಈ ರೀತಿ ಹೇಳಿಕೆ ನೀಡಿದ್ದಾರೆ. ಪ್ರಸಕ್ತ ವಿಧಾನಸಭೆಯ ಅವಧಿ ಮೇ ಆರರಂದು ಮುಕ್ತಾಯವಾಗಲಿದೆ. ಸಹಜವಾಗಿಯೇ ಜನರ ಗಮನವೀಗ ಸರಕಾರ ರಚನೆಯತ್ತ ಹೊರಳಿದೆ. ಬಿಜೆಪಿಯ ವಿಜೇತ ಅಭ್ಯರ್ಥಿಗಳ ಪ್ರಮಾಣವಚನ ಸ್ವೀಕಾರ ಸಮಾರಂಭ ಮೇ 9ರಂದು, ಶ್ರೇಷ್ಠ ಕವಿ ರವೀಂದ್ರನಾಥ ಠಾಗೋರ್ ಜನುಮ ದಿನದಂದೇ ನಡೆಯುವ ಸಾಧ್ಯತೆಗಳಿದ್ದು, ಈ ಬಗ್ಗೆ ಅಧಿಕೃತ ಘೋಷಣೆಯಷ್ಟೇ ಬಾಕಿಯಿದೆ.

ಮುಖ್ಯಮಂತ್ರಿ ಕುರ್ಚಿಯಿಂದ ಮಮತಾ ಇಳಿಯಲೇಬೇಕು

ಪುಟ 1➜**ಬಹುಮತ ಹೊಂದಿರುವ ಬಿಜೆಪಿಯು ಸರಕಾರ ರಚನೆಗೆ ಹಕ್ಕು ಮಂಡಿಸಲಿದೆ. ರಾಜ್ಯಪಾಲರು ಪ್ರಮಾಣವಚನ ಸ್ವೀಕರಿಸುವಂತೆ ಪಕ್ಷ ನಾಯಕರನ್ನು ಆಹ್ವಾನಿಸುವರು. ತಾನು ರಾಜೀನಾಮೆ ನೀಡಲ್ಲ ಎಂದು ದೀದಿ ಘೋಷಿಸಿದರೂ, ಪ್ರಜಾಸತ್ತೆಗೆ ತೀರಾ ವಿರುದ್ಧವಾದ ಈ ನಿಲುವಿಗೆ ಮೊಂಡುತನದಿಂದ ಅಂಟಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ ಎಂದು ರಾಜಕೀಯ ಪಡಸಾಲೆಯಲ್ಲಿ ತೀವ್ರ ಚರ್ಚೆಗಳಾಗುತ್ತಿವೆ.**

ಎರಡು ವಿಭಿನ್ನ ಕ್ಷೇತ್ರಗಳಿಂದ ಸತತ ಎರಡು ಬಾರಿ ಹಾಲಿ ಮುಖ್ಯಮಂತ್ರಿ ಮಣಿಸಿದ ಸುವೇಂದು!

ಪುಟ 1➜ಮಮತಾ ಬ್ಯಾನರ್ಜಿಗೆ ಈ ಸೋಲನ್ನು ಜೀರ್ಣಿಸಿಕೊಳ್ಳುವುದು ಕಷ್ಟವಾಗಿದೆ. ತಮ್ಮ ಈ ಗೆಲುವು ಮಮತಾರ ರಾಜಕೀಯ ನಿವೃತ್ತಿ ಎಂದು ಸುವೇಂದು ಹೇಳಿದ್ದಾರೆ. ಜೈಂಟ್ ಸ್ಲೇಯರ್ (ದೊಡ್ಡವರನ್ನು ಮಣಿಸುವ) ಹೆಸರಿನಿಂದ ಕರೆಯಲ್ಪಡುವ ಬಿಜೆಪಿ ನಾಯಕ 15 ವರ್ಷಗಳ ಟಿಎಂಸಿ ಪಾರುಪತ್ಯಕ್ಕೆ ಮಂಗಳ ಹಾಡಿದ್ದು, ಮೊದಲ ಬಾರಿಗೆ ಬಂಗಾಳದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದಿದ್ದಾರೆ.

ಹಿಂಸಾಚಾರ: ನಾಲ್ವರ ಬಲಿ

ಪುಟ 1➜**ನಾರ್ತ್ 24 ಪರ್ಗಾನಸ್ ಮತ್ತು ಉದಯನಾರಾಯಣಪುರ್‌ನಲ್ಲಿ ಇಬ್ಬರು ಬಿಜೆಪಿ ಕಾರ್ಯಕರ್ತರು ಮೃತಪಟ್ಟಿದ್ದಾರೆ. ಬೆಲೆಘಾಟಾ ಮತ್ತು ನಾನೂರ್‌ನಲ್ಲಿ ಇಬ್ಬರು ಟಿಎಂಸಿ ಕಾರ್ಯಕರ್ತರು ಬಲಿಯಾಗಿದ್ದಾರೆ.**

21 ವರ್ಷ ಬಳಿಕ ತೆರೆದ ದುರ್ಗಾ ದೇವಸ್ಥಾನ!

ಪುಟ 1➜ಹಲವು ವರ್ಷಗಳಿಂದ ದೇವಸ್ಥಾನ ಮುಚ್ಚಿರಲು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹಿಂದು ವಿರೋಧಿ ಆಡಳಿತವೇ ಕಾರಣವೆಂದು ದೇಗುಲ ಆಡಳಿತ ಸಮಿತಿಯ ಸದಸ್ಯ ಮತ್ತು ಬಿಜೆಪಿ ನಾಯಕ ನೀಲು ಚಕ್ರವರ್ತಿ ಆರೋಪಿಸಿದ್ದಾರೆ.

ಬಿಜೆಪಿ ಪ್ರಣಾಳಿಕೆಯಲ್ಲೇನಿತ್ತು?

ಬಿಜೆಪಿ ಸರಕಾರ ರಚಿಸಿದ ನಂತರ, ಸ್ಥಗಿತಗೊಂಡಿರುವ ಇವೆಲ್ಲಾ ಯೋಜನೆಗಳಿಗೆ ಜೀವಕಳೆ ಸಿಗಲಿದೆ. ಕೇಂದ್ರ-ರಾಜ್ಯಗಳಲ್ಲಿ ಬಿಜೆಪಿ ಸರಕಾರವಿರುವಾಗ, ಸಹಕಾರಕ್ಕೆ ಸಂಬಂಧಿತ ಹಗ್ಗಜಗ್ಗಾಟ ಸಹಜವಾಗಿಯೇ ಇರುವುದಿಲ್ಲ. ಭೂಸ್ವಾಧೀನ ಪ್ರಕ್ರಿಯೆಗಳಿಗೆ ಆದ್ಯತೆ ನೀಡುವುದರಿಂದ ಗಡಿಯಲ್ಲಿ ತಂತಿಬೇಲಿ ನಿರ್ಮಾಣ ಸಮರೋಪಾದಿಯಲ್ಲಿ ಪೂರ್ತಿಯಾಗಲಿದೆ. ಬಿಜೆಪಿ ಸರಕಾರ ರಚನೆಯಾದ ಬೆನ್ನಲ್ಲೇ ಕೇವಲ 45 ದಿನಗಳೊಳಗೆ ಬಂಗಾಳದ ಅಂತಾರಾಷ್ಟ್ರೀಯ ಗಡಿಗೆ ತಂತಿಬೇಲಿ ಬಿಗಿಯಲಾಗುವುದು ಎಂದು ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿದೆ. ಗಡಿಯಾಚೆಯಿಂದ ಅಕ್ರಮ ನುಸುಳುವಿಕೆಯನ್ನು ಶಾಶ್ವತ ತಡೆಹಾಕಿ ಶೂನ್ಯಕ್ಕಿಳಿಸುವುದು ಬಿಜೆಪಿಯ ಪ್ರಾಥಮಿಕ ಅಜೆಂಡಾ ಆಗಿದೆ. ಬಿಎಸ್‌ಎಫ್ ಮತ್ತು ರಾಜ್ಯ ಪೊಲೀಸರ ಜಂಟಿ ಕಾರ್ಯಾಚರಣೆಯಿಂದ , ಗಡಿ ಜಿಲ್ಲೆಗಳಲ್ಲಿ ಮಾಮೂಲಾಗಿರುವ ಜನಸಂಖ್ಯಾ ಸ್ವರೂಪ ಬದಲಾವಣೆಗೆ ಮೂಗುದಾರ ಬೀಳಲಿದೆ.

ಬಿಜೆಪಿ ಗೆಲುವು ಐತಿಹಾಸಿಕ: ಮೋದಿಗೆ ಟ್ರಂಪ್ ಅಭಿನಂದನೆ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಅಭೂತಪೂರ್ವ ಗೆಲುವು ದಾಖಲಿಸಿದ್ದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಧಾನಿ ನರೇಂದ್ರ ಮೋದಿಯವರಿಗೆ ಅಭಿನಂದಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಐತಿಹಾಸಿಕ ಮತ್ತು ನಿರ್ಣಾಯಕ ಗೆಲುವು ಸಾಧಿಸಿದೆ ಎಂದು ಟ್ರಂಪ್ ಮೆಚ್ಚುಗೆ ವ್ಯಕ್ತಪಡಿಸಿದ್ದಾಗಿ ಶ್ವೇತಭವನದ ವಕ್ತಾರ ಕುಶ್ ದೇಸಾಯಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ತನ್ನಿ: ಎಚ್‌ಡಿಕೆ

ಪುಟ 1➜ನಂತರ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಈ ಬಾರಿಯ ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದೆ. ಈ ಗೆಲುವು ದೇಶದ ಮುಂದಿನ ಚುನಾವಣೆಗಳಿಗೆ ದಿಕ್ಸೂಚಿಯಾಗಿದೆ.

ಈ ಸಂಬಂಧ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಭಾಗವಹಿಸಲು ತುರ್ತಾಗಿ ದೆಹಲಿಗೆ ಹೋಗಬೇಕಾಗಿದೆ ಎಂದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಿಂದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಅಭ್ಯರ್ಥಿಯಾದ ವಿ.ಸೋಮಣ್ಣ ಅವರನ್ನು ನೀವೆಲ್ಲಾ ದಾಖಲೆ ಮತಗಳ ಅಂತರದಿಂದ ಗೆಲ್ಲಿಸಿದ ಪರಿಣಾಮ ಅವರು ಹಾಗೂ ತಾವು ಕೇಂದ್ರ ಮಂತ್ರಿಯಾಗಲು ಅವಕಾಶವಾಯಿತು. ಮುಂಬರುವ ಚುನಾವಣೆಗಳಲ್ಲೂ ಇದೇ ರೀತಿಯಲ್ಲಿ ಆಶೀರ್ವಾದ ಮಾಡಬೇಕು ಎಂದು ಕುಮಾರಸ್ವಾಮಿ ಮನವಿ ಮಾಡಿದರು. ಜೆಡಿಎಸ್ ಜಿಲ್ಲಾಧ್ಯಕ್ಷ ಎಚ್.ನಿಂಗಪ್ಪ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್‌ಬಾಬು, ಶಾಸಕರಾದ ಬಿ.ಸುರೇಶ್‌ಗೌಡ, ಎಂ.ಟಿ.ಕೃಷ್ಣಪ್ಪ ಇದ್ದರು.

ಫೊರೆನ್ಸಿಕ್ ಲ್ಯಾಬ್‌ಗೆ ಅಂಚೆಮತ ಕಳುಹಿಸಿ

ಪುಟ 1➜ಅವರ ಅರ್ಜಿ ಪುರಸ್ಕರಿಸಿ ನ್ಯಾಯಾಲಯ, 6-03-2026ರಲ್ಲಿ ಮರು ಎಣಿಕೆಗೆ ನಿರ್ದೇಶನ ನೀಡಿತ್ತು. ಮರು ಎಣಿಕೆಯಲ್ಲಿ ರಾಜೇಗೌಡರಿಗೆ 314 ಮತಗಳು ಮಾತ್ರ ಅರ್ಹ ಎಂದು ಆಗುತ್ತದೆ. 255 ಮತಗಳು ಅನರ್ಹ ಎಂದು ಆಗುತ್ತದೆ. ಜೀವರಾಜ್ ಅವರಿಗೆ ಮರು ಎಣಿಕೆಯಲ್ಲಿ 690 ಮತಗಳು ಲಭಿಸಿವೆ. ಬಿಜೆಪಿಯವರು ಕ್ರಿಮಿನಲ್ ಸಂಚು ಮಾಡಿ ವೋಟ್ ಚೋರಿ ಮಾಡಿರುವುದು ಬಹಳ ಸ್ಪಷ್ಟವಾಗುತ್ತದೆ. ರಾಜೇಗೌಡರಿಗೆ ಬಿದ್ದಿದ್ದ 250 ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ. ಇದು ವೋಟ್ ಡಕಾಯಿತಿಯಾಗಿದೆ ಎಂದು ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಎಣಿಕೆ ಮಾಡಿದ ಬಳಿಕ ಎಲ್ಲಾ ದಾಖಲಾತಿಗಳನ್ನು ಟ್ರಂಕ್‌ನಲ್ಲಿಡಲಾಗುತ್ತದೆ. ಮತ ಎಣಿಕೆಯಾಗುವಾಗ ಬಿಜೆಪಿ ಸರ್ಕಾರವಿತ್ತು. ಕೇಂದ್ರದಲ್ಲೂ ಅವರ ಸರ್ಕಾರ ಇತ್ತು. ಬಿಜೆಪಿಯವರು ಸಿಬ್ಬಂದಿ ಮೂಲಕ ಮತಪತ್ರ ಗಳನ್ನು ತಿದ್ದಿರುವುದು ಖಚಿತವಾಗಿದೆ. ಇದು ಕ್ರಿಮಿನಲ್ ಸಂಚು ಎಂದು ಗಂಭೀರ ಆರೋಪ ಮಾಡಿದರು. ಮರು ಎಣಿಕೆ ಸಂದರ್ಭದಲ್ಲಿ ಚುನಾವಣಾ ವೀಕ್ಷಕರು ಸಹ ಬಂದಿದ್ದರು. ಗಂಭೀರ ಸ್ವರೂಪದ ಕ್ರಿಮಿನಲ್ ಸಂಚು ನಡೆದಿರುವುದಾಗಿ ಅವರು ಚುನಾವಣಾ ಆಯೋಗಕ್ಕೆ ಪತ್ರ ಬರೆದಿರುವುದು ತಿಳಿದುಬಂದಿದೆ. ಅಂಚೆ ಮತಪತ್ರಗಳನ್ನು ಫೊರೆನ್ಸಿಕ್ ಪರಿಶೀಲನೆಗೆ ಸಲ್ಲಿಸಬೇಕಿತ್ತು. ಚುನಾವಣಾ ಫಲಿತಾಂಶ ಘೋಷಣೆಯನ್ನು ನ್ಯಾಯಾಲಯಕ್ಕೆ ಬಿಡಬೇಕಾಗಿತ್ತು. ಅದನ್ನು ಬಿಟ್ಟು ಚುನಾವಣಾಧಿಕಾರಿಗಳೇ ಫಲಿತಾಂಶ ಘೋಷಣೆ ಮಾಡಿದ್ದಾರೆ. ಛಿ

ಚುನಾವಣಾ ವೀಕ್ಷಕರು ಅನುಮತಿ ಪಡೆದ ಬಳಿಕವೇ ಫಲಿತಾಂಶ ಘೋಷಿಸಬೇಕು. ಆದರೆ ಚುನಾವಣಾಧಿಕಾರಿಗಳು ಚುನಾವಣಾ ವೀಕ್ಷಕರ ಅನುಮತಿಯಿಲ್ಲದೇ ಆತುರಾತುರವಾಗಿ ಫಲಿತಾಂಶ ಘೋಷಿಸಿದ್ದಾರೆ. ತಪ್ಪು ಮಾಡಿದ ಯಾರೇ ಆಗಿದ್ದರೂ, ಅಂತಹ ಅಧಿಕಾರಿಗೆ ಶಿಕ್ಷೆಯಾಗಬೇಕು ಎಂದು ಸಿಎಂ ಸಿದ್ದರಾಮಯ್ಯ ಒತ್ತಾಯಿಸಿದರು.

2028ರಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ

ಬಾಗಲಕೋಟೆ ಹಾಗೂ ದಾವಣಗೆರೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಇಬ್ಬರು ಅಭ್ಯರ್ಥಿಗಳು ಗೆದ್ದಿದ್ದಾರೆ. ಇದು ಮುಂದಿನ 2028ರ ಚುನಾವಣೆಗೆ ದಿಕ್ಸೂಚಿ ಎಂದು ಬಿಜೆಪಿಯವರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳುತ್ತಿದ್ದರು.

ಅವರ ಪ್ರಕಾರ 2028ರಲ್ಲೂ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದಾಯಿತು ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಎಸ್‌ಡಿಪಿಐಗೆ ಮತ ಬಿದ್ದಿದೆ. ನಾವು ಎಲ್ಲಿ ಎಡವಿದ್ದೇವೆ ಎಂಬುದನ್ನು ಪರಿಶೀಲನೆ ಮಾಡಲಿದ್ದೇವೆ ಎಂದರು.

ಜೀವರಾಜ್ ವಿರುದ್ಧದ ಎಫ್‌ಐಆರ್‌ಗೆ ಹೈ ತಡೆ

ಪುಟ 1➜**ಜೀವರಾಜ್ ಪ್ರತಿನಿಧಿಸಿದ್ದ ಹಿರಿಯ ವಕೀಲ ಅಶೋಕ್ ಹಾರನಹಳ್ಳಿ ಅವರು 13.5.2023ರಲ್ಲಿ ನಡೆದಿದೆ ಎನ್ನಲಾದ ಆರೋಪ ಆಧರಿಸಿ ಈಗ ಪ್ರಕರಣ ದಾಖಲಿಸಲಾಗಿದೆ. ಸೋತ ಹಿನ್ನೆಲೆಯಲ್ಲಿ ಈ ಪ್ರಕರಣ ದಾಖಲಿಸಲಾಗಿದ್ದು, ಇಲ್ಲಿ ರಾಜಕೀಯ ದುರುದ್ದೇಶವಿದೆ ಎಂದರು. ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ವಿಶೇಷ ಸರ್ಕಾರಿ ಅಭಿಯೋಜಕ ಬಿ.ಎ.ಬೆಳ್ಳಿಯಪ್ಪ ಅವರು ಮತಗಳ ಮೇಲೆ ಡಬಲ್ ಟಿಕ್ ಇದೆ. ಈ ವಿಚಾರವನ್ನು ಸುಧೀರ್ ಅವರು ಚುನಾವಣಾಧಿಕಾರಿ ಗೌರವ್ ಶೆಟ್ಟಿ ಅವರ ಗಮನಕ್ಕೆ ಮರು ಎಣಿಕೆ ನಡೆಯುವುದಕ್ಕೆ ಮುನ್ನವೇ ತಂದಿದ್ದಾರೆ. ಇಲ್ಲಿ ಮತ ತಿರುಚುವ ಕೃತ್ಯ ನಡೆದಿದೆ ಎಂದರು. ಇದರಿಂದ ಕೆರಳಿದ ಪೀಠವು 13.5.2023ರಲ್ಲಿ ಮತ ತಿರುಚಿರುವುದು ನಡೆದಿದೆ ಎನ್ನುವುದಾದರೆ ಆ ವಿಚಾರವನ್ನು ಮರು ಎಣಿಕೆಗೆ ಆದೇಶಿಸಿದ ನ್ಯಾಯಾಲಯದ ಗಮನಕ್ಕೆ ತಂದು, ನಿರ್ದೇಶನ ಪಡೆದು ಮುಂದುವರಿಯಬೇಕಿತ್ತು. ಹಾಲಿ ಚುನಾವಣಾಧಿಕಾರಿ ಗೌರವ್ ಶೆಟ್ಟಿ ಅದನ್ನು ಮಾಡಬೇಕಿತ್ತು. ದೂರಿನಲ್ಲಿ ಗೌರವ್ ಶೆಟ್ಟಿಯನ್ನು ಏಕೆ ಆರೋಪಿ ಮಾಡಲಾಗಿಲ್ಲ. ಹಿಂದಿನ ಚುನಾವಣಾಧಿಕಾರಿ ವೇದಮೂರ್ತಿ ಮತ್ತು ಅಂದಿನ ಜಿಲ್ಲಾಧಿಕಾರಿಯನ್ನು ಏಕೆ ಆರೋಪಿಗಳನ್ನಾಗಿಸಲಾಗಿದೆ. ದೂರು ದಾಖಲಿಸುವುದಕ್ಕೂ ಮುನ್ನ ಅವರ ವಾದ ಆಲಿಸಬೇಕಿತ್ತಲ್ಲವೇ. ಇದು ಸಹಜ ನ್ಯಾಯತತ್ವವೇ ಎಂದು ಪೊಲೀಸರನ್ನು ಪ್ರಶ್ನಿಸಿತು. ಪ್ರಕರಣದ ತನಿಖಾಧಿಕಾರಿ ಎಲ್ಲಿ? ಎಂದ ಪೀಠವು ತನಿಖಾಧಿಕಾರಿ ಮುಂದೆ ಬರುತ್ತಿದ್ದಂತೆ ಗೌರವ್ ಶೆಟ್ಟಿಯನ್ನು ಏಕೆ ಆರೋಪಿ ಮಾಡಿಲ್ಲ. ಎಲ್ಲಿಂದ ಬಂದಿದ್ದೀರಿ. ನಿಮಗೆ ಕಣ್ಣು ಕಾಣುವುದಿಲ್ಲವೇ? ಯಾರೋ ಎಸಗಿದ ಪ್ರಮಾದಕ್ಕೆ ಇನ್ಯಾರ ವಿರುದ್ಧ ಏಕೆ ಪ್ರಕರಣ ದಾಖಲಿಸಿದ್ದೀರಿ? ನಿಮ್ಮನ್ನು ಅಮಾನತು ಮಾಡಲು ಆದೇಶ ಬರೆಯಲಾಗುವುದು ಎಂದಿತು. ಪೊಲೀಸರು ರಾಜಕೀಯ ಒತ್ತಡಗಳಿಗೆ ಮಣಿದು ಕೆಲಸ ಮಾಡಬಾರದು. ಆದರೆ, ಈ ಪ್ರಕರಣದಲ್ಲಿ ಅದು ಕಾಣುತ್ತದೆ. ರಾಜಕೀಯ ಒತ್ತಡಕ್ಕೆ ಮಣಿದು ಎಫ್‌ಐಆರ್ ದಾಖಲಿಸಲಾಗಿದೆ. ಒಂದೊಮ್ಮೆ ರಾಜೇಗೌಡರ ವಿರುದ್ಧ ಇಂಥದ್ದೇ ಪ್ರಕರಣ ದಾಖಲಿಸಿದ್ದರೂ ಅದಕ್ಕೆ ತಡೆ ನೀಡುತ್ತಿದ್ದೆ. ಹಿಂದಿನ ಚುನಾವಣಾಧಿಕಾರಿ ಮತ್ತು ಜಿಲ್ಲಾಧಿಕಾರಿಯನ್ನು ಆರೋಪಿಗಳನ್ನಾಗಿಸುವುದು ಸರಿಯೇ? ಪರಿಸ್ಥಿತಿ ಹೀಗಾದರೆ ಯಾವ ಅಧಿಕಾರಿಯೂ ಸರಿಯಾಗಿ ಕೆಲಸ ಮಾಡಲ್ಲ ಎಂದು ಪೀಠ ಅಭಿಪ್ರಾಯಪಟ್ಟಿತು. ಬಿ.ಎ.ಬೆಳ್ಳಿಯಪ್ಪ ಅವರು ಮೇ 7ರಂದು ಅಗತ್ಯ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಮಂಡಿಸಲಾಗುವುದು ಎಂದು ಹೇಳಿದ್ದಾರೆ. ಇದಕ್ಕೆ ಅವರಿಗೆ ಅನುಮತಿಸಲಾಗಿದೆ. ಅಂತೆಯೇ ಜೀವರಾಜ್ ವಿರುದ್ಧದ ಪ್ರಕರಣಕ್ಕೆ ತಡೆ ನೀಡಲಾಗಿದ್ದು, ಸರ್ಕಾರ ಮತ್ತು ದೂರುದಾರರಿಗೆ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ಪೀಠ ಆದೇಶಿಸಿತು.**

ಎನ್‌ಎಬಿಎಲ್ ಜತೆ ಬಿಬಿಸಿ ಒಪ್ಪಂದ



ಬೆಂಗಳೂರು: ಕರ್ನಾಟಕದ ನಾವೀನ್ಯತಾ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಮಹತ್ವದ ಹೆಜ್ಜೆಯಾಗಿ ಹಾಗೂ ಸ್ಟಾರ್ಟ್‌ಅಪ್‌ಗಳ ಸಂಶೋಧನೆಗಳಿಗೆ ಜಾಗತಿಕ ಮಾನ್ಯತೆ ಒದಗಿಸುವ ಉದ್ದೇಶದಿಂದ ಬೆಂಗಳೂರು ಬಯೋ-ಇನ್ನೋವೇಷನ್ ಸೆಂಟರ್ (ಬಿಬಿಸಿ) ಹಾಗೂ ರಾಷ್ಟ್ರೀಯ ಪರೀಕ್ಷೆ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳ ಮಾನ್ಯತಾ ಮಂಡಳಿ ಎನ್‌ಎಬಿಎಲ್(ಕ್ಯೂಸಿಐ) ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಈ ಒಪ್ಪಂದಕ್ಕೆ ರಾಜ್ಯ ಸರ್ಕಾರದ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಹಾಗೂ ಬಿಬಿಸಿ ಅಧ್ಯಕ್ಷೆ ಡಾ. ಎನ್. ಮಂಜುಳಾ ಅವರ ಸಮ್ಮುಖದಲ್ಲಿ ಎನ್‌ಎಬಿಎಲ್‌ಯ ವ್ಯವಸ್ಥಾಪಕ ನಿರ್ದೇಶಕ ಡಾ. ಮೊಹಮ್ಮದ್ ಆದಿಲ್ ಎ.ಎ. ಮತ್ತು (ಕ್ವಾಲಿಟಿ ಕಂಟ್ರೋಲ್ ಆಫ್ ಇಂಡಿಯಾ) ಸಿಇಒ ಡಾ. ರಮಾನಂದ್ ಶುಕ್ಲಾ ಅವರು ಸಹಿ ಹಾಕಿದರು.

ಈ ವೇಳೆ ಮಾತನಾಡಿದ ಸರ್ಕಾರದ ಕಾರ್ಯದರ್ಶಿ ಡಾ. ಎನ್.ಮಂಜುಳಾ, ಜೀವ ವಿಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವನ್ನು ಜಾಗತಿಕ ಹಬ್ ಆಗಿ ಗುರುತಿಸಿಕೊಳ್ಳುವುದಕ್ಕೆ ಈ ಒಪ್ಪಂದ ಬಹಳ ಸಹಕಾರಿಯಾಗಲಿದೆ. ನಾವು ಈಗಾಗಲೇ 512ಕ್ಕೂ ಹೆಚ್ಚಿನ ನಾವೀನ್ಯತಾ ಪ್ರಾಜೆಕ್ಟ್‌ಗಳಿಗೆ ಬೆಂಬಲ ನೀಡಿದ್ದೇವೆ. ಇದರಲ್ಲಿ 24 ಜಾಗತಿಕ ಸ್ಟಾರ್ಟ್‌ಅಪ್‌ಗಳು ಮತ್ತು 74 ಪೇಟೆಂಟ್‌ಗಳು ಸೇರಿವೆ. ಜೈವಿಕ ತಂತ್ರಜ್ಞಾನದಲ್ಲಿ ಬೆಂಗಳೂರು ಬಯೋ-ಇನ್ನೋವೇಷನ್ ಸೆಂಟರ್ ಅನ್ನು ಜಾಗತಿಕ ನಾವೀನ್ಯತಾ ಕೇಂದ್ರವಾಗಿ ಬಲಪಡಿಸಲು ಈ ಒಪ್ಪಂದ ಹೆಚ್ಚು ಅನುಕೂಲಕರವಾಗಿದೆ ಎಂದು ಹೇಳಿದರು. ಈ ಒಪ್ಪಂದದ ಅನ್ವಯ, ಬಿಬಿಸಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಟಾರ್ಟ್‌ಅಪ್‌ಗಳು ಎನ್‌ಎಬಿಎಲ್‌ನ ಕಟ್ಟುನಿಟ್ಟಿನ ಮಾನ್ಯತಾ ಪ್ರಕ್ರಿಯೆಗಳನ್ನು ಅತ್ಯಂತ ಸರಳ, ತ್ವರಿತವಾಗಿ ಪಡೆಯಲು ಸಾಧ್ಯವಾಗುತ್ತದೆ ಎಂದರು.

ಬೆಳಗಾವಿ ಮಹಾನಗರ ಪಾಲಿಕೆ

ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005,
ಸುಭಾಷನಗರ, ಬೆಳಗಾವಿ. ದೂರವಾಣಿ: 0831-2405304, ಫ್ಯಾಕ್ಸ್: 2405306,
Email : itstaff_ulb_belgaum@yahoo.com, Website : www.belgaumcity.mrc.gov.in

ಸಂಖ್ಯೆ:ಮನಪಾಬೆ/ಲೋ.ಶಾ/ಕಾಅ/ಡಿಎಂ/ಟಿಎನ್‌ಡಿ/ಇಪ್ರೋ-01/2026-27
ದಿನಾಂಕ: 05-05-2026

ಇ-ಪ್ರೊಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆ

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಮಹಾನಗರ ಪಾಲಿಕೆಯ ಅನುದಾನದಡಿಯಲ್ಲಿ ವಾರ್ಷಿಕ ನಿರ್ವಹಣೆ ಮಾಡುವ ಅಂದರೆ **ರಸ್ತೆ, ಒಳಚರಂಡಿ, ವಿಭಾಗಜಕ, ಹಾಗೂ ಇತರೆ ಅಭಿವೃದ್ಧಿ ಮಾಡುವ ಕಾಮಗಾರಿಗಳಿಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು **ಮರು ಟೆಂಡರನ್ನು ಆಹ್ವಾನಿಸಲಾಗಿದೆ.** ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಪಡೆಯಬಹುದಾಗಿದೆ ಹೆಚ್ಚಿನ ವಿವರಗಳಿಗೆ ಆನ್‌ಲೈನ ವೆಬ್‌ಸೈಟ್ **(https://www.kppp.karnataka.gov.in)** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.

1) ಟೆಂಡರ್ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ: 11-05-2026 5.00 ಗಂಟೆವರೆಗೆ. 2) ಟೆಂಡರಿನ ಮೊದಲನೆ ಸಭೆಯ (Pre-bid meeting) ದಿನಾಂಕ: 12-05-2026 11.00 ಗಂಟೆ ಆಯುಕ್ತರು ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 14-05-2026 ಅಪರಾಹ್ನ 4.00 ಗಂಟೆವರೆಗೆ. 4) ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 16-05-2026 11.00 ಗಂಟೆ ಆಯುಕ್ತರು ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 5) ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 18-05-2026 11.00 ಗಂಟೆ ಆಯುಕ್ತರು ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ.

ಸಹಿ/- ಆಯುಕ್ತರು,
ಮಹಾನಗರ ಪಾಲಿಕೆ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/193/ಮಣಿಪಾಲ್/2026-27

ಕರ್ನಾಟಕ ಬ್ಯಾಂಕ್ ಲಿ.

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ
3ನೇ ಮಹಡಿ, ಕರ್ನಾಟಕ ಬ್ಯಾಂಕ್ ಬಿಲ್ಡಿಂಗ್,
ಕೊಡಿಯಾಲ್‌ಬೈಲ್, ಮಂಗಳೂರು-575003.

ದೂರವಾಣಿ : 0824-2422811(Gen)/2427811 (CM)
ಇ-ಮೇಲ್ : mlr.arm@ktkbank.com
Website : https://www.karnatakabank.bank.in
CIN : L85110KA1924PLC001128

ಸ್ವಾಧೀನತೆಯ ನೋಟೀಸು (ಸ್ಥಿರಾಸ್ತಿಗೆ ಸಂಬಂಧಿಸಿದಂತೆ)

ಕರ್ನಾಟಕ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಹಣಕಾಸು ಸಂಸ್ಥೆಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಅನುಷ್ಠಾನ ಅಧಿನಿಯಮ 2002 ರನ್ವಯ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002 ರ ಪರಿಚ್ಛೇದ 13 (12) ನಿಯಮ 3 ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿಕೊಂಡು ದಿನಾಂಕ **06.10.2025** ರಂದು **ತಗಾದೆ ನೋಟೀಸನ್ನು ಸಾಲಗಾರರು: 1) ಶ್ರೀ ಸಂಜೀವ ಗೌಡ,** ಶ್ರೀ ಶಿವಪ್ಪರವರ ಮಗ, **2) ಶ್ರೀ ಗಣೇಶ,** ಶ್ರೀ ಸಂಜೀವ ಗೌಡ ರವರ ಮಗ, **3) ಶ್ರೀಮತಿ ಜಾನಕಿ,** ಶ್ರೀ ವೀರಪ್ಪ ಗೌಡ ರವರ ಪತ್ನಿ, **4) ಶ್ರೀ ಸುಬ್ರಾಯ ಗೌಡ,** ಶ್ರೀ ಶಿವಪ್ಪ ಗೌಡ ರವರ ಮಗ, **ನಂ. 1-4 ಇವರುಗಳ ವಿಳಾಸ:** "ಬಲ್ಯಾರಬೆಟ್ಟು ಮನೆ", ಬಲ್ಯಾರಬೆಟ್ಟು, ಉಪ್ಪಿನಂಗಡಿ, ಪುತ್ತೂರು ತಾಲೂಕು, ದ.ಕ.ಜಿಲ್ಲೆ - 574 241, **5) ಶ್ರೀಮತಿ ಲೀಲಾ,** ಶ್ರೀ ರುಕ್ಮಯ ಗೌಡರವರ ಪತ್ನಿ, **6) ಶ್ರೀ ರುಕ್ಮಯ ಗೌಡ,** ಶ್ರೀ ಎಲ್ಯನ್ನ ಗೌಡರವರ ಮಗ, **ನಂ. 5 & 6 ಇವರುಗಳ ವಿಳಾಸ:** ಪಿಜಿನಡ್ಕ ಕೊಕ್ಕಡ, ಬೆಳ್ತಂಗಡಿ, ದ.ಕ.ಜಿಲ್ಲೆ - 574 198. **7) ಶ್ರೀಮತಿ ಲೀಲಾ,** ಶ್ರೀ ಸಂಜೀವ ಗೌಡರವರ ಪತ್ನಿ, **8) ಶ್ರೀಮತಿ ಸುಶೀಲಾ,** ಶ್ರೀ ಸುಬ್ರಾಯ ಗೌಡ ರವರ ಪತ್ನಿ, **ನಂ. 7 & 8 ಇವರುಗಳ ವಿಳಾಸ:** "ಬಲ್ಯಾರಬೆಟ್ಟು ಮನೆ", ಬಲ್ಯಾರಬೆಟ್ಟು, ಉಪ್ಪಿನಂಗಡಿ, ಪುತ್ತೂರು ತಾಲೂಕು, ದ.ಕ.ಜಿಲ್ಲೆ - 574 241, ಇವರಿಗೆ ಸದ್ರಿ ಸಾಲದ ಬಾಕಿ ಬಾಬ್ತು **ಪಿಎಸ್‌ಟಿಎಲ್ ಖಾತೆ ಸಂಖ್ಯೆ 8087001800014301** ರಲ್ಲಿ **ರೂ. 9,03,301.29 (ರೂಪಾಯಿ ಒಂಭತ್ತು ಲಕ್ಷದ ಮೂರು ಸಾವಿರದ ಮುನ್ನೂರ ಒಂದು ಮತ್ತು ಪೈಸೆ ಇಪ್ಪತ್ತೊಂಭತ್ತು ಮಾತ್ರ)** ಮತ್ತು ದಿನಾಂಕ **13.07.2025** ರಿಂದ ಅನ್ವಯವಾಗುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳನ್ನು ಈ ನೋಟೀಸು ಪಡೆದ ದಿನಾಂಕದಿಂದ **60 ದಿನಗಳೊಳಗೆ** ಪಾವತಿಸುವಂತೇ ಸೂಚಿಸಲಾಗಿರುತ್ತದೆ.

ಸಾಲಗಾರರು / ಅಡಮಾನದಾರರು ಬಾಕಿ ಹಣವನ್ನು ಮರುಪಾವತಿಸಲು ವಿಫಲರಾಗಿರುವುದರಿಂದ **ಅಧಿಕೃತ ಅಧಿಕಾರಿಯವರು ಮೇಲೆ ಹೇಳಿದ ಕಾಯಿದೆಯ ಪರಿಚ್ಛೇದ 13(4) ರ ನಿಯಮ 8 ರಲ್ಲಿ ದತ್ತವಾದ ಅಧಿಕಾರದಂತೆ ಕೆಳಗೆ ವಿವರಣೆ ನೀಡಿದ ಆಸ್ತಿಯನ್ನು 04.05.2026 ರಂದು ಸ್ವಾಧೀನಪಡಿಸಿಕೊಳ್ಳಲಾಗಿದೆ** ಎಂದು ಸಾಲಗಾರರಿಗೆ / ಅಡಮಾನದಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.

ಸಾಲಗಾರರು / ಅಡಮಾನದಾರರು ಮತ್ತು ಸಾರ್ವಜನಿಕರು ಈ ಸ್ಥಿರಾಸ್ತಿಯ ಬಗ್ಗೆ ಯಾವುದೇ ವ್ಯವಹಾರ ಮಾಡಬಾರದಾಗಿ ಈ ಮೂಲಕ ಎಚ್ಚರಿಸಲಾಗಿದೆ. ಆದಾಗ್ಯೂ ಈ ಸ್ಥಿರಾಸ್ತಿ ಬಗ್ಗೆ ವ್ಯವಹಾರ ನಡೆಸಿದಲ್ಲಿ **ಕರ್ನಾಟಕ ಬ್ಯಾಂಕ್ ಲಿ., ಉಪ್ಪಿನಂಗಡಿ** ಶಾಖೆಗೆ ಸಲ್ಲತಕ್ಕ ಒಟ್ಟು ಮೊತ್ತ **ಪಿಎಸ್‌ಟಿಎಲ್ ಖಾತೆ ಸಂಖ್ಯೆ 8087001800014301** ರಲ್ಲಿ **ರೂ. 8,90,408.29 (ರೂಪಾಯಿ ಎಂಟು ಲಕ್ಷದ ತೊಂಭತ್ತು ಸಾವಿರದ ನಾಲ್ಕೂರ ಎಂಟು ಮತ್ತು ಪೈಸೆ ಇಪ್ಪತ್ತೊಂಭತ್ತು ಮಾತ್ರ)** ಮತ್ತು ದಿನಾಂಕ **14.04.2026** ರಿಂದ ಅನ್ವಯವಾಗುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳ ಪಾವತಿಗೆ ಬಾಧ್ಯಸ್ಥರಾಗಿರುತ್ತಾರೆ.

(ಭದ್ರತೆಯ ಸ್ವತ್ತುಗಳನ್ನು ಹಿಂದೆ ಪಡೆಯುವ ಬಗ್ಗೆ ಕಾಯಿದೆಯ ಸೆಕ್ಷನ್ 13 ಉಪನಿಯಮ (8) ರಲ್ಲಿ ಲಭ್ಯವಾಗುವ ಕಾಲಾವಕಾಶದ ಬಗ್ಗೆ ಸಾಲಗಾರರ & ಅಡಮಾನದಾರರ ಗಮನವನ್ನು ಸೆಳೆಯಲಾಗಿದೆ).

ಸ್ಥಿರಾಸ್ತಿಯ ವಿವರಗಳು

ಶ್ರೀ ಸಂಜೀವ ಗೌಡ, ಶ್ರೀಮತಿ ಜಾನಕಿ, ಶ್ರೀ ಸುಬ್ರಾಯ ಗೌಡ ಮತ್ತು **ಶ್ರೀಮತಿ ಲೀಲಾ@ಲೀಲಾವತಿ** ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ ವಾಸಯೋಗ್ಯ ಆಸ್ತಿಯ **ಸರ್ವೆ ನಂಬ್ರ 81/3ಎ(ಪಿ2), ವಿಸ್ತೀರ್ಣ 10 ಸೆಂಟ್ಸ್** ಅದರೊಂದಿಗೆ ಅಲ್ಲಿರುವ ಕಟ್ಟಡ ಸೇರಿದೆ. ಈ ಸ್ಥಿರಾಸ್ತಿಯು ಉಪ್ಪಿನಂಗಡಿ ಗ್ರಾಮ, ಪುತ್ತೂರು ತಾಲೂಕು, ದ.ಕ.ಜಿಲ್ಲೆಯಲ್ಲಿದೆ. **ಗಡಿರೇಖೆಗಳು:ದಾಖಲೆಗಳ ಪ್ರಕಾರ / ವಾಸ್ತವ: ಪೂರ್ವ:** ಅದೇ ಆರ್.ಎಸ್.ನಂಬ್ರದ ಉಳಿದ ಭಾಗ; **ಪಶ್ಚಿಮ:** ಸಂಪರ್ಕ ರಸ್ತೆ; **ಉತ್ತರ:** ಅದೇ ಆರ್.ಎಸ್.ನಂಬ್ರದ ಭಾಗ; **ದಕ್ಷಿಣ:** ಆರ್.ಎಸ್.ನಂಬ್ರ 81/3ಸಿ.

ದಿನಾಂಕ : 04.05.2026
ಸ್ಥಳ : ಉಪ್ಪಿನಂಗಡಿ ಗ್ರಾಮ

ಸಹಿ/-, ಮುಖ್ಯ ಪ್ರಬಂಧಕರು ಮತ್ತು ಅಧಿಕೃತ ಅಧಿಕಾರಿ
ಕರ್ನಾಟಕ ಬ್ಯಾಂಕ್ ಲಿ.,

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-518th) ಡ್ರಾ ಮೇ 5ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SK 467230 (NEYYATTINKARA)

Cons Prize-Rs: 5000/-
SA 467230 SB 467230 SC 467230 SD 467230
SE 467230 SF 467230 SG 467230 SH 467230
SJ 467230 SL 467230 SM 467230

2nd Prize Rs: 30,00,000/- [30 Lakhs]
SG 841555 (PATHANAMTHITTA)

3d Prize Rs: 5,00,000/- [5 Lakhs]
SH 402416 (KOZHIKKODE)

FOR THE TICKETS ENDING WITH THE FOLLOWING NUMBERS

4th Prize Rs.5,000/-
0267 0603 0887 1051 1829 1845 2667 3186 3890 4427 5905 6192 6606 7060 7975 8443 8566 9455 9715

5th Prize Rs.2,000/-
1325 1432 2051 4217 6027 9429

6th Prize Rs.1,000/-
0038 0216 0975 3372 3573 3788 3880 4387 4586 5470 5604 5833 6257 7069 7307 7341 7740 8946 9022 9111 9125 9308 9347 9361 9555

7th Prize Rs.500/-
0009 0228 0380 0507 0512 0677 0730 1170 1202 1503 1510 1550 1616 1635 1666 1830 2258 2321 2330 2653 2837 3060 3373 3460 3487 3505 3609 3642 3659 3826 3959 4156 4186 4457 4512 4956 5049 5325 5438 5681 5866 5897 6163 6361 6457 6504 6522 6561 6562 6579 6580 6757 6770 6917 6963 7094 7108 7346 7430 7560 7645 7658 7769 7921 7997 8080 8141 8360 8427 8611 8724 8954 9014 9617 9725 9817

8th Prize Rs.200/-
0093 0156 0179 0261 0289 0322 0324 0396 0611 0761 0819 0871 0973 1254 1388 1582 1626 1645 1696 1702 1878 1969 2073 2204 2226 2236 2280 2331 2377 2492 2683 2765 2808 3098 3204 3256 3290 3349 3379 3777 3957 4305 4482 4515 4527 4681 4873 5093 5104 5227 5306 5503 5698 6035 6241 6339 6341 6563 6810 6879 7083 7103 7120 7198 7257 7275 7588 7638 7659 8430 8757 8771 8794 8929 8958 8970 8997 9081 9335 9376 9409 9411 9416 9418 9481 9545 9584 9590 9672 9702

9th Prize Rs.100/-
0132 0161 0220 0286 0374 0427 0546 0638 0714 0940 0950 0965 1048 1157 1171 1218 1306 1408 1452 1529 1560 1605 1650 1706 1754 1841 1931 1959 1970 2059 2100 2177 2218 2221 2300 2314 2327 2387 2421 2462 2603 2620 2813 2848 2882 2956 3269 3298 3301 3327 3365 3452 3571 3606 3665 3678 3716 3837 3916 3943 4007 4051 4111 4142 4164 4282 4299 4360 4376 4518 4546 4726 4879 5131 5203 5220 5316 5363 5418 5495 5519 5609 5683 5689 5693 5715 5719 5813 5814 5850 5898 5930 6036 6246 6352 6418 6465 6519 6542 6614 6627 6646 6731 6806 6949 6979 7000 7014 7100 7355 7586 7594 7639 7646 7687 7747 7771 7808 7813 7849 7881 7956 7977 8133 8153 8157 8161 8438 8452 8456 8580 8631 8709 8902 8947 8993 9160 9322 9399 9426 9463 9559 9622 9687 9746 9777 9840 9921 9940 9968

ಬೈಕ್ ಡಿಕ್ಕಿ : ಪಾದಚಾರಿ ಗಂಭೀರ

ಸುರತ್ಕಲ್: ರಾಷ್ಟ್ರೀಯ ಹೆ.66ರಲ್ಲಿ ಸುರತ್ಕಲ್ ಹರ್ಷ ಶೋರೂಂ ಎದುರುಗಡೆ ಬೈಕ್ ಡಿಕ್ಕಿಯಾಗಿ ಪಾದಾಚಾರಿ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಗಾಯಗೊಂಡವರನ್ನು ರೋಹಿತಾಕ್ಷ ಶೆಟ್ಟಿಗಾರ್ (48) ಎಂದು ಗುರುತಿಸಲಾಗಿದೆ ಗಾಯಾಳು ರೋಹಿತಾಕ್ಷ ರಾ.ಹೆದ್ದಾರಿ ಯಲ್ಲಿ ಉಡುಪಿ- ಮಂಗಳೂರು ಹೆದ್ದಾರಿ ದಾಟುತ್ತಿದ್ದಾಗ ಬೈಕ್ ಡಿಕ್ಕಿ ಹೊಡೆದಿದೆ.

ಪುತ್ತೂರು ಮಾರುಕಟ್ಟೆ ಧಾರಣೆ

05-05-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	445 - 475
ಚೋಲ್ ಅಡಿಕೆ	:	525 - 550
ಡಬಲ್ ಚೋಲ್	:	525 - 550
ಹೊಸ ಪಟೋರ	:	355 - 405
ಹಳೆ ಪಟೋರ	:	375 - 405
ಹೊಸ ಉಳ್ಳಿ	:	120 - 290
ಹಳೆ ಉಳ್ಳಿ	:	110 - 290
ಹೊಸ ಕೋಕಾ	:	325 - 345
ಹಳೆ ಕೋಕಾ	:	325 - 345
ಹೊಸ ಕರಿಗೋಟು	:	245 - 275
ಹಳೆ ಕರಿಗೋಟು	:	245 - 275
ಹಸಿ ಕೊಕ್ಕೋ	:	70 - 105
ಒಣ ಕೊಕ್ಕೋ	:	270 - 315

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 675

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	246.00
ಆರ್‌ಎಸ್‌ಎಸ್ 2	-	211.00
ಸ್ಕ್ರಾಪ್ 1	-	149.00
ಸ್ಕ್ರಾಪ್ 2	-	140.00

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರು (ವಿನ್ಯಾಸ & ಗುಅ) ರವರ ಕಛೇರಿ,
9ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009

ಐಎಫ್‌ಟಿ ಸಂಖ್ಯೆ: ಬೆಂಜಮಂ/ಮುಅ(ವಿ&ಗುಅ)/ಅಮುಅ/ತಾಂಸ/79/2026-27 ದಿನಾಂಕ: 04.05.2026

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ-ಹಂತದ ಟೆಂಡರ್ ಪದ್ಧತಿಯಲ್ಲಿ **ಸಕಾನಿಅ (ಬಿಡಬ್ಲ್ಯೂ&ಪಿಎಸ್)-2-2 ಉಪ ವಿಭಾಗದ ಅಡಿಯಲ್ಲಿ ಬರುವ ಸರ್ವಜ್ಞನಗರ ಕ್ಷೇತ್ರದ ವಿವಿಧ ಸ್ಥಳಗಳಲ್ಲಿ 6.5 ಇಂಚು ವ್ಯಾಸದ ಹೊಸ ಕೊಳವೆಬಾವಿಯನ್ನು ಕೊರೆಯುವುದು ಮತ್ತು ಅಗತ್ಯವಿರುವ ಉಪಕರಣಗಳೊಂದಿಗೆ ವಿದ್ಯುತ್ ಸಂಪರ್ಕಗೊಳಿಸುವ ಕೆಲಸಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ (21 ಸಂಖ್ಯೆ).**

ಟೆಂಡರ್‌ಗಿಟ್ಟ ಮೊತ್ತ: **ರೂ.232.21 ಲಕ್ಷಗಳು.** ಇ.ಎಂ.ಡಿ: **ರೂ.3,48,400/-.**

ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 19.05.2026 ರ ಸಂಜೆ 04.00 ಗಂಟೆವರೆಗೆ. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ 20.05.2026 ರಂದು ಸಂಜೆ 4.00 ಗಂಟೆಗೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/-
ಮುಖ್ಯ ಅಭಿಯಂತರರು (ವಿನ್ಯಾಸ & ಗುಅ)

ವಾ.ಸಾ.ಸಂ.ಇ/ವಾಪ್ರ/504/ಆಕಾರ್/2025-26

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ವಿಜಯಪುರ ಉಪ ವಿಭಾಗ, ವಿಜಯಪುರ

ಸಂಖ್ಯೆ:ಸಅಸಂ/ಮುಂದುವರೆದ ಕಾಮಗಾರಿ/ಮರು ಟೆಂಡರ್/ಸಿಆರ್-/2026-27
ದಿನಾಂಕ: 28.04.2026

ಟೆಂಡರ್ ಪ್ರಕಟಣೆ

2026-27 ನೇ ಸಾಲಿನಲ್ಲಿ ವಿಜಯಪುರ ಪ್ರಾದೇಶಿಕ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಡಿ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಇಂಡೆಂಟ್ ಸಂಖ್ಯೆ: KFD/2025-26/OW/WORK_INDENT31237, 31238, 31239, 31257, 31274, 31281, 31283, 31284, 31291, 31299, 31304, 31318, 31320, 31321, 31324, 31399, 31401, 31402, 31405, 31406, 31409, 31410, 31414, 31418, 31422, 31448, 33219 & 31463 ರಂತೆ ಮರು ಟೆಂಡರನ್ನು ಕರೆಯಲಾಗಿದೆ. ದಿನಾಂಕ: 05.05.2026 ರ ವರೆಗೆ ಟೆಂಡರ್ ಹಾಕುವ ಮತ್ತು ದಿನಾಂಕ: 07.05.2026 ರಂದು ಬೆಳಿಗ್ಗೆ 11.00 ಗಂಟೆಗೆ ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯಲಾಗುವುದು. ಟೆಂಡರ್‌ದಲ್ಲಿ ಭಾಗವಹಿಸಲಿಚ್ಛಿಸುವವರು kppp.karnataka.gov.in ಮೂಲಕ ಟೆಂಡರ್ ನಿಬಂಧನೆ ಇತ್ಯಾದಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ವಿಜಯಪುರ ಉಪ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/74/ಕೆಎಸ್‌ಎಂಸಿಎ/2026-27

ಸಮಗ್ರ ಶಿಕ್ಷಣ ಕರ್ನಾಟಕ - ಜಿಲ್ಲಾ ಕಛೇರಿ, ದಕ್ಷಿಣ ಕನ್ನಡ.
ಶಾಲಾ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಛೇರಿ, ಮಂಗಳೂರು

ಇ-ಮೇಲ್: sskdk2018@gmail.com

ಇ-ಟೆಂಡರ್ ಪ್ರಕಟಣೆ

ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯ ಅನುಮೋದಿತ ಚಟುವಟಿಕೆಯಡಿ ವಿವಿಧ ಹೊರಗುತ್ತಿಗೆ ಸೇವೆಗಳಿಗೆ ಅರ್ಹ ಬಿಡ್ಡುದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಬಿಡ್ಡುದಾರರು ಇ-ಸಂಗ್ರಹಣಾ ವೇದಿಕೆ ವೆಬ್‌ಸೈಟ್ (https://kppp.karnataka.gov.in/) ನಲ್ಲಿ ಟೆಂಡರ್ ವಿವರಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಂಪರ್ಕಿಸಬಹುದಾಗಿದೆ.

Sl. No.	Particulars	Tender Amount (in lakhs)	Tender/ Quotation Last Date	Tender Number
1	ಸಮಗ್ರ ಶಿಕ್ಷಣ ಕರ್ನಾಟಕ ಜಿಲ್ಲಾ ಮತ್ತು ತಾಲೂಕು ಕಛೇರಿಗಳಿಗೆ ಹೊರಗುತ್ತಿಗೆ ಮೂಲಕ ಸಿಬ್ಬಂದಿ ಸೇವೆ ಪಡೆಯುವ ಬಗ್ಗೆ	64.24	18.05.2026	SSK/2026-27/SE0331
2	ನೇತಾಜಿ ಸುಭಾಸ್ ಚಂದ್ರ ಬೋಸ್ ಆವಾಸೀಯ ವಿದ್ಯಾಲಯಕ್ಕೆ ಹೊರಗುತ್ತಿಗೆ ಮೂಲಕ ಬೋಧಕ ಬೋಧಕೇತರ ಸಿಬ್ಬಂದಿ ಸೇವೆ ಪಡೆಯುವ ಬಗ್ಗೆ	11.36	18.05.2026	SSK/2026-27/SE0330
3	ನೇತಾಜಿ ಸುಭಾಸ್ ಚಂದ್ರ ಬೋಸ್ ಆವಾಸೀಯ ವಿದ್ಯಾಲಯಕ್ಕೆ ಹೊರಗುತ್ತಿಗೆ ಮೂಲಕ ಆಹಾರ ಪೂರೈಕೆ ಸೇವೆ ಪಡೆಯುವ ಬಗ್ಗೆ	24.00	18.05.2026	SSK/2026-27/SE0328

ಸಹಿ/- ಉಪನಿರ್ದೇಶಕರು (ಆ) ಮತ್ತು ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ
ಸಮಗ್ರ ಶಿಕ್ಷಣ-ಕರ್ನಾಟಕ ದ.ಕ., ಮಂಗಳೂರು

DIPR/DK/KSMCA/170/26-27 dt.05.05.2026

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ ಎತ್ತಿನಹೊಳೆ ಯೋಜನಾ ವಿಭಾಗ, ನಂ:4
ಮಧುಗಿರಿ, ತುಮಕೂರು ಜಿಲ್ಲೆ.-572132,
ದೂ ಸಂಖ್ಯೆ: 08137-282112 Email:eeyetmadhugiri4@gmail.com

ಕ್ರ.ಸಂ:ಕಾಇಂ/ವಿಜನಿನಿ/ಎಹೊಯೋ/ಮ/ವಿ.04/ಟೆ.ಅ-04&05/2026-27 ದಿನಾಂಕ : 24.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್‌ನಲ್ಲಿ ಮಧುಗಿರಿ ವಿಭಾಗ ವ್ಯಾಪ್ತಿಯಲ್ಲಿ ಟೆಂಡರ್ ಅಧಿಸೂಚನೆ 04/2026-27 ದಿನಾಂಕ 29.04.2026ರಲ್ಲಿ ಎತ್ತಿನಹೊಳೆ ಯೋಜನೆಯಡಿ ರೂ.3089.65 ಲಕ್ಷದ ಸ್ವಿಚ್ಚಿಂಗ್ ಸ್ಟೇಷನ್ ಕಾಮಗಾರಿ ಹಾಗೂ ಟೆಂಡರ್ ಅಧಿಸೂಚನೆ 05/2026-27 ದಿನಾಂಕ : 29.04.2026 ರಲ್ಲಿ ನೆಲಮಂಗಲ ವಿಧಾನ ಸಭಾ ಕ್ಷೇತ್ರದ 02 ಕಾಮಗಾರಿಗಳಿಗೆ **ರೂ.253.40 & ರೂ.295.74** ಲಕ್ಷಗಳಿಗೆ ಟೆಂಡರ್ ಅಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗಳಿಗೆ Percentage Tender ಮೂಲಕ ಅರ್ಹ ಬಿಡ್ಡುದಾರರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನ https://kppp.karnataka.gov.in ವೆಬ್ ಸೈಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾದ ದಿನಾಂಕಗಳ ವಿವರ ಈ ಕೆಳಗಿನಂತಿದೆ.

ಕ್ರಸಂ	ಘಟನೆಗಳ ಕ್ಯಾಲೆಂಡರ್	ಟೆಂಡರ್ ಅಧಿಸೂಚನೆ:04/2026-27 ದಿನಾಂಕ: 29.04.2026 ರ ದಿನಾಂಕಗಳ ವಿವರ	ಟೆಂಡರ್ ಅಧಿಸೂಚನೆ:05/2026-27 ದಿನಾಂಕ: 29.04.2026ರ ದಿನಾಂಕಗಳ ವಿವರ
1	ಇ-ಪ್ರೊಕ್ಯೂರ್‌ಮೆಂಟ್ ನ https://kppp.karnataka.gov.in ವೆಬ್ ಸೈಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾದ ದಿನಾಂಕ	02.05.2026 ರಿಂದ 11.05.2026 ಸಂಜೆ 5:00 ಗಂಟೆಯವರೆಗೆ	04.05.2026 ರಿಂದ 14.05.2026 ಸಂಜೆ 5:30 ಗಂಟೆಯವರೆಗೆ
2	ಕೆಪಿಪಿ-ಪೋರ್ಟಲ್ ಮೂಲಕ ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ.	11.05.2026 ಸಂಜೆ 5:00 ಗಂಟೆಯವರೆಗೆ	14.05.2026 ಸಂಜೆ 5:00 ಗಂಟೆಯವರೆಗೆ
3	ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ, ಬಿಡ್ಡುದಾರರ ದರ್ಜೆ, ಟೆಂಡರ್ ನಿಯಮ, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು ಪಡೆಯಬಹುದಾದ ದಿನಾಂಕ	06.05.2026 ರ ಸಂಜೆ 3:00 ಗಂಟೆಯವರೆಗೆ	08.05.2026 ರ ಸಂಜೆ 3:00 ಗಂಟೆಯವರೆಗೆ
4	ಪ್ರಿ-ಬಿಡ್ ಮೀಟಿಂಗ್,	06.05.2026 ರಂದು ಬೆಳಗ್ಗೆ 11.00ಗಂಟೆಗೆ ಸ್ಥಳ: ವ್ಯವಸ್ಥಾಪಕ ನಿರ್ದೇಶಕ, ವಿಜನಿನಿ ಕಛೇರಿ, ಎಂಬಸ್ಸಿ ಸ್ಕ್ವಯರ್, ಬೆಂಗಳೂರು	08.05.2026ರಂದು ಬೆಳಗ್ಗೆ 11.00ಗಂಟೆಗೆ ಸ್ಥಳ: ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ, ವಿಭಾಗ ನಂ.4 ಮಧುಗಿರಿ ರವರ ಕಛೇರಿಯಲ್ಲಿ.
5	ತಾಂತ್ರಿಕ ಬಿಡ್ ಅನ್ನು ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ, ವಿಭಾಗ ನಂ.4 ಮಧುಗಿರಿ ರವರ ಕಛೇರಿಯಲ್ಲಿ ತೆರೆಯುವ ದಿನಾಂಕ	13.05.2026 ರಂದು ಬೆಳಿಗ್ಗೆ 11:00 ಗಂಟೆಗೆ	14.05.2026 ರಂದು ಬೆಳಿಗ್ಗೆ 11:00 ಗಂಟೆಗೆ
6	ಆರ್ಥಿಕ ಬಿಡ್ ಅನ್ನು ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ, ವಿಭಾಗ ನಂ.4 ಮಧುಗಿರಿ ರವರ ಕಛೇರಿಯಲ್ಲಿ ತೆರೆಯುವ ದಿನಾಂಕ	ತಾಂತ್ರಿಕ ಬಿಡ್ ಗೆ ಅನುಮೋದನೆ ದೊರೆತ ನಂತರ	ತಾಂತ್ರಿಕ ಬಿಡ್ ಗೆ ಅನುಮೋದನೆ ದೊರೆತ ನಂತರ

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.4, ಮಧುಗಿರಿ

DIPR/TUM/55/KSMCA/2026-27

CHANGE OF NAME

I, **ABDUL BASHEER,** S/o Khadri Byari, Residing at Kolake Padenjimar House, Sajipamuda Village and Nagri Post, Bantwal Taluk., D.K. District, Karnataka hereby states that my name is wrongly entered as **K Basheer** in my Driving License Should be changed as **Abdul Basheer** vide Affidavit dated 04/05/2026 sworn before Notary Smt. Keshavi Girish at Bantwal

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರವರ ಕಛೇರಿ, ಜಲಭವನ, ನಂ.ಪಿ-4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿ ಪುರಂ, ಮೈಸೂರು-09.
ದೂರವಾಣಿ ಸಂ: 0821- 2545894,
ಇ-ಮೇಲ್: **kwbcemys2014@gmail.com**

ಟೆಂಡರ್ ಅಧಿಸೂಚನೆ

ಕೊಲ್ಲೂರು ಪಟ್ಟಣದಲ್ಲಿ ಹಾಲಿ ಇರುವ 1.50 MLD ಸಾಮರ್ಥ್ಯದ MBBR ಮಾದರಿಯ STPಯನ್ನು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ದೇವಣಿ ಕೊಡುಗೆಯಡಿ ಮೇಲ್ದರ್ಜೆಗೇರಿಸುವ ಕಾಮಗಾರಿಯ ಟೆಂಡರ್‌ನ್ನು (including 1 year DLP) (lumpsum tender – no variation) ಇಂಡೆಂಟ್ ಸಂಖ್ಯೆ: KUWSDB/2026-27/WT/WORK_INDENT 508 ರಲ್ಲಿ ಆಹ್ವಾನಿಸಲಾಗಿರುತ್ತದೆ. ವಿವರಗಳಿಗೆ – https://kppp.karnataka. gov.in

ಸಹಿ/- ಮುಖ್ಯ ಅಭಿಯಂತರರು,
ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಮೈಸೂರು

DIPR/DDMYS/141/KSMCA/116/2026-27

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.

ನಂ: ಇಇ/ಎಂಐಡಿ/ಬೀದರ/ತಾ.ಶಾ-2/ಟೆಂಡರ್/2026-27/ 1136 ದಿನಾಂಕ: 04-05-2026

ಕೆಪಿಪಿ-ಪ್ರೋಕ್ಯೂರಮೆಂಟ, ಟೆಂಡರ್ ಪ್ರಕಟಣೆ

1) ಕಾಮಗಾರಿಗಳ ವಿವರ. KPP -Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ. KPP -Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. KPP -Portalನಲ್ಲಿ ನಮೂದಿಸಿದಂತೆ, 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲೂ -3 ಮಾತ್ರ : **07-05-2026 ರಂದು 17.00 ಗಂಟೆವರೆಗೆ,** 8) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲೂ -3 ಮಾತ್ರ : **12-05-2026 ರಂದು 16.00 ಗಂಟೆ ವರೆಗೆ,** 9) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -3 ಮಾತ್ರ : **14-05-2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 10) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -3 ಮಾತ್ರ **16-05-2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ.ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 12) ಅಂತರ್ಜಾಲ ತಾಣದ ವಿಳಾಸ.KPP portal https://kppp.karnataka.gov.in

ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/26/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರ್ಕಾರ
ರಾಜ್ಯ ಅಭಿಯಾನ ನಿರ್ದೇಶಕರು,
ಸ್ವಚ್ಛ ಭಾರತ್ ಮಿಷನ್ (ನಗರ) ಬೆಂಗಳೂರು.

10ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು-560001.
ದೂರವಾಣಿ: 080- 22867172 / 22866302, ಫ್ಯಾಕ್ಸ್: 080-22863576 /22861665
ಇ-ಮೇಲ್: swmcelldma@gmail.com

ಸಂಖ್ಯೆ : 1515222/DMA/SWM/SBM2/319/2024 ದಿನಾಂಕ : 04.05.2026

ಟೆಂಡರ್ ಪ್ರಕಟಣೆ

ಸ್ವಚ್ಛ ಭಾರತ್ ಮಿಷನ್(ನಗರ)-2.0 ಯೋಜನೆಯ ಬಳಸಿದ ನೀರು ನಿರ್ವಹಣೆ **(UWM)**ಘಟಕದಡಿಯಲ್ಲಿ ರಾಜ್ಯದ 42 ನಗರ ಸ್ಥಳೀಯ ಸಂಸ್ಥೆಗಳಲ್ಲಿ **Interception and Diversion works** ಅನುಷ್ಠಾನಗೊಳಿಸುವ ಸಲುವಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮ 2000ರ ಪ್ರಕಾರ, **DBOT** ಮಾದರಿಯಲ್ಲಿ ಈ ಕೆಳಕಂಡಂತೆ ಟೆಂಡರ್ ಕರೆಯಲು ಉದ್ದೇಶಿಸಲಾಗಿದೆ.

ಕ್ರ ಸಂ.	ಟೆಂಡರ್ ಕಾಮಗಾರಿಗಳ ಹೆಸರು & ಇಂಡೆಂಟ್ ಸಂಖ್ಯೆ	ಟೆಂಡರ್ ಮೊತ್ತ ರೂ.ಲಕ್ಷಗಳಲ್ಲಿ (Excluding GST)
1.	**Package No-3** Design, Build, Operate and Transfer (DBOT) of Interception and Diversion works in Nipani, Mugalakoda, Naaganura, Sadalga, Sankeshwar, Saundatti-yellamma, shedbaala and Examba ULBs of Belagavi District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WT/WORK_INDENT57759)**	2759.43
2.	**Package No-10** Design, Build, Operate and Transfer (DBOT) of Interception and Diversion works in Ron, Nargund, Gajendragadh, Lakshmeshwara, Naregal and Mundaragi ULBs of Gadag District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57760)**	1730.61
3.	**Package No-12** Design, Build, Operate and Transfer (DBOT) of Interception and Diversion works in Bankapura, Hanagal, Hirekerur and savanur ULBs of Haveri District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57761)**	1848.86
4.	**Package No-18** Design, Build, Operate and Transfer (DBOT) of Interception and Diversion works in Babaleshwar, Devarahipparagi, Indi, manuguli, Muddebihal, Sindgi and Thikota ULBs of Vijayapura District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57762)**	1762.90
5.	**Package No-5** Design, Build, Operate and Transfer (DBOT) of Interception and Diversion works in Chamarajanagar and Gundlupet ULBs of Chamarajanagara District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57763)**	615.34
6.	**Package No-11** Design, Build, Operate and Transfer (DBOT) of Interception and Diversion works in Channarayapatna and Sakleshpura ULBs of Hassan District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57764)**	852.79
7.	**Package No-13** Design, Build, Operate and Transfer (DBOT) of Interception and Diversion works in Chitpur, Kamalapura, Shahabad and yadrami ULBs of Kalburgi District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57766)**	947.70
8.	**Package No-20** Design, Build, Operate and Transfer (DBOT) of Interception and Diversion works in Hunsagi, kakkera and Kembavi ULBs of Yadagiri District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57767)**	1626.66
9.	**Package No-6** Design, Build, Operate and Transfer (DBOT) of Interception and Diversion works in Chintamani, Sidlaghatta, Chikkaballapura and Bagepalli ULBs of Chikkaballapura District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2025-26/WS/WORK_INDENT56797)**	1563.16
10	**Package No-15** Design, Build, Operate and Transfer (DBOT) of Interception and Diversion works in Sindhnur and Lingasugur ULBs of Raichur District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2025-26/WS/WORK_INDENT56787)**	847.11

ಟೆಂಡರನ್ನು ಕೆಪಿಪಿ ಪೋರ್ಟಲ್ ನಲ್ಲಿ ದ್ವಿ- ಲಕೋಟೆ ಪದ್ಧತಿಯಲ್ಲಿ ಪ್ರಚುರಪಡಿಸಲಾಗಿದ್ದು, ಕೆಪಿಪಿ ಪೋರ್ಟಲ್ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಆಸಕ್ತ ಅರ್ಹ ಬಿಡ್ಡುದಾರರು/ಏಜೇನ್ಸಿದಾರರು ಭಾಗವಹಿಸಲು ಕೋರಲಾಗಿದೆ, ಯಾವುದೇ ಮಾಹಿತಿಯನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರವೇ ಪಡೆಯುವುದು.

ಸಹಿ/-
ಅಧೀಕ್ಷಕ ಅಭಿಯಂತರರು,
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.

DIPR/CP/501/Zen/2026-27

ಕಿರುಸುದ್ದಿ

ಮನೆಗೆ ನುಗ್ಗಿ ಮನೆಯ ಮಾಲೀಕನ ಇರಿದು ಕೊಲೆ: ಮೂರು ಮಂದಿ ವಿರುದ್ಧ ಕೇಸು

ಕಾಸರಗೋಡು: ಮನೆಗೆ ನುಗ್ಗಿ ಅತಿಕ್ರಮಿಸಿ ನುಗ್ಗಿ ಮನೆಯೊಡೆಯನನ್ನು ಇರಿದು ಕೊಲೆಗೈಯ್ಯಲೆತ್ನಿಸಿದ ಘಟನೆ ಬೇಡಗಂ ಪೊಲೀಸ್ ಠಾಣೆ ವ್ಯಾಪ್ತಿಯ ಮುನ್ನಾಡ್ ತೋರಣ ಎಂಬಲ್ಲಿ ನಡೆದಿದೆ. ತೋರಣದ ದಿ.ಕಣ್ಣನ್ ಎಂಬವರ ಪುತ್ರ ಟಿ.ರಾಜನ್ (54) ಎಂಬವರು ಇರಿತದಿಂದ ಗಾಯಗೊಂಡಿದ್ದಾರೆ. ಸೋಮವಾರ ರಾತ್ರಿ ವೇಳೆ ಮಾರಕಾಯುಧಗಳೊಂದಿಗೆ ಮನೆಗೆ ಅತಿಕ್ರಮಿಸಿ ನುಗ್ಗಿದ ಮೂರು ಮಂದಿ ದಾಳಿ ನಡೆಸಿರುವುದಾಗಿ ದೂರಲಾಗಿದೆ. ಮನೆಗೆ ನುಗ್ಗಿದ ತಂಡ ಆಹಾರ ಸೇವಿಸು ತ್ತಿದ್ದ ರಾಜನ್‌ರ ಮೇಲೆ ಹಲ್ಲೆಗೈದಿದೆ. ಈ ವೇಳೆ ರಾಜನ್ ಓಡಿ ಪಾರಾಗಲು ಯತ್ನಿಸಿದಾಗ ತಂಡ ಚಾಕುವಿನಿಂದ ಇರಿದು ಗಾಯಗೊಳಿಸಿದೆ ಎಂದೂ ಈ ವೇಳೆ ತಡೆಯಲೆತ್ನಿಸಿದಾಗ ಬಲದ ಕೈಯ ಬೆರಳುಗಳಿಗೆ ಗಂಭೀರ ಗಾಯಗಳಾಗಿರುವುದಾಗಿ ದೂರಲಾಗಿದೆ. ಘಟನೆಗೆ ಸಂಬಂಧಿಸಿ ಮುನ್ನಾಡ್ ಚುಳ್ಳಿಯ ಬಿ.ಪುರುಷೋತ್ತಮನ್, ಪರಯಂಪಳ್ಳದ ಪಿ.ಕೆ.ನಾರಾಯಣನ್, ತೋರಣದ ಪಿ.ಗೋವಿಂದನ್ ಎಂಬವರ ವಿರುದ್ಧ ಬೇಡಗಂ ಪೊಲೀಸರು ಹತ್ಯೆಯತ್ನ ಕೇಸು ದಾಖಲಿಸಿಕೊಂಡಿದ್ದಾರೆ. ದೂರುಗಾರನಾದ ರಾಜನ್ ಹಾಗೂ ಸಂಬಂಧಿಕನಾದ ಗೋಪಾಲನ್ ಮಧ್ಯೆಗಿನ ದಾರಿ ತರ್ಕವೇ ಹಲ್ಲೆಗೆ ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ.

ಮಾವುಂಗಾಲ್ ಪೇಟೆಯಲ್ಲಿ ಸಾರಿಗೆ ಸಮಸ್ಯೆ: ಮುಷ್ಕರ ನಡೆಸಲು ಬಿಜೆಪಿ ನಿರ್ಧಾರ

ಕಾಞಂಗಾಡು: ಕಾಞಂಗಾಡಿನ ಮಾವುಂಗಾಲ್ ಪೇಟೆಯ ಸಾರಿಗೆ ಸಮಸ್ಯೆಗಳಿಗೆ ಪರಿಹಾರ ಕಾಣಬೇಕೆಂದು ಒತ್ತಾಯಿಸಿ ಬಿಜೆಪಿ ಅಜಾನೂರು ಪಂಚಾಯತ್ ಸಮಿತಿ ಅನಿರ್ಧಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಿದೆ. ಕಾಞಂಗಾಡಿನಿಂದ ಬರುವ ವಾಹನಗಳಿಗೆ ರಸ್ತೆ ಅಡ್ಡ ದಾಟಲು ಸಾಧ್ಯವಾಗುವ ರೀತಿಯಲ್ಲಿ ಕೆಲ ಸೇತುವೆ ನಿರ್ಮಿಸ ಬೇಕೆಂದು ಒತ್ತಾಯಿಸಿ ಬಿಜೆಪಿ ಮುಷ್ಕರ ನಡೆಸಲಿದೆ. ಈ ಸಂಬಂಧ ನಡೆದ ಸಭೆಯಲ್ಲಿ ಬಿಜೆಪಿ ರಾಜ್ಯ ಸಮಿತಿ ಸದಸ್ಯ ಎ.ವೇಲಾಯುಧನ್, ಮಂಡಲಾಧ್ಯಕ್ಷ ಎಂ.ಪ್ರಶಾಂತ್, ಜಿಲ್ಲಾ ಸಮಿತಿ ಸದಸ್ಯ ರವೀಂದ್ರನ್ ಮಾವುಂಗಾಲ್, ಅಜಾನೂರು ಪಂಚಾಯತ್ ಸಮಿತಿ ಅಧ್ಯಕ್ಷ ಪ್ರಸಾದ್ ಮಿಥಿಲ, ಬಿಎಂಎಸ್ ಜಿಲ್ಲಾ ಕಾರ್ಯದರ್ಶಿ ಕೆ.ವಿ.ಬಾಬು ಮೊದಲಾದವರು ಭಾಗವಹಿಸಿದ್ದರು.

ಬಿಜೆಪಿ ಕಾರ್ಯಕರ್ತರನ್ನು ತಡೆದು ನಿಲ್ಲಿಸಿ ಹಲ್ಲೆ: 10 ಮಂದಿ ವಿರುದ್ಧ ಕೇಸು

ಕಾಸರಗೋಡು: ಬಿಜೆಪಿ ಕಾರ್ಯಕರ್ತರನ್ನು ತಡೆದು ನಿಲ್ಲಿಸಿ ಹಲ್ಲೆಗೈದು, ಬಿಯರ್ ಬಾಟಲಿಯಿಂದ ಹೊಡೆದು ಬೈಕ್‌ಗೆ ಹಾನಿ ಉಂಟುಮಾಡಿರುವುದಾಗಿ ದೂರಲಾಗಿದೆ. ಪೂಚಕ್ಕಾಡ್ ಪುದಿಯಪುರದ ಪಿ.ಹರೀಶ್‌ಕುಮಾರ್ (36) ರ ಮೇಲೆ ಹಲ್ಲೆಗೈಯ್ಯಲಾಗಿದೆ. ಈ ಘಟನೆಗೆ ಸಂಬಂಧಿಸಿ ಮುಕ್ಕೋಡ್‌ನ ಅಬ್ದುಲ್ ರಹ್ಮಾನ್, ವಾಜಿದ್, ಮೊಯ್ದು, ರಫೀಕ್ ಹಾಗೂ ಕಂಡರೆ ಪತ್ತೆಹಚ್ಚಬಹುದಾದ 6 ಮಂದಿಯ ವಿರುದ್ಧ ಬೇಕಲ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಸೋಮವಾರ ಸಂಜೆ ವೇಳೆ ಘಟನೆ ನಡೆದಿದ್ದು, ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದ ಹರೀಶ್‌ಕುಮಾರ್‌ರನ್ನು ಪೂಚಕ್ಕಾಡ್‌ನಲ್ಲಿ ತಂಡ ತಡೆದು ನಿಲ್ಲಿಸಿ ಹಲ್ಲೆಗೈದು ಬಿಯರ್ ಬಾಟಲಿಯಿಂದ ಹೊಡೆದು ಬೈಕ್‌ಗೆ ಹಾನಿ ಉಂಟುಮಾಡಿರುವುದಾಗಿ ದೂರಲಾಗಿದೆ. ಅಲ್ಲದೆ ಸಮೀಪದ ಬಸ್ ವೈಟಿಂಗ್ ಶೆಡ್ ಹಾಗೂ ಪಕ್ಕದಲ್ಲಿ ನಿಲ್ಲಿಸಲಾಗಿದ್ದ ಮೂರು ವಾಹನಗಳಿಗೂ ತಂಡ ಹಾನಿಗೈದಿದ್ದು, ಇದರಿಂದ 80 ಸಾವಿರ ರೂ. ನಷ್ಟ ಉಂಟಾಗಿರುವುದಾಗಿ ದೂರಲಾಗಿದೆ.

ಸುಳ್ಯ ಜನತೆಗೆ ತಂಪೆರೆದ ವರುಣ

ಸುಳ್ಯ: ಬಿಸಿಲ ಬೇಗೆಯಿಂದ ತತ್ತರಿಸಿದ ಸುಳ್ಯ ತಾಲೂಕಿಗೆ ಮಂಗಳವಾರ ರಾತ್ರಿ ವರುಣ ತಂಪೆರದಿದ್ದಾನೆ. ಕಳೆದ ಕೆಲವು ದಿನಗಳಿಂದ ವಿಪರೀತ ಬಿಸಿಲಿಗೆ ನಲುಗಿ ಹೋಗಿದ್ದ ಜನತೆ ಮಳೆಯಿಂದ ಸಂತಸಗೊಂಡಿದ್ದಾರೆ. ಮಂಗಳವಾರ ಮುಂಜಾನೆಯಿಂದ ಸುಳ್ಯದ ವಿವಿಧೆಡೆ ಮೋಡ ಕವಿದ ವಾತಾವರಣವಿತ್ತು. ಸಂಜೆ ಕತ್ತಲು ಕವಿಯುತ್ತಿದ್ದಂತೆ ತಂಪು ಗಾಳಿ ಬೀಸತೊಡಗಿ ರಾತ್ರಿ ಉತ್ತಮ ಮಳೆಯಾಗಿದೆ. ಮಳೆ ಕೊರತೆಯಿಂದ ಈಗಾಗಲೇ ಸುಳ್ಯದ ವಿವಿಧೆಡೆ ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟ ಗಣನೀಯ ಕುಸಿದಿದೆ.

ವ್ಯಕ್ತಿಯೊಬ್ಬರ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆ

ಬೆಳ್ತಂಗಡಿ : ಮರಕ್ಕೆ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ವ್ಯಕ್ತಿಯೊಬ್ಬರ ಶವ ಕೊಳೆತ ಸ್ಥಿತಿಯಲ್ಲಿ ಲಾಯಿಲ ಗ್ರಾಮದ ಸವಣಾಲು – ಕರ್ನೊಡಿ ರಸ್ತೆಯ ನಿಡ್ಯಾರ ಗುಡ್ಡದಲ್ಲಿ ಅರೆ ಬೆತ್ತಲೆ ಸ್ಥಿತಿಯಲ್ಲಿ ಮೇ 5 ರಂದು ಸಂಜೆ ಪತ್ತೆಯಾಗಿದೆ. ಸ್ಥಳೀಯ ನಿವಾಸಿಗೆ ದುರ್ವಾಸನೆ ಬಂದಿದ್ದರಿಂದ ಗುಡ್ಡಕ್ಕೆ ಹೋಗಿ ಪರಿಶೀಲಿಸಿದಾಗ ವ್ಯಕ್ತಿಯೊಬ್ಬರ ಶವ ಕೊಳೆತ ಸ್ಥಿತಿಯಲ್ಲಿ ಮರವೊಂದರಲ್ಲಿ ನೇಣು ಬಿಗಿದ ರೀತಿಯಲ್ಲಿ ಪತ್ತೆಯಾಗಿದೆ. ಈ ಬಗ್ಗೆ ಬೆಳ್ತಂಗಡಿ ಪೊಲೀಸರಿಗೆ ಮಾಹಿತಿ ನೀಡಿದ್ದು, ಪೊಲೀಸರು ಮತ್ತು ಸೋಕೋ ತಂಡ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದಾರೆ. ಮೃತನ ಅಂದಾಜು ಸುಮಾರು 45 ರಿಂದ 50 ವರ್ಷ ವಯಸ್ಸಿನ ವ್ಯಕ್ತಿಯಾಗಿರಬಹುದಾಗಿದ್ದು. ಶವ ಸಂಪೂರ್ಣ ಕೊಳೆತಿದ್ದು ಸುಮಾರು ಒಂದು ವಾರಗಳ ಹಿಂದೆ ಘಟನೆ ನಡೆದಿರಬಹುದು ಎಂದು ಸಂಶಯಿಸಲಾಗಿದೆ.



ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಜನರಲ್ ಮೆಡಿಸಿನ್ ವಿಭಾಗದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಶಿವರಾಮ ಮೂಲ್ಯ ಅವರನ್ನು ಕಾಲೇಜಿನ ಮೆಡಿಸಿನ್ ವಿಭಾಗದ ವತಿಯಿಂದ ಇತ್ತೀಚೆಗೆ ಸನ್ಮಾನಿಸಿ, ಬೀಳ್ಕೊಡುಗೆ ನೀಡಲಾಯಿತು. ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ. ಸತೀಶ್ ರಾವ್ ಬಿ., ವಿಭಾಗದ ಪ್ರಾಧ್ಯಾಪಕರು, ಉಪನ್ಯಾಸಕರು ಮತ್ತಿತರ ಸಿಬ್ಬಂದಿ ಉಪಸ್ಥಿತರಿದ್ದರು.

ಲಾಭ ನೀಡುವ ಆಮಿಷ ಒಡ್ಡಿ ವೃದ್ಧಗೆ 18.81 ಲಕ್ಷ ರೂ.ಗಳ ಭಾರೀ ವಂಚನೆ

ಮಂಗಳೂರು: ಮಂಗಳೂರಿನಲ್ಲಿ ವಂಚನೆಯ ಪ್ರಕರಣ ನಿತ್ಯ ಒಂದಲ್ಲ ಒಂದು ಬೆಳಕಿಗೆ ಬರುತ್ತಲೇ ಇವೆ. ಎಷ್ಟೇ ಜಾಗೃತಿ ಕಾರ್ಯ ನಡೆದರೂ ಮೋಸ ಹೋಗುವವರ ಸಂಖ್ಯೆ ಮಾತ್ರ ಕಡಿಮೆಯಾಗಿಲ್ಲ.

ಇದೀಗ ವೃದ್ಧರೊಬ್ಬರನ್ನು ನಂಬಿಸಿ 18.81 ಲಕ್ಷ ರೂ ವಂಚಿಸಲಾಗಿದೆ. ಆನ್‌ಲೈನ್ ಟ್ರೇಡಿಂಗ್‌ನಿಂದ ಅಧಿಕ ಲಾಭದ ಆಷಮಿ ಅವರನ್ನು ವಂಚಿಲಾಗಿದ್ದು, ಕಂಕನಾಡಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 75 ವರ್ಷದ ಹಿರಿಯ ನಾಗರಿಕರು ವಂಚನೆಗೆ ಒಳಗಾದವರು. 2025ರ ಡಿ.6ರಂದು ಮೊಬೈಲ್‌ನಲ್ಲಿ ನೋಡುತ್ತಿರುವಾಗ ಆನ್‌ಲೈನ್ ಟ್ರೇಡಿಂಗ್ ಬಗ್ಗೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಭಾಷಣ ಇರುವ ವಿಡಿಯೋ ವನ್ನು ಕಂಡು ಬಂದಿದೆ. ಆ ಬಗ್ಗೆ ಆಕರ್ಷಿತರಾಗಿ ಆನ್‌ಲೈನ್ ಟ್ರೇಡಿಂಗ್ ಮಾಡುವ ಉದ್ದೇಶದಿಂದ ಅದರಲ್ಲಿದ್ದ ಲಿಂಕ್ ಕ್ಲಿಕ್ ಮಾಡಿ, ವಿಳಾಸ ನೋಂದಾಯಿಸಿದ್ದಾರೆ. ಸ್ವಲ್ಪ ಹೊತ್ತಿನಲ್ಲಿ ಮೊಬೈಲ್ ಗೆ ಕರೆ ಬಂದಿದ್ದು, ತನ್ನ ಹೆಸರು ಮೀನಾಕ್ಷಿ ಎಂದು ಪರಿಚಯ ಮಾಡಿಕೊಂಡು ಟ್ರೇಡಿಂಗ್ ಬಗ್ಗೆ ತಿಳಿಸಿದ್ದಾಳೆ. ಆಕೆಯ ಸೂಚನೆಯಂತೆ 21,000 ರೂ.ವನ್ನು ಆಕೆ ತಿಳಿಸಿದ ಬ್ಯಾಂಕ್ ಖಾತೆಗೆ ವರ್ಗಾಹಿಸಿದ್ದಾರೆ. ಆಕೆ ವಾಟ್ಸಪ್ ನಲ್ಲಿ ಕಳುಹಿಸಿದ ಲಿಂಕ್‌ನ್ನು ತೆರೆದು ಮಾಡಿ ಅದರಲ್ಲಿ ಮಾಹಿತಿ ದಾಖಲಾತಿ ಮಾಡಿದ್ದಾರೆ. ಡಿ.15ರಂದು ಅಕ್ಷರಗೌಡ ಎನ್ನುವ ಹೆಸರಿನ ಯುವತಿ ಆನಂದ ಉನ್ನಿಕೃಷ್ಣ ಎನ್ನುವವರ ಅಸಿಸ್ಟೆಂಟ್ ಎಂದು ಹೇಳಿಕೊಂಡು ಕರೆ ಮಾಡಿದ, ಟ್ರೇಡ್ ಮಾಡುವ ಬಗ್ಗೆ ಮಾಹಿತಿ ನೀಡಿದ್ದಾಳೆ. ಹೆಚ್ಚಿನ ಹಣವನ್ನು ಲಾಭವಾಗಿ ಪಡೆಯಬಹುದು ಎಂದು ತಿಳಿಸಿದ್ದಾಳೆ. ಆಕೆಯ ನಿರ್ದೇಶನದಂತೆ ದೂರುದಾರರು ಡಿ.18ರಿಂದ ಹಂತಹಂತವಾಗಿ ಒಟ್ಟು 18,81,000 ರೂ. ವನ್ನು ವಿವಿಧ ಖಾತೆಗಳಿಗೆ ವರ್ಗಾಯಿಸಿದ್ದಾರೆ. ದೂರುದಾರರಿಗೆ ಕೋಟಿ ರೂಪಾಯಿಗೂ ಹೆಚ್ಚಿನ ಹಣವನ್ನು ಲಾಭವಾಗಿ ನೀಡುವುದಾಗಿ ನಂಬಿಸಿ ಹೂಡಿಕೆ ಮಾಡಿಸಿದ್ದಾರೆ. ಬಳಿಕ ಇದೊಂದು ವಂಚನಾ ಜಾಲ ಎಂದು ಅರಿವಾಗಿ ಕಂಕನಾಡಿ ನಗರ ಠಾಣೆಗೆ ದೂರು ನೀಡಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಶಾರ್ಟ್ ರೇಂಜ್ ರೈಫಲ್ ಫೈರಿಂಗ್ ರೇಂಜ್ ಲೋಕಾರ್ಪಣೆ | ಪ್ರೊ. ಅಶೋಕ್ ಸಂಗಪ್ಪ ಮೆಚ್ಚುಗೆ

ಎನ್‌ಸಿಸಿಯಿಂದ ಶಿಸ್ತು, ದೇಶ ಭಕ್ತಿ ಬಲಿಷ್ಟ

ಮಡಿಕೇರಿ: ಮಡಿಕೇರಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದ ಮೂಲಕ 5.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ 'ಶಾರ್ಟ್ ರೇಂಜ್ ರೈಫಲ್ ಫೈರಿಂಗ್ ರೇಂಜ್' ಅನ್ನು 19ನೇ ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಕಮಾಂಡಿಂಗ್ ಆಫೀಸರ್ ಕರ್ನಲ್ ರೆಜಿತ್ ಮುಕುಂದನ್ ಮತ್ತು ಕೊಡಗು ವಿ.ವಿ ಉಪ ಕುಲಪತಿ ಪ್ರೊ. ಅಶೋಕ್ ಸಂಗಪ್ಪ ಆಲೂರ ಅವರು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಕರ್ನಲ್ ರೆಜಿತ್ ಮುಕುಂದನ್, ಮಡಿಕೇರಿ ಸುತ್ತಮುತ್ತಲಿನ ಪ್ರದೇಶದಲ್ಲಿ ಎನ್‌ಸಿಸಿ ಕೆಡೆಟ್‌ಗಳಿಗೆ ಫೈರಿಂಗ್ ರೇಂಜ್ ಇಲ್ಲದಾಗಿತ್ತು. 19ನೇ ಕರ್ನಾಟಕ ಎನ್‌ಸಿಸಿ ಬೆಟಾಲಿಯನ್‌ಗೆ ಈ ರೈಫಲ್ ಫೈರಿಂಗ್ ರೇಂಜ್ ಅಮೂಲ್ಯವಾಗಿದ್ದು, ಕೆಡೆಟ್‌ಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು. ಫೈರಿಂಗ್ ರೇಂಜ್‌ನ ಅಗತ್ಯತೆಯನ್ನು ಮನಗಂಡು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘ ಕಾಲೇಜು ಮೈದಾನದ ಪಕ್ಕದಲ್ಲೇ ಎನ್‌ಸಿಸಿಗೆ ಕೊಡುಗೆಯಾಗಿ ನೀಡಿರುವುದಕ್ಕೆ ಕರ್ನಲ್ ರೆಜಿತ್ ಮುಕುಂದನ್ ಶ್ಲಾಘನೆ ವ್ಯಕ್ತಪಡಿಸಿದರು.

ದೇಶಸೇವೆಗೆಮುಂದಾಗಿ: ಸಭಾಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದ ಕೊಡಗು ವಿ.ವಿ ಉಪ ಕುಲಪತಿ ಪ್ರೊ.ಅಶೋಕ್ ಸಂಗಪ್ಪ ಆಲೂರ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘ ಕಾಲೇಜಿಗೆ ಹತ್ತಾರು ಕೊಡುಗೆಗಳನ್ನು ನೀಡಿದೆ. ಇದೇ ರೀತಿಯ ಸಹಕಾರ ಮುಂದೆಯೂ ಇರಲಿ ಎಂದು ಆಶಿಸಿದರು. ಬಂದೂಕಿನಿಂದ ಹಾರಿದ ಗುಂಡು ಯಾವ ರೀತಿ ತನ್ನ ಗುರಿಯನ್ನು ತಲುಪುತ್ತದೆಯೋ ಅದೇ ರೀತಿಯಲ್ಲಿ ಎನ್‌ಸಿಸಿ ವಿದ್ಯಾರ್ಥಿಗಳು ತಮ್ಮ ಬದುಕಿನ ಗುರಿಯನ್ನೂ ಹೊಂದಬೇಕು ಎಂದು ಅವರು ಸಲಹೆ ನೀಡಿದರು. ಎನ್‌ಸಿಸಿ



ಕೆಡೆಟ್‌ಗಳಾಗಿ ಶಿಸ್ತು ಮತ್ತು ದೇಶ ಭಕ್ತಿಯನ್ನು ಮೈಗೂಡಿಸಿಕೊಳ್ಳಲು ಸಾಧ್ಯವಿದೆ. ಹೀಗಾಗಿ ಎಲ್ಲಾ ವಿದ್ಯಾರ್ಥಿಗಳು ಎನ್‌ಸಿಸಿ ಸೇರ್ಪಡೆಯಾಗಬೇಕು. ದೇಶದ ರಕ್ಷಣೆಗೆ ಅಗತ್ಯವಾದಾಗ ದೇಶ ಸೇವೆಗೂ ಮುಂದಾಗಬೇಕು ಎಂದು ಪ್ರೊ.ಅಶೋಕ್ ಸಂಗಪ್ಪ ಕರೆ ನೀಡಿದರು.

ಜೀವನದಲ್ಲಿ ಗುರಿ ಮುಖ್ಯ: ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಮುಕ್ಕಾಟಿರ ಎ.ಅಪ್ಪಯ್ಯ, ವಿದ್ಯಾರ್ಥಿ ಜೀವನದಲ್ಲಿ ತಾವು ಎನ್‌ಸಿಸಿ ಮೂಲಕ ಪಡೆದ ತರಬೇತಿ, ವಿವಿಧ ಕ್ಯಾಂಪ್‌ಗಳಲ್ಲಿ ಪಡೆದ ಅನುಭವಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಎನ್‌ಸಿಸಿ 'ಸಿ' ಸರ್ಟಿಫಿಕೇಟ್ ಮೂಲಕ ತಾವು ಪೊಲೀಸ್ ಇಲಾಖೆಗೆ ಭರ್ತಿಯಾಗಿ ಕೊಡಗು ಜಿಲ್ಲೆ ಸಹಿತ ರಾಜ್ಯದ ವಿವಿಧ ಭಾಗಗಳಲ್ಲಿ ಸಲ್ಲಿಸಿದ ಸೇವೆಗಳನ್ನು ವಿವರಿಸಿದರು. ವಿದ್ಯಾರ್ಥಿ ಜೀವನದಲ್ಲಿಯೇ ಭವಿಷ್ಯದ ಬಗ್ಗೆ ನಿಖರ ಗುರಿ ಹೊಂದಬೇಕೆಂದು ಅವರು ಸಲಹೆ ನೀಡಿದರು.

ಈ ಹಿಂದೆ ಜಿಲ್ಲೆಯಲ್ಲಿದ್ದ ಫೈರಿಂಗ್ ರೇಂಜ್‌ಗಳು ಪ್ರಸ್ತುತ ಒತ್ತುವರಿಗೆ ತುತ್ತಾಗಿರುವ ಬಗ್ಗೆ ಅವರು ವಿಷಾದ ವ್ಯಕ್ತಪಡಿಸಿದರು. ಇದೀಗ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಮೈದಾನದಲ್ಲಿಯೇ ಫೈರಿಂಗ್ ರೇಂಜ್ ನಿರ್ಮಿಸಿರುವುದಕ್ಕೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘವನ್ನು ಅಭಿನಂದಿಸಿದರು.

ಕಾಲೇಜಿನ ಕೊಡುಗೆ ಅಮೂಲ್ಯ: ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಭಾರತೀಯ ಸೇನೆ ಸೇರಿದಂತೆ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಶ್ರೀಲಂಕಾದಲ್ಲಿ ನಡೆದಿದ್ದ ಕಾರ್ಯಾಚರಣೆಯಲ್ಲಿ ಇದೇ ಕಾಲೇಜಿನ ಮಾಜಿ ವಿದ್ಯಾರ್ಥಿ ಪುಟ್ಟಿಚಂಡ ಎಸ್.ಗಣಪತಿ ಅವರು ಮೊದಲ ಮಹಾವೀರ ಚಕ್ರ' ಪ್ರಶಸ್ತಿಗೂ ಪಾತ್ರರಾಗಿದ್ದಾರೆ. ಇಂತಹ ಹತ್ತಾರು ಅಮೂಲ್ಯ ಸೇನಾಧಿಕಾರಿಗಳನ್ನು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ದೇಶಕ್ಕೆ ಕೊಡುಗೆಯಾಗಿ ನೀಡಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು. ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿಗೆ ಹಳೇ ವಿದ್ಯಾರ್ಥಿ ಸಂಘದ ಸಹಕಾರ, ಬೆಂಬಲ ಸದಾ ಇರಲಿದೆ ಎಂದು ಅವರು ಇದೇ ಸಂದರ್ಭದಲ್ಲಿ ಅಭಯ ನೀಡಿದರು.

ಸಂಘ ಕಾಲೇಜಿಗೆ ಬೆನ್ನೆಲುಬು: ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲ ಮೇಜರ್ ಪ್ರೊ ಬಿ.ರಾಘವ ಮಾತನಾಡಿ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘ ಕಾಲೇಜಿಗೆ ಬೆನ್ನೆಲುಬಾಗಿ ನಿಂತಿದೆ. ಸಂಘದ ಸಹಕಾರದಿಂದ ಕಾಲೇಜಿನಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ. ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ಎಲ್ಲಾ ಮಾಜಿ ವಿದ್ಯಾರ್ಥಿಗಳು ಹಳೇ ವಿದ್ಯಾರ್ಥಿ ಸಂಘದ ಸದಸ್ಯತ್ವವನ್ನು ಪಡೆಯುವ ಮೂಲಕ ಸಂಘವನ್ನು ಮತ್ತಷ್ಟು ಬಲಪಡಿಸಬೇಕು. ಇದರಿಂದ ಕಾಲೇಜಿನ ಭವಿಷ್ಯಕ್ಕೂ ಸಹಕಾರಿಯಾಗಲಿದೆ ಎಂದು ಹೇಳಿದರು. ಎನ್‌ಸಿಸಿ ಬಂದೂಕು ತರಬೇತಿಗೆ ಬೇಕಾಗಿದ್ದ ರೈಫಲ್ ರೇಂಜ್ ಅನ್ನು ಸಕಾಲದಲ್ಲಿ ಹಳೇ ವಿದ್ಯಾರ್ಥಿ ಸಂಘ ನಿರ್ಮಿಸಿ ಕಾಲೇಜಿಗೆ ಕೊಡುಗೆಯಾಗಿ ನೀಡಿದೆ ಎಂದು ಹರ್ಷ ವ್ಯಕ್ತಪಡಿಸಿದ ಅವರು, ವಿದ್ಯಾರ್ಥಿಗಳು ಕೂಡಾ ಸದಾಕಾಲ ಪಾದರಸದಂತೆ ಚಟುವಟಿಕೆಯಿಂದ ಇರಬೇಕು ಎಂದು ಕಿವಿ ಮಾತು ಹೇಳಿದರು. ಕಾಲೇಜಿನ ಮಾಜಿ ವಿದ್ಯಾರ್ಥಿ, ವಕೀಲ ಮುಂಡಂಡ ಸುದಯ್ ನಾಣಯ್ಯ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಶೂಟಿಂಗ್ ಕ್ರೀಡೆಯೂ ಮುನ್ನಲೆಯಲ್ಲಿದೆ. ಇದೀಗ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದ ಮೂಲಕ ನಿರ್ಮಿಸಲಾಗಿರುವ ಫೈರಿಂಗ್ ರೇಂಜ್‌ನಲ್ಲಿ ರಾಜ್ಯ ರಾಷ್ಟ್ರ ಮಟ್ಟದ ಶೂಟಿಂಗ್ ಕ್ರೀಡೆಗಳಿಗೆ ತರಬೇತಿಯನ್ನು ನೀಡಬಹುದಾಗಿದೆ. ಆ ನಿಟ್ಟಿನಲ್ಲಿ ಚಿಂತಿಸಿದಲ್ಲಿ ಶೂಟಿಂಗ್ ಕ್ರೀಡಾಪಟುಗಳಿಗೂ ಕೂಡ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಹಳೇ ವಿದ್ಯಾರ್ಥಿ ಸಂಘದ ಪ್ರಮುಖರಾದ ಬೊಟ್ಟಂಗಡ ಗಣಪತಿ, ಶ್ಯಾಮ್, ಪತ್ರಕರ್ತ ಚಂದನ್ ನಂದರಬೆಟ್ಟು, ಸಾಹಿತಿ ರಶ್ಮಿ ಮೇದಪ್ಪ, ಉದ್ಯಮಿ ದಮಯಂತಿ, ಕಾಲೇಜಿನ ಉಪನ್ಯಾಸಕರಾದ ರವಿಶಂಕರ್, ಕೃಷ್ಣ ಕಾಲೇಜು ಸಿಬ್ಬಂದಿಗಳು, ಎನ್‌ಸಿಸಿ ಕೆಡೆಟ್‌ಗಳು ಹಾಜರಿದ್ದರು.

ಸನ್ಮಾನದ ಗೌರವ

ಕಾರ್ಯಕ್ರಮದಲ್ಲಿ 19ನೇ ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಕಮಾಂಡಿಂಗ್ ಆಫೀಸರ್ ಕರ್ನಲ್ ರೆಜಿತ್ ಮುಕುಂದನ್, ಕೊಡಗು ವಿ.ವಿ ಉಪ ಕುಲಪತಿ ಪ್ರೊ.ಅಶೋಕ್ ಸಂಗಪ್ಪ ಆಲೂರು, ಪ್ರಾಂಶುಪಾಲ ಮೇಜರ್ ಪ್ರೊ ಬಿ.ರಾಘವ, ನಿವೃತ್ತ ಎಸ್.ಪಿ. ಮುಕ್ಕಾಟಿರ ಎ.ಅಪ್ಪಯ್ಯ, ವಕೀಲ ಮುಂಡಂಡ ಸುದಯ್ ನಾಣಯ್ಯ, ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬೊಳ್ಳಜ್ಜಿರ ಅಯ್ಯಪ್ಪ, ರೈಫಲ್ ರೇಂಜ್ ಗುತ್ತಿಗೆದಾರ ಪರಮೇಶ್, ಎನ್‌ಸಿಸಿ ಅಧಿಕಾರಿಗಳು ಮತ್ತು ಸೇನಾ ಸಿಬ್ಬಂದಿಗಳನ್ನು ಇದೇ ಸಂದರ್ಭ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದ ಮೂಲಕ ಸನ್ಮಾನಿಸಿ ಗೌರವಿಸಲಾಯಿತು.

ಸೇವಾಂಜಲಿ ಪ್ರತಿಷ್ಠಾನದಿಂದ ಕ್ಷಯ ರೋಗಿಗಳಿಗೆ ದವಸ ಧಾನ್ಯ ವಿತರಣೆ

ಬಂಟ್ವಾಳ: ಸಾತ್ವಿಕ ಆಹಾರ ಸೇವನೆಯ ಮೂಲಕ ಆರೋಗ್ಯವಂತರಾಗಿ ಬಾಳಬೇಕು. ಔಷಧಿಯನ್ನು ವ್ರತದಿಂದ ಸೇವಿಸಬೇಕು. ನಾವು ಸದೃಢರಾಗಿದ್ದರೆ ನಮ್ಮ ದೇಶ ಸದೃಢವಾಗಲಿದೆ. ಸರಕಾರ ಮಾಡುವ ಕಾರ್ಯದಲ್ಲಿ ಸೇವಾಂಜಲಿ ಪ್ರತಿಷ್ಠಾನ ಕೈ ಜೋಡಿಸಿದಂತೆ ಸೇವಾಂಜಲಿಯ ಸೇವಾ ಕಾರ್ಯದಲ್ಲಿ ನಾವೂ ಕೈ ಜೋಡಿಸೋಣ ಎಂದು ದ.ಕ. ಜಿಲ್ಲಾ ಕಸಾಪ ನಿಕಟಪೂರ್ವಾಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ ಹೇಳಿದರು.

ಕೇಂದ್ರ ಸರಕಾರದ ನಿಕ್ಷಯ್ ಮಿತ್ರ ಯೋಜನೆಯಡಿ ಫರಂಗಿಪೇಟೆಯ ಸೇವಾಂಜಲಿ ಪ್ರತಿಷ್ಠಾನದ ವತಿಯಿಂದ ನಡೆದ ಕ್ಷಯ ರೋಗಿಗಳಿಗೆ ದವಸಧಾನ್ಯ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸರಕಾರದ ಯೋಜನೆಯನ್ನು ಸಮಾಜದ ಜನತೆಗೆ ತಲುಪಿಸುವ ಸೇವಾಂಜಲಿಯ ಕಾರ್ಯ ಅಭಿನಂದನೀಯ ಎಂದು ತಿಳಿಸಿದರು. ಸೇವಾಂಜಲಿ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಚೇತನ್ ಆರೋಗ್ಯ ಮಾಹಿತಿ ನೀಡಿ ಕೆಮ್ಮು ಮೊದಲಾದ ಕ್ಷಯ ರೋಗದ ಲಕ್ಷಣಗಳು ಕಂಡು ಬಂದಾಗ ವೈದ್ಯರಿಂದ ತಪಾಸಣೆ ನಡೆಸಿ ಔಷಧಿಯೊಂದಿಗೆ ಪೌಷ್ಟಿಕಾಹಾರ ಸೇವಿಸಿದಾಗ ರೋಗವನ್ನು ಸಂಪೂರ್ಣ ಗುಣಪಡಿಸಲು ಸಾಧ್ಯವಿದೆ ಎಂದರು.



ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೃಷ್ಣ ಕುಮಾರ್ ಪೂಂಜ ಪ್ರಾಸ್ತಾವಿಕವಾಗಿ ಮಾತನಾಡಿ ಬಂಟ್ವಾಳ, ಬೆಳ್ತಂಗಡಿ, ಮಂಗಳೂರು ತಾಲೂಕಿನ ಕ್ಷಯ ರೋಗಿಗಳನ್ನು ಗುರುತಿಸಿ ಪೌಷ್ಟಿಕಾಹಾರ ದ ಕಿಟ್ ನೀಡಲಾಗಿದೆ. ಇದು 44 ನೇ ತಿಂಗಳ ಕಾರ್ಯಕ್ರಮವಾಗಿದ್ದು ಈವರೆಗೆ 225 ಮಂದಿ ಕ್ಷಯರೋಗಿಗಳಿಗೆ ದವಸ ಧಾನ್ಯ ವಿತರಿಸಲಾಗಿದ್ದು 15 ಲಕ್ಷ ರೂ. ಖರ್ಚು ಮಾಡಲಾಗಿದೆ ಎಂದರು. ಸೇವಾಂಜಲಿಯ ಟ್ರಸ್ಟಿ, ಕೇಶವ ದೋಟ, ಉದಯ ಕುಮಾರ್ ಮಲ್ಲಿ ವೇದಿಕೆಯಲ್ಲಿ ಇದ್ದರು. ಪ್ರಮುಖರಾದ ಚಂದ್ರಹಾಸ ಕಡೆಗೋಳಿ, ವಿಕ್ರಂ ಫರಂಗಿಪೇಟೆ, ವಿಜೇತ್ ತುಂಬೆ, ಶಿವರಾಜ್ ಸುಜೀರ್, ದಿನೇಶ್ ತುಂಬೆ ಮತ್ತಿತರರು ಉಪಸ್ಥಿತರಿದ್ದರು. ಟ್ರಸ್ಟಿ ದೇವದಾಸ್ ಶೆಟ್ಟಿ ಕೊಡ್ಮಾಣ್ ಕಾರ್ಯಕ್ರಮ ನಿರೂಪಿಸಿದರು.

ಮೊಬೈಲ್ ಗೀಳಿನಿಂದ ಹೊರಬರಲು ಶಿಬಿರಗಳು ಪೂರಕ: ಪಿಜಿಆರ್ ಸಿಂಧ್ಯಾ

ಬೆಳ್ತಂಗಡಿ: ಮಕ್ಕಳು ಉತ್ತಮ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪೋಷಕರಿಗೆ ಕೃತಜ್ಞರಾಗಿರಬೇಕು. ಮಕ್ಕಳು ಮೊಬೈಲ್ ಗೀಳಿನಿಂದ ಹೊರಬರಲು ಶಿಬಿರಗಳು ಪೂರಕ. ಶಿಬಿರಗಳು ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಕಾರಣವಾಗುತ್ತದೆ ಎಂದು ಭಾರತ ಸ್ಕೌಟ್ಸ್ ಆ್ಯಂಡ್ ಗೈಡ್‌ನ ಮುಖ್ಯ ಆಯುಕ್ತ ಪಿಜಿಆರ್ ಸಿಂಧ್ಯಾ ಹೇಳಿದರು.

ಅವರು ಸೋಮವಾರ ಉಜಿರೆಯ ಎಸ್‌ಡಿಎಂಸಿ ಎನ್‌ವೈಎಸ್ ರತ್ನಮ್ಮ ಸಭಾಭವನದಲ್ಲಿ ಜರಗಿದ ರಾಜ್ಯಮಟ್ಟದ ಪ್ರಕೃತಿ ಚಿಕಿತ್ಸೆ, ಯೋಗ ಹಾಗೂ ಪೌಷ್ಠಿಕ ಆಹಾರ ಮಾಹಿತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಎಸ್‌ಡಿಎಂ ಸಿಎನ್‌ವೈ ಕಾಲೇಜಿನ ಪ್ರಿನ್ಸಿಪಾಲ್ ಡಾ. ಪ್ರಶಾಂತ್ ಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಬಿರದ ರೂಪುರೇಷೆಗಳ ಕುರಿತು ಮಾಹಿತಿ ನೀಡಿದರು.

ರಾಜ್ಯ ಸಂಘಟನಾ ಆಯುಕ್ತ ಎಂ. ಪ್ರಭಾಕರ್ ಭಟ್, ಜಿಲ್ಲಾ ಗೈಡ್ ಆಯುಕ್ತೆ ವಿಮಲಾ ರಂಗಯ್ಯ, ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷ ವಿಠ್ಠಲ ಶೆಟ್ಟಿ, ಜಿಲ್ಲಾ ಸಹಾಯಕ ಆಯುಕ್ತ ಬಿ.



ಸೋಮಶೇಖರ್ ಶೆಟ್ಟಿ, ಶಿಬಿರ ನಿರ್ದೇಶಕ ಡಾ. ರವಿ ಎಂ.ಎನ್., ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಪ್ರಮೀಳಾ, ರಾಜ್ಯ ಸಹಾಯಕ ಸಂಘಟನಾ ಆಯುಕ್ತ ಭರತ್ ರಾಜ್ ಕೆ. ಉಪಸ್ಥಿತರಿದ್ದರು.

ಶಿಬಿರದಲ್ಲಿ ಬೆಂಗಳೂರು ಉತ್ತರ–8, ಬೆಳಗಾವಿ– 11, ಚಿತ್ರದುರ್ಗ –5 ದಕ್ಷಿಣ ಕನ್ನಡ –5, ದಾವಣಗೆರೆ–1, ಧಾರವಾಡ – 4, ಕಾರವಾರ–3, ಕೊಡಗು–9, ಮಂಡ್ಯ–15, ಮೈಸೂರು–4, ರಾಯಚೂರು –10, ತುಮಕೂರು–8, ವಿಜಯಪುರ –6, ಯಾದಗಿರಿ–6 ಸೇರಿದಂತೆ ಒಟ್ಟು 14 ಜಿಲ್ಲೆಯ 95 ಶಿಬಿರಾರ್ಥಿಗಳು ಭಾಗವಹಿಸಿದ್ದಾರೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಬೆಳ್ತಂಗಡಿ ಸ್ಥಳೀಯ ಸಂಸ್ಥೆ ಹಾಗೂ ಎಸ್‌ಡಿಎಂ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯ ಉಜಿರೆ ಇವರ ಸಹಭಾಗಿತ್ವದಲ್ಲಿ ಕಾರ್ಯಕ್ರಮ ಮೇ 8ರವರೆಗೆ ಜರಗಲಿದೆ.

ಕಾರ್ಕಳ ಭುವನೇಂದ್ರ ಕಾಲೇಜಿನಲ್ಲಿ ಪದವಿ ವಿದ್ಯಾರ್ಥಿಗಳಿಗೆ ಎಐ ತರಬೇತಿ ಶಿಬಿರ

ಕಾರ್ಕಳ: ಶ್ರೀ ಭುವನೇಂದ್ರ ಕಾಲೇಜಿನ ಐಕ್ಯೂಎಸಿ ಆಶ್ರಯದಲ್ಲಿ, ಆಪ್ ಫ್ರಂಟ್ ಸಂಸ್ಥೆ ಬೆಂಗಳೂರು, ಅನುದೀಪ್ ಫೌಂಡೇಶನ್, ಎಡಿಬಿ ಬ್ಯಾಂಕ್ ಇದರ ಸಹಯೋಗದಲ್ಲಿ ಭುವನೇಂದ್ರ ಕಾಲೇಜಿನ ವಿದ್ಯಾರ್ಥಿಗಳಿಗೆ ಕೃತಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ನಾಲ್ಕು ದಿನಗಳ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮವು ನೆರವೇರಿತು.

ಅಪ್ ಫ್ರಂಟ್ ಸಂಸ್ಥೆಯ ಸೀನಿಯರ್ ಪ್ರೋಗ್ರಾಂ ಮೆನೇಜರ್ ತಹಸೀನಾ ಎಸ್, ಮಾತನಾಡಿ, ಎಐ ತಂತ್ರಜ್ಞಾನ ಇಂದಿನ ದಿನಗಳಲ್ಲಿ ಎಷ್ಟು ಮಹತ್ವ ಪಡೆದಿದೆಯೆಂದರೆ, ಅದರ ಕಲಿಕೆಯನ್ನು ಮುಂದೂಡಿದರೆ ನಾಳೆ ಭವಿಷ್ಯದ ಬದುಕಿನ ಉದ್ಯೋಗಕ್ಕೆ ತೊಂದರೆ ಯಾಗಬಹುದು. ಹಾಗೆ ಆಗಬಾರದು ಅನ್ನುವ ಕಾರಣಕ್ಕೆ ಕಾಲೇಜು



ನಿಮಗೆ ಈ ಅವಕಾಶ ಕೊಟ್ಟಿದೆ. ಕೇವಲ ಬಿಸಿಎ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಎಲ್ಲರಿಗೂ ಒದಗಿಸಿ ಕೊಟ್ಟಿರುವುದರಿಂದ ಎಲ್ಲರೂ ಪ್ರಯೋಜನ ಪಡೆದುಕೊಂಡರೆ, ಕಾಲೇಜು ಮತ್ತು ನಮ್ಮ ಸಂಸ್ಥೆಗಳ ಉದ್ದೇಶ ಸಾರ್ಥಕವಾಗುತ್ತದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಾಲೇಜಿನ ಪ್ರಾಂಶುಪಾಲ ಡಾ. ಮಂಜುನಾಥ ಎ. ಕೋಟ್ಯಾನ್ ಮಾತನಾಡಿ, ಕಾಲೇಜಿನಿಂದ ಹೊರಹೋದ ಎಲ್ಲರಿಗೂ ಉದ್ಯೋಗ ದೊರೆಯುವುದು ಅಸಾಧ್ಯವಾದಾಗ ಎಲ್ಲರೂ ಉದ್ಯೋಗಸ್ಥರಾಗಬೇಕೆಂಬ ನೆಲೆಯಲ್ಲಿ ಕಾಲೇಜು ಇಂತಹ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅನ್ನುವುದು ಎಲ್ಲ ಕ್ಷೇತ್ರಕ್ಕೂ ಲಗ್ಗೆಯಿಟ್ಟಿರುವುದರಿಂದ ಇಂದಿನ ದಿನಗಳಲ್ಲಿ ಇದರ ಅಗತ್ಯಹೆಚ್ಚು ಇದೆ. ತಂತ್ರಜ್ಞಾನದ ಹೊಸತನದ ಕೌಶಲಕ್ಕೆ ಇವತ್ತು ನಾವು ಬೆನ್ನು ಹಾಕಿದರೆ, ನಮಗೆ ದೊಡ್ಡ ನಷ್ಟವಾಗುವ ಸಾಧ್ಯತೆಯಿದೆ. ಭವಿಷ್ಯದಲ್ಲಿ ಅತೀ ಅಗತ್ಯವಿರುವ ಎಐ ತಂತ್ರಜ್ಞಾನ ನಮ್ಮ ವಿದ್ಯಾರ್ಥಿಗಳಿಗೆ ಕಾಲೇಜಿನ ಹಂತದಲ್ಲಿಯೇ ದೊರಕಲಿ ಎನ್ನುವ ಕಾಲೇಜಿನ ಆಶಯದಂತೆ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಸರಿಯಾಗಿ ಪಡೆದುಕೊಳ್ಳಬೇಕಾಗಿದೆ ಎಂದರು.

ವೇದಿಕೆಯಲ್ಲಿ ಅಪ್ ಫ್ರಂಟ್ ಸಂಸ್ಥೆಯ ಪ್ರೋಗ್ರಾಮರ್ ಆದ ರೋಶನಿ ಉಪಸ್ಥಿತರಿದ್ದರು. ಐಕ್ಯೂಎಸಿ ನಿರ್ದೇಶಕರೂ, ಕಾರ್ಯಕ್ರಮ ಸಂಯೋಜಕರೂ ಆದ ಪ್ರೊ. ಲಕ್ಷ್ಮೀನಾರಾಯಣ ಕೆ.ಎಸ್. ಸ್ವಾಗತಿಸಿದರು.

ಕಾಲೇಜಿನ ಬಿ.ಎ., ಬಿ.ಕಾಂ, ಬಿ.ಎಸ್ಸಿ, ಬಿ.ಸಿ.ಎ ಹಾಗೂ ಬಿ.ಬಿ.ಎ. ವಿದ್ಯಾರ್ಥಿಗಳು ಈ ತರಬೇತಿ ಶಿಬಿರದಲ್ಲಿ ಉಪಸ್ಥಿತರಿದ್ದರು.

ಉಪನ್ಯಾಸಕಿ, ಮೀನಾಕ್ಷಿ ಕಾರ್ಯಕ್ರಮ ನಿರೂಪಿಸಿದರು . ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ, ಡಾ. ಈಶ್ವರ್ ಭಟ್ ಧನ್ಯವಾದ ಸಮರ್ಪಿಸಿದರು.

ಸೋಲಿನ ಹತಾಶೆಯಿಂದ ಮಮತಾ ಆರೋಪ?
ದ್ವೇಷ ಸಾಧನೆಯಲ್ಲ, ದೇಶದ ಹಿತದೃಷ್ಟಿಯಿಂದ ಎಸ್‌ಐಆರ್



ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಗೂ ಮುನ್ನ 90 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರುಗಳನ್ನು ಮತದಾರ ಪಟ್ಟಿಯಿಂದ ತೆಗೆದುಹಾಕಿರುವುದು ಭಾರೀ ಚರ್ಚೆಗೆ ಗ್ರಾಸವಾಗಿತ್ತು. ಆದರೆ ದೂರದೃಷ್ಟಿ ಹಾಗೂ ದೇಶದ ಹಿತದೃಷ್ಟಿಯಿಂದ ಚುನಾವಣಾ ಆಯೋಗವು ಈ ಪ್ರಮುಖ ನಿರ್ಧಾರ ತಳೆದಿತ್ತು. ಚುನಾವಣೆಗಳಲ್ಲಿ ಅರ್ಹ ನಾಗರಿಕರು ಮಾತ್ರ ಮತದಾನ ಪಾಲ್ಗೊಳ್ಳಬೇಕು ಮತ್ತು ಮತದಾನ ಮಾಡಬೇಕೆಂಬ ಉದ್ದೇಶದಿಂದ ಹಲವು ಮತದಾರರ ಹೆಸರುಗಳನ್ನು ತೆಗೆಯಲಾಗಿದೆ.

ಇದರಿಂದ ನಕಲಿ ಮತದಾನ ಅಥವಾ ಬೋಗಸ್ ಮತಗಳ ಅವಕಾಶವೂ ಕಡಿಮೆಯಾಗಿವೆ. ಈ ಕ್ರಮದಿಂದ ದೇಶದ ಚುನಾವಣಾ ವ್ಯವಸ್ಥೆಯ ಮೇಲೆ ಜನರ ವಿಶ್ವಾಸ ಹೆಚ್ಚಾಗಿದೆ. ಇದಲ್ಲದೆ, ಚುನಾವಣಾ ಫಲಿತಾಂಶಗಳು ನಿಷ್ಪಕ್ಷಪಾತಿ, ವಿಶ್ವಾಸಾರ್ಹ ಮತ್ತು ಹೆಚ್ಚು ಪಾರದರ್ಶಕವಾಗಿ ಗೋಚರಿಸಿದೆ. 90 ಲಕ್ಷಕ್ಕೂ ಹೆಚ್ಚು ನಕಲಿ ಮತದಾರರ ಹೆಸರನ್ನು ಮತದಾರ ಪಟ್ಟಿಯಿಂದ ತೆಗೆದುಹಾಕಿದ್ದೇ ಟಿಎಂಸಿ ಸೋಲಿಗೆ ಕಾರಣ ಎಂದಾದರೆ ಅದೇ ಕಾರಣಕ್ಕೆ ಕಳೆದ 15 ವರ್ಷಗಳಿಂದ ಟಿಎಂಸಿ ಅಧಿಕಾರದಲ್ಲೇ ಉಳಿದಿತ್ತಾ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಆದರೆ ಉದ್ದೇಶಪೂರ್ವಕ ಗುರಿಯಾಗಿಸಿ ಟಿಎಂಸಿ ಸಂಭಾವ್ಯ ಮತದಾರರ ಹೆಸರನ್ನೇ ಚುನಾವಣಾ ಆಯೋಗ ಮತದಾರರ ಪಟ್ಟಿಯಿಂದ ತೆಗೆದುಹಾಕಿದೆ. ಇದಲ್ಲದೆ, ನಕಲಿ ಮತದಾರರ ಹೆಸರುಗಳ ಜತೆ ಇತರ ಸಾಮಾನ್ಯ ಮತದಾರರ ಹೆಸರುಗಳೂ ಕಿತ್ತುಹಾಕಿರುವ ಸಾಧ್ಯತೆಯಿದೆ ಎಂಬ ಆರೋಪವನ್ನೂ ಟಿಎಂಸಿ ಮಾಡಿತ್ತು. ಇದೇ ಸಂದರ್ಭ ಬಿಜೆಪಿ ಭಾರೀ ಅಂತರದಲ್ಲಿ ಪ್ರಾಬಲ್ಯ ಮೆರೆದಿದ್ದು, ಟಿಎಂಸಿ ಆರೋಪಕ್ಕೆ ಸ್ವಲ್ಪ ಪ್ರಾಧಾನ್ಯತೆ ಸಿಗುವಂತಾಯಿತು. ಆದರೆ ಸ್ಪಷ್ಟವಾಗಿ ಮಮತಾ ಬ್ಯಾನರ್ಜಿ ಆಡಳಿತ ವಿರೋಧಿ ಅಲೆಯಿಂದಾಗಿ ಅಲ್ಲಿ ಬಿಜೆಪಿ ಭಾರೀ ಅಂತರದಿಂದ ಜಯ ಸಾಧಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಶ್ಚಿಮ ಬಂಗಾಳದಂತಹ ಸೂಕ್ಷ್ಮ ರಾಜ್ಯಗಳಲ್ಲಿ ಇಂತಹ ಮಹತ್ವದ ನಿರ್ಧಾರ ತೆಗೆದುಕೊಳ್ಳುವ ಮೊದಲು ಚುನಾವಣಾ ಆಯೋಗ ಹಲವು ಪರಿಶೀಲನೆಗಳನ್ನು ನಡೆಸಿರುತ್ತದೆ.

ಯಾರ ಹೆಸರು ಅಳಿಸಿ ಹಾಕಲಾಗಿದೆ?
- ನಕಲಿ ಮತದಾರರು
- ಮೃತಪಟ್ಟವರು
- ತಪ್ಪು ಅಥವಾ ಸುಳ್ಳು ಮಾಹಿತಿ
- ಅನಾವಶ್ಯಕ ಹಳೆಯ ದಾಖಲೆಗಳು

ಎಸ್‌ಐಆರ್ ನಡೆಸಲು ಕಾರಣವೇನು?
ಪಶ್ಚಿಮ ಬಂಗಾಳ ರಾಜ್ಯವು ಬಾಂಗ್ಲಾದೇಶದೊಂದಿಗೆ 2,200 ಕಿ.ಮೀ.ಗಿಂತಲೂ ಹೆಚ್ಚು ಗಡಿ ಹಂಚಿಕೊಂಡಿರುವ ಕಾರಣಕ್ಕಾಗಿ ಮತದಾರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ನಡೆಸಲು ಚುನಾವಣಾ ಆಯೋಗ(ಇಸಿ) ನಿರ್ಧರಿಸಿದೆ. ಎಸ್‌ಐಆರ್ ನಡೆಸಿದ್ದರಿಂದ 91 ಲಕ್ಷಕ್ಕೂ ಅಧಿಕ ಮತದಾರರ ಈ ದೇಶದಲ್ಲೇ ಮತ ಚಲಾಯಿಸುವ ಅರ್ಹತೆಯನ್ನೇ ಹೊಂದಿಲ್ಲ ಎಂಬ ಆತಂಕಕಾರಿ ಮಾಹಿತಿ ಹೊರಬಿದ್ದಿದೆ.

ಎಸ್‌ಐಆರ್ ಅಳಿಸುವಿಕೆ ಮತ್ತು ಫಲಿತಾಂಶಗಳು
25,000ಕ್ಕೂ ಹೆಚ್ಚು ಮತದಾರರ ಹೆಸರುಗಳನ್ನು ಅಳಿಸಿಹಾಕಲ್ಪಟ್ಟ 147 ಕ್ಷೇತ್ರಗಳಲ್ಲಿ 95 ಸ್ಥಾನಗಳನ್ನು ಬಿಜೆಪಿ ಗೆದ್ದುಕೊಂಡಿದೆ. ಇಲ್ಲಿ ಟಿಎಂಸಿ ಗೆದ್ದಿರುವುದು 51 ಸ್ಥಾನಗಳು ಮತ್ತು ಕಾಂಗ್ರೆಸ್ ಕೇವಲ 1 ಸ್ಥಾನ ಗೆದ್ದಿದೆ. 15,000ದಿಂದ 25,000 ಹೆಸರುಗಳನ್ನು ಕಿತ್ತುಹಾಕಿದ 67 ಕ್ಷೇತ್ರಗಳಲ್ಲಿ ಬಿಜೆಪಿಯೇ ಮೇಲುಗೈ ಸಾಧಿಸಿದ್ದು, 47 ಸ್ಥಾನಗಳನ್ನು ಬಾಚಿಕೊಂಡಿದೆ. ಟಿಎಂಸಿ 19 ಮತ್ತು ಕಾಂಗ್ರೆಸ್ 1 ಕ್ಷೇತ್ರದಲ್ಲಿ ಗೆದ್ದಿವೆ. 5,000ದಿಂದ 15,000 ಮತದಾರರ ಹೆಸರು ತೆಗೆದುಹಾಕಲ್ಪಟ್ಟ 62 ಕ್ಷೇತ್ರಗಳಲ್ಲಿ ಬಿಜೆಪಿ 50ರಲ್ಲಿ ತನ್ನ ಪತಾಕೆ ಹಾರಿಸಿದ್ದು, ಉಳಿದ 12 ಸ್ಥಾನಗಳು ಟಿಎಂಸಿ ಪಾಲಾಗಿವೆ. ಒಟ್ಟಾರೆ ಎಲ್ಲಾ ಕಡೆ ಬಿಜೆಪಿ ಮೇಲುಗೈ ಸಾಧಿಸಿದೆ.

ಮುರ್ಷಿದಾಬಾದ್‌ನಲ್ಲಿ ಏನಾಯ್ತು?



ಮುರ್ಷಿದಾಬಾದ್ ಜಿಲ್ಲೆಯೊಂದರಲ್ಲೇ 4.55 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರುಗಳನ್ನು ಇಸಿ ತೆಗೆದುಹಾಕಿದೆ. ನಾರ್ತ್ 24 ಪರ್ಗಾನಾಸ್‌ನಲ್ಲಿ 3,25,666 ಮತ್ತು ಮಾಲ್ಡಾದಲ್ಲಿ 2,39,375 ಮತದಾರರ ಹೆಸರನ್ನು ಅಳಿಸಲಾಗಿದೆ. 2021ರಲ್ಲಿ ಮುರ್ಷಿದಾಬಾದ್‌ನ 22 ಕ್ಷೇತ್ರಗಳಲ್ಲಿ 20ರಲ್ಲಿ ಟಿಎಂಸಿ ಗೆದ್ದಿತ್ತು. ಆದರೆ ಈ ಬಾರಿ ಟಿಎಂಸಿ 8 ಸ್ಥಾನಕ್ಕೆ ಸೀಮಿತವಾಗಿದೆ. ಮಾಲ್ಡಾದ 12 ಸ್ಥಾನಗಳಲ್ಲಿ ಹಿಂದೆ 8 ಸ್ಥಾನ ಗೆದ್ದಿದ್ದ ತೃಣಮೂಲ ಈ ಬಾರಿ 6 ಸ್ಥಾನವಷ್ಟೇ ಗೆದ್ದಿದೆ. ಉಳಿದೆಲ್ಲವೂ ಬಿಜೆಪಿಯೇ ಗೆದ್ದುಕೊಂಡಿದೆ.

ಪಂಚರಾಜ್ಯಗಳ ಚುನಾವಣೆಯ ಫಲಿತಾಂಶ ಸೋಮವಾರ ಘೋಷಣೆಯಾಗಿದ್ದು, ಹಲವು ರಾಜಕೀಯ ಬದಲಾವಣೆಗೆ ದೇಶ ಈ ಬಾರಿ ಸಾಕ್ಷಿಯಾಗಿದೆ. ಒಂದೆಡೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿ 15 ವರ್ಷಗಳಿಂದ ಆಳುತ್ತಿದ್ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗೆ ಸೋಲುಣಿಸಿದೆ. ಅಸ್ಸಾಂನಲ್ಲಿ ಹ್ಯಾಟ್ರಿಕ್ ಗೆಲುವಿನ ಮೂಲಕ ಮತ್ತೆ ಎನ್‌ಡಿಎ ಸರ್ಕಾರ ನಡೆಸಲು ಸಿದ್ಧತೆ ನಡೆಸುತ್ತಿದೆ. ತಮಿಳುನಾಡಿನಲ್ಲಿ ನಟ ವಿಜಯ್ ಪಕ್ಷ ಟಿವಿಕೆ ಏಕೈಕ ದೊಡ್ಡ ಪಕ್ಷವಾಗಿ ಅಬ್ಬರಿ ತಂದಿದೆ. ಕೇರಳದಲ್ಲಿ 10 ವರ್ಷಗಳ ಬಳಿಕ ಮತ್ತೆ ಯುಡಿಎಫ್ ಭರ್ಜರಿ ಗೆಲುವು ಸಾಧಿಸಿ ಅಧಿಕಾರಕ್ಕೇರುವ ಸಿದ್ಧತೆ ನಡೆಸುತ್ತಿದೆ.

ಬಿಸ್ವಾಸ್ ಒಬ್ಬರೇ ವಿಶ್ವಾಸ ಗಳಿಸಿದ್ದು





ಕೇರಳದಲ್ಲಿ ಎಡರಂಗದ ಪಿಣರಾಯಿ ವಿಜಯನ್, ತಮಿಳುನಾಡಿನಲ್ಲಿ ಎಂ.ಕೆ. ಸ್ಟಾಲಿನ್ ಹಾಗೂ ಪಶ್ಚಿಮ ಬಂಗಾಳದಲ್ಲಿ ತೃಣಮೂಲ ನಾಯಕಿ ಮಮತಾ ಬ್ಯಾನರ್ಜಿ ಆಡಳಿತ ಪತನಗೊಂಡಿದ್ದು, ಮೂವರು ಪ್ರಮುಖರು



ತಮ್ಮ ಮುಖ್ಯಮಂತ್ರಿ ಆಸನಗಳನ್ನು ಖಾಲಿ ಮಾಡಿದ್ದಾರೆ. ಆದರೆ ಅಸ್ಸಾಂನಲ್ಲಿ ಹಿಮಂತ ಬಿಸ್ವ ಶರ್ಮಾ ಆಸನ ಉಳಿಸಿಕೊಂಡಿದ್ದಾರೆ. ವಿಜಯನ್, ಸ್ಟಾಲಿನ್ ಮತ್ತು ಮಮತಾರಷ್ಟು ರಾಜಕೀಯ ಅನುಭವ ಇಲ್ಲದ ಹಿಮಂತ ಸತತ 2ನೇ ಬಾರಿಗೆ ಆಯ್ಕೆಯಾಗಿದ್ದಾರೆ. ಹಾಗಿದ್ದರೆ ಈ ಮೂವರಿಗೆ ಸಾಧ್ಯವಾಗದ್ದನ್ನು ಹಿಮಂತ ಹೇಗೆ ಸಾಧಿಸಿದರು?

ಮೊದಲನೇಯದು, ಅಸ್ಸಾಂನಲ್ಲಿ ಹಿಮಂತರ ವಿರುದ್ಧ ಆಡಳಿತ ವಿರೋಧಿ ಅಲೆ ಇರಲಿಲ್ಲ. ಯಾಕೆಂದರೆ ಶರ್ಮಾ ತಮ್ಮ ಮೊದಲ ಅವಧಿಯಲ್ಲಿ ಪಾರದರ್ಶಕ, ಜನಪರ ಆಡಳಿತವನ್ನು ನೀಡಿದ್ದರು. ಆದರೆ ಹಲವು ಹಿಮಂತ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯಲು ಹಲವು ಕಾರಣಗಳಿವೆ.

ಈಶಾನ್ಯದ ಪ್ರಬಲ ಬಿಜೆಪಿ ನಾಯಕ: ಹಿಮಂತ, ಈಶಾನ್ಯ ಭಾರತದಲ್ಲೇ ಬಿಜೆಪಿಯ ಪ್ರಮುಖ ನಾಯಕ. ಕಾಂಗ್ರೆಸ್ ತೊರೆದು ಬಿಜೆಪಿ ಸೇರಿಕೊಂಡಿದ್ದ ಹಿಮಂತ, ಈಶಾನ್ಯ ಭಾರತದಲ್ಲಿ ಬಿಜೆಪಿಯ ಪತಾಕೆ ಬಲವಾಗಿ ನೆಟ್ಟಿದ್ದಾರೆ.

ಬಿರುಕುಬಿಟ್ಟ ದುರ್ಬಲ ವಿರೋಧ ಪಕ್ಷ
ಕಾಂಗ್ರೆಸ್ ನೇತೃತ್ವದ ಹಲವು ಪ್ರಾದೇಶಿಕ ಪಕ್ಷಗಳನ್ನು ಒಳಗೊಂಡ ದುರ್ಬಲ ವಿರೋಧ ಪಕ್ಷವೂ ಹಿಮಂತ ಪ್ರಾಬಲ್ಯ ಸಾಧಿಸಲು ನೆರವಾಗಿದೆ. ವಿರೋಧ ಪಕ್ಷಗಳ ನಡುವೆಯೂ ಒಗ್ಗಟ್ಟಿಲ್ಲ, ನಾಯಕತ್ವದ ಸ್ಪಷ್ಟತೆಯಿಲ್ಲ ಇತ್ಯಾದಿಗಳಿಂದ ಬಿಸ್ವಗೆ ಧನಾತ್ಮಕ ಪರಿಣಾಮ ಬೀರಿದೆ. ಇದಲ್ಲದೆ, ಹಿಮಂತರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರದ ಅಭಯಹಸ್ತವೂ ಜತೆಗಿದೆ.

ಕುರ್ಚಿ ಉಳಿಸಲಾಗದೆ ಮೂವರು ಸಿಎಂಗಳ ನಿರ್ಗಮನ

ಜನಪರ ಯೋಜನೆಗಳು
- ಮಹಿಳೆಯರಿಗೆ ಹಣಕಾಸಿನ ನೆರವು
- ಕೃಷಿಕರು ಮತ್ತು ಸಣ್ಣ ವ್ಯವಹಾರಗಳಿಗೆ ಬೆಂಬಲ
- ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಉಚಿತ ಮತ್ತು ಸಬ್ಸಿಡಿ ಸೇವೆಗಳು

ಕಾನೂನು ಸುವ್ಯವಸ್ಥೆ, ಗುರುತಿನ ರಾಜಕೀಯ
- ರಾಜ್ಯದಲ್ಲಿ ಎಲ್ಲಾ ಅಪರಾಧಗಳ ವಿರುದ್ಧವೂ ಕಠಿಣ ಕ್ರಮಗಳು
- ಒಳನುಸುಳುಕೋರರ ನಿರ್ಮೂಲನೆಯೇ ಅಸ್ಸಾಂ ಸರ್ಕಾರದ ಗುರಿ
- ಅಸ್ಸಾಂ ಮೂಲನಿವಾಸಿಗಳ ಮತ್ತು ಸಂಸ್ಕೃತಿಯ ಸಂರಕ್ಷಣೆ

ಮೂಲಸೌಕರ್ಯ, ಅಭಿವೃದ್ಧಿ
- ರಸ್ತೆ, ಹೆದ್ದಾರಿ, ಸೇತುವೆ ಸೇರಿ ಮೂಲಸೌಕರ್ಯ ಯೋಜನೆಗಳು
- ಗುವಾಹಟಿ ಸೇರಿ ಹಲವು ನಗರಾಭಿವೃದ್ಧಿ ಯೋಜನೆಗಳು
- ಹೂಡಿಕೆಗಳಿಗೆ ಮತ್ತು ಪ್ರವಾಸೋದ್ಯಮಕ್ಕೆ ಉತ್ತೇಜನ

ಪ.ಬಂಗಾಳ, ಅಸ್ಸಾಂಗೆ ಬಿಜೆಪಿ ಕೇಂದ್ರ ವೀಕ್ಷಕರ ನೇಮಕ

ಹೊಸದಿಲ್ಲಿ: ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳ ಶಾಸಕಾಂಗ ಪಕ್ಷದ ನಾಯಕರ ಆಯ್ಕೆ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡಲು ಕೇಂದ್ರ ಸಚಿವರಾದ ಅಮಿತ್ ಶಾ ಮತ್ತು ಜೆ.ಪಿ. ನಡ್ಡಾ ಅವರನ್ನು ಬಿಜೆಪಿ ಮಂಗಳವಾರ ಕೇಂದ್ರ ವೀಕ್ಷಕರನ್ನಾಗಿ ನೇಮಿಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಪಶ್ಚಿಮ ಬಂಗಾಳದ ಕೇಂದ್ರ ವೀಕ್ಷಕರಾಗಿ ಕಾರ್ಯನಿರ್ವಹಿಸಲಿದ್ದು, ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಸಹ–ವೀಕ್ಷಕರಾಗಿ ಇವರಿಗೆ ಸಾಥ್ ನೀಡಲಿದ್ದಾರೆ. ಅಸ್ಸಾಂಗೆ ಕೇಂದ್ರ ಸಚಿವ ಜೆ.ಪಿ. ನಡ್ಡಾ ಅವರನ್ನು ವೀಕ್ಷಕರನ್ನಾಗಿ ಮತ್ತು ಹರ್ಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರನ್ನು ಸಹ–ವೀಕ್ಷಕರನ್ನಾಗಿ ಪಕ್ಷದ ಅಧಿಸೂಚನೆಯಲ್ಲಿ ಹೆಸರಿಸಲಾಗಿದೆ.

ನಾಯಕನ ಆಯ್ಕೆ ಸವಾಲು: ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಹಲವು ಹೆಸರುಗಳು ಕೇಳಿಬರುತ್ತಿವೆ. ಮಮತಾ ಬ್ಯಾನರ್ಜಿಯವರನ್ನು ಸೋಲಿಸಿದ ಸುವೇಂದು ಅಧಿಕಾರಿ ಪ್ರಬಲ ಅಭ್ಯರ್ಥಿಯಾಗಿದ್ದಾರೆ. ಇವರೊಂದಿಗೆ ಕೇಂದ್ರ ಸಚಿವ ಸುಕಾಂತ ಮಜುಂದಾರ್ ಹಿರಿಯ ನಾಯಕ ದಿಲೀಪ್ ಘೋಷ್ ಮತ್ತು ಮಹಿಳಾ ಪ್ರತಿನಿಧಿಯಾಗಿ ಅಗ್ನಿಮಿತ್ರ ಪಾಲ್ ಅವರ ಹೆಸರುಗಳು ಮುಂಚೂಣಿಯಲ್ಲಿವೆ. ಅಂತಿಮವಾಗಿ ಶಾಸಕಾಂಗ ಪಕ್ಷದ ಸಭೆಯಲ್ಲಿ ನಾಯಕನ ಆಯ್ಕೆಯಾಗಲಿದೆ. ಸೋಮವಾರ ಪ್ರಕಟವಾದ ವಿಧಾನಸಭಾ ಚುನಾವಣಾ ಫಲಿತಾಂಶಗಳ ಬೆನ್ನಲ್ಲೇ ಈ ನೇಮಕಾತಿ ನಡೆದಿದೆ. ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಅನ್ನು ಅಧಿಕಾರದಿಂದ ಕೆಳಗಿಳಿಸಿರುವ ಬಿಜೆಪಿ, ಅಸ್ಸಾಂನಲ್ಲಿ ಸತತ ಮೂರನೇ ಬಾರಿಗೆ ಅಧಿಕಾರ ಉಳಿಸಿಕೊಂಡಿದೆ.

ತಾವರೆ ಅರಳಿಸಿದ ಮನೆಕೆಲಸದಾಕೆ!



ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಮಟ್ಟದ ಆರ್ಥಿಕ ಸ್ಥಿತಿಯಲ್ಲಿರುವ ಪ್ರಜೆಯ ಕೈಗೆ ಅಧಿಕಾರದ ಚುಕ್ಕಾಣಿ ಸಿಕ್ಕಾಗಲೇ ಆತ್ಮನಿರ್ಭರ ಭಾರತದ ಕನಸು ನನಸಾಗುತ್ತದೆ. ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಇಂತಹದ್ದೊಂದು ಉದಾಹರಣೆ ಲಭ್ಯವಾಗಿದೆ. ಮನೆಗೆಲಸದಾಕೆ ಔಸ್‌ಗ್ರಾಮ್ ವಿಧಾನಸಭಾ ಕ್ಷೇತ್ರದ ಶಾಸಕಿಯಾಗಿ ಜನಮನ್ನಣೆ ಪಡೆದಿದ್ದಾರೆ. ಇದಲ್ಲವೆ, ಪ್ರಜಾಪ್ರಭುತ್ವದ ಶಕ್ತಿ?

ತಿಂಗಳಿಗೆ 2,500 ರೂ. ವೇತನದ ಮನೆಗೆಲಸದಾಕೆ ಕಲಿತಾ ಮಾಝಿ ಔಸ್‌ಗ್ರಾಮ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ಭಾರತೀಯ ಜನತಾ ಪಕ್ಷದ (ಬಿಜೆಪಿ) ಟಿಕೆಟ್ ಪಡೆದಿದ್ದ ಕಲಿತಾ 1,07,692 ಮತಗಳನ್ನು ಪಡೆದಿದ್ದಾರೆ. ಸಮೀಪದ ಎದುರಾಳಿ ಶ್ಯಾಮ ಪ್ರಸನ್ನ ಲೋಹರ್ ಅವರನ್ನು 12,535 ಮತಗಳ ಅಂತರದಿಂದ ಸೋಲಿಸಿದ್ದಾರೆ.

ರಾಜಕೀಯ ಕಲಿತ ಕಲಿತಾ ಹಿನ್ನೆಲೆ: ಗುಸ್ಕರ ನಗರಪಾಲಿಕೆ ನಿವಾಸಿ ಕಲಿತಾ ಮಾಝಿ, ಸಕ್ರಿಯ ರಾಜಕಾರಣಕ್ಕೆ ಇಳಿಯುವ ಮುನ್ನ ದಿನನಿತ್ಯ ನಾಲ್ಕು ಮನೆಗಳಲ್ಲಿ ಮನೆಗೆಲಸ ಮಾಡುತ್ತಿದ್ದರು. ತಮ್ಮ ಸಜ್ಜನಿಕೆಯ ವ್ಯಕ್ತಿತ್ವ, ಸರಳವಾದ ಜೀವನ ಮತ್ತು ಬಲವಾದ ಸ್ಥಳೀಯ ಜನಸಂಪರ್ಕದಿಂದ ಕಲಿತಾ ಔಸ್‌ಗ್ರಾಮ ಕ್ಷೇತ್ರದಲ್ಲಿ ಕಮಲ ಅರಳಿಸಿದ್ದಾರೆ. ಕಲಿತಾ ಸ್ಪರ್ಧಿಸಿದ್ದು ಇದೇ ಮೊದಲಲ್ಲ. 2021ರ ವಿಧಾನಸಭಾ ಚುನಾವಣೆಯಲ್ಲೂ ಸ್ಪರ್ಧಿಸಿದ್ದ ಕಲಿತಾ, ಟಿಎಂಸಿ ಅಭ್ಯರ್ಥಿ ಎದುರು 11,000ಕ್ಕೂ ಹೆಚ್ಚು ಅಂತರದಿಂದ ಸೋತಿದ್ದರು. ಆದರೆ ಕಲಿತಾ ಮೇಲಿನ ವಿಶ್ವಾಸ ಕಳೆದುಕೊಳ್ಳದ ಬಿಜೆಪಿ ಮತ್ತೆ ಅವರನ್ನೇ ಅಭ್ಯರ್ಥಿಯನ್ನಾಗಿ ಘೋಷಿಸಿದ್ದು, ಇತಿಹಾಸ ಬರೆದಿದ್ದಾರೆ.

ಸ್ಟಾಲಿನ್‌ಗೆ ಮಾಜಿ ಆಪ್ತನಿಂದಲೇ ಸೋಲು

ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಭದ್ರಕೋಟೆಯೆನಿಸಿದ್ದ ಕೊಳತ್ತೂರು ಕ್ಷೇತ್ರದಲ್ಲಿ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಅಭ್ಯರ್ಥಿ ವಿ.ಎಸ್. ಬಾಬು 8,795 ಮತಗಳ ಅಂತರದಿಂದ ಜಯಗಳಿಸಿದ್ದಾರೆ. ಈ ಮೂಲಕ ಸ್ಟಾಲಿನ್ ಗೆಲುವಿನ ಅಂದಾಜುಗಳನ್ನು ಬಾಬು ಸುಳ್ಳಾಗಿಸಿದ್ದಾರೆ. ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷದಿಂದ ಸ್ಪರ್ಧಿಸಿದ್ದ ಬಾಬು, ಡಿಎಂಕೆ ನಾಯಕನ ಭದ್ರಕೋಟೆಯಲ್ಲೇ ಜಯಭೇರಿ ಬಾರಿಸಿದ್ದಾರೆ. ಗೆಲುವಿನ ನಂತರ ಮಾತನಾಡಿದ ಬಾಬು, ಈ ಯಶಸ್ಸಿನ ಸಂಪೂರ್ಣ ಶ್ರೇಯಸ್ಸು ತಮ್ಮ ಪಕ್ಷದ ನಾಯಕ ವಿಜಯ್ ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದ್ದಾರೆ. ಅಲ್ಲದೆ ಸ್ಟಾಲಿನ್ ಅವರ ಸಹಿ ಮಾಡುವ ವಿಶಿಷ್ಟ ಶೈಲಿಯನ್ನು ಅಣಕಿಸುವ ಮೂಲಕ ಗಮನ ಸೆಳೆದಿದ್ದಾರೆ.

ರಾಜಕೀಯ ಹಿನ್ನೆಲೆ: ವಿ.ಎಸ್. ಬಾಬು ಈ ಹಿಂದೆ ಡಿಎಂಕೆ ಸದಸ್ಯರಾಗಿದ್ದು, ಉತ್ತರ ಚೆನ್ನೈ ಜಿಲ್ಲಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. 2006ರಲ್ಲಿ ಪುರಸವಾಲ್ಕಂನಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. 2011ರ ಚುನಾವಣೆಯಲ್ಲಿ ಸ್ಟಾಲಿನ್, ಕೊಳತ್ತೂರಿನಲ್ಲಿ 2,734 ಮತಗಳ ಅಂತರದ ಜಯ ಸಾಧಿಸಿದಾಗ ಬಾಬು ಅವರೇ ಈ ಕ್ಷೇತ್ರದ ಉಸ್ತುವಾರಿ ವಹಿಸಿದ್ದರು. ಆದರೆ, 2011ರ ಫಲಿತಾಂಶದ ನಂತರ ಡಿಎಂಕೆ ಇವರನ್ನು ಸ್ಥಾನದಿಂದ ವಜಾಗೊಳಿಸಿ ಪಿ.ಕೆ. ಶೇಖರ್ ಬಾಬು ಅವರಿಗೆ ಜವಾಬ್ದಾರಿ ನೀಡಿತ್ತು. ಇದರಿಂದ ಅಸಮಾಧಾನಗೊಂಡ ಬಾಬು ಎಐಎಡಿಎಂಕೆಗೆ ಸೇರ್ಪಡೆಯಾಗಿದ್ದರು. ಅಂತಿಮವಾಗಿ ವಿಜಯ್ ಅವರ ಟಿವಿಕೆ ಪಕ್ಷ ಸೇರಿ ಸ್ಟಾಲಿನ್ ವಿರುದ್ಧವೇ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ.



ರಾಜೀನಾಮೆ ಸಲ್ಲಿಸಿದ ಸ್ಟಾಲಿನ್, ಪಿಣರಾಯಿ
ದಕ್ಷಿಣ ಭಾರತದ ಕಾಮ್ರೆಡ್(ಎಡಪಂಥೀಯ) ಸಹೋದರರೆಂದು ಪರಸ್ಪರ ಹೇಳಿಕೊಳ್ಳುತ್ತಿದ್ದ ಸಿಪಿಐ(ಎಂ) ನಾಯಕ ಪಿಣರಾಯಿ ವಿಜಯನ್ ಮತ್ತು ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಮಂಗಳವಾರ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದಾರೆ. ಕೇರಳದ ರಾಜ್ಯಪಾಲ ಮತ್ತು ತಮಿಳುನಾಡಿನ ಹೆಚ್ಚುವರಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರಿಗೆ ಇಬ್ಬರು ನಾಯಕರು ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

22 ಹಾಲಿ ಸಚಿವರ ಪತನ

2026ರ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ತೃಣಮೂಲ ಕಾಂಗ್ರೆಸ್‌ನ 35 ಸಚಿವರ ಪೈಕಿ 22 ಮಂದಿ ಪರಾಭವಗೊಂಡಿದ್ದಾರೆ. ಇದರೊಂದಿಗೆ ರಾಜ್ಯ ಸಚಿವ ಸಂಪುಟದ ಶೇ.63ರಷ್ಟು ಸದಸ್ಯರು ಸೋಲನ್ನಪ್ಪಿದಂತಾಗಿದೆ. ಮಮತಾ ಬ್ಯಾನರ್ಜಿ ಭವಾನಿಪುರ ಕ್ಷೇತ್ರದಲ್ಲಿ ಸೋಲು ಕಂಡಿದ್ದು, ಇದು ರಾಜ್ಯ ನಾಯಕತ್ವಕ್ಕೆ ನೇರ ಹೊಡೆತ ನೀಡಿದೆ. ಮತದಾರರು ಪ್ರಮುಖ ಇಲಾಖೆಗಳ ಮಂತ್ರಿಗಳನ್ನೇ ತಿರಸ್ಕರಿಸಿದ್ದಾರೆ. ಸೋತವರಲ್ಲಿ ಶಶಿ ಪಂಜ (ಕೈಗಾರಿಕೆ), ಬ್ರಾತ್ಯ ಬಸು (ಶಿಕ್ಷಣ), ಚಂದ್ರಿಮಾ ಭಟ್ಟಾಚಾರ್ಯ (ಹಣಕಾಸು), ಅರೂಪ್ ಬಿಸ್ವಾಸ್ (ವಿದ್ಯುತ್) ಮತ್ತು ಸ್ನೇಹಶಿಸ್ ಚಕ್ರವರ್ತಿ (ಸಾರಿಗೆ) ಸೇರಿದ್ದಾರೆ. ಗ್ರಾಮೀಣಾಭಿವೃದ್ಧಿ, ಅಲ್ಪಸಂಖ್ಯಾತ ಕಲ್ಯಾಣ ಮತ್ತು ಉತ್ತರ ಬಂಗಾಳ ಅಭಿವೃದ್ಧಿ ಇಲಾಖೆಗಳ ಸಚಿವರೂ ಸೋಲು ಅನುಭವಿಸಿದ್ದಾರೆ.

ಕೇರಳ ಸಿಎಂ ಯಾರು?
ಕೇರಳದಲ್ಲಿ 10ವರ್ಷಗಳ ಬಳಿಕ ಎಲ್‌ಡಿಎಫ್ ಸರಕಾರ ಆಡಳಿತ ವಿರೋಧಿ ಅಲೆಯಲ್ಲಿ ಪತನಗೊಂಡು ಯುಡಿಎಫ್ ಗೆಲುವಿನ ಅಲೆಯಲ್ಲಿ ತೇಲಿ ಬಂದು ಸರಕಾರ ರಚನೆಗೆ ಸಿದ್ಧಗೊಳ್ಳುತ್ತಿದೆ. ಆದರೆ ಈಗ ಯುಡಿಎಫ್ ಸರಕಾರದಲ್ಲಿ ಮುಖ್ಯಮಂತ್ರಿ ಪಟ್ಟ ಯಾರಿಗೆ ಒಲಿಯಲಿದೆ ಎಂಬ ಪ್ರಶ್ನೆ ಈಗ ತೀವ್ರ ಚರ್ಚೆಗೀಡಾಗಿದೆ. ವಿಪಕ್ಷ ನಾಯಕನ ಪಾತ್ರದಲ್ಲಿ ಮಿಂಚಿದ ವಿ.ಡಿ.ಸತೀಶನ್ , ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಮತ್ತು ಹೈಕಮಾಂಡ್ ನಿಕಟವರ್ತಿ ಕೆ.ಸಿ.ವೇಣುಗೋಪಾಲ್ ಹೆಸರುಗಳು ಕೇಳಿಬರುತ್ತಿದ್ದು, ಅಂತಿಮವಾಗಿ ಹೈಕಮಾಂಡ್ ಕೃಪೆ ಯಾರಿಗೆ ಎಂಬ ಚರ್ಚೆ ಜೋರಾಗಿದೆ.

ಒಂದೇ ಒಂದು ಮತ: ಟಿವಿಕೆಗೆ ನಗು, ಡಿಎಂಕೆಗೆ ಆಘಾತ

ತಿರುವತ್ತೂರು: ತಮಿಳುನಾಡು ವಿಧಾನಸಭಾ ಚುನಾವಣೆಯ ಮತ ಎಣಿಕೆ ವೇಳೆ ತಿರುಪತ್ತೂರಿನಲ್ಲಿ ಅಕ್ಷರಶಃ ಉಸಿರು ಬಿಗಿಹಿಡಿಯುಂತಹ ವಾತಾವರಣ ನಿರ್ಮಾಣವಾಗಿತ್ತು. ಅದೃಷ್ಟದಾಟದಲ್ಲಿ ಕೊನೆಗೂ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಅಭ್ಯರ್ಥಿ ಸೀನಿವಾಸ ಸೇತುಪತಿ ಆರ್ ವಿಜಯಿಯಾದರೆ, ಡಿಎಂಕೆ ಸರ್ಕಾರದ ಸಹಕಾರಿ ಸಚಿವ ಕೆ.ಆರ್ ಪೆರಿಯಕರುಪ್ಪನ್ ಪರಾಜಯ ಅನುಭವಿಸಿದರು. ಅಂತರ ಒಂದು ಮತ, ಹೌದು ಒಂದೇ ಒಂದು ಮತ! ಅಧಿಕೃತ ಅಂಕಿಅಂಶಗಳ ಪ್ರಕಾರ, ಸೇತುಪತಿ ಆರ್ 83,375 ಮತಗಳನ್ನು ಪಡೆದರೆ, ಪೆರಿಯಕರುಪ್ಪನ್ 83,374 ಮತಗಳನ್ನು ಗಳಿಸಿದ್ದಾರೆ. ಭಾರತೀಯ ಜನತಾ ಪಕ್ಷದ ಕೆ.ಸಿ ತಿರುಮಾರನ್ 29,054 ಮತಗಳನ್ನು ಪಡೆಯುವ ಮೂಲಕ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದಾರೆ. ಇದು ರಾಜ್ಯದ ಇತಿಹಾಸದಲ್ಲೇ ಅತ್ಯಂತ ಕಡಿಮೆ ಅಂತರದ ಗೆಲುವು ಅಥವಾ ಸೋಲು ಆನಿಸಿಕೊಂಡಿದೆ. ಟಿವಿಕೆ ಈ ಬಾರಿ 108 ಸ್ಥಾನಗಳನ್ನು ಗೆಲ್ಲುವ ಮೂಲಕ ರಾಜ್ಯದ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಅಂತೂ ವಿಜಯ್ ನೇತೃತ್ವದ ಪಕ್ಷಕ್ಕೆ ಜನಬೆಂಬಲದೊಂದಿಗೆ ಅದೃಷ್ಟದ ಬೆಂಬಲವೂ ಇತ್ತೆನಿಸುತ್ತದೆ. ಅಂತೂ ಡಿಎಂಕೆ ಮತ್ತು ಸೋಲುಂಡ ಸಚಿವರು ಆ ಒಂದು ಮತ ನೆನೆದು ಕೈ ಕೈ ಹಿಸುಕಿಕೊಳ್ಳುವುದಲ್ಲದೆ ಬೇರೆ ದಾರಿಯಿಲ್ಲ.

ಮೇ 9ಕ್ಕೆ ಪ್ರಮಾಣ ವಚನ?

ಮೇ9 ಕ್ಕೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಪ್ರಮಾಣ ವಚನ ನಡೆಯಲಿದೆ ಎಂಬ ಊಹಾಪೋಹಾಗಳು ಸದ್ಯ ಎಲ್ಲೆಡೆ ಹರಿದಾಡುತ್ತಿದೆ. ಐತಿಹಾಸಿಕ ಗೆಲುವು ಸಾಧಿಸಿರುವ ಬಿಜೆಪಿ, ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬ ಕುತೂಹಲವೂ ಮೂಡಿದೆ.

ಟಿಎಂಸಿ ಮಾಜಿ ನಾಯಕ ಹಾಗೂ ಮಮತಾ ಬ್ಯಾನರ್ಜಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಸುವೇಂದು ಅಧಿಕಾರಿ ಬಿಜೆಪಿ ಸೇರಿ ರಾಜ್ಯಾಧ್ಯಕ್ಷರಾಗಿದ್ದರು. 2021ರ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ, ಅವರು ಟಿಎಂಸಿಯಿಂದ ಹೊರಬಂದು ಬಿಜೆಪಿ ಸೇರಿದ್ದು, ಸದ್ಯ ಮುಖ್ಯಮಂತ್ರಿ ಸ್ಥಾನಕ್ಕೆ ಅವರ ಹೆಸರು ಕೇಳಿಬರುತ್ತಿದೆ. ಪ್ರಸ್ತುತ ಪ್ರತಿಪಕ್ಷ ನಾಯಕರಾಗಿರುವ ಅಧಿಕಾರಿ, ಸಿಎಂ ಸ್ಥಾನದ ಪ್ರಬಲ ಸ್ಪರ್ಧಿ ಎಂದು ಪರಿಗಣಿಸಲಾಗಿದೆ. ಇನ್ನೊಂದೆಡೆ ಹೊಸದಾಗಿ ನೇಮಕಗೊಂಡ ಬಿಜೆಪಿ ಮುಖ್ಯಸ್ಥರಾದ ಸಮಿಕ್ ಭಟ್ಟಾಚಾರ್ಯ ತೆರೆಮರೆಯಲ್ಲಿ ಕೆಲಸ ಮಾಡಲು ಹೆಸರುವಾಸಿಯಾಗಿದ್ದಾರೆ. ಅವರ ಹೆಸರೂ ಅಲ್ಲಲ್ಲಿ ಕೇಳಿಬರುತ್ತಿದೆ. ಫ್ಯಾಷನ್ ಡಿಸೈನರ್ ಆಗಿರುವ ಅಗ್ನಿಮಿತ್ರ ಪೌಲ್, ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಪ್ರಮುಖ ಮಹಿಳಾ ನಾಯಕಿಯರಲ್ಲಿ ಒಬ್ಬರು. ಬಿಜೆಪಿ ಮಹಿಳಾ ಮೋರ್ಚಾದ ಬಂಗಾಳ ಘಟಕದ ಮುಖ್ಯಸ್ಥೆಯಾಗಿ ಸೇವೆ ಸಲ್ಲಿಸಿದ್ದ ಇವರು ರಾಜ್ಯ ಬಿಜೆಪಿ ಉಪಾಧ್ಯಕ್ಷೆಯಾಗುವ ಮೂಲಕ ಪ್ರಮುಖ ಹುದ್ದೆಯನ್ನು ಏರಿದ್ದಾರೆ. ಹೆಸರು ಸಿಎಂ ಸಂಭಾವ್ಯ ಪಟ್ಟಿಯಲ್ಲಿ ಪೌಲ್ ಹೆಸರು ಕೇಳಿಬರುತ್ತಿದೆ.



ಯಾರ ಜತೆ ಟಿವಿಕೆ ಮೈತ್ರಿ?

ಸದ್ಯ ಎಲ್ಲರ ಕಣ್ಣುಗಳು ತಮಿಳುನಾಡಿನಲ್ಲಿ ಹೊಸ ಸರ್ಕಾರ ರಚನೆಯ ಮೇಲೆ ಇವೆ. 234 ಸದಸ್ಯ ಬಲದ ವಿಧಾನಸಭೆಯಲ್ಲಿ ಟಿವಿಕೆ 108 ಸ್ಥಾನಗಳೊಂದಿಗೆ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಹೊಸ ಸರ್ಕಾರವನ್ನು ರಚಿಸಲು 118 ಸ್ಥಾನಗಳ ಬಹುಮತಕ್ಕೆ 10 ಸ್ಥಾನಗಳು ಕಡಿಮೆಯಾಗಿವೆ. ಆದರೆ ಬಹುಮತದ ಸಂಖ್ಯೆಗಳ ಜತೆಗೆ, ಪ್ರಸ್ತುತ ತಮಿಳುನಾಡು ವಿಧಾನಸಭೆಯ ಅಧಿಕಾರಾವಧಿಯು ಮೇ10ಕ್ಕೆ ಕೊನೆಗೊಳ್ಳುತ್ತಿರುವುದರಿಂದ ವಿಜಯ್‌ಗೆ ಗಡುವು ಕಡಿಮೆ ಇದೆ. ಕಾಂಗ್ರೆಸ್, ಡಿಎಂಕೆ, ಎಐಎಡಿಎಂಕೆ, ಬಿಜೆಪಿ ಅಥವಾ ಇತರ ಸಣ್ಣ ಪಕ್ಷಗಳಿಂದ ಯಾರನ್ನು ಬೆಂಬಲಿಸಬೇಕು ಎಂಬುದನ್ನು ನಿರ್ಧರಿಸಲು ವಿಜಯ್‌ಗೆ ಐದು ದಿನಗಳ ಕಾಲಾವಕಾಶವಿದೆ.

ಟಿವಿಕೆ ಮುಂದಿರುವ ಅವಕಾಶ: ಡಿಎಂಕೆ–ಮೈತ್ರಿಕೂಟದ ಸಣ್ಣ ಪಕ್ಷಗಳಾದ ಟಿವಿಕೆಯು ಕಾಂಗ್ರೆಸ್ (5 ಸ್ಥಾನಗಳು), ಸಿಪಿಐ, ಸಿಪಿಐ (ಎಂ) ಮತ್ತು ವಿಸಿಕೆ (ತಲಾ 2 ಸ್ಥಾನಗಳು) ಯಿಂದ ಬೆಂಬಲವನ್ನು ಪಡೆಯಬಹುದು. ಈ ಜೋಡಿಯು ಡಿಎಂಕೆ ಅಥವಾ ಎಐಎಡಿಎಂಕೆ ಜತೆಗಿನ ಔಪಚಾರಿಕ ಮೈತ್ರಿಯಿಲ್ಲದೆ ಟಿವಿಕೆಯನ್ನು ಆರಾಮವಾಗಿ 118ರ ಗಡಿ ದಾಟಿಸಬಹುದು. ರಾಹುಲ್ ಗಾಂಧಿ ಸಂಪರ್ಕದಲ್ಲಿದ್ದಾರೆ ಎಂದು ವರದಿಯಾಗಿದೆ. ಕಾಂಗ್ರೆಸ್ ಜತೆಗಿನ ಮಾತುಕತೆಗಳು ಸಕ್ರಿಯವಾಗಿವೆ.

ತಮಿಳುನಾಡಿನ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಪಕ್ಷವು 108 ಸ್ಥಾನಗಳನ್ನು ಗೆದ್ದ ಬೆನ್ನಲ್ಲೇ ಟಿವಿಕೆ ಮುಖ್ಯಸ್ಥ ವಿಜಯ್ ಅವರು ಮಂಗಳವಾರ ಹೊಸದಾಗಿ ಆಯ್ಕೆಯಾದ ಶಾಸಕರ ಸಭೆ ನಡೆಸಿದ್ದರು. ಈ ಪಕ್ಷದ ಸಭೆಗೆ ಮುನ್ನ ಅವರು ಪಕ್ಷದ ಸೈದ್ಧಾಂತಿಕ ನಾಯಕರಿಗೆ ಗೌರವ ಸಲ್ಲಿಸಿದ್ದಾರೆ. ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಮತ್ತು ವಿಧಾನಸಭೆಯಲ್ಲಿ ಅವರ ನಡವಳಿಕೆಯ ಬಗ್ಗೆ ಚರ್ಚಿಸಲು ಅವರು ಪಕ್ಷದ ಶಾಸಕರ ಸಭೆ ಕರೆದಿದ್ದರು ಎಂದು ಮೂಲಗಳು ತಿಳಿಸಿವೆ.

ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಿಸಿಇಎ ಸಭೆಯಲ್ಲಿ ನಿರ್ಧಾರ
ಕಬ್ಬು ಬೆಂಬಲ ಬೆಲೆ ಕ್ವಿಂಟಾಲ್‌ಗೆ ₹365

ಹೊಸದಿಲ್ಲಿ: ಕೇಂದ್ರ ಸರ್ಕಾರವು 2026–27ರ ಸಕ್ಕರೆ ಹಂಗಾಮಿಗೆ(ಅಕ್ಟೋಬರ್‌ನಿಂದ ಆರಂಭ) ಕಬ್ಬಿನ ಕನಿಷ್ಠ ಖರೀದಿ ಬೆಲೆಯಾದ ನ್ಯಾಯಸಮ್ಮತ ಹಾಗೂ ಲಾಭದಾಯಕ ದರವನ್ನು(ಎಫ್‌ಆರ್‌ಪಿ) ಕ್ವಿಂಟಾಲ್‌ಗೆ 10 ರೂ. ಹೆಚ್ಚಿಸಿ 365ಕ್ಕೆ ನಿಗದಿಪಡಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿ(ಸಿಸಿಇಎ) ಈ ನಿರ್ಧಾರ ಕೈಗೊಂಡಿದೆ.

ಮೂಲ ಮರುಪಡೆಯುವಿಕೆ ದರ(ರಿಕವರಿ) ಶೇ.10.25 ಇದ್ದಲ್ಲಿ ಈ ಎಫ್‌ಆರ್‌ಪಿ ಅನ್ವಯವಾಗುತ್ತದೆ. 2025–26ರ 355 ರೂ. ದರಕ್ಕೆ ಹೋಲಿಸಿದರೆ ಇದು ಶೇ.2.81 ಹೆಚ್ಚಳವಾಗಿದೆ. ರಿಕವರಿ ದರವು ಶೇ.10.25 ಮೀರಿದ ಪ್ರತಿ ಶೇ.0.1 ಹೆಚ್ಚಳಕ್ಕೆ ಕ್ವಿಂಟಾಲ್‌ಗೆ 3.56 ರೂ. ಹೆಚ್ಚುವರಿ ನೀಡಲಾಗುತ್ತದೆ.

ಶೇ.9.5 ಕ್ಕಿಂತ ಕಡಿಮೆ ರಿಕವರಿ ಇರುವ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡುವ ರೈತರಿಗೆ ಕಡಿತ ವಿಧಿಸಲಾಗುವುದಿಲ್ಲ; ಅವರಿಗೆ ಪ್ರತಿ ಕ್ವಿಂಟಾಲ್‌ಗೆ 338.3 ರೂ. ನೀಡಲಾಗುತ್ತದೆ. ಉತ್ಪಾದನಾ ವೆಚ್ಚ 182 ರೂ. ಆಗಿದ್ದು, ನಿಗದಿಪಡಿಸಿದ ಎಫ್‌ಆರ್‌ಪಿ ಅದಕ್ಕಿಂತ 100.5% ಹೆಚ್ಚು.ಈ ನಿರ್ಧಾರದಿಂದ ಸುಮಾರು ಒಂದು ಕೋಟಿ ರೈತರಿಗೆ ಪ್ರಯೋಜನವಾಗಲಿದೆ. ಒಟ್ಟಾರೆ 1 ಲಕ್ಷ ಕೋಟಿ ರೂ.ಗಿಂತ ಹೆಚ್ಚು ಆದಾಯ ರೈತರಿಗೆ ದೊರೆಯುವ ನಿರೀಕ್ಷೆಯಿದೆ. ಸಕ್ಕರೆ ಕ್ಷೇತ್ರವು ಸುಮಾರು ಐದು ಕೋಟಿ ಜನರ ಜೀವನೋಪಾಯಕ್ಕೆ ಸಂಬಂಧಿಸಿದೆ.

ಹಿಂದಿನ ಹಂಗಾಮಿನಲ್ಲಿ ಬಾಕಿ ಹಣದ 99.5% ಪಾವತಿಯಾಗಿದ್ದು, ಪ್ರಸ್ತುತ ಹಂಗಾಮಿನಲ್ಲಿ 88.6% ಪಾವತಿಸಲಾಗಿದೆ. ಈ ಕ್ರಮ ಎಥನಾಲ್ ಉತ್ಪಾದನೆಗೂ ಉತ್ತೇಜನ ನೀಡಲಿದೆ.

ಹತ್ತಿ ಉತ್ಪಾದನೆ ಹೆಚ್ಚಿಸಲು ಯೋಜನೆ: ಹತ್ತಿ ಬೆಳೆ ಉತ್ಪಾದನೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಐದು ವರ್ಷಗಳ(2026–27 ರಿಂದ 2030–31) ಅವಧಿಗೆ 5,659.22 ಕೋಟಿ ರೂ. ವೆಚ್ಚದ ಮಿಷನ್ ಫಾರ್ ಕಾಟನ್ ಪ್ರೊಡಕ್ಟಿವಿಟಿಗೆ ಅನುಮೋದನೆ ನೀಡಿದೆ.

ಸುಪ್ರೀಂ ಜಡ್ಜ್‌ಗಳ ಸಂಖ್ಯೆ ಹೆಚ್ಚಳಕ್ಕೆ ಅಸ್ತು: ಕೇಂದ್ರ ಸಚಿವ ಸಂಪುಟವು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆಯನ್ನು ಇಂದಿನ 34ರಿಂದ 38ಕ್ಕೆ ಹೆಚ್ಚಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಿದೆ. ಪ್ರಸ್ತುತ ಸಿಜೆಐ ಸೇರಿ 34 ನ್ಯಾಯಮೂರ್ತಿಗಳಿದ್ದು, ಇನ್ನೂ ನಾಲ್ವರನ್ನು ಹೆಚ್ಚಿಸಲು ಮುಂದಿನ ಸಂಸತ್ ಅಧಿವೇಶನದಲ್ಲಿ ಮಸೂದೆ ತರಲಾಗುತ್ತದೆ. ಅನುಮೋದನೆ ಬಳಿಕ ಒಟ್ಟು ಸಂಖ್ಯೆ 38 ಆಗಲಿದೆ.

ಎಂಎಸ್‌ಎಂಇ, ವಿಮಾನಯಾನಕ್ಕೆ ತುರ್ತು ಸಾಲ ಭದ್ರತಾ ಯೋಜನೆ: ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆ ಎಂಎಸ್‌ಎಂಇ ಹಾಗೂ ವಿಮಾನಯಾನ ಕ್ಷೇತ್ರಗಳಿಗೆ ನೆರವಾಗಲು 18,100 ಕೋಟಿ ರೂ. ವೆಚ್ಚದ ತುರ್ತು ಸಾಲ ಭದ್ರತಾ ಯೋಜನೆ(ಇಸಿಎಲ್‌ಜಿಎಸ್) ಘೋಷಿಸಲಾಗಿದೆ. ಇದರ ಮೂಲಕ 2.55 ಲಕ್ಷ ಕೋಟಿ ರೂ. ಹೆಚ್ಚುವರಿ ಸಾಲ ಹರಿವು ಸಾಧ್ಯವಾಗಲಿದೆ.

ರೈಲ್ವೆ ಸಚಿವಾಲಯದ 23,437 ಕೋಟಿ ರೂ. ಯೋಜನೆಗಳಿಗೆ ಅನುಮೋದನೆ: ರೈಲ್ವೆ ಸಚಿವಾಲಯದ ಮೂರು ಪ್ರಮುಖ ಯೋಜನೆಗಳಿಗೆ 23,437 ಕೋಟಿ ರೂ. ವೆಚ್ಚಕ್ಕೆ ಅನುಮೋದನೆ ನೀಡಿದೆ. ನಾಗ್ದಾ–ಮಥುರಾ, ಗುಂಟಕಲ್–ವಾಡಿ ಮತ್ತು ಬುರಹ್ವಾಲ್–ಸೀತಾಪುರ ಮಾರ್ಗಗಳಲ್ಲಿ ಮೂರನೇ ಮತ್ತು ನಾಲ್ಕನೇ ಹಳಿಗಳ ನಿರ್ಮಾಣ ಈ ಯೋಜನೆಗಳಲ್ಲಿ ಸೇರಿವೆ.

ಗಡಿ ಹಂಚಿಕೊಳ್ಳುವ ರಾಷ್ಟ್ರಗಳ ಹೂಡಿಕೆಗೆ ಕಟ್ಟುನಿಟ್ಟಿನ ನಿಯಮ

ಹೊಸದಿಲ್ಲಿ: ಚೀನಾ ಮತ್ತು ಪಾಕಿಸ್ತಾನ ಸೇರಿದಂತೆ ಭಾರತದೊಂದಿಗೆ ಭೂಗಡಿ ಹಂಚಿಕೊಳ್ಳುವ ರಾಷ್ಟ್ರಗಳಿಂದ ಬರುವ ಎಲ್ಲಾ ವಿದೇಶಿ ನೇರ ಹೂಡಿಕೆಗಳಿಗೆ (ಎಫ್‌ಡಿಐ) ಕೇಂದ್ರ ಸರ್ಕಾರ ಹೊಸ ನಿರ್ಬಂಧಗಳನ್ನು ವಿಧಿಸಿದ್ದು, ಸರ್ಕಾರದ ಪೂರ್ವಾನುಮತಿಯನ್ನು ಕಡ್ಡಾಯಗೊಳಿಸಿದೆ.

ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನಾ ಇಲಾಖೆಯ (ಡಿಪಿಐಐಟಿ) ಪರಿಷ್ಕೃತ ನೀತಿಯ ಪ್ರಕಾರ, ನೆರೆಯ ರಾಷ್ಟ್ರದ ನಾಗರಿಕರು ಅಥವಾ ಅಲ್ಲಿ ನೆಲೆಸಿರುವ ಮಾಲೀಕತ್ವದ ಸಂಸ್ಥೆಗಳು ಭಾರತದಲ್ಲಿ ಹೂಡಿಕೆ ಮಾಡುವ ಮುನ್ನ ಸರ್ಕಾರದ ಅನುಮತಿ ಪಡೆಯಬೇಕು. ಪಾಕಿಸ್ತಾನ ಮೂಲದ ಸಂಸ್ಥೆಗಳು ರಕ್ಷಣೆ, ಬಾಹ್ಯಾಕಾಶ ಮತ್ತು ಪರಮಾಣು ಶಕ್ತಿಯಂತಹ ಸೂಕ್ಷ್ಮ ವಲಯಗಳಲ್ಲಿ ಹೂಡಿಕೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಸುರಕ್ಷತಾ ಕ್ರಮಗಳು: ರಾಷ್ಟ್ರೀಯ ಭದ್ರತೆಯನ್ನು ಕಾಪಾಡುವುದು ಮತ್ತು ದೇಶೀಯ ಕಂಪನಿಗಳ ಮೇಲೆ ವಿದೇಶಿ ಸಂಸ್ಥೆಗಳ ಅನಗತ್ಯ ನಿಯಂತ್ರಣ ತಡೆಯುವುದು ಈ ಕ್ರಮದ ಉದ್ದೇಶ. ಭಾರತೀಯ ಕಂಪನಿಗಳಲ್ಲಿನ ಹಳೆಯ ಹೂಡಿಕೆಗಳ ಮಾಲೀಕತ್ವವನ್ನು ಈ ನಿರ್ದಿಷ್ಟ ದೇಶಗಳ ವ್ಯಕ್ತಿಗಳಿಗೆ ಅಥವಾ ಉದ್ದಿಮೆಗಳಿಗೆ ವರ್ಗಾಯಿಸುವ ಸಂದರ್ಭದಲ್ಲೂ ಈ ನಿಯಮ ಅನ್ವಯಿಸುತ್ತದೆ. ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ತಾತ್ಕಾಲಿಕವಾಗಿ ಜಾರಿಗೆ ತಂದಿದ್ದ ಈ ಕ್ರಮಗಳನ್ನು ಈಗ ಖಾಯಂ ಆಗಿ ಪರಿವರ್ತಿಸಲಾಗಿದೆ.

ದಾಳಿ: ಭಾರತೀಯರಿಗೆ ಗಾಯ

ಯುಎಇ: ಇರಾನ್ ಬಹುಸಂಖ್ಯೆಯಲ್ಲಿ ಡ್ರೋನ್, ಕ್ಷಿಪಣಿ ದಾಳಿ ನಡೆಸಿದ ಪರಿಣಾಮ, ಪೂರ್ವ ಎಮಿರೇಟ್ ಆಫ್ ಫುಜೈರಾಹ್‌ನಲ್ಲಿ ತೈಲ ಸಂಸ್ಕರಣಾಗಾರ ಹೊತ್ತುರಿದು ಮೂವರು ಭಾರತೀಯ ಪ್ರಜೆಗಳು ಗಾಯಗೊಂಡಿದ್ದಾರೆಂದು ಯುಎಇ ಆರೋಪಿಸಿದೆ. ಇರಾನ್ ಮತ್ತು ಅಮೆರಿಕಗಳು ಏ.8ರಂದು ಕದನ ವಿರಾಮಕ್ಕೆ ಸಮ್ಮತಿಸಿದ ನಂತರದಲ್ಲಿ ಯುಎಇ ಮೇಲೆ ಇರಾನ್ ನಡೆಸಿದ ಪ್ರಥಮ ದಾಳಿ ಇದಾಗಿದೆ. ಸೋಮವಾರ ದಾಳಿ ನಡೆದಿದೆ. ಇರಾನ್ ಸೋಮವಾರ ಬರೋಬ್ಬರಿ 12ಖಂಡಾಂತರ ಕ್ಷಿಪಣಿಗಳು, ಮೂರು ಕ್ರೂಸ್ ಕ್ಷಿಪಣಿಗಳು ಹಾಗೂ ನಾಲ್ಕು ಡ್ರೋನ್‌ಗಳ ಮುಖೇನ ಯುಎಇ ಮೇಲೆ ದಾಳಿ ನಡೆಸಿರುವುದನ್ನು ಯುಎಇಯ ವಾಯುಪಡೆ ಖಚಿತಪಡಿಸಿದೆ ಎಂದು ಯುಎಇಯ ರಕ್ಷಣಾ ಖಾತೆ ಹೇಳಿದೆ. ಯುಎಇಯ ನಾಗರಿಕ ವಸತಿ ಪ್ರದೇಶಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಟಾರ್ಗೆಟ್ ಮಾಡಿ ಇರಾನ್ ನಡೆಸಿರುವ ಅಪ್ರಚೋದಿತ, ಭಯೋತ್ಪಾದಕ ದಾಳಿಯನ್ನು ತೀವ್ರವಾಗಿ ಖಂಡಿಸಿರುವ ಯುಎಇ ವಿದೇಶಾಂಗ ಖಾತೆ, ಯುಎಇಯ ಭದ್ರತೆ ಮತ್ತು ಸಾರ್ವಭೌಮತೆಗೆ ಯಾವುದೇ ಬೆದರಿಕೆಯನ್ನು ನಾವು ಸಹಿಸುವುದಿಲ್ಲ. ದಾಳಿಗಳಿಗೆ ಪ್ರತ್ಯುತ್ತರಿಸುವ ಸಂಪೂರ್ಣ ಮತ್ತು ಕಾನೂನುಬದ್ಧ ಹಕ್ಕನ್ನು ನಾವು ಕಾಯ್ದುಕೊಂಡಿದ್ದೇವೆ ಎಂದು ಎಚ್ಚರಿಕೆ ನೀಡಿದೆ. ಈ ಬಗ್ಗೆ ಇರಾನ್‌ನಿಂದ ಯಾವುದೇ ಅಧಿಕೃತ ಕಮೆಂಟ್ ಬಂದಿಲ್ಲ.

ಭಾರತದ ತೀವ್ರ ಖಂಡನೆ: ಯುಎಇಯ ಫುಜೈರಾಹ್ ಪೆಟ್ರೋಲಿಯಂ ಉದ್ದಿಮೆ ವಲಯಗಳ ಮೇಲೆ ಇರಾನ್ ನಡೆಸಿದ ಡ್ರೋನ್ -ಕ್ಷಿಪಣಿ ದಾಳಿಯಲ್ಲಿ ಮೂವರು ಭಾರತೀಯರು ಗಾಯಗೊಂಡಿದ್ದು, ದಾಳಿಯನ್ನು ಭಾರತ ಅತ್ಯುಗ್ರವಾಗಿ ಖಂಡಿಸಿದೆ. ನಾಗರಿಕರು ಮತ್ತು ಮೂಲ ಸೌಕರ್ಯಗಳನ್ನು ಟಾರ್ಗೆಟ್ ಮಾಡೋ ದಾಳಿ ತೀರಾ ಅಸ್ವೀಕಾರಾರ್ಹವೆಂದು ಪ್ರಧಾನಿ ಮೋದಿ ದಾಳಿಯನ್ನು ಕಟುವಾಗಿ ಖಂಡಿಸಿದ್ದಾರೆ. ಯುಎಇ ಜತೆ ಭಾರತ ದೃಢ ಐಕಮತ್ಯದೊಂದಿಗೆ ನಿಲ್ಲುವುದು ಮತ್ತು ಮಾತುಕತೆ ಹಾಗೂ ರಾಜತಾಂತ್ರಿಕತೆ ಮುಖೇನ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಬೆಂಬಲವೀಯುವುದೆಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಕಿರು ಸುದ್ದಿ

ಇಂದಿನಿಂದ ಹೊಸದುರ್ಗದಲ್ಲಿ ರಾಜ್ಯಮಟ್ಟದ ಬಾಸ್ಕೆಟ್ ಬಾಲ್ ಸ್ಪರ್ಧೆ

ಕಾಸರಗೋಡು: ಜಿಲ್ಲಾ ಬಾಸ್ಕೆಟ್ ಬಾಲ್ ಅಸೋಸಿಯೇಶನ್ ಮತ್ತು ಕೇರಳ ಬಾಸ್ಕೆಟ್ ಬಾಲ್ ಅಸೋಸಿಯೇಶನ್‌ನ ಜಂಟಿ ಆಶ್ರಯದಲ್ಲಿ ಮೇ 6ರಿಂದ 10ರ ತನಕ ಹೊಸದುರ್ಗದಲ್ಲಿ ರಾಜ್ಯಮಟ್ಟದ ಬಾಸ್ಕೆಟ್ ಬಾಲ್ ಪಂದ್ಯಾಟ ನಡೆಯಲಿದೆ. ಪಂದ್ಯಾಟವನ್ನು ಮೇ 6ರಂದು ಸಂಜೆ 6ಕ್ಕೆ ಮಾಜಿ ಕ್ರೀಡಾ ಸಚಿವ ಇ.ಪಿ.ಜಯರಾಜನ್ ಉದ್ಘಾಟಿಸುವರು. ಹೊಸದುರ್ಗದ ಇಂಡೋರ್ ಕ್ರೀಡಾಂಗಣ ಮತ್ತು ಕ್ರೈಸೆಟ್ ಸಿಎಂಇ ಪಬ್ಲಿಕ್ ಸ್ಕೂಲ್‌ಗಳಲ್ಲಾಗಿ ಈ ಸ್ಪರ್ಧೆ ನಡೆಯಲಿದೆ. ಕೇರಳದ 14 ಜಿಲ್ಲೆಗಳ ತಂಡಗಳು ಇದರಲ್ಲಿ ಭಾಗವಹಿಸಲಿವೆ.

ಮೇ 8ರಂದು ವಿಶ್ವ ರೆಡ್‌ಕ್ರಾಸ್ ದಿನಾಚರಣೆ

ಮಂಗಳೂರು: ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ವತಿಯಿಂದ ಯೂತ್ ರೆಡ್ ಕ್ರಾಸ್ ಮಂಗಳೂರು ವಿ.ವಿ. ಸಹಯೋಗದಲ್ಲಿ ನಗರದ ರೆಡ್‌ಕ್ರಾಸ್ ಶತಮಾನೋತ್ಸವ ಭವನದ ಪ್ರೇರಣಾ ಸಭಾಂಗಣದಲ್ಲಿ ಮೇ 8ರಂದು ಬೆಳಗ್ಗೆ 10ಕ್ಕೆ ವಿಶ್ವ ರೆಡ್‌ಕ್ರಾಸ್ ದಿನಾಚರಣೆ ನಡೆಯಲಿದೆ. ಇದೇ ಸಂದರ್ಭ ಯೂತ್ ರೆಡ್‌ಕ್ರಾಸ್ ವಿಚಾರ ಸಂಕಿರಣ ಏರ್ಪಡಿಸಲಾಗಿದೆ. ರೆಡ್‌ಕ್ರಾಸ್ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಡಿ.ವೇದವ್ಯಾಸ ಕಾಮತ್, ಸುರತ್ಕಲ್ ಎನ್‌ಐಟಿಕೆಯ ಸಹ ಪ್ರಾಧ್ಯಾಪಕಿ ಡಾ.ರಶ್ಮಿ ಸುವೀರ್ ಉಚ್ಚಿಲ್, ಡಿ ಅಡಿಕ್ಷನ್ ಸಮಾಲೋಚಕಿ ಡಾ.ಕುಸುಮ್ ತಂತ್ರಿ ಡೆಸಾ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಯೂತ್ ರೆಡ್‌ಕ್ರಾಸ್ ಉಪ ಸಮಿತಿ ನಿರ್ದೇಶಕಿ ಡಾ.ಸುಮನಾ ಬಿ. ತಿಳಿಸಿದ್ದಾರೆ.

ಮೇ 15,16: ವಾರ್ಷಿಕ ಗುಳಿಗ ಕೋಲ, ತಂಬಿಲ

ಮಂಗಳೂರು: ನಗರದ ಹಂಪನಕಟ್ಟೆ ಗುಳಿಗ ಹಿತ್ಲು ಶರವು ಮಹಾ ಗುಳಿಗ ದೈವಸ್ಥಾನದಲ್ಲಿ ಮೇಷ ಮಾಸದ ವಾರ್ಷಿಕ ಗುಳಿಗ ಕೋಲ , ತಂಬಿಲ ಪೂಜೆ ಮೇ 15 ಮತ್ತು 16ರಂದು ನಡೆಯಲಿದೆ. ಮೇ 15ರಂದು ಬೆಳಗ್ಗೆ 8.30ಕ್ಕೆ ಗಣಹೋಮ, ಶ್ರೀ ವೆಂಕಟರಮಣ ಸ್ವಾಮಿ ದೇವರ ಹುಂಡಿ ಹರಕೆ ನಡೆಯಲಿದೆ. ರಾತ್ರಿ 9ಕ್ಕೆ ಶರವು ಮಹಾ ಗುಳಿಗ ದೈವದ ವಾರ್ಷಿಕ ಕೋಲ ನೆರವೇರಲಿದೆ. ಮೇ 16ರಂದು ರಾತ್ರಿ 9ಕ್ಕೆ ತಂಬಿಲ ಪೂಜೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ 7: ಚಂಡಿಕಾ ಹೋಮ: ಶೃಂಗೇರಿ ಶ್ರೀಗಳಿಂದ ಪೂರ್ಣಾಹುತಿ

ಪುತ್ತೂರು: ಬಲ್ನಾಡು ಉಳ್ಳಾಲ್ತಿಯ ಮೂಲಸ್ಥಾನವಾದ ತೊಟ್ಟಿಲಕಯದ ಶ್ರೀ ಉಳ್ಳಾಲ್ತಿ ಅಮ್ಮನವರ ಸನ್ನಿಧಿಯಲ್ಲಿ ಮೇ 7ರಂದು ಬೆಳಗ್ಗೆ ಶ್ರೀ ಚಂಡಿಕಾ ಹೋಮ ಜರಗಲಿದೆ. ಶೃಂಗೇರಿ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರ ಕರಕಮಲ ಸಂಜಾತರಾದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರಿಂದ ಆ ದಿನ ಬೆಳಗ್ಗೆ 8 ಗಂಟೆಗೆ ಚರಿತ್ರಾರ್ಹ ಪೂರ್ಣಾಹುತಿ ಸಂಪನ್ನಗೊಳ್ಳಲಿದೆ. ಸಾರ್ವಜನಿಕರು ಭಾಗವಹಿಸಿ ಶ್ರೀ ಉಳ್ಳಾಲ್ತಿ ಅಮ್ಮನವರ ಕೃಪೆಗೆ ಪಾತ್ರರಾಗಬೇಕು.

ಅಪರಿಚಿತನಿಂದ ಹಲ್ಲೆ: ದೂರು ದಾಖಲು

ಪುತ್ತೂರು: ಪೂಜಾ ಕಾರ್ಯಕ್ರಮ ಮುಗಿಸಿ ಮನೆಗೆ ಕಾರಿನಲ್ಲಿ ತೆರಳುತ್ತಿದ್ದ ಪುರೋಹಿತರೊಬ್ಬರ ಕಾರನ್ನು ತಡೆದು ಅಪರಿಚಿತ ವ್ಯಕ್ತಿಯೊಬ್ಬರು ಹಲ್ಲೆ ನಡೆಸಿದ ಘಟನೆ ಮೇ 4ರಂದು ರಾತ್ರಿ ಕಬಕ ಗ್ರಾಮದ ವಿದ್ಯಾಪುರದಲ್ಲಿ ನಡೆದಿದೆ. ಕಬಕ ವಿದ್ಯಾಪುರ ನಿವಾಸಿ ಬಾಲಕೃಷ್ಣ ಜೋಯಿಸ ಅವರ ಪುತ್ರ ಗಣೇಶ್ ವಿ.(39) ಅವರು ಹಲ್ಲೆಗೊಳಗಾದವರು. ಅವರು ಪೂಜಾ ಕಾರ್ಯಕ್ರಮ ಮುಗಿಸಿ ಮನೆಗೆ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಕಬಕ ಗ್ರಾಮದ ವಿದ್ಯಾಪುರಕ್ಕೆ ತಲುಪಿದಾಗ ರಸ್ತೆ ಬದಿಯಲ್ಲಿರುವ ಮನೆಯೊಂದರಲ್ಲಿ ಕಾರ್ಯಕ್ರಮ ನಡೆಯುತ್ತಿದ್ದು, ರಸ್ತೆಯಲ್ಲಿ ಜನರು ಮತ್ತು ವಾಹನ ದಟ್ಟನೆ ಇರುವ ಹಿನ್ನೆಲೆಯಲ್ಲಿ ಕಾರನ್ನು ನಿಧಾನವಾಗಿ ಚಲಾಯಿಸುತ್ತಿದ್ದ ವೇಳೆ ಮಗುವೊಂದು ಕಾರಿಗೆ ಅಡ್ಡ ಬಂದಿತ್ತು. ಇದೇ ಸಂದರ್ಭ ಕಾರನ್ನು ನಿಲ್ಲಿಸಿ ಏನಾಯಿತು ಎಂದು ನೋಡುತ್ತಿದ್ದಂತೆ ಅಪರಿಚಿತ ವ್ಯಕ್ತಿಯೊಬ್ಬರು ಮಗುವಿಗೆ ಕಾರು ತಾಗಿಸಿರುವ ಕುರಿತು ತಕರಾರು ತೆಗೆದು ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ನಡೆಸಿ ಜೀವ ಬೆದರಿಕೆ ಹಾಕಿದ್ದಾರೆಂದು ಆರೋಪಿಸಲಾಗಿದೆ. ಹಲ್ಲೆಗೊಳಗಾದ ಗಣೇಶ್ ಭಟ್ ಅವರು ನೀಡಿದ ದೂರಿನಂತೆ ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಕಮಲ ಕೃಷ್ಣಪ್ಪ ಪೂಜಾರಿ, ಮದ್ವ, ಕಾವಳ ಪಡೂರು, ಬಂಟ್ವಾಳ (ತಾ).
2. ಅಕ್ಷತಾ ಯಶೋಧರ, ಕಾರ್ಬೆಟ್ಟು ಹೌಸ್, ನರಿಕೊಂಬು, ಬಂಟ್ವಾಳ (ತಾ).
3. ವೆಂಕಮ್ಮ, ಕಾಳಾವರ, ಸುಬ್ರಹ್ಮಣ್ಯ ದೇವಸ್ಥಾನ, ಕಾಳಾವರ, ವಯಾ ಕೋಟೇಶ್ವರ.
4. ಶಶಿಕಾಂತ್, 358 ಕೆ.ಆರ್.ಆರ್. ನಗರ, ತೇನಿ ತಮಿಳ್ನಾಡು, ಚೆನ್ನೈ – ಗೋಪಾಲಕೃಷ್ಣ ಆಸ್ರಣ್ಣ ಸಭಾಭವನ, ಕಟೀಲು.
5. ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ ಹತ್ತು ಸಮಸ್ತರು, ಆರ್ಲಪದವು, ಪಾಣಾಜೆ, ಪುತ್ತೂರು (ತಾ).
6. ಶ್ರೀಧರ ಶೆಟ್ಟಿ, 'ಶ್ರೀ ದೇವಿ ಕೃಪಾ', ಪೊನ್ನರಬೆಟ್ಟು, ಮಿಜಾರುಗುತ್ತು, ತೆಂಕಮಿಜಾರು.
7. ದಿ। ತ್ಯಾಂಪಣ್ಣ ರೈ ಸ್ಮರಣಾರ್ಥ ಮನೆಯವರು, ಪಾಲೆಮಾರುಗುತ್ತು, ಕುದ್ಕೋಳಿ, ಬೋಳಿಯಾರು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.

ಶ್ರೀ ಧರ್ಮಸ್ಥಳ ಮೇಳ
ಕಾವೂರು ದೇವಸ್ಥಾನದಲ್ಲಿ
ಶ್ರೀಮತಿ ಶ್ರೀಲತಾ ಯದುನಾಥ
ಸಾಂಚಿ ನಿಲಯ, ಈಶ್ವರನಗರ

ಶ್ರೀ ಸಾಲಿಗ್ರಾಮ ಮೇಳ
ಪಾರಂಪಳ್ಳಿ ಪಡುಕೆರೆಯಲ್ಲಿ- **ರಂಗನಾಯಕಿ**

ಶ್ರೀ ಹನುಮಗಿರಿ ಮೇಳ
ಹೊದ್ರಾಳಿ- ಬೀಜಾಡಿಯಲ್ಲಿ

ಶ್ರೀ ಪಾವಂಜೆ ಮೇಳ
ಕುಮಾರಮಂಗಲ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಕುಮಾರಮಂಗಲದಲ್ಲಿ-**ತ್ರಿಪುರ ಮಥನ**



ರಾಜ್ಯದಲ್ಲಿ ನಡೆದ ಉಪ ಚುನಾವಣೆಗಳಲ್ಲಿ ಎರಡೂ ಕ್ಷೇತ್ರಗಳಲ್ಲಿ ಹಾಗೂ ಕೇರಳ ರಾಜ್ಯದಲ್ಲಿಯೂ ಕಾಂಗ್ರೆಸ್ ಪಕ್ಷ ಭರ್ಜರಿ ಜಯ ಸಾಧಿಸಿದ ಹಿನ್ನಲೆಯಲ್ಲಿ, ಕಾಪು ಪೇಟೆಯಲ್ಲಿ ಸೋಮವಾರ ಕಾಪು ಬ್ಲಾಕ್ ಕಾಂಗ್ರೆಸ್ ಸಮಿತಿಯ ವತಿಯಿಂದ ಸಂಭ್ರಮಾಚರಣೆ ಹಮ್ಮಿಕೊಳ್ಳಲಾಗಿತ್ತು.

ಚೆರ್ಕಳ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಲು ಮೇ 31ರ ಗಡುವು

ಕಾಸರಗೋಡು: ಚೆರ್ಕಳದಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕೆಲಸವನ್ನು ಮೇ 31ರೊಳ ಗಾಗಿ ಪೂರ್ತೀಕರಿಸಬೇಕೆಂದೂ ಇದಕ್ಕೆ ಜಿಲ್ಲಾಧಿಕಾರಿಯವರು ತುರ್ತುಕ್ರಮ ಕೈಗೊಳ್ಳಬೇಕು. ನಿರ್ಮಾಣ ಕೆಲಸ ಇನ್ನೂ ವಿಳಂಬಗೊಂಡಲ್ಲಿ ರಾಷ್ಟ್ರೀಯ ಹೆದ್ದಾರಿ ಮುತ್ತಿಗೆ ಸೇರಿದಂತೆ ಇತರ ಚಳವಳಿ ಕಾರ್ಯ ಅನುಸರಿಸಬೇಕಾಗಿ ಬರಲಿದೆ ಎಂದು ಚೆರ್ಕಳ ರಾಷ್ಟ್ರೀಯ ಹೆದ್ದಾರಿ ಕ್ರಿಯಾ ಸಮಿತಿ ಪದಾಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕೇವಲ ಎರಡು ವಾರಗಳ ತನಕ ಮಾತ್ರವೇ ಕೆಲಸ

ಈ ಬೇಡಿಕೆಯನ್ನು ಮುಂದಿರಿಸಿಕೊಂಡು ಶಾಸಕರಿಗೆ, ಜಿಲ್ಲಾಧಿಕಾರಿ ಮತ್ತು ಎನ್‌ಎಚ್‌ಎಐಯ ಕಣ್ಣೂರು ಪ್ರಾಜೆಕ್ಟ್ ಡೈರೆಕ್ಟರ್‌ಗೆ ಈಗಾಗಲೇ ಮನವಿ ಸಲ್ಲಿಸಲಾಗಿದೆ. ಅದರಂತೆ ಈ ಅಭಿವೃದ್ಧಿ ಯೋಜನೆಯ ನಿರ್ಮಾಣದ ಗುತ್ತಿಗೆ ವಹಿಸಿಕೊಂಡಿರುವ ಮೆಗಾ ಕನ್‌ಸ್ಟ್ರಕ್ಷನ್ ಸಂಸ್ಥೆಯ ಅಧಿಕಾರಿಗಳು ಸ್ಥಳಕ್ಕಾಗಮಿಸಿ ನಿರ್ಮಾಣ ಕೆಲಸಗಳನ್ನು ಮಾರ್ಚ್ ತಿಂಗಳೊಳಗಾಗಿ ಪೂರ್ತೀಕರಿಸಲಾಗುವುದು ಎಂಬ ಭರವಸೆ ನೀಡಿದ್ದರು. ಅದಾದ ಬಳಿಕ ಕೇವಲ ಎರಡು ವಾರಗಳ ತನಕ ಮಾತ್ರವೇ ಕೆಲಸ ಮುಂದುವರಿದಿತ್ತು. ನಂತರ ಅದು ಅಲ್ಲಿಗೆ ಪೂರ್ಣವಾದ ರೀತಿಯಲ್ಲಿ ನೆನೆಗುದಿಗೆ ಬಿದ್ದಿದೆ. ಈಗ ಇಲ್ಲಿ ಮೇಲ್ಸೇತುವೆ ನಿರ್ಮಾಣ ಕೆಲಸದ ಹೊರತಾಗಿ ಇತರ ಎಲ್ಲಾ ನಿರ್ಮಾಣ ಕೆಲಸಗಳೂ ನೆನೆಗುದಿಗೆ ಬಿದ್ದಿವೆ. ನಿರ್ಮಾಣ ಕೆಲಸದ ಹೆಸರಲ್ಲಿ ಚೆರ್ಕಳ – ಚಟ್ಟಂಚಾಲ್‌ನ ರಸ್ತೆ ಮೂಲಕ ಸಾರಿಗೆಯನ್ನು ತಾತ್ಕಾಲಿಕವಾಗಿ ನಿಲುಗಡೆಗೊಳಿಸಲಾಗಿದೆ. ಆದ್ದರಿಂದ ಚೆರ್ಕಳ ರಾಷ್ಟ್ರೀಯ ಹೆದ್ದಾರಿಯ ನಿರ್ಮಾಣ ಕೆಲಸ ಮೇ 31ರೊಳಗೆ ಪೂರ್ತೀಕರಿಸಬೇಕೆಂದು ಕ್ರಿಯಾ ಸಮಿತಿ ಪದಾಧಿಕಾರಿಗಳು ಇದೇ ಸಂದರ್ಭದಲ್ಲಿ ತಿಳಿಸಿದರು.

ಕಾಸರಗೋಡು ಬ್ಲಾಕ್ ಪಂಚಾಯತ್ ಅಧ್ಯಕ್ಷ ಕೆ. ಅಬ್ದುಲ್ಲಕುಂಞಿ ಚೆರ್ಕಳ, ಕ್ರಿಯಾ ಸಮಿತಿ ಅಧ್ಯಕ್ಷ ಮೂಸಾ ಬಿ. ಚೆರ್ಕಳ, ಚೆಂಗಳ ಗ್ರಾಮ ಪಂಚಾಯತ್ ಅಧ್ಯಕ್ಷ ವಸಂತನ್ ಅಜಕ್ಕೋಡು, ಶೆರೀಫ್ ಬೇವಿಂಜೆ ಮತ್ತು ಶುಕೂರ್ ಚೆರ್ಕಳ ಉಪಸ್ಥಿತರಿದ್ದರು.

ಕೊಡಗು ಜಿಲ್ಲಾ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ | ಅಧಿಕಾರಿಗಳಿಗೆ ಸಚಿವ ಭೋಸರಾಜು ಸೂಚನೆ

ಮಾನ್ಸೂನ್ 'ಸ್ವಾಗತ'ಕ್ಕೆ ಈಗಲೇ ಕ್ರಮ

ಮಡಿಕೇರಿ: ಜೂನ್ ಮೊದಲ ವಾರದಲ್ಲಿ ಮುಂಗಾರು ಆರಂಭವಾಗುವ ಸಾಧ್ಯತೆ ಇದ್ದು, ಜಿಲ್ಲೆಯ ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶಗಳ ಕಾರ್ಯಕ್ರಮ ಸೇರಿದಂತೆ) ಜಿಲ್ಲಾ ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೊಡಗು ಜಿಲ್ಲೆಯಾದ್ಯಂತ ಲೋಕೋಪ ಯೋಗಿ, ಪಂಚಾಯತ್ ರಾಜ್ ವ್ಯಾಪ್ತಿಯ ರಸ್ತೆಗಳ ಗುಂಡಿ ಮುಚ್ಚುವುದು ಸೇರಿದಂತೆ ಅಗತ್ಯ ಕಾಮಗಾರಿ ಕೈಗೊಳ್ಳಬೇಕು ಎಂದು ಸಚಿವರು ನಿರ್ದೇಶನ ನೀಡಿದರು.

ಈ ಕುರಿತು ಮಾತನಾಡಿದ ಶಾಸಕ ಡಾ. ಮಂಥರ್‌ಗೌಡ, ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಸ್ತೆ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಬೇಕು. ಜೊತೆಗೆ ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕೆಂದು ಸೂಚಿಸಿದರು. ಐಗೂರು ಸೇತುವೆ ಶೀಘ್ರ ನಿರ್ಮಾಣ ಮಾಡಬೇಕು. ಗಾಳಿಬೀಡು ರಸ್ತೆ ಸರಿಪಡಿಸಬೇಕು. ಹಾಗೆಯೇ ಮುಟ್ಲು, ಹಮ್ಮಿಯಾಲ, ದೇವಸ್ತೂರು, ಹಂಚಿನಾಡು ಮತ್ತಿತರ ರಸ್ತೆ ನಿರ್ವಹಿಸುವಂತೆ ತಾಕೀತು ಮಾಡಿದರು. ಈ ಸಂದರ್ಭ ಮಾತನಾಡಿದ ಸಚಿವ ಭೋಸರಾಜು, ಮಳೆಗಾಲದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಗಮನಹರಿಸಿ ಜಿಲ್ಲಾಧಿಕಾರಿ ಅವರಿಗೆ ವರದಿ ನೀಡಬೇಕೆಂದು ಸೂಚಿಸಿದರು.



ಸರಕಾರಕ್ಕೆ ಕೆಟ್ಟ ಹೆಸರು ತರಬೇಡಿ

ರಾಜ್ಯದಲ್ಲಿ ರಸ್ತೆ ನಿರ್ವಹಣೆಗಾಗಿ ಸರ್ಕಾರ ನೂರಾರು ಕೋಟಿ ರೂ. ನೀಡಿದೆ. ಆದರೆ ಎಂಜಿನಿಯರ್‌ಗಳು ಸರಿಯಾದ ಸಮಯಕ್ಕೆ ಕೆಲಸ ಮಾಡದೆ ಸರ್ಕಾರಕ್ಕೆ ಕೆಟ್ಟ ಹೆಸರು ತರುತ್ತಿರುವುದು ಸರಿಯಲ್ಲ. ಸರ್ಕಾರ ಅಭಿವೃದ್ಧಿಗಾಗಿ ಹಣ ನೀಡಿದರೂ ಸಹ ಬಳಸದಿರುವುದು ಬೇಸರ ತರುತ್ತದೆ ಎಂದರು. ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಸಿ.ಎಸ್. ಅರುಣ್ ಮಾಚಯ್ಯ, ಕರಿಕೆ ರಸ್ತೆ ಸೇರಿದಂತೆ ಬಹುತೇಕ ರಸ್ತೆಗಳ ಕಾಮಗಾರಿ ಬಾಕಿ ಇದ್ದು, ಕಾಮಗಾರಿ ತುರ್ತಾಗಿ ಕೈಗೊಳ್ಳಬೇಕು ಎಂದರು. ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ಅವರು, ಬಿಟ್ಟಂಗಾಲ, ತಿತಿಮತಿ, ಬಾಳುಗೋಡು ಸಹಿತ ಹಲವು ರಸ್ತೆ ಸರಿಪಡಿಸಬೇಕು ಎಂದರು.

ಸಮಿತಿ ಸದಸ್ಯ ಅಬ್ದುಲ್ ರೆಹಮಾನ್ ಅವರು ನಾಪೋಕ್ಲು ಕ್ರೀಡಾ ಮೈದಾನದಲ್ಲಿ ಮಳೆಗಾಲದ ಅವಧಿಯಲ್ಲಿ ಮಕ್ಕಳು ಓಡಾಡಲು ತೊಂದರೆಯಾಗಲಿದೆ. ಆದ್ದರಿಂದ ಮಕ್ಕಳ ಓಡಾಟಕ್ಕೆ ಅನುಕೂಲ ಮಾಡಬೇಕು ಎಂದರು.

ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ಕಟ್ಟಡಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆದ ಶಾಸಕರು ಪ್ರಾದೇಶಿಕ ವಿಜ್ಞಾನ ಕೇಂದ್ರ ಜನವರಿ ತಿಂಗಳೊಳಗೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ಮಡಿಕೇರಿ ಮತ್ತು ಕುಶಾಲನಗರ ಕಲಾಭವನಗಳ ಬಾಕಿ ಇರುವ ಕಾಮಗಾರಿ ಪೂರ್ಣಗೊಳಿಸಬೇಕು. ಕುಶಾಲ ನಗರ ನ್ಯಾಯಾಲಯ ಕಟ್ಟಡ ಪ್ರಗತಿ ಬಗ್ಗೆ ಮಾಹಿತಿ ಪಡೆದರು.

ಧರ್ಮಜ ಉತ್ತಪ್ಪ ಅವರು ಲೋಕೋಪಯೋಗಿ ಇಲಾಖೆ ಪ್ರವಾಸಿ ಮಂದಿರದ ಕೊಠಡಿ ಶುಚಿತ್ವವಾಗಿಲ್ಲ. ಸರಿಯಾದ ನಿರ್ವಹಣೆ ಆಗಬೇಕು ಎಂದು ಸಲಹೆ ಮಾಡಿದರು.

> **ಮಾನವೀಯತೆಯಿಂದ ಕೆಲಸ ನಿರ್ವಹಿಸಿ**
> **ಅರಣ್ಯ ಇಲಾಖೆ ಅಧಿಕಾರಿಗಳು ಮಾನವೀಯತೆಯಿಂದ ಕೆಲಸ ನಿರ್ವಹಿಸಬೇಕು. ವಿದ್ಯುತ್ ಸಂಪರ್ಕ ಮತ್ತಿತರ ಮೂಲ ಸೌಲಭ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕು. ಜಲಜೀವನ್ ಮಿಷನ್ ಯೋಜನೆ ಸಂಬಂಧ ಮಾಹಿತಿ ಪಡೆದ ಜಿಲ್ಲಾ ಉಸ್ತುವಾರಿ ಸಚಿವರು ಶೇ.50 ರಷ್ಟು ಕಾಮಗಾರಿ ತೃಪ್ತಿದಾಯಕವಾಗಿಲ್ಲ. ನೀರಿನ ಸಂಪನ್ಮೂಲ ಪಡೆಯುವ ಬಗ್ಗೆ ಚಿಂತಿಸಬೇಕಿದೆ.**
> ■ ಡಾ.ಮಂಥರ್‌ಗೌಡ , ಶಾಸಕ

ತಲಾ 110 ಕೋಟಿ ಬಿಡುಗಡೆ

ಸೆಸ್ಕ್ ಸಂಬಂಧಿಸಿದಂತೆ ಮಾಹಿತಿ ಪಡೆದ ಜಿಲ್ಲಾ ಉಸ್ತುವಾರಿ ಸಚಿವರು, ಎರಡು ವಿಧಾನಸಭಾ ಕ್ಷೇತ್ರಕ್ಕೆ ತಲಾ 110 ಕೋಟಿ ರೂ.ವನ್ನು ಸರ್ಕಾರ ಬಿಡುಗಡೆ ಮಾಡಿದ್ದು, ಆ ನಿಟ್ಟಿನಲ್ಲಿ ಸಮರ್ಪಕ ವಿದ್ಯುತ್ ಪೂರೈಕೆಗೆ ಗಮನಹರಿಸಬೇಕು ಎಂದು ಸೂಚಿಸಿದರು. ಮೂಲ ಸೌಕರ್ಯಗಳಲ್ಲಿ ಕುಡಿಯುವ ನೀರು, ರಸ್ತೆ ಮತ್ತು ವಿದ್ಯುತ್ ಅತೀ ಮುಖ್ಯವಾಗಿದ್ದು, ಆ ನಿಟ್ಟಿನಲ್ಲಿ ಸ್ಥಳೀಯರ ಸಲಹೆ ಮಾರ್ಗದರ್ಶನ ಪಡೆದು ಅಭಿವೃದ್ಧಿಗೆ ಒತ್ತು ನೀಡಬೇಕು ಎಂದರು. ಈ ಸಂದರ್ಭ ಮಾತನಾಡಿದ ಸೆಸ್ಕ್ ಇಇ ರಾಮಚಂದ್ರ ಅವರು 70 ಮಂದಿ ಗ್ಯಾಂಗ್‌ಮೆನ್‌ಗಳು ಕಾರ್ಯನಿರ್ವಹಿಸುತ್ತಿದ್ದು, ವಿದ್ಯುತ್ ಪೂರೈಕೆಯಲ್ಲಿ ಯಾವುದೇ ರೀತಿಯ ತೊಂದರೆಯುಂಟಾಗದಂತೆ ಗಮನಹರಿಸಲಾಗಿದೆ ಎಂದರು. ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಾಂಡ್ ಗಣಪತಿ, ಕೊಡಗು ಸೆಸ್ಕ್ ಇಲಾಖೆ ವ್ಯಾಪ್ತಿಯಲ್ಲಿ ಎಷ್ಟು ಮಂದಿ ಕೆಲಸ ನಿರ್ವಹಿಸುತ್ತಿದ್ದಾರೆ. ಖಾಲಿ ಹುದ್ದೆ ಎಷ್ಟು ಎಂಬ ಬಗ್ಗೆ ಮನವರಿಕೆ ಮಾಡಬೇಕಿದೆ ಎಂದು ನುಡಿದರು.

ಕಾಮಗಾರಿ ಬಗ್ಗೆ ತನಿಖೆಯಾಗಲಿ

ಶಾಸಕ ಡಾ.ಮಂಥರ್‌ಗೌಡ ಅವರು 450 ಕೋಟಿ ರೂ. ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಇದು ಎಷ್ಟರ ಮಟ್ಟಿಗೆ ಸಾರ್ವಜನಿಕರಿಗೆ ತಲುಪಿದೆ ಎಂಬ ಬಗ್ಗೆ ತನಿಖೆ ಆಗಬೇಕು ಎಂದು ಸಲಹೆ ಮಾಡಿದರು. ಆಹಾರ ಇಲಾಖೆಯಿಂದ ಅನ್ನಭಾಗ್ಯ ಹಾಗೂ ಮತ್ತಿತರ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಆದರೆ ಬಿಪಿಎಲ್ ಕಾರ್ಡ್‌ನ್ನು ಎಪಿಎಲ್ ಮಾಡಲಾಗಿದ್ದು, ಇದರಿಂದ ಗ್ರಾಮೀಣ ಪ್ರದೇಶದ ಬಡವರು ತೊಂದರೆಗೆ ಸಿಲುಕಬೇಕಿದೆ. ಆದ್ದರಿಂದ ಈ ಬಗ್ಗೆ ಎಚ್ಚರ ವಹಿಸಬೇಕು ಎಂದರು.

ಇದೇ ವೇಳೆ ಗೃಹ ಹಾಗೂ ವಾಣಿಜ್ಯ ಬಳಕೆ ಅಡುಗೆ ಅನಿಲ ಪೂರೈಕೆ ಮತ್ತಿತರ ಸಂಬಂಧ ಸಚಿವರು ಮಾಹಿತಿ ಪಡೆದರು


ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್, ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್, ಸಮಿತಿ ಸದಸ್ಯರಾದ ಸುನಿತಾ ಮಂಜುನಾಥ್ ಸಭೆಯಲ್ಲಿದ್ದರು.

ಮನೆಯಲ್ಲಿ ಸಿಕ್ಕಿದ ನಾಗರಹಾವಿನ ಮೊಟ್ಟೆಗೆ ಕೃತಕ ಕಾವು

ಹಾವಿನ 16 ಮರಿಗಳ ರಕ್ಷಣೆ

ಬೆಳ್ತಂಗಡಿ: ಮನೆಯ ಗೋಡೆಯೊಂದರಲ್ಲಿ ಸಿಕ್ಕಿದ ನಾಗರ ಹಾವಿನ ಮೊಟ್ಟೆಗಳಿಗೆ ಕೃತಕ ಕಾವು ನೀಡಿ ರಕ್ಷಿಸಿ 16 ಮರಿಗಳನ್ನು ಸುರಕ್ಷಿತವಾಗಿ ಅರಣ್ಯಕ್ಕೆ ಬಿಡಲಾಗಿದೆ.





ನೆರಿಯ ಗ್ರಾಮದ ಗುಂಡಿಕಂಡ ಬೊಮ್ಮಣ್ಣ ಗೌಡ ಎಂಬವರ ಮನೆಯ ಗೋಡೆ ಒಳಗಡೆ ಕಳೆದ ಕೆಲವು ದಿನಗಳ ಹಿಂದೆ ನಾಗರ ಹಾವು ಕಂಡುಬಂದಿತ್ತು.ಇದನ್ನು ರಕ್ಷಿಸಿ ಅರಣ್ಯಕ್ಕೆ ಬಿಡಲು ಸಮಾಜ ಸೇವಕ, ಉರಗ ಮಿತ್ರ ಕಕ್ಕಿಂಜೆಯ ಸ್ನೇಕ್ ಅನಿಲ್ ಅವರಿಗೆ ಮಾಹಿತಿ ನೀಡಲಾಗಿತ್ತು.

16 ಮೊಟ್ಟೆಗಳ ಪತ್ತೆ

ಗೋಡೆಯ ಒಳಗಡೆ ಇದ್ದ ನಾಗರಹಾವನ್ನು ಹಿಡಿದಾಗ ಸುಮಾರು 16 ಮೊಟ್ಟೆಗಳು ಪತ್ತೆಯಾಗಿದ್ದವು. ಈ ಮೊಟ್ಟೆಗಳಿಗೆ ಇರುವೆಗಳು ಮುತ್ತಿಕೊಂಡಿದ್ದು ಅವುಗಳ ಸ್ಥಿತಿ ಅಪಾಯಕಾರಿಯಾಗಿತ್ತು. ಇದನ್ನು ಗಮನಿಸಿ ಅವುಗಳನ್ನು ಗೋಡೆಯಿಂದ ಹೊರ ತೆಗೆದು ಅಗತ್ಯ ಆರೈಕೆ ನೀಡಿ ಕೃತಕ ಕಾವು ನೀಡುವ ಕೆಲಸ ಮಾಡಿದರು. ಇದೀಗ 16 ಮರಿಗಳು ಮೊಟ್ಟೆಯಿಂದ ಹೊರಬಂದಿವೆ. ಆರೋಗ್ಯವಾಗಿದ್ದ ಈ ನಾಗರ ಹಾವಿನ ಮರಿಗಳನ್ನು ಅರಣ್ಯ ಇಲಾಖೆಯ ಸಹಕಾರದಲ್ಲಿ ಚಾರ್ಮಾಡಿ ಘಾಟಿ ವಿಭಾಗದ ಸುರಕ್ಷಿತ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ.

> **ಹಾವು ಮರಿಗಳ ರಕ್ಷಣೆ**
> ಕಳೆದ ತಿಂಗಳು ತೋಟತ್ತಾಡಿ ಗ್ರಾಮದಲ್ಲಿ ಪತ್ತೆಯಾಗಿದ್ದ 28 ನೀರು ಹಾವಿನ ಮೊಟ್ಟೆಗಳನ್ನು ರಕ್ಷಿಸಿ ಮರಿಗಳಿಗೆ ಜೀವದಾನ ನೀಡಲಾಗಿತ್ತು. ಇದೀಗ ನೆರಿಯದಲ್ಲಿ ಇರುವೆಗಳ ಗಾಳಿ ಒಳಗಾಗಿದ್ದ ನಾಗರಹಾವಿನ ಮೊಟ್ಟೆಗಳನ್ನು ಸಂರಕ್ಷಿಸಿ, ಕೃತಕ ಕಾವು ನೀಡಿ ಮರಿಗಳನ್ನು ಅರಣ್ಯಕ್ಕೆ ಬಿಡಲಾಗಿದೆ.

ಯಡಿಯೂರಪ್ಪರ ಅಭಿನಂದನೋತ್ಸವ: ಪುತ್ತೂರಿನಿಂದ ಸಾವಿರಕ್ಕೂ ಮಿಕ್ಕಿ ಮಂದಿ

ಪುತ್ತೂರು: ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವದಲ್ಲಿ ಪುತ್ತೂರು ವಿಧಾನಸಭಾ ಕ್ಷೇತ್ರದಿಂದ ಸಾವಿರಕ್ಕೂ ಮಿಕ್ಕಿ ಕಾರ್ಯಕರ್ತರು ಮತ್ತು ಅಭಿಮಾನಿಗಳು ಭಾಗಿಯಾಗಲಿದ್ದಾರೆ ಮಾಜಿ ಶಾಸಕ ಸಂಜೀವ ಮಠಂದೂರು ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಟಲ್ ಬಿಹಾರಿ ವಾಜಪೇಯಿ ಅವರು ದೇಶದಲ್ಲೇ ಬಿಜೆಪಿಯನ್ನು ಬೆಳೆಸಿದರೆ, ಯಡಿಯೂರಪ್ಪ ಅವರು ದಕ್ಷಿಣದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಕರ್ನಾಟಕದಿಂದ ಹೆಬ್ಬಾಗಿಲು ತೆರೆದ ಒಬ್ಬ ಧೀಮಂತ ರಾಜಕಾರಣಿ. ರೈತಾಪಿ ವರ್ಗದ ಕುರಿತು ವಿಶೇಷ ಕಾಳಜಿ ಹೊಂದಿ ಎಲ್ಲಾ ವರ್ಗದ ನಾಯಕರಾಗಿ ನಾಲ್ಕು ಬಾರಿ ಮುಖ್ಯಮಂತ್ರಿಗಳಾಗಿ, 8 ಬಾರಿ ಶಾಸಕರಾಗಿ ಆಯ್ಕೆಗೊಂಡು 50 ವರ್ಷಗಳ ರಾಜಕೀಯ ಜೀವನದ ಪಯಣವನ್ನು ನೆನಪು ಮಾಡುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ ಎಂದರು.

ಕರ್ನಾಟಕ ಮಧ್ಯ ಭಾಗದ ಚಿತ್ರದುರ್ಗದಲ್ಲಿ ಈ ಕಾರ್ಯಕ್ರಮ ಸುಮಾರು 120 ಎಕರೆ ಜಾಗದಲ್ಲಿ ನಡೆಯಲಿದೆ. ಗೃಹ ಸಚಿವ ಅಮಿತ್ ಶಾ ಸೇರಿದಂತೆ ಪಕ್ಷದ ಹಲವು ಮಂದಿ ಗಣ್ಯರು ಪಾಲ್ಗೊಳ್ಳಲಿದ್ದಾರೆ. 10 ಲಕ್ಷ ಜನರು ಭಾಗವಹಿಸಲಿದ್ದಾರೆ ಎಂದರು.



ಯಡಿಯೂರಪ್ಪ ಕೊಡುಗೆ ಅಪಾರ

ಯಡಿಯೂರಪ್ಪ ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಚಾರಕ್, ಬಿಜೆಪಿ ಅಧ್ಯಕ್ಷರಾಗಿ, ಶಾಸಕರಾಗಿ, ವಿರೋಧ ಪಕ್ಷದ ನಾಯಕರಾಗಿ, ಸಂಸದೀಯ ಸಮಿತಿ ಸದಸ್ಯರಾಗಿ ಕೆಲಸ ಮಾಡಿ ಕರ್ನಾಟಕಕ್ಕೆ ಹಲವು ಕೊಡುಗೆ ನೀಡಿದ್ದಾರೆ. ರೈತ ಪರ ಬಜೆಟ್ ಮಂಡಿ ರೈತರಿಗೆ ಸವಲತ್ತು ಕೊಟ್ಟ ಏಕೈಕ ಮುಖ್ಯಮಂತ್ರಿ ಯಡಿಯೂರಪ್ಪನವರು. ಪುತ್ತೂರಿಗೆ ಕೋಟಿ-ಚೆನ್ನಯ ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣ, ಪುತ್ತೂರು ತಾಲೂಕು ಆಡಳಿತ ಸೌಧ, ಅಗ್ನಿಶಾಮಕ ದಳದ ಸ್ಟೇಷನ್ ಕಟ್ಟಡ, 115 ಕೋಟಿಯ ಜಲಸಿರಿ ಯೋಜನೆ, ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಮಂಜೂರಾತಿ ಸಹಿತ ಹಲವಾರು ಕೊಡುಗೆ ನೀಡಿದ್ದಾರೆ ಎಂದರು.

ಯಡಿಯೂರಪ್ಪರ ಅಭಿಮಾನೋತ್ಸವಕ್ಕೆ ಮೇ 8ರಂದು ರಾತ್ರಿ ಪುತ್ತೂರಿನಿಂದ ಬಸ್ ಮೂಲಕ ಸಾವಿರಾರು ಮಂದಿ ತೆರಳಲಿದ್ದಾರೆ. ಜೊತೆಗೆ ಅನೇಕ ಮಂದಿ ಸ್ವಂತ ವಾಹನದಲ್ಲೂ ತೆರಳಲಿದ್ದಾರೆ. ಕಾರ್ಯಕ್ರಮಕ್ಕೆ ತೆರಳುವವರಿಗೆ ಪಕ್ಷದಿಂದ ವ್ಯವಸ್ಥೆಗಳನ್ನು ಮಾಡಿಕೊಡಲಾಗುವುದು ಎಂದರು.

ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ದಯಾನಂದ ಶೆಟ್ಟಿ ಉಜಿರೆ ಮಾರು, ನಿಕಟ ಪೂರ್ವ. ಅಧ್ಯಕ್ಷ ಸಾಜ ರಾಧಾಕೃಷ್ಣ ಆಳ್ವ, ಜಿಲ್ಲಾ ಕಾರ್ಯದರ್ಶಿವಿದ್ಯಾಜಾರ್ ಗೌರಿ, ಜಿಲ್ಲಾ ಎಸ್ಟಿಘಟಕದ ಅಧ್ಯಕ್ಷ ಹರೀಶ್ ಬಿಜತ್ರೆ, ಬಿಜೆಪಿ ಫಲಾನುಭವಿ ಸಂಪರ್ಕ ಜಿಲ್ಲಾ ಸಂಯೋ ಜಕ ನಿತೀಶ್ ಕುಮಾರ್ ಶಾಂತಿವನ, ನಗರ ಮಂಡಲ ಉಪಾಧ್ಯಕ್ಷೆ ವಸಂತ ಲಕ್ಷ್ಮೀ, ಹರಿಪ್ರಸಾದ್ ಯಾದವ್ ಗೋಷ್ಠಿಯಲ್ಲಿದ್ದರು.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಕೌಶಲ್ಯ ಮಿಷನ್ ಸಭೆ | ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ದರ್ಶನ್ ಸ್ಪಷ್ಟ ಸೂಚನೆ


ಪಿಎಂ ಸ್ವನಿಧಿ, ನಿಪುಣ್ ಯೋಜನೆ ಅನುಷ್ಠಾನಕ್ಕೆ ಹೆಚ್ಚಿನ ಒತ್ತು

ಮಂಗಳೂರು: ಕೌಶಲ್ಯ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ದರ್ಶನ್ ಎಚ್. ವಿ ಸೂಚಿಸಿದ್ದಾರೆ.

ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ಕೌಶಲ್ಯ ಮಿಷನ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತರಬೇತಿಯ ಮೂಲಕ ಸಬಲೀಕರಣ

ಯುವಕರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದರಿಂದ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳಲು ಸಹಾಯವಾಗುತ್ತದೆ. ದೇಶದ ಯುವಜನತೆಯನ್ನು ಉದ್ಯೋಗ- ಸಂಬಂಧಿತ ತರಬೇತಿಯ ಮೂಲಕ ಸಬಲೀಕರಣಗೊಳಿಸಬೇಕು ಎಂದು ಅವರು ಹೇಳಿದರು. ಪಿಎಂ ಸ್ವನಿಧಿ ಮತ್ತು ನಿಪುಣ್ ಯೋಜನೆಯು ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಸಣ್ಣ ವ್ಯಾಪಾರಿಗಳ ಮತ್ತು ಯುವಜನರ ಸಬಲೀಕರಣಕ್ಕೆ ಸಹಾಯ ಮಾಡುತ್ತದೆ ಎಂದರು.



ಪ್ರಸ್ತುತ ಕೇಂದ್ರ ಸರ್ಕಾರದಿಂದ ಪಿಎಂ ಸ್ವನಿಧಿ ಯೋಜನೆಯನ್ನು ಪುನರ್ ರಚಿಸಿ ಮಾರ್ಚ್ 2030 ರವರೆಗೆ ವಿಸ್ತರಿಸಿ, ಅನುಮೋದಿಸಲಾಗಿರುತ್ತದೆ. ಆರ್ಥಿಕ ಸೇರ್ಪಡೆ ಹೆಚ್ಚಿಸುವುದು, ಡಿಜಿಟಲ್ ವಹಿವಾಟು ಹೆಚ್ಚಿಸಲು ಉತ್ತೇಜಿಸುವುದು. ಸಾಮರ್ಥ್ಯ ಅಭಿವೃದ್ಧಿ ಮತ್ತು ಬೀದಿ ಬದಿ ವ್ಯಾಪಾರಿಗಳು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯ ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶಗಳಾಗಿರುತ್ತದೆ ಎಂದ ಅವರು, ಪಿಎಂ ಸ್ವನಿಧಿ ಯೋಜನೆ ಹೆಚ್ಚಿನ ಪ್ರದೇಶಗಳಿಗೆ ತಲುಪಿಸುವ ನಿಟ್ಟಿನಲ್ಲಿ, ಜನಗಣತಿ ಪಟ್ಟಣಗಳು, ಶಾಸನಬದ್ಧ ಪಟ್ಟಣಗಳು ಮತ್ತು ಅರೆ ನಗರ ಪ್ರದೇಶಗಳು ಇತ್ಯಾದಿಗಳನ್ನು ಹಂತ- ಹಂತವಾಗಿ ಸೇರ್ಪಡಿಸಿಕೊಂಡು ವಿಸ್ತರಿಸಲು ಉದ್ದೇಶಿಸಲಾಗಿರುತ್ತದೆ. ಅದರಂತೆ ಪಿಎಂ ಸ್ವನಿಧಿ ಯೋಜನೆಯ ಮೊದಲನೆಯ, ಎರಡನೇಯ ಮತ್ತು ಮೂರನೆಯ ಹಂತದ ಕಿರು ಸಾಲ ಸೌಲಭ್ಯ ಒದಗಿಸಲು ಪರಿಷ್ಕೃತ ಗುರಿಯನ್ನು ನಿಗದಿಪಡಿಸಲಾಗಿದ್ದು, ನಿಗದಿತ ಮಾರ್ಗಸೂಚಿಗಳ ಅನುಸಾರ ಅನುಷ್ಠಾನಗೊಳಿಸಬೇಕಾಗಿರುತ್ತದೆ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

> **ಅರಿವು ಮೂಡಿಸಬೇಕು**
> **ಪ್ರಧಾನಮಂತ್ರಿ ಆತ್ಮ ನಿರ್ಭರ್ ನಿಧಿ (ಪಿಎಂ ಸ್ವ ನಿಧಿ) ಯೋಜನೆ ಜೂನ್ 2020ರಲ್ಲಿ ಪ್ರಾರಂಭಿಸಲ್ಪಟ್ಟಿದ್ದು, ಈ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿಯ ಬೀದಿ ಬದಿ ವ್ಯಾಪಾರಸ್ಥರಿಗೆ ಸಾಲ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಈ ಯೋಜನೆ ಕುರಿತು ಫಲಾನುಭವಿಗಳಿಗೆ ಅರಿವು ಮೂಡಿಸಬೇಕು.**
> ■ ದರ್ಶನ್ ಎಚ್. ವಿ, ಜಿಲ್ಲಾಧಿಕಾರಿ

ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯೊಳಗಡೆ 23 ಜನಗಣತಿ ಪಟ್ಟಣಗಳಲ್ಲಿ ಪಿಎಮ್ ಸ್ವನಿದಿ ಯೋಜನೆ ಅನುಷ್ಠಾನ ಕೈಗೊಳ್ಳಲು, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಇವರ ಮುಖಾಂತರ ಎಲ್ಲಾ 23 ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಎನ್.ಆರ್.ಎಲ್.ಎಂ ಸಿಬ್ಬಂದಿಯವರಿಗೆ ನಿರ್ದೇಶನ ಮತ್ತು ಸೂಚನೆಗಳನ್ನು ನೀಡುವಂತೆ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ದ.ಕ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಜಯಲಕ್ಷ್ಮಿ ರಾಯಕೋಡ, ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಪ್ರದೀಪ್ ಡ' ಸೋಜ ಹಾಗೂ ವಿವಿಧ ಇಲಾಖಾಧಿಕಾರಿಗಳು ಉಪಸ್ಥಿತರಿದ್ದರು.

ನಿಧನ ಸುದ್ದಿ

ಎಚ್. ಆದಂ



ಕಡಬ: ರಾಮಕುಂಜ ಗ್ರಾಮದ ಹಳ್ಳಾರ ಕಾಜರಕುಕ್ಕು ನಿವಾಸಿ, ಸುಳ್ಯ ವಿಧಾನಸಭಾ ಕ್ಷೇತ್ರದ ಅಕ್ರಮ ಸಕ್ರಮ ಸಮಿತಿ ಸದಸ್ಯ ಎಚ್. ಆದಂ (70) ಅವರು ಮೇ. 4ರಂದು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಪುತ್ರನನ್ನು ಅಗಲಿದ್ದಾರೆ. ಧಾರ್ಮಿಕ, ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದ ಮೃತರು ಆಲಂಕಾರು ಸೇವಾ ಸಹಕಾರಿ ಸಂಘದ ಅಧ್ಯಕ್ಷರಾಗಿ, ಆತೂರು ಬದ್ರಿಯಾ ಜುಮಾ ಮಸೀದಿ ಅಧ್ಯಕ್ಷರಾಗಿ, ಕಡಬ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷರಾಗಿ, ಕಾಂಗ್ರೆಸ್ ಅಲ್ಪಸಂಖ್ಯಾತ ಕಡಬ ಘಟಕದ ಅಧ್ಯಕ್ಷರಾಗಿ, ವಿವಿಧ ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.

ಬೋಳಮ್ಮ ಶೆಟ್ಟಿ



ಕೋಟ: ಗಿಳಿಯಾರು ಗ್ರಾಮದ ಪ್ರಸಿದ್ಧ ಕೃಷಿಕ ಮನೆತನ ಹಡೋಲ್ ಗದ್ದೆ ಮನೆ ಬೋಳಮ್ಮ ಶೆಟ್ಟಿ ವಯೋಸಹಜ ಅನಾರೋಗ್ಯದಿಂದ ಮಂಗಳವಾರ ಸ್ವಗೃಹದಲ್ಲಿ ನಿಧನರಾದರು. ಇವರಿಗೆ 104 ವರ್ಷ ವಯಸ್ಸಾಗಿತ್ತು. ಬೋಳಮ್ಮ ಶೆಟ್ಟಿಯವರು ಕೃಷಿಯಲ್ಲಿ ಅಪಾರ ಅನುಭವ-ಪರಿಶ್ರಮ ಹೊಂದಿದ್ದರು. ಕಳೆದ 60–70 ವರ್ಷಗಳಿಂದ ತಮ್ಮ ಕುಟುಂಬದ ಭೂಮಿಯಲ್ಲಿ ವಿವಿಧ ಕೃಷಿ ಮಾದರಿಗಳನ್ನು ನಿರಂತರವಾಗಿ ಮಾಡಿ, ಮಾದರಿ ಕೃಷಿಕ ಮಹಿಳೆ ಎನಿಸಿಕೊಂಡಿದ್ದರು. ಎಂತಹ ನೆರೆ-ಪ್ರವಾಹದ ಹೊತ್ತಿನಲ್ಲೂ ತನ್ನ ಕೃಷಿ ಗದ್ದೆಯಲ್ಲಿ ಪಾಡಿ, ಸುಗ್ಗಿ ಮತ್ತು ಕೊಳ್ಕೆ ಎಂಬ ಮೂರೂ ಮಾದರಿಯ ಬೆಳೆಗಳನ್ನು ಬೆಳೆದು ದಾಖಲೆ ಮಾಡಿದ್ದರು. ಇವರ ಕೃಷಿ ಸಾಧನೆಯನ್ನು ಗುರುತಿಸಿ ಅನೇಕ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ. ಕೋಟ ಸಹಕಾರಿ ವ್ಯವಸಾಯಕ ಸಂಘ ಸುವರ್ಣ ಸ್ವಾತಂತ್ರ್ಯ ಆಚರಣೆ ಸಂದರ್ಭ ಇವರನ್ನು ಸನ್ಮಾನಿಸಿ ಗೌರವಿಸಿದೆ. ಮೂವರು ಪುತ್ರರು, ಓರ್ವ ಪುತ್ರಿ ಅಗಲಿದ್ದಾರೆ.

ಮಾರಿಬಲೆ ಕೂಸ ಮೆಂಡನ್



ಕೋಟ: ಇಲ್ಲಿನ ಕೋಡಿ ಕನ್ಯಾಣದ ಹಿರಿಯ ಮೀನುಗಾರ ಮಾರಿಬಲೆ ಕೂಸ ಮೆಂಡನ್ (93) ವಯೋಸಹಜದಿಂದ ನಿಧನರಾದರು. ಕನ್ಯಾಣ ಭಾಗದ ಮೊಗವೀರ ಮಹಾಸಭಾದ ಗುರಿಕಾರರಾಗಿ, ಕೋಡಿ ಮಹಾಸತೀಶ್ವರಿ ದೇಗುಲದ ಧಾರ್ಮಿಕ ಮುಂದಾಳಾಗಿ ಗುರುತಿಸಿಕೊಂಡ ಕೂಸಮೆಂಡನ್ ಕರಾವಳಿ ಕಡಲ ಮಕ್ಕಳ ಕ್ಷೇಮಾಭಿವೃದ್ಧಿಯಲ್ಲಿ ಬಲು ಪ್ರಸಿದ್ಧಿ ಪಡೆದಿದ್ದರು. ಆರುಜನ ಪುತ್ರರು,ಇರ್ವರು ಪುತ್ರಿಯರನ್ನು ಅಗಲಿದ್ದಾರೆ.

ಪ್ರವೀಣ್ ಪಾನತ್ತಿಲ



ಸುಳ್ಯ: ಚೆಸ್ಕಾಂನ ಮಡಿಕೇರಿ ಶಾಖೆ ಪ್ರಭಾರ ಸಹಾಯಕ ಇಂಜಿನಿಯರ್, ಆಲೆಟ್ಟಿ ಗ್ರಾಮದ ಬೆದ್ರುಪಣೆ ಪ್ರವೀಣ್ ಕುಮಾರ್ ಪಾನತ್ತಿಲ ಅವರು ಅನಾರೋಗ್ಯದಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ತಾಯಿ, ಪತ್ನಿ, ಪುತ್ರ, ಸಹೋದರ ಹಾಗೂ ಕುಟುಂಬಸ್ಥರು ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

ಸುನೀಲ್ ಭಟ್



ಮಂಗಳೂರು: ಏರ್ ಇಂಡಿಯಾದ ನಿವೃತ್ತ ಮೆನೇಜರ್ ಎಂ. ಸುನೀಲ್ ಭಟ್ (62) ಹೃದಯಾಘಾತದಿಂದ ಮಂಗಳವಾರ ನಗರದ ಡೊಂಗರಕೇರಿಯ ಎ. ಎಸ್. ಆರ್. ಪಿ. ರಸ್ತೆಯಲ್ಲಿರುವ ಸಾಯಿ ವಿಠಲ್ ಅಪಾರ್ಟ್‌ಮೆಂಟ್‌ನಲ್ಲಿರುವ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ತಮ್ಮ ಸ್ನೇಹಶೀಲ ವ್ಯಕ್ತಿತ್ವದಿಂದ ಅತ್ಯಂತ ಜನಾನುರಾಗಿಯಾಗಿದ್ದ ಮೃತರು ಪತ್ನಿ- ಕೆನರಾ ಮೈನ್ ಶಾಲೆಯ ಅಧ್ಯಾಪಕ ಶುಭಾ ಭಟ್, ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ.

ವನಜ ಪೂಜಾರ್ತಿ



ಮುಲ್ಕಿ: ಅತಿಕಾರಿಬೆಟ್ಟು ಕಕ್ವ ನಿವಾಸಿ ಹಿರಿಯ ಕೃಷಿಕೆ ವನಜ ಪೂಜಾರ್ತಿ (83) ಅನಾರೋಗ್ಯದಿಂದ ಮಂಗಳವಾರ ಬೆಳಗ್ಗೆ ಸ್ವಗೃಹದಲ್ಲಿ ನಿಧನರಾದರು. ಅವರು ಅತಿಕಾರಿಬೆಟ್ಟು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಮನೋಹರ ಕೋಟ್ಯಾನ್ ಸಹಿತ 5 ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಹಿರಿಯ ಒಳಿಚಿಕೆಯಾಗಿ, ಹೆನ್ನುಗಾರರಾಗಿ, ಶ್ರಮಜೀವಿಯಾಗಿದ್ದರು. ಪರೋಪಕಾರಿಯಾಗಿ ಜನಾನುರಾಗಿಯಾಗಿದ್ದರು.

ಜನಾರ್ದನ್ ಶೆಟ್ಟಿಗಾರ್



ಉಪ್ಪಿನಂಗಡಿ: ಇಲ್ಲಿನ ನಟ್ಟಿಬೈಲ್ ನಿವಾಸಿ, ಅಂತರ್ಜಲ ಶೋಧಕ ಜನಾರ್ದನ್ ಶೆಟ್ಟಿಗಾರ್ (52) ಅಲ್ಪ ಕಾಲದ ಅನಾರೋಗ್ಯದಿಂದ ಮಂಗಳವಾರದಂದು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಬಾವಿ, ಕೊಳವೆ ಬಾವಿ ಕೊರೆಯುವ ಸಂಬಂಧ ನಿಖರವಾಗಿ ಅಂತರ್ಜಲದ ನೆಲೆಯನ್ನು ತಿಳಿಸುವ ಮೂಲಕ ಜನಾನುರಾಗಿಯಾಗಿದ್ದ ಇವರು ಅವಿವಾಹಿತರಾಗಿದ್ದು, ತಾಯಿ, ಓರ್ವ ಸಹೋದರಿ ಮತ್ತು ಓರ್ವ ಸಹೋದರರನ್ನು ಅಗಲಿದ್ದಾರೆ.



ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಚರಂಡಿಗೆ ಬಿದ್ದ ಘಟನೆ ಮಂಗಳವಾರ ಬೆಳಿಗ್ಗೆ ರಾಷ್ಟ್ರೀಯ ಹೆದ್ದಾರಿ ಬಿ.ಸಿ.ರೋಡು ವಿಲ್ಲಾಪುರ ರಸ್ತೆಯ ಬಂಟ್ವಾಳ ಸಮೀಪದ ಪೊಯ್ಲೋಡಿ ಎಂಬಲ್ಲಿ ನಡೆದಿದೆ. ಘಟನೆಯಿಂದ ಚಿಕ್ಕಮಗಳೂರು ನಿವಾಸಿ ಲಕ್ಷ್ಮಣ್ ಗೌಡ ಅವರು ಸಣ್ಣಪುಟ್ಟ ಗಾಯದೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅವರು ಚಿಕ್ಕಮಗಳೂರಿನಿಂದ ಮಂಗಳೂರು ಕಡೆಗೆ ಬರುತ್ತಿದ್ದ ವೇಳೆ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾನ-ಬಾಳ ಜೋಕಟ್ಟೆ ರಸ್ತೆ ದುರವಸ್ತೆ: ಜನಜೀವನಕ್ಕೆ ಸಂಕಟ, ಕ್ರಮಕ್ಕೆ ಆಗ್ರಹ

ಸುರತ್ಕಲ್: ಕಾನ-ಬಾಳ ಜೋಕಟ್ಟೆ ಸಂಪರ್ಕ ರಸ್ತೆ ಇದೀಗ ಸಂಪೂರ್ಣ ಹೊಂಡಮಯವಾಗಿದ್ದು, ಸಾರ್ವಜನಿಕರಿಗೆ ದೊಡ್ಡ ತೊಂದರೆಯಾಗಿ ಪರಿಣಮಿಸಿದೆ. ರಸ್ತೆಯಲ್ಲಿನ ಆಳವಾದ ಹೊಂಡಗಳ ಕಾರಣ ದ್ವಿಚಕ್ರ ಸವಾರರು ಸುರಕ್ಷಿತವಾಗಿ ಸಂಚರಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಹಲವೆಡೆ ವಾಹನ ಸವಾರರು ನಿಯಂತ್ರಣ ತಪ್ಪಿ ಬೀಳುವ ಘಟನೆಗಳೂ ವರದಿಯಾಗುತ್ತಿದ್ದು, ಕೈಕಾಲು ಮುರಿದುಕೊಳ್ಳುವ ಅಪಾಯ ಹೆಚ್ಚಾಗಿದೆ.

ಇದಕ್ಕೆ ಸೇರ್ಪಡೆಯಾಗಿ, ರಾತ್ರಿ ವೇಳೆಯಲ್ಲಿ ಬೀದಿ ದೀಪಗಳ ಕೊರತೆಯೂ ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸಿದೆ. ಕತ್ತಲಲ್ಲಿ ಹೊಂಡಗಳು ಕಾಣಿಸದ ಕಾರಣ ಅಪಘಾತಗಳ ಸಂಭವ ಹೆಚ್ಚುತ್ತಿದೆ. ಸ್ಥಳೀಯರು ದಿನನಿತ್ಯ ಆತಂಕದಲ್ಲಿ ಸಂಚರಿಸುವಂತಾಗಿದೆ.

ಸ್ಥಳೀಯ ನಿವಾಸಿಗಳು ಸಂಬಂಧಪಟ್ಟ ಪಂಚಾಯತ್ ಅಧಿಕಾರಿಗಳು ಹಾಗೂ ಜಿಲ್ಲಾ ಆಡಳಿತ ತಕ್ಷಣ ಗಮನಹರಿಸಿ, ರಸ್ತೆ ದುರಸ್ತಿ ಕಾರ್ಯ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಜೊತೆಗೆ, ಸ್ಥಳೀಯ ಬೃಹತ್ ಕಂಪನಿಗಳ ಸಹಕಾರ ಪಡೆದು ಸುಸಜ್ಜಿತ ಮತ್ತು ದೀರ್ಘಕಾಲಿಕ ರಸ್ತೆ ನಿರ್ಮಾಣಕ್ಕೆ ಮುಂದಾಗಬೇಕೆಂದು ಮನವಿ ಮಾಡಿದ್ದಾರೆ. ಸರ್ಕಾರ ಹಾಗೂ ಸಂಬಂಧಪಟ್ಟ ಸಂಸ್ಥೆಗಳು ತ್ವರಿತ ಕ್ರಮ ಕೈಗೊಂಡಲ್ಲಿ ಸಾರ್ವಜನಿಕರಿಗೆ ಬಹು ಮುಖ್ಯವಾದ ಈ ರಸ್ತೆಯ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯುವ ನಿರೀಕ್ಷೆಯಿದೆ.



ಮುಖ್ಯ ಬೇಡಿಕೆಗಳು

ತಕ್ಷಣ ಹೊಂಡಗಳನ್ನು ಮುಚ್ಚಿ ತಾತ್ಕಾಲಿಕ ದುರಸ್ತಿ, ಸಂಪೂರ್ಣ ರಸ್ತೆ ನವೀಕರಣ (ರೀ-ಕಾರ್ಪೆಟಿಂಗ್), ಸಮರ್ಪಕ ಬೀದಿ ದೀಪಗಳ ಅಳವಡಿಕೆ, ಸುರಕ್ಷತಾ ಸೂಚನಾ ಫಲಕಗಳ ಸ್ಥಾಪನೆ ಮಾಡಬೇಕು.

ಕಾಸರಗೋಡು ಜಿಲ್ಲೆಯಲ್ಲಿ ಬಿದಿರು ಸಂರಕ್ಷಣೆಗೆ ಯೋಜನೆ ಕೊರತೆ

ಕೃಷಿಕರಿಗೆ ಪ್ರೋತ್ಸಾಹ ನಿರೀಕ್ಷೆ

ಕಾಸರಗೋಡು: ಜಿಲ್ಲೆಯಲ್ಲಿ ಬಿದಿರು ಕಾಡುಗಳ ಸಂರಕ್ಷಣೆಗೆ ಯೋಜನೆಗಳ ಕೊರತೆ ಕಂಡುಬಂದಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳಿಂದ ಅಗತ್ಯದ ಪ್ರೋತ್ಸಾಹ ಮತ್ತು ಬೆಂಬಲ ದೊರಕದೆ ಬಿದಿರು ಕಾಡುಗಳ ಸಂರಕ್ಷಣೆಗೆ ಅನುಗುಣವಾದ ವಾತಾವರಣ ನಿರ್ಮಾಣವಾಗಿಲ್ಲ. ಇದರಿಂದಾಗಿ ಜಲಮೂಲಗಳ ಸಮೃದ್ಧಿಗೂ ಪೂರಕವಾಗಿರುವ ಬಿದಿರು ಕಾಡುಗಳ ಅಭಿವೃದ್ಧಿಗೆ ಯಾವುದೇ ಚಟುವಟಿಕೆಗಳಿಲ್ಲದೆ ಯೋಜನೆಯು ಸೊರಗುತ್ತಿದೆ.


ಕಾಸರಗೋಡು ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಪ್ರಾಕೃತಿಕ ಸೌಂದರ್ಯವನ್ನು ಹೆಚ್ಚಿಸುತ್ತಿರುವ ಹಾಗೂ ಅಲಂಕಾರಿಕವಾಗಿ ಬೆಳೆದು ನಿಂತಿರುವ ಬಿದುರಿನ ಕಾಡುಗಳನ್ನು ಸಂರಕ್ಷಿಸುವ ಅಥವಾ ಹೊಸದಾಗಿ ನೆಟ್ಟು ಬೆಳೆಸುವ ಕೃಷಿಕರಿಗೆ ಉತ್ತೇಜನ ನೀಡುವ ಅಂಗವಾಗಿ ಸರಕಾರಿ ವಲಯದಲ್ಲಿ ಪ್ರೋತ್ಸಾಹಕ ಯೋಜನೆಗಳು ಇಲ್ಲದಿರುವುದು ಜಿಲ್ಲೆಯ ಬಿದಿರು ಕೃಷಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ಜಲಮೂಲಗಳನ್ನು ಸಮೃದ್ಧಗೊಳಿಸಲು ಮತ್ತು ಮನೆ ಹಿತ್ತಿಲುಗಳನ್ನು ಸಂರಕ್ಷಿಸಲು ಕೃಷಿಕರು ಬಿದಿರುಗಳನ್ನು ನೆಟ್ಟು ಬೆಳೆಸುತ್ತಾರೆ. ಜಿಲ್ಲೆಯ ಹಲವಾರು ಭಾಗಗಳಲ್ಲಿ ಬಿದುರಿನ ಕಾಡುಗಳನ್ನು ಕಾಣಬಹುದಾಗಿದೆ. ಬಿದುರಿನ ಕಾಡುಗಳ ಮೂಲಕ ಅತ್ಯುತ್ತಮ ಆದಾಯ ಲಭಿಸಬಹುದಾಗಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯ ಕೃಷಿಕರನ್ನು ಆಕ್ರೋಶಕ್ಕೀಡು ಮಾಡಿದೆ.

ಪ್ರಾಕೃತಿಕ ಪ್ರಾಧ್ಯಾನತೆ

ನದಿ ತೀರಗಳಲ್ಲಿ ಮಣ್ಣು ಕೊಚ್ಚಿ ಹೋಗುವುದನ್ನು ತಡೆಗಟ್ಟಲು ಮತ್ತು ನದಿ ತೀರಗಳನ್ನು ಬಲಪಡಿಸಲು ಬಿದಿರಿನ ಕಾಡುಗಳಿಗೆ ಪ್ರತ್ಯೇಕ ಸಾಮರ್ಥ್ಯವಿದೆ. ಇಷ್ಟೊಂದು ಪ್ರಾಕೃತಿಕ ಪ್ರಾಧ್ಯಾನ್ಯತೆ ಇದ್ದರೂ ಬಿದಿರಿನ ಕಾಡುಗಳನ್ನು ಸಂರಕ್ಷಿಸಲು ವಿಶೇಷ ಯೋಜನೆಗಳು ಜಾರಿಯಾಗದಿರುವುದು ವಿಪರ್ಯಾಸವಾಗಿದೆ.

ಬಿದಿರುಗಳು ಪರಿಸರ ಸಂರಕ್ಷಣೆಗೆ ಮಾತ್ರವಲ್ಲದೆ ದೊಡ್ಡದೊಂದು ಆದಾಯ ಮಾರ್ಗವನ್ನೂ ಸೃಷ್ಟಿಸುತ್ತದೆ. ಉತ್ಸವಗಳಲ್ಲಿ ಮೊದಲಾಗಿ ಪರಿಸರಸ್ನೇಹಿಯಾದ ನಿರ್ಮಾಣಗಳನ್ನು ನಡೆಸಲು ಮತ್ತು ವಿವಿಧ ಉತ್ಪನ್ನಗಳನ್ನು ತಯಾರಿಸಲು ಬಿದಿರನ್ನು ಉಪಯೋಗಿಸಲಾಗುತ್ತದೆ. ದೇವಾಲಯಗಳ, ದೈವಸ್ಥಾನಗಳ ಹಾಗೂ ಮಠ, ಮಂದಿರಗಳ ಹಲವು ಆಚಾರ ಅನುಷ್ಠಾನಗಳಲ್ಲಿ ಬಿದಿರಿಗೆ ಹಾಗೂ ಬಿದಿರಿನ ಉತ್ಪನ್ನಗಳಿಗೆ ಮಹತ್ವದ ಸ್ಥಾನಮಾನವಿದೆ.



ಬಿದಿರು ಕೃಷಿಯಲ್ಲಿ ಭಾರತಕ್ಕೆ ದ್ವಿತೀಯ ಸ್ಥಾನ

ಶೀಘ್ರಗತಿಯಲ್ಲಿ ಬೆಳೆಯುವ ಸಸ್ಯಗಳಲ್ಲಿ ಬಿದಿರು ಕೂಡಾ ಒಂದಾಗಿದೆ. ಒಮ್ಮೆ ಕಡಿದರೂ ಮತ್ತೆ ಬೆಳೆದು ಬರುವುದು ಇದರ ವಿಶೇಷತೆಯಾಗಿದೆ. ಬಿದಿರಿನ ಕೃಷಿಯಲ್ಲಿ ವಿಶ್ವದಲ್ಲೇ ಭಾರತಕ್ಕೆ ದ್ವಿತೀಯ ಸ್ಥಾನವಿದೆ. ಆದಿವಾಸಿ ಸಮುದಾಯಗಳ ಬದುಕಿನಲ್ಲೂ ಬಿದಿರಿಗೆ ಮೊದಲ ಪ್ರಾಶಸ್ತ್ಯವಿದೆ. ಬಿದಿರು ಕೃಷಿಯ ಮೂಲಕ ಆದಾಯ ಗಿಟ್ಟಿಸಿಕೊಳ್ಳುವವರನ್ನು ಉತ್ತೇಜಿಸಲು ಹಾಗೂ ಹೆಚ್ಚೆಚ್ಚು ಜನರನ್ನು ಈ ಕೃಷಿಯತ್ತ ಆಕರ್ಷಿಸಲು ಸರಕಾರ ಮತ್ತು ಜಿಲ್ಲಾಡಳಿತವು ಪ್ರತ್ಯೇಕ ಯೋಜನೆಗಳನ್ನು ಕಾರ್ಯಗತಗೊಳಿಸಬೇಕು ಎಂದು ಜಿಲ್ಲೆಯ ಬಿದಿರು ಕೃಷಿಕರು ಆಗ್ರಹಿಸಿದ್ದಾರೆ.

ಸಾಂಸ್ಕೃತಿಕ ಪರಂಪರೆಯಲ್ಲಿ ಬಿದಿರಿಗೆ ವಿಶೇಷ ಸ್ಥಾನಮಾನ

ಭಾರತೀಯ ಕಲೆ, ಸಂಗೀತ, ಕರಕುಶಲ ವಸ್ತುಗಳು, ಇನಿತರ ಸಂಬಂಧಿತ ನಿರ್ಮಾಣಗಳು ಮೊದಲಾದ ಸಾಂಸ್ಕೃತಿಕ ಪರಂಪರೆಯ ವಿಚಾರದಲ್ಲಿ ಬಿದಿರಿಗೆ ವಿಶೇಷ ಪಾತ್ರವಿದೆ. ಕಾಸರಗೋಡು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯು ಈ ನಿಟ್ಟಿನಲ್ಲಿ ಭಾರೀ ಪ್ರೋತ್ಸಾಹ ನೀಡುತ್ತಿದೆಯಾದರೂ ಕೃಷಿಕರಿಗೆ ಸರಿಯಾದ ಸಹಕಾರವಾಗಲಿ ಅಥವಾ ಇನ್ಶೂರೆನ್ಸ್ ಭದ್ರತೆಯಾಗಲಿ ಲಭಿಸುತ್ತಿಲ್ಲ. ಹಿಂದೊಮ್ಮೆ ಕಾಸರಗೋಡು ಜಿಲ್ಲಾಡಳಿತವು ಬಿದಿರು ಗಿಡಗಳನ್ನು ನೆಟ್ಟು ಬೆಳೆಸಲು ಪ್ರೋತ್ಸಾಹ ನೀಡಿದ್ದರೂ ಕೆಲವೇ ದಿನಗಳಲ್ಲಿ ಬೆಂಬಲ ಕಡಿಮೆಯಾಗಿ ನಂತರ ಯೋಜನೆಯು ಮೂಲೆಗುಂಪಾಯಿತು.

ಪಾಲನೆಯಾಗದ ಮೀಸಲಾತಿ, ರೋಸ್ಟರ್: ಸಹ ಶಿಕ್ಷಕರ ದೂರು



ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏ.29ರಂದು ನಡೆದ ಮುಖ್ಯ ಶಿಕ್ಷಕರ ಹುದ್ದೆಯ ಭಡ್ತಿ ಪ್ರಕ್ರಿಯೆಯಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಮೀಸಲಾತಿ ಮತ್ತು ರೋಸ್ಟರ್ ಪಾಲನೆಯಾಗಿಲ್ಲ ಎಂದು ಸರ್ಕಾರಿ ಪ್ರಾಥಮಿಕ ಶಾಲೆಗಳ ಕೆಲವು ಸಹ ಶಿಕ್ಷಕರು ಆರೋಪಿಸಿದ್ದಾರೆ.

ರೋಸ್ಟರ್ ಪ್ರಕಾರ ಕೌನ್ಸೆಲಿಂಗ್ ನಡೆಸದ ಕಾರಣ ಎಸ್‌ಸಿ, ಎಸ್ಟಿ ಸಹ ಶಿಕ್ಷಕರಿಗೆ ಅನ್ಯಾಯವಾಗಿದೆ ಎಂದು ಆಪಾದಿಸಿ ಸರ್ಕಾರಿ ಪ್ರಾಥಮಿಕ ಶಾಲೆಗಳ ಕೆಲವು ಸಹ ಶಿಕ್ಷಕರು, ಮಂಗಳವಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ಜಿಲ್ಲೆಯಲ್ಲಿ 142 ಮುಖ್ಯ ಶಿಕ್ಷಕರ ಹುದ್ದೆ ಭರ್ತಿ ಮಾಡುವಾಗ ರೋಸ್ಟರ್ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೌನ್ಸೆಲಿಂಗ್ ನಡೆಸಿ ಮೀಸಲು ನಿಯಮ ಅನ್ವಯಿಸಬೇಕು. ಆದರೆ, ಅವುಗಳನ್ನು ಪಾಲಿಸದೆ, ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಭಡ್ತಿ ನೀಡಲಾಗಿದೆ ಎಂದು ಮನವಿಯಲ್ಲಿ ಹೇಳಲಾಗಿದೆ.

ಸರ್ಕಾರದ ನಿಯಮದಂತೆ ಮೀಸಲಾತಿ ನಿಯಮವನ್ನು ಕಡ್ಡಾಯವಾಗಿ ಅನುಸರಿಸಬೇಕು. ಆದರೆ, ಪ್ರಸ್ತುತ ನಡೆದ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಜ್ಯೇಷ್ಠತೆ ಆಧಾರದಲ್ಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹುದ್ದೆಗಳು ಬ್ಯಾಕ್‌ಲಾಗ್ ಉಳಿದಿವೆ. ಈ ಎಲ್ಲ ಕಾರಣಗಳಿಂದ ಈಗ ನಡೆಸಿರುವ ಭಡ್ತಿಯನ್ನು ರದ್ದುಪಡಿಸಬೇಕು. ರೋಸ್ಟರ್ ಪ್ರಕಾರ ಮರುಬಡ್ತಿ ನೀಡಬೇಕು. ನಮ್ಮ ಬೇಡಿಕೆಯನ್ನು ಪರಿಗಣಿಸದಿದ್ದರೆ ನ್ಯಾಯಾಲಯದ ಮೊರೆ ಹೋಗುತ್ತೇವೆ ಎಂದು ಮನವಿಯಲ್ಲಿ ವಿವರಿಸಲಾಗಿದೆ.

ಶಿಕ್ಷಕರಾದ ಶಿವು ರಾಥೋಡ, ಗೋವಿಂದ ನಾಯ್ಕ್, ಪ್ರದೀಪ್, ಪ್ರಿಯಾ, ದಾಕ್ಷಾಯಿಣಿ, ಸುನಂದಾ, ಕವಿತಾ, ಗೀತಾ ಮತ್ತಿತರರು ಮನವಿ ಸಲ್ಲಿಕೆ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಡಿಸೈನ್ ಆಂಡ್ ಇನ್ನೋವೇಶನ್ ಕ್ಲಿನಿಕ್ 2026 ಸ್ಪರ್ಧೆ

ನಿಟ್ಟೆ ವಿದ್ಯಾರ್ಥಿಗಳು ರನ್ನರಪ್



ಕಾರ್ಕಳ: ಬೆಂಗಳೂರಿನ ಸೆಂಟ್ರಲ್ ಮ್ಯಾನುಫ್ಯಾಕ್ಚರಿಂಗ್ ಟೆಕ್ನಾಲಜಿ ಇನ್ಸ್ಟಿಟ್ಯೂಟ್ (ಸಿಎಂಟಿಐ)ನಲ್ಲಿ ಇತ್ತೀಚೆಗೆ ನಡೆದ ಡಿಸೈನ್ ಆಂಡ್ ಇನ್ನೋವೇಶನ್ ಕ್ಲಿನಿಕ್ 2026 ಸ್ಪರ್ಧೆಯಲ್ಲಿ ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿ ತಂಡವು ರನ್ನರ್-ಅಪ್ ಸ್ಥಾನವನ್ನು ತನ್ನದಾಗಿಸಿಕೊಂಡಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ 130 ತಂಡಗಳ ಪೈಕಿ 35 ತಂಡಗಳನ್ನು ಮಾತ್ರವಷ್ಟೇ ಮೂಲಮಾದರಿ ತಯಾರಿಕಾ ಹಂತಕ್ಕೆ ಶಾರ್ಟ್ ಲಿಸ್ಟ್ ಮಾಡಲಾಯಿತು. ವಿದ್ಯಾರ್ಥಿಗಳಾದ ಪೂಜಾ ಆರ್ ಶೇಟ್, ಅಶ್ವಿನ್ ನಾಯಕ್, ಅನೀಶ್ ಪಿ. ಮತ್ತು ಕ್ಲೈವ್ ಏಂಜೆಲೊ ಡಿಸೋಜಾನ್ನು ಒಳಗೊಂಡ ತಂಡವು ಸ್ಮಾರ್ಟ್ ಡ್ರೈನೇಜ್ ಮಾನಿಟರಿಂಗ್ ಸಿಸ್ಟಮ್‌ನ್ನು ಅಭಿವೃದ್ಧಿಪಡಿಸಿ ರನ್ನರ್-ಅಪ್ ಸ್ಥಾನವನ್ನು ಪಡೆದುಕೊಂಡಿದೆ. ಇದು ರಿಯಲ್ ಟೈಮ್ ಮಾನಿಟರಿಂಗ್, ಕ್ಲೌಡ್ ಇಂಟಗ್ರೇಶನ್ ಮತ್ತು ಮೂರು ದಿನಗಳಲ್ಲಿ ಅತಿಕಡಿಮೆ ಖರ್ಚಿನಲ್ಲಿ ಅಭಿವೃದ್ಧಿಪಡಿಸಲಾದ ತಂತ್ರಜ್ಞಾನ ಎಂಬ ಪ್ರಶಂಸೆ ಪಡೆಯಿತು.

ಪುತ್ತೂರು ಬಿಜೆಪಿ ಕಚೇರಿ ಮುಂದೆ ಹರ್ಷಾಚರಣೆ | ಮಠಂದೂರು ಅಭಿಮತ

ಫಲಿತಾಂಶ ಕಾಂಗ್ರೆಸ್, ಕಮ್ಯುನಿಸ್ಟ್‌ಗೆ ಜನರ ಉತ್ತರ



ಪುತ್ತೂರು: ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿ ದಿಗ್ವಿಜಯ ಸಾಧಿಸಿದೆ. ತಮಿಳುನಾಡು ಮತ್ತು ಕೇರಳದಲ್ಲಿ ಒಳ್ಳೆಯ ಸಾಧನೆ ಮಾಡಿದೆ. ಪಶ್ಚಿಮ ಬಂಗಾಳದಲ್ಲಿ ಕಳೆದ 15 ವರ್ಷಗಳ ಗೂಂಡಾ ರಾಜಕಾರಣದ ವಿರುದ್ಧ ಅಲ್ಲಿನ ಮತದಾರರು ಬಿಜೆಪಿಯನ್ನು ಗೆಲ್ಲಿಸುವುದರೊಂದಿಗೆ ಹಿಂದುತ್ವದ ನೆಲೆಯಲ್ಲಿ ಅಭಿವೃದ್ಧಿ ಮಾಡುವ ಸಂದೇಶ ನೀಡಿದ್ದಾರೆ. ಕಾಂಗ್ರೆಸ್ ಪಕ್ಷ, ಕಮ್ಯುನಿಸ್ಟ್ ಪಕ್ಷಕ್ಕೆ ಉತ್ತರ ಕೊಡುವ ಕೆಲಸ ಆಗಿದೆ ಎಂದು ಪುತ್ತೂರು ಮಾಜಿಶಾಸಕ ಸಂಜೀವ ಮಠಂದೂರು ಹೇಳಿದ್ದಾರೆ.

ಪಂಚರಾಜ್ಯದ ಚುನಾವಣೆಯ ಫಲಿತಾಂಶಕ್ಕೆ ಸಂಬಂಧಿಸಿ ಪುತ್ತೂರು ಬಿಜೆಪಿಯಿಂದ ಮೇ 4ರಂದು ಸಂಜೆ ಬಿಜೆಪಿ ಕಚೇರಿ ಮುಂದೆ ಹರ್ಷಾಚರಣೆಯಲ್ಲಿ ಅವರು ಮಾತನಾಡಿದರು. ಪಂಚರಾಜ್ಯ ಚುನಾವಣೆ ಬಿಜೆಪಿಯ ಶಕ್ತಿ ದೇಶದಲ್ಲೇ ಸಂಚಲನ ಮೂಡಿಸುವ ಕೆಲಸ ಆಗಿದೆ. ಅಸ್ಸಾಂ, ಪಶ್ಚಿಮಬಂಗಾಳ, ಪುದುಚೇರಿಯಲ್ಲಿ ಬಿಜೆಪಿ ಜಯಭೇರಿ ಭಾರಿಸಿದೆ. ಕೇರದಲ್ಲಿ ಅಭೂತಪೂರ್ವ ಸಾಧನೆ ಮಾಡಿದೆ. ತಮಿಳುನಾಡಿನಲ್ಲಿ ಹೊಂದಾಣಿಕೆಯ ಜಯಸಾಧಿಸಿದೆ. ಪಶ್ಚಿಮ ಬಂಗಾಳದಲ್ಲಿ ಪ್ರಧಾನಿಯವರನ್ನು ತುಚ್ಛವಾಗಿ ನೋಡುತ್ತಿದ್ದ ಮಮತಾ ಬ್ಯಾನರ್ಜಿ ಅವರ ಅವನತಿಗೆ ಅಲ್ಲಿನ ಜನರು ತಕ್ಕ ಉತ್ತರ ನೀಡಿದ್ದಾರೆ ಎಂದರು.

ಪುತ್ತೂರಿನಿಂದ ಒಂದಷ್ಟು ಜನ ಕೇರಳಕ್ಕೆ ಹೋಗಿ ಪ್ರಚಾರ ಮಾಡಿದ್ದಾರೆ. ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ವಿಶೇಷವಾಗಿ ಕೇರಳದಲ್ಲಿ ಮೂರು ಸೀಟು ಗೆಲ್ಲುವ ಕೆಲಸ ಆಗಿದೆ ಎಂದರು. ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ದಯಾನಂದ ಶೆಟ್ಟಿ ಉಜಿರೆ ಮಾರು ಮಾತನಾಡಿ, ಪಂಚರಾಜ್ಯ ಚುನಾವಣೆ ಮೂಲಕ ಹಿಂದುತ್ವದ ಪಥದಲ್ಲಿ ಅಭಿವೃದ್ಧಿ ಮಂತ್ರ ಪ್ರಧಾನಿ ಮಾಡಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಅಭೂತಪೂರ್ವ ಗೆಲುವು ಶ್ಯಾಮ ಪ್ರಸಾದ್ ಮುಖರ್ಜಿ ಆತ್ಮಕ್ಕೆ ಶಾಂತಿ ದೊರೆತ ದಿವಸವಾಗಿದೆ ಎಂದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪ್ರಸನ್ನ ಕುಮಾರ್ ಮಾರ್ತ, ಬಿಜೆಪಿ ನಗರ ಮಂಡಲದ ಅಧ್ಯಕ್ಷ ಶಿವಕುಮಾರ್ ಪಿ.ಬಿ, ಜಿಲ್ಲಾ ಕಾರ್ಯದರ್ಶಿ ವಿದ್ಯಾ ಗೌರಿ, ರಾಜ್ಯ ಹಿಂದುಳಿದ ಮೋರ್ಚಾ ಕಾರ್ಯದರ್ಶಿ ಆರ್.ಸಿ.ನಾರಾಯಣ್, ಜಿಲ್ಲಾ ಫಲಾನುಭವಿಗಳ ಪ್ರಮುಖ್ ನಿತೀಶ್ ಕುಮಾರ್ ಶಾಂತಿವನ, ನಗರ ಸಭೆ ಮಾಜಿ ಅಧ್ಯಕ್ಷೆ ಲೀಲಾವತಿ ಅಣ್ಣು ನಾಯ್ಕ, ಹರಿಪ್ರಸಾದ್ ಯಾದವ್, ಜಿಲ್ಲಾ ಪ್ರಶಿಕ್ಷಣ ಪ್ರಕೋಷ್ಠದ ಸಹ ಸಂಚಾಲಕ ಪುರುಷೋತ್ತಮ ಮುಂಗ್ಲಿಮನೆ, ಹಿರಿಯರಾದ ಎಸ್. ಅಪ್ಪಯ್ಯ ಮಣಿಯಾಣಿ, ಉದ್ಯಮಿ ಉಜ್ವಲ್ ಪ್ರಭು, ವಸಂತಲಕ್ಷ್ಮೀ, ಸ್ವರ್ಣಲತಾ ಹೆಗ್ಡೆ, ಶಶಿಕಲಾ ಸಿ.ಎಸ್, ಜಯಲಕ್ಷ್ಮೀ ಶಗ್ರಿತ್ತಾಯ, ನಾಗೇಂದ್ರ ಬಾಳಿಗ, ಶಶಿಧರ್ ನಾಯಕ್, ಮಂಡಲದ ಪ್ರಧಾನ ಕಾರ್ಯದರ್ಶಿ ಲೋಕೇಶ್ ಚಾಕೋಟೆ, ಭಾಸ್ಕರ್ ರೈ ಕಟ್ಟಪುಣಿ, ಭಾಮಿ ಜಗದೀಶ್ ಶೆಣೈ, ಅಚ್ಯುತ ನಾಯಕ್, ವಿರೂಪಕ್ಷಾ ಭಟ್, ರಫೀಕ್ ದರ್ಬೆ, ಹರೀಶ್ ದೋಳ್ಪಾಡಿ, ನಿತೇಶ್ ಕಲ್ಲೇಗ, ಯತೀಶ್ ದೇವ, ಸುರೇಶ್ಚಂದ್ರ ರೈ, ರಾಜೇಶ್ ಬನ್ನೂರು, ಅಭಿಜಿತ್ ಕೊಡಿಪ್ಪಾಡಿ, ಸುನಿಲ್ ದಡ್ಡು, ರಾಜೇಶ್ ರೈ ಪರ್ಪುಂಜ, ಅಣ್ಣಪ್ಪ ಕಾರೆಕ್ಕಾಡು, ನಾಗೇಶ್ ಟಿ.ಎಸ್, ಅಜಿತ್ ಕುಮಾರ್ ರೈ, ದಿನೇಶ್ ಪಂಜಿಗ ಮತ್ತಿತರರಿದ್ದರು.ಸಿಹಿ ತಿಂಡಿ ಹಂಚಿ ಸಂಭ್ರಮ

ಬಿಜೆಪಿ ಕಾರ್ಯಕರ್ತ ರತ್ನಾಕರಪ್ರಭು ಅವರು ಸ್ಥಳದಲ್ಲೇ ಚುರುಂಬುರಿ ತಯಾರಿಸಿ ಕಾರ್ಯಕರ್ತರಿಗೆ ಹಂಚಿದರು. ಈ ಸಂದರ್ಭ ಸಿಹಿ ತಿಂಡಿ ಹಂಚಲಾಯಿತು.

ದೇಶದ ಪಂಚ ರಾಜ್ಯಗಳಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಯಶಸ್ಸು | ಕೊಡಗಿನಲ್ಲಿ ಸಿಹಿ ಹಂಚಿ, ಪಟಾಕಿ ಸಿಡಿಸಿ ವಿಜಯೋತ್ಸವ

ವೀರಾಜಪೇಟೆ, ಸುಂಟಿಕೊಪ್ಪದಲ್ಲಿ ಕಾರ್ಯಕರ್ತರಿಂದ ಸಂಭ್ರಮಾಚರಣೆ

ಮಡಿಕೇರಿ: ದೇಶದ ಪಂಚ ರಾಜ್ಯಗಳಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಯಶಸ್ಸು ಗಳಿಸಿದ ಹಿನ್ನೆಲೆಯಲ್ಲಿ ವೀರಾಜಪೇಟೆ ನಗರ ಬಿಜೆಪಿ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು.

ಚುನಾವಣೆಯಲ್ಲಿ ಬಂಗಾಳ, ಅಸ್ಸಾಂ, ಮತ್ತು ಪುದುಚೇರಿಯಲ್ಲಿ ಪಕ್ಷವು ಜಯಭೇರಿ ಸಾಧಿಸಿದ ಹಿನ್ನೆಲೆಯಲ್ಲಿ ಕಾರ್ಯಕರ್ತರು ಸಿಹಿ ಹಂಚಿ, ಪಟಾಕಿ ಸಿಡಿಸಿ ತನ್ನ ವಿಜಯೋತ್ಸವ ಆಚರಿಸಿದರು.

ಈ ಸಂದರ್ಭ ಮಾತನಾಡಿದ ಬಿಜೆಪಿ ಪ್ರಮುಖರಾದ ರೀನಾ ಪ್ರಕಾಶ್ ಅವರು,ರಕ್ತಪಾತ ರಾಜಕೀಯಕ್ಕೆ ಮುಖಭಂಗವಾಗಿದೆ. ಬಂಗಾಳದಲ್ಲಿ ಹಿಂಸಾತ್ಮಕ ಪ್ರತಿಭಟನೆಗಳು, ಹಿಂದುಗಳ ನರಮೇಧ, ಕೋಮುವಾದಕ್ಕೆ ಅಂತ್ಯ ಹಾಡಲಾಗಿದೆ. ಗೃಹಸಚಿವ ಅಮಿತ್ ಶಾ ಮತ್ತು ನರೇಂದ್ರ ಮೋದಿ ಅವರ ದಕ್ಷ ಆಡಳಿತದಿಂದಾಗಿ ಇಂದು ಮಮತಾ ದೀದಿ ಆಡಳಿತ ಮಣ್ಣುಪಾಲಾಗಿದೆ. ದಾಸ್ಯದ ಸಂಕೋಲೆಯಿಂದ ಮುಕ್ತಿ ಕಂಡಿದೆ ಎಂದರು.

ಬಂಗಾಳದಲ್ಲಿ ಬಿಜೆಪಿ ಹೊಸ ಅಧ್ಯಾಯ ಬರೆಯಲಿದೆ. ವಿಜಯದ ಹಿಂದೆ ಕಾರ್ಯಕರ್ತರ ಶ್ರಮ, ರಾಷ್ಟ್ರ ನಾಯಕರ ಬೆಂಬಲ ಮತ್ತು ಪರಿಶ್ರಮದ ಫಲವಿದೆ. ಬಿಜೆಪಿ ಚುಕ್ಕಾಣಿ ಹಿಡಿದಿರುವುದಕ್ಕೆ ಕಾರ್ಯಕರ್ತರಿಗೆ ಧನ್ಯವಾದ ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ಮಾತನಾಡಿ, ರಾಷ್ಟ್ರದ ರಾಜಕೀಯದಲ್ಲಿ ಹೊಸ ಸಂಚಲನ ಮೂಡಿದೆ.ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ರಾಜ್ಯದಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದು ಎನ್.ಡಿ.ಎ ಮೈತ್ರಿ ಪಕ್ಷ ಪುದುಚೇರಿಯಲ್ಲಿ ಮತ್ತೆ ವಿಜಯ ಸಾಧಿಸಿರುವುದು ಅಮೋಘ. ಬಂಗಾಳದಲ್ಲಿ ಸುಮಾರು 80 ಲಕ್ಷ ಕಳ್ಳ ಓಟು ಮಾಡಿಸುವ ಮೂಲಕ ದೀದಿ ಪರಮಾಧಿಕಾರ ಸ್ಥಾಪಿಸಿದ್ದರು. ರೋಹಿಂಗ್ಯಾ ನುಸುಳುಕೋರರಿಗೆ ಮಣೆಹಾಕಿ ಕೋಮು ಗಲಭೆ ಸೃಷ್ಟಿ ಮಾಡಲಾಗಿತ್ತು. ಹಿಂದೂಗಳಿಗೆ ಬದುಕಲು ಅಸಾಧ್ಯವಾದ ವಾತಾವರಣ ಸೃಷ್ಟಿ ಮಾಡಲಾಗಿತ್ತು. ಇದಕ್ಕೆ ತಕ್ಕ ಉತ್ತರ ಇಂದು ಲಭಿಸಿದೆ. ದೀದಿಯ ರಾಜಕಾರಣ ಮುಕ್ತಾಯ ಕಂಡಿದೆ. ಇದು ಕಾರ್ಯ ಕರ್ತರ ಶ್ರಮಕ್ಕೆ ಸಂದ ಗೆಲುವು ಎಂದು ಹೇಳಿದರು.

ವೀರಾಜಪೇಟೆ ಮಂಡಲ ಅಧ್ಯಕ್ಷ ಸುವೀನ್ ಗಣಪತಿ, ನಗರ ಅಧ್ಯಕ್ಷ ಅನಿಲ್ ಮಂದಣ್ಣ, ಸಚಿನ್ ಕೂತಂಡ, ಪಟ್ರಪಂಡ ರಘು ನಾಣಯ್ಯ, ಪ್ರದೀಪ್ ರೈ, ಸುಮೇಶ್, ಸುರೇಶ್ ಟಿ.ಸಿ. ಅಚ್ಚಪಂಡ ಮಹೇಶ್ ಗಣಪತಿ, ಉನ್ನಿ ಮತ್ತಿತರರಿದ್ದರು.



ಸುಂಟಿಕೊಪ್ಪ: ಸುಂಟಿಕೊಪ್ಪ ಬಿಜೆಪಿ ಪಕ್ಷದ ಕಾರ್ಯಕರ್ತರು ಕನ್ನಡ ವೃತ್ತದಲ್ಲಿ ಜಮಾವಣೆಗೊಂಡು 3 ರಾಜ್ಯಗಳಲ್ಲಿ ಭರ್ಜರಿ ಜಯಗಳಿಸಿರುವುದನ್ನು ಪಟಾಕಿ ಸಿಡಿಸಿ ವಿಜಯೋತ್ಸವ ಸಂಭ್ರಮಾಚರಣೆಯನ್ನು ನಡೆಸಿದರು.

ಸೋಮವಾರ ಸಂಜೆ ಕನ್ನಡವೃತ್ತದಲ್ಲಿ ಜಮಾವಣೆಗೊಂಡ ಬಿಜೆಪಿ ಕಾರ್ಯಕರ್ತರು ಪಕ್ಷದ ಧ್ವಜವನ್ನು ಹಿಡಿದು ದೇಶದ ಪ್ರಧಾನಿಯಾದ ನರೇಂದ್ರಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜಾಧ್ಯಕ್ಷ ಬಿ.ವೈ.ವಿಜೇಯೇಂದ್ರ, ಬಿಎಸ್.ಯಡಿಯೂರಪ್ಪ ಹಾಗೂ ಎನ್‌ಡಿಎಗಳಿಗೆ ಜಯಘೋಷಗಳನ್ನು ಕೂಗಿದರಲ್ಲದೆ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಪಿ.ಆರ್. ಸುನಿಲ್‌ಕುಮಾರ್ ವಿಜಯೋತ್ಸವ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು ನರೇಂದ್ರ ಮೋದಿಯವರು ವಿಶ್ವಗುರು ಅಲ್ಲದೆ ದೇಶದಲ್ಲಿ ಉತ್ತಮ ಆಡಳಿತಗಾರರಾಗಿದ್ದು, ದೇಶದ ಬಹುಪಾಲು ರಾಜ್ಯಗಳು ಬಿಜೆಪಿ ಹಾಗೂ ಎನ್‌ಡಿಎ ಮಿತ್ರ ಕೂಟ ಪಕ್ಷಗಳು ಆಡಳಿತದ ಚುಕ್ಕಾಣಿಯನ್ನು ಹಿಡಿದಿದೆ. ಈ ಬಾರೀ ನಡೆದ ಚುನಾವಣೆಯಲ್ಲಿ ಅಸ್ಸಾಂ, ಪಶ್ಚಿಮ ಬಂಗಾಳ ಹಾಗೂ ಪುದುಚೇರಿಗಳನ್ನು ಗೆಲುವು ಸಾಧಿಸುವ ಕೇರಳದಲ್ಲಿ 3 ಸ್ಥಾನಗಳನ್ನು ಗೆಲುವು ಸಾಧಿಸಿದ್ದು ಮುಂದಿನ ದಿನಗಳಲ್ಲಿ ಕೇರಳವನ್ನು ವಶಪಡಿಸಿಕೊಳ್ಳಲಾಗುವುದು ಎಂದು ಅವರು ಹೇಳಿದರು.



ಈ ಸಂದರ್ಭ ಸುಂಟಿಕೊಪ್ಪ ಸ್ಥಾನೀಯ ಸಮಿತಿ ಅಧ್ಯಕ್ಷ ಧನುಕಾವೇರಪ್ಪ, ಮಹಾ ಶಕ್ತಿ ಕೇಂದ್ರದ ಅಧ್ಯಕ್ಷರಾಗಿ ಬಿ.ಕೆ.ಪ್ರಶಾಂತ್ (ಕೋಕಾ), ಪಕ್ಷದ ಹಿರಿಯ ಮುಖಂಡ ಡಿ.ನರಸಿಂಹ, ಕೆದಕಲ್ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಸಂಜು ಪೊನ್ನಪ್ಪ, ಗ್ರಾ.ಪಂ.ಮಾಜಿ ಅಧ್ಯಕ್ಷೆ ಬಿ.ಐ.ಭವಾನಿ, ಹಿರಿಯ ಮುಖಂಡೆ ಲೀಲಾಮೇದಪ್ಪ, ಸಹನಾ, ಕೆದಕಲ್ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಕೃಷ್ಣ ಹಾಗೂ ಬಿಜೆಪಿ ಕಾರ್ಯಕರ್ತರು ಇದ್ದರು.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	9	6	2	1	13	+0.855
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	10	6	4	0	12	+0.644
ರಾಜಸ್ಥಾನ	10	6	4	0	12	+0.510
ಗುಜರಾತ್	10	6	4	0	12	-0.147
ಚೆನ್ನೈ	9	4	5	0	8	+0.005
ದಿಲ್ಲಿ	9	4	5	0	8	-0.895
ಕೆಕೆಆರ್	9	3	5	1	7	-0.539
ಮುಂಬೈ	10	3	7	0	6	-0.649
ಲಖನೌ	9	2	7	0	4	-1.076

ಕುಸಿದ ಕ್ಯಾಪಿಟಲ್ಸ್‌ಗೆ ರಿಜ್ವಿ, ಸ್ಟಬ್ಸ್ ಆಸರೆ | ಚೆನ್ನೈಗೆ 156 ರನ್ ಗುರಿ | ನೂರ್ ಅಹ್ಮದ್ ಕೈಚಳಕ

ಸಮೀರ್ ಇಂಪ್ಯಾಕ್ಟ್ ಆಟ: ದಿಲ್ಲಿ 156/7

• **ಹೊಸದಿಲ್ಲಿ:** ಚೆನ್ನೈ ತಂಡದ ಸಂಘಟಿತ ಬೌಲಿಂಗ್ ದಾಳಿಗೆ ಕುಸಿದ ದಿಲ್ಲಿ ತಂಡಕ್ಕೆ ಇಂಪ್ಯಾಕ್ಟ್ ಆಟಗಾರ ಸಮೀರ್ ರಿಜ್ವಿ(40; 24ಎ, 4ಸಿ) ಮತ್ತು ಭರವಸೆಯ ಬ್ಯಾಟರ್ ಸ್ಟಬ್ಸ್(38, 31ಎ, 1ಬೌ, 2ಸಿ) ಆಸರೆಯಾದ ನಂತರ ಕ್ಯಾಪಿಟಲ್ಸ್ ಸ್ಪರ್ಧಾತ್ಮಕ ಗುರಿ ನಿರ್ಮಿಸಿದೆ.

ಒಂದು ಹಂತದಲ್ಲಿ 69 ರನ್ ಮಾತ್ರಕ್ಕೆ 5 ವಿಕೆಟ್ ಬಿದ್ದರೂ ಚೇತರಿಸಿಕೊಂಡ ದಿಲ್ಲಿ ಫೈಟ್ ಕೊಡಬಹುದಾದ ಮೊತ್ತ ನಿರ್ಮಿಸಿದೆ. ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ದಿಲ್ಲಿ ತಂಡದ ಮೂಲಕ ಇಂಪ್ಯಾಕ್ಟ್ ಪ್ಲೇಯರ್ ನಿಯಮದ ಮಹತ್ವ ಮತ್ತೊಮ್ಮೆ ಗೋಚರಿಸಿದೆ. ಇಂಪ್ಯಾಕ್ಟ್ ಆಗಿ ಬಂದ ಸಮೀರ್ ಏಕಪಕ್ಷೀಯವಾಗಿದ್ದ ಪಂದ್ಯಕ್ಕೆ ಜೀವ ತುಂಬಿದ್ದಾರೆ.

ಪವರ್‌ಪ್ಲೇ: ಟಾಸ್ ಗೆದ್ದ ದಿಲ್ಲಿ ಬ್ಯಾಟಿಂಗ್ ಆಯ್ದುಕೊಂಡಿತು. ಮೋಡ ಕವಿದ ವಾತಾವರಣದಲ್ಲೇ ಬ್ಯಾಟಿಂಗ್‌ಗಿಳಿದ ದಿಲ್ಲಿ ಹಿನ್ನಡೆ ಅನುಭವಿಸಿತು. ಮೊದಲಿನ ಓವರ್‌ನಲ್ಲಿ ಹೆಚ್ಚಿನ ರನ್ ಪಡೆಯಲಿಲ್ಲ. ಎರಡನೇ ಓವರ್‌ನಲ್ಲಿ ಪಾಥುಮ್ ನಿಸ್ಸಂಕಾ ಕ್ಯಾಚಿತ್ತರು. ನಾಲ್ಕನೇ ಓವರ್‌ವರೆಗೂ ದಿಲ್ಲಿ ಅಲ್ಪ ಹಿನ್ನಡೆ ಅನುಭವಿಸಿತು. ಆಕೀಲ್ ಹುಸೈನ್ ತಮ್ಮ ಎರಡನೇ ಓವರ್‌ನ ಮೊದಲ ಬಾಲ್‌ನಲ್ಲಿ ಅಪಾಯಕಾರಿ ರಾಹುಲ್ ವಿಕೆಟ್ ಪಡೆದರು. ಪಂದ್ಯದ ಗತಿ ಚೆನ್ನೈ ಕಡೆ ಸಾಗಿತು. ಮೂರನೇ ಕ್ರಮಾಂಕದಲ್ಲಿ ನಿತೀಶ್ ರಾಣಾ ಮತ್ತು ಕರುಣ್ ನಾಯರ್ ಕೊಂಚ ಹೊತ್ತು ನಿಧಾನ ಬ್ಯಾಟಿಂಗ್ ಮಾಡಿದರು. ಪವರ್ ಪ್ಲೇ ಅಂತ್ಯಗೊಂಡಿತು.





ದಿಲ್ಲಿ 37 ರನ್ ಗಳಿಸಿ 2 ವಿಕೆಟ್ ಕಳೆದುಕೊಂಡಿತ್ತು.

ನೂರ್ ಕಮಾಲ್: ಹುಸೈನ್ ಮತ್ತು ನೂರ್ ಅಹ್ಮದ್ ಕರಾರುವಾಕ್ ದಾಳಿ ಸಂಘಟಿಸಿದರು. ಮಧ್ಯಮ ಓವರ್‌ಗಳ ಆರಂಭದಲ್ಲಿ ನೂರ್ ಕರುಣ್‌ಗೆ ಪೆವಿಲಿಯನ್ ದಾರಿ ತೋರಿಸಿದರು. ನಾಯಕ ಅಕ್ಷರ್ ಪಟೇಲ್ ಬಂದ ತಕ್ಷಣ ಸೆಟ್ ಆಗುವ ಮುಲಾಜಿಗೆ ಬಿದ್ದರು. ಅತ್ತ ಮುಂದಿನ ಓವರ್‌ನಲ್ಲಿ ನೂರ್ ನಿತೀಶ್‌ಗೆ ಖೆಡ್ಡಾ ತೋಡಿದರು. ನಿತೀಶ್ ಹಿಂದೆಯೇ ಅಕ್ಷರ್ ಪೆವಿಲಿಯನ್‌ನತ್ತ ಸಾಗಿದರು. 2 ರನ್ ಮಾತ್ರಕ್ಕೆ ಅವರು ಗುರ್ಜಾಪ್ನೀತ್‌ಗೆ ಕ್ಯಾಚಿತ್ತರು. 69 ರನ್ ಆನ್ನುವಷ್ಟರಲ್ಲಿ ದಿಲ್ಲಿ 5 ವಿಕೆಟ್ ಕಳೆದುಕೊಂಡಿತು. ಆಗ ಸಮೀರ್ ರಿಜ್ವಿ ಅವರನ್ನು ಇಂಪ್ಯಾಕ್ಟ್ ಆಟಗಾರರನ್ನಾಗಿ ಬಳಸಿಕೊಳ್ಳುವ ಅನಿವಾರ್ಯತೆ ಹುಟ್ಟಿತು.

ಸ್ಟಬ್ಸ್ ಆಸರೆ: ಮಧ್ಯಮ ಕ್ರಮಾಂಕದಲ್ಲಿ ದಿಲ್ಲಿಗೆ ಸ್ಟಬ್ಸ್ ಆಸರೆಯಾದರು. ಮೊದಲಿಗೆ ಸಿಂಗಲ್‌ಗಳ ಮೂಲಕ ಸೆಟ್ ಆದ ಅವರು, ವಿಕೆಟ್ ಉಳಿಸಿದ್ದಲ್ಲದೆ, ತಂಡದ ಆಶಾಕಿರಣವಾದರು. ಗುರ್ಜಾಪ್ನೀತ್ ಖೆಡ್ಡಾ ತೋಡಿದ್ದರೂ, ನೂರ್ ಕ್ಯಾಚ್ ಬಿಟ್ಟರು. ಅಲ್ಲಿಂದ ಸ್ಟಬ್ಸ್ ಬೌಂಡರಿಗಳೊಂದಿಗೆ ಶುರು ಮಾಡಿತು. ಸಮೀರ್‌ಗೆ ವಿಕೆಟ್ ಉಳಿಸುವುದೊಂದೇ ಕೆಲಸವಿತ್ತು. ಮಧ್ಯಮ ಓವರ್‌ವರೆಗೂ ಈ ಜೋಡಿ ಬ್ಯಾಟಿಂಗ್ ಮಾಡಿತು. ಅಲ್ಲಿ 3 ವಿಕೆಟ್ ಕಳೆದುಕೊಂಡ ದಿಲ್ಲಿ 72 ರನ್ ಗಳಿಸಿತು.

ಡೆತ್ ಓವರ್: ಇಬ್ಬರೂ ಸೆಟ್ ಆಗಿದ್ದರು. ಡೆತ್‌ನಲ್ಲಿ ದಂಡಿಸುವೊಂದೇ ಬಾಕಿಯಿತ್ತು. 17ನೇ ಓವರ್ ಮಾಡಲು ಬಂದ ಗುರ್ಜಾಪ್ನೀತ್ ಹೆಚ್ಚಿನ ರನ್ ಬಿಟ್ಟು ಕೊಡಲಿಲ್ಲ. ಆದರೆ 18ನೇ ಓವರ್ ಬೌಲಿಂಗ್ ಮಾಡಲು ಬಂದ ಡೆತ್ ಓವರ್ ಸ್ಪೆಷಲಿಸ್ಟ್ ಅನ್ಷುಲ್ ಎರಡು ಸಿಕ್ಸರ್ ಕೊಟ್ಟರು. ವೈಡ್ ಯಾರ್ಕರ್ ಎಸೆಯಲೆತ್ನಿಸಿದ ಅವರ ಯೋಜನೆಗೆ ಸಮೀರ್ ಸ್ಕೂಪ್ ಮೂಲಕ ಸಿಕ್ಸ್ ಬಾರಿಸಿದರು. 19ನೇ ಓವರ್‌ನಲ್ಲಿ ಓವರ್‌ಟನ್ ಉತ್ತಮ ಬೌಲಿಂಗ್ ಮಾಡಿ ಸ್ಟಬ್ಸ್ ವಿಕೆಟ್ ಪಡೆದರು. 31 ಬಾಲ್ ಎದುರಿಸಿದ ಸ್ಟಬ್ಸ್ 38 ರನ್ ಗಳಿಸಿದರು. ಕೊನೆಯ ಓವರ್‌ನಲ್ಲಿ ಸಮೀರ್ ಮತ್ತೆರಡು ಸಿಕ್ಸರ್ ಬಾರಿಸಿದರು. 24 ಬಾಲ್ ಎದುರಿಸಿದ ಅವರು ಔಟಾಗದೇ 40 ರನ್ ಗಳಿಸಿದರು. ದಿಲ್ಲಿ ಡೆತ್ ಓವರ್‌ನಲ್ಲಿ 46 ರನ್ ಗಳಿಸಿತು. ಒಟ್ಟು 155 ರನ್ ಗಳಿಸಿತು.

ಕಿರುಸುದ್ದಿ

ಬೆಂಗಳೂರಿನಿಂದ ಐಪಿಎಲ್ ಫೈನಲ್ ಪಂದ್ಯ ಸ್ಥಳಾಂತರ?

• **ಮುಂಬೈ:** ಟಿಕೆಟ್ ಹಂಚಿಕೆ ಮತ್ತು ಮೂಲಸೌಕರ್ಯಗಳ ಕೊರತೆಯಿಂದಾಗಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪ್ಲೇಆಫ್ ಮತ್ತು ಫೈನಲ್ ಪಂದ್ಯದ ಆಯೋಜನೆ ಅವಕಾಶ ಕಳೆದುಕೊಳ್ಳಲಿದೆ. ಪಂದ್ಯಾವಳಿಯ ಪ್ಲೇಆಫ್ ಹತ್ತಿರವಾದಂತೆ ಬಿಸಿಸಿಐ ಬೆಂಗಳೂರಲ್ಲಿ ಆಡಿಸಲು ನಿರ್ಧರಿಸಿದ್ದ ಒಂದು ಪ್ಲೇಆಫ್ ಪಂದ್ಯ ಮತ್ತು ಫೈನಲ್ ಪಂದ್ಯವನ್ನು ಸ್ಥಳಾಂತರಿಸಲು ಚಿಂತನೆ ನಡೆಸಿದೆ ಎಂದು ವರದಿಯಾಗಿದೆ. ರಾಜ್ಯದ ಶಾಸಕರಿಗೆ ಟಿಕೆಟ್ ನೀಡುವ ವಿಚಾರ, ಸಿಸಿ ಕ್ಯಾಮೆರಾ ಮತ್ತು ಮೂಲ ಸೌಕರ್ಯ ಕೊರತೆ ಇದಕ್ಕೆ ಕಾರಣವಾಗಿದೆ ಎಂದು ಹೇಳಲಾಗುತ್ತಿದೆ. ಕಲಾಪದಲ್ಲಿ ಶಾಸಕರು ಐಪಿಎಲ್ ಟಿಕೆಟ್ ನೀಡಬೇಕೆಂಬ ಬೇಡಿಕೆ ಇಟ್ಟಿದ್ದರು. ಇದರ ಪರಿಣಾಮದಿಂದಾಗಿ ಎಲ್ಲಾ ಶಾಸಕರಿಗೂ ಟಿಕೆಟ್ ನೀಡುವುದಾಗಿ ಕೆಎಸ್‌ಸಿಎ ಹೇಳಿ, ಹಿಂದಿನ ಪಂದ್ಯಗಳ ಸಮಯದಲ್ಲಿ ಟಿಕೆಟ್ ಕೊಟ್ಟಿತ್ತು. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಬಿಸಿಸಿಐ ಫೈನಲ್ ಆತಿಥ್ಯ ಬಗ್ಗೆ ಮರುಪರಿಶೀಲನೆ ನಡೆಸುವ ಸಾಧ್ಯತೆಗಳಿವೆ. ಹಾಲಿ ಚಾಂಪಿಯನ್ ತಂಡದ ತವರು ಫೈನಲ್ ಮತ್ತು ಒಂದು ಪ್ಲೇಆಫ್ ಪಂದ್ಯಕ್ಕೆ ಆತಿಥ್ಯ ನೀಡುವುದು ಐಪಿಎಲ್‌ನ ವಾಡಿಕೆ. ಅದರಂತೆ ಬೆಂಗಳೂರಿನ ಚಿನ್ನಸ್ವಾಮಿಯಲ್ಲೇ ಎರಡೂ ಪಂದ್ಯಗಳು ನಡೆಯಲಿವೆ ಎಂದು ಹೇಳಲಾಗಿತ್ತು. ಶೀಘ್ರದಲ್ಲೇ ಬಿಸಿಸಿಐ ಪ್ಲೇಆಫ್ ವೇಳಾಪಟ್ಟಿ ಶೀಘ್ರದಲ್ಲೇ ಪ್ರಕಟಿಸಲಿದೆ. ಬೆಂಗಳೂರು ಬಿಟ್ಟರೆ, ಅಹಮದಾಬಾದ್, ಕೋಲ್ಕತ್ತಾ ಮತ್ತು ಮುಂಬೈ ಮುಂಚೂಣಿಯಲ್ಲಿವೆ.

» ಶಾಸಕರಿಗೆ ಟಿಕೆಟ್ ವಿಚಾರ
» ಮುಂಚೂಣಿಯಲ್ಲಿ ಅಹಮದಾಬಾದ್, ಮುಂಬೈ, ಕೋಲ್ಕತ್ತಾ

ವೇಟ್‌ಲಿಫ್ಟಿಂಗ್: ಯಶ್‌ಗೆ ಬೆಳ್ಳಿ

• **ಹೊಸದಿಲ್ಲಿ:** ಈಜಿಪ್ಟ್‌ನ ಇಸ್ಮಾಯಿಲಿಯಾದಲ್ಲಿ ನಡೆದ ವಿಶ್ವ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಪುರುಷರ 71 ಕೆಜಿ ವಿಭಾಗದಲ್ಲಿ ಯಶ್ ಖಂಡಗಾಲೆ ಒಟ್ಟು 309 ಕೆಜಿ ತೂಕ ಹೆಚ್ಚಿಸಿ ಒಟ್ಟಾರೆ ಎರಡನೇ ಸ್ಥಾನ ಪಡೆದು ಬೆಳ್ಳಿ ಪದಕ ಗೆದ್ದರು. 'ಬಿ' ಗುಂಪಿನಲ್ಲಿ ಸ್ಪರ್ಧಿಸಿದ ಖಂಡಗಾಲೆ ಸ್ನ್ಯಾಚ್‌ನಲ್ಲಿ 140 ಕೆಜಿ ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ 169 ಕೆಜಿ ತೂಕ ಎತ್ತಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು. ಅವರ ಒಟ್ಟು ಮೊತ್ತವು ಚಿನ್ನದ ಪದಕ ವಿಜೇತ ಫಿಲಿಪೈನ್ಸ್‌ನ ಆಲ್ಬರ್ಟ್ ಇಯಾನ್ ಡೆಲೋಸ್ ಸ್ಯಾಂಟೋಸ್ (326 ಕೆಜಿ) ಅವರ ಹಿಂದೆ ಇತ್ತು. ಈಕ್ವೆಡಾರ್‌ನ ಜಿಮ್ಮಿ ಲೋಪೆಜ್ (301 ಕೆಜಿ) ಕಂಚಿನ ಪದಕ ಗೆದ್ದರು.

ರಾಜಸ್ಥಾನ್ ರಾಯಲ್ಸ್ ಮಾಲಿಕತ್ವ ವಿಚಾರ: ಸೋಮಾನಿ ನಿರಾಸೆ

• **ಜೈಪುರ:** ಅಮೆರಿಕ ಮೂಲದ ಹೂಡಿಕೆದಾರ ಕಾಲ್ ಸೋಮಾನಿ ನೇತೃತ್ವದ ಕನ್ಸಾರ್ಟಿಯಂ, ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿಯ ಮಾಲೀಕತ್ವ ಪಡೆಯುವ ಅವಕಾಶ ತಪ್ಪಿದ ಹಿನ್ನೆಲೆಯಲ್ಲಿ ನಿರಾಸೆ ವ್ಯಕ್ತಪಡಿಸಿದೆ. ಮಾರ್ಚ್‌ನಲ್ಲಿ ಬಂದ ವರದಿಗಳ ಪ್ರಕಾರ, ಈ ಕನ್ಸಾರ್ಟಿಯಂ ಸುಮಾರು 100 ಶೇಕಡಾ ಹಂಚಿಕೆಯನ್ನು 1.63 ಬಿಲಿಯನ್ ಅಮೆರಿಕನ್ ಡಾಲರ್ (ಸುಮಾರು 16,290 ಕೋಟಿ ರೂಪಾಯಿ)ಗೆ ಖರೀದಿಸಲು ಮುಂದಾಗಿತ್ತು. ಆದರೆ, ಭಾನುವಾರ ರಾಜಸ್ಥಾನ್ ರಾಯಲ್ಸ್ ತಂಡವನ್ನು ಮಿತ್ತಲ್ ಕುಟುಂಬ ಹಾಗೂ ಆದಾರ್ ಪೂನವಾಲಾ ಸಹಭಾಗಿತ್ವದಲ್ಲಿ ಸುಮಾರು 1.65 ಬಿಲಿಯನ್ ಡಾಲರ್‌ಗೆ ಪಡೆದುಕೊಂಡಿರುವುದಾಗಿ ಘೋಷಿಸಲಾಯಿತು. ಉಳಿದ ಸುಮಾರು 7 ಶೇಕಡಾ ಹಂಚಿಕೆಯನ್ನು ಮನುಜ್ ಬಡಾಲೆ ಸೇರಿದಂತೆ ಇತ್ತೀಚಿನ ಹೂಡಿಕೆದಾರರು ಕಾಯ್ದುಕೊಳ್ಳಲಿದ್ದಾರೆ. ಸೋಮಾನಿ ನೇತೃತ್ವದ ಗುಂಪು ಪ್ರಕಟಣೆಯಲ್ಲಿ, ಆರು ತಿಂಗಳ ಕಾಲ ನಡೆದ ಪ್ರಕ್ರಿಯೆಯಲ್ಲಿ ನಾವು ಆರಂಭದಿಂದ ಅಂತ್ಯವರೆಗೆ ಮುಂಚೂಣಿಯ ಬಿಡ್ ನೀಡಿದ್ದರೂ, ಅಂತಿಮವಾಗಿ ರಾಜಸ್ಥಾನ ರಾಯಲ್ಸ್ ಮಾಲೀಕತ್ವದ ಭಾಗವಾಗಲು ಸಾಧ್ಯವಾಗದೇ ನಿರಾಸೆ ಉಂಟಾಗಿದೆ ಎಂದು ತಿಳಿಸಿದೆ.

ಮುಂಬೈ ಇಂಡಿಯನ್ಸ್‌ಗೆ 6 ವಿಕೆಟ್ ಭರ್ಜರಿ ಗೆಲುವು

ರಯಾನ್-ರೋಹಿತ್ ಶರ್ಮ ಅಬ್ಬರಕ್ಕೆ ನಲುಗಿದ ಲಖನೌ

• **ಮುಂಬೈ:** ಬ್ಯಾಟರ್‌ಗಳ ಹೊಡೆದಾಟದಲ್ಲಿ ಮುಂಬೈ ಇಂಡಿಯನ್ಸ್ ಲಖನೌ ಸೂಪರ್ ಜೇಂಟ್ಸ್ ತಂಡವನ್ನು 8 ಬಾಲ್ ಉಳಿದಿರುವಂತೆ 6 ವಿಕೆಟ್‌ಗಳಿಂದ ಗೆದ್ದಿದೆ.

ಪೂರಣ್(63) ಅವರ ಬಿರುಸಿನ ಬ್ಯಾಟಿಂಗ್ ನಂತರ 229 ರನ್ ಗುರಿ ಪಡೆದಿದ್ದ ಮುಂಬೈ, ರಯಾನ್ ರಿಕೆಲ್ಟನ್(83), ರೋಹಿತ್ ಶರ್ಮ(84) ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 18.4 ಓವರ್‌ಗಳಲ್ಲಿ ಪೇರಿಸಿ ಗೆದ್ದಿತು. ಇದರೊಂದಿಗೆ ಸತತ ಸೋಲುಗಳಿಂದ ಕಂಗೆಟ್ಟಿರುವ ಮುಂಬೈ ಪ್ಲೇಆಫ್‌ನ ರೇಸ್‌ನಲ್ಲಿ ಉಳಿದಿದೆ. ಆದಾಗ್ಯೂ ಮುಂಬೈ ಅರ್ಹತೆ ಪಡೆಯಲು ಮಿರ್ಯಾಕಲ್ ನಡೆಯಲೇ ಬೇಕು.

ಲಖನೌ ಸೂಪರ್ ಜೇಂಟ್ಸ್ ತಂಡದಲ್ಲಿ ಒಮ್ಮೆ ಬ್ಯಾಟಿಗರು ಕೈಕೊಟ್ಟರೆ ಒಮ್ಮೆ ಬೌಲರ್‌ಗಳು ಕೈಕೊಡುತ್ತಿದ್ದು, ಐಪಿಎಲ್‌ನಲ್ಲಿ ಏಳನೇ ಸೋಲು ಕಂಡಿತು. ಕಳೆದ ಲಖನೌ ಪಂದ್ಯದಲ್ಲಿ ಬೌಲರ್‌ಗಳು ಮಿಂಚಿದ್ದರು. ರಾಜಸ್ಥಾನ ತಂಡವನ್ನು 155 ಮತ್ತು ಕೆಕೆಆರ್ ತಂಡವನ್ನು ಸಣ್ಣ ಮೊತ್ತಕ್ಕೆ ತಡೆದಿತ್ತು. ಆದರೆ ಆ ಎರಡೂ ಪಂದ್ಯಗಳಲ್ಲಿ ಬ್ಯಾಟರ್‌ಗಳು ಕೈಕೊಟ್ಟರು. ಲಖನೌ ಸಾಮಾನ್ಯ ಗುರಿಯನ್ನೂ ಪೇರಿಸಲಿಲ್ಲ. ಮುಂಬೈ ವಿರುದ್ಧದ ಪಂದ್ಯದಲ್ಲಿ ಬ್ಯಾಟರ್‌ಗಳು ಅಬ್ಬರಿಸಿದ್ದಾರೆ. ಮಾರ್ಷ್, ಪೂರಣ್ ತಮ್ಮ ಲಯಕ್ಕೆ ಮರಳಿದ್ದಾರೆ. ಆದರೆ ಈ ಪಂದ್ಯದಲ್ಲಿ ಬೌಲರ್‌ಗಳು ಕೈಕೊಟ್ಟರು. ಯಾರೊಬ್ಬರೂ ಕೈಹಿಡಿಯಲಿಲ್ಲ. ಎಲ್ಲರೂ ದುಬಾರಿಯಾದರು.

ಲಖನೌ ಉತ್ತಮ ಬ್ಯಾಟಿಂಗ್: ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಪವರ್‌ಪ್ಲೇನಲ್ಲಿ ನಿಕೋಲಸ್ ಪೂರಣ್, ಮಾರ್ಷ್ ಅಬ್ಬರದೊಂದಿಗೆ 90 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲೂ ಪೂರಣ್ ಹೊಡೆತ ವಿಸ್ತರಿಸಿದ ನಂತರ ಅಲ್ಲಿ 4 ವಿಕೆಟ್ ಕಳೆದುಕೊಂಡು 102 ರನ್ ಗಳಿಸಿತು. ಡೆತ್ ಓವರ್‌ನಲ್ಲಿ ನಿಧಾನಗತಿ ಬ್ಯಾಟಿಂಗ್ ಮಾಡಿದ ಮಾರ್ಕ್ರಂ ಮತ್ತು ಹಿಮ್ಮತ್ 36 ರನ್ ಮಾತ್ರ ಗಳಿಸಿದರು. ನಿಧಾನವಾಗಿ ರನ್ ಮಟ್ಟ ಇಳಿಸಿಕೊಂಡ ಲಖನೌ 228 ರನ್ ಮಾತ್ರ ಗಳಿಸಿತು.

ರಯಾನ್-ರೋಹಿತ್ ಅಬ್ಬರ: ಮುಂಬೈಗೆ ರಯಾನ್ ರಿಕೆಲ್ಟನ್ ಮತ್ತು ಇದೇ ಪಂದ್ಯದ ಮೂಲಕ ಮರಳಿದ ರೋಹಿತ್ ಶರ್ಮ ಅಬ್ಬರದ ಆರಂಭ ನೀಡಿದರು. ಪವರ್‌ಪ್ಲೇನಲ್ಲಿ 70 ರನ್ ಬಂದರೆ 8 ಸಿಕ್ಸರ್ ಬಾರಿಸಿದ ರಯಾನ್ ರನ್ ವೇಗ ಏರಿಸಿದರು. 32 ಬಾಲ್ ಮಾತ್ರದಲ್ಲಿ 82 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮುಂದೆ ರೋಹಿತ್ ಅಬರ. ಒಂದು ಹಂತದಲ್ಲಿ ಮೊದಲಿನ ಹತ್ತು ಬಾಲ್‌ಗಳಲ್ಲಿ ನೂರರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡುತ್ತಿದ್ದ ಹಿಟ್‌ಮ್ಯಾನ್ ಮುಂದೆ ಬೌಂಡರಿ-ಸಿಕ್ಸರ್‌ಗಳ ಸುರಿಮಳೆಗೈದರು. ಮಧ್ಯಮ ಓವರ್‌ಗಳ ಮುಕ್ತಾಯಕ್ಕೆ ಅವರು 44 ಬಾಲ್‌ಗಳಲ್ಲಿ 84 ರನ್ ಚಚ್ಚಿದರು. 6 ಬೌಂಡರಿ ಮತ್ತು 7 ಸಿಕ್ಸರ್‌ಗಳು ಈ ಇನ್ನಿಂಗ್ಸ್‌ನಲ್ಲಿ ಸೇರಿವೆ. 16 ಓವರ್‌ಗಳಲ್ಲಿ ಮುಂಬೈ 190 ರನ್ ಗಳಿಸಿತ್ತು. ಉಳಿದ ರನ್‌ಗಳನ್ನು ಹೊಡೆಯುವಷ್ಟರಲ್ಲಿ 3 ವಿಕೆಟ್ ಉರುಳಿದವು. ಸೂರ್ಯಕುಮಾರ್(12) ತಿಲಕ್ (11) ಮತ್ತೊಮ್ಮೆ ವಿಫಲರಾದರು. ನಮನ್ ಧಿರ್ ಉಳಿದ ರನ್‌ಗಳನ್ನು ಬಾರಿಸಿ ಪಂದ್ಯ ಗೆಲ್ಲಿಸಿದರು. ಡೆತ್ ಓವರ್‌ನಲ್ಲಿ ಮುಂಬೈ 39 ರನ್‌ಗಳಿಸಿತು.



ಸಂಕ್ಷಿಪ್ತ ಸ್ಕೋರ್

ಲಖನೌ 20 ಓವರ್‌ಗಳಲ್ಲಿ 228/5: ಪೂರಣ್ 63, ಮಾರ್ಷ್ 44; ಬಾಷ್ 20/2

ಮುಂಬೈ 18.4 ಓವರ್‌ಗಳಲ್ಲಿ 229/4: ರೋಹಿತ್ 84, 83; ಸಿದ್ಧಾರ್ಥ್ 47/2

ಹೈದರಾಬಾದ್‌ಗೆ ಗೆಲುವಿನ ಹಂಬಲ | ವಿಶ್ವಾಸದಲ್ಲಿ ಪಂಜಾಬ್

ಸನ್‌ಗೆ ಪಂಜಾಬ್ ಕಿಂಗ್ಸ್ ಸವಾಲು

• **ಹೈದರಾಬಾದ್:** ಸತತ ಸೋಲಿನೊಂದಿಗೆ ಹಿನ್ನಡೆ ಅನುಭವಿಸಿರುವ ಸನ್‌ರೈಸರ್ಸ್ ಹೈದರಾಬಾದ್ ಮತ್ತು ಎರಡು ಸೋಲಿನೊಂದಿಗೆ ನಿರಾಸೆ ಅನುಭವಿಸಿರುವ ಪಂಜಾಬ್ ತಂಡಗಳು ಬುಧವಾರ ನಡೆಯಲಿರುವ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಪಂಜಾಬ್ ಅಗ್ರ ಸ್ಥಾನದಲ್ಲಿರುವುದರಿಂದ ಇನ್ನೂ ಅವಕಾಶಗಳನ್ನು ಹೊಂದಿದೆ. ಆದರೆ ಹೈದರಾಬಾದ್ ಮೂರನೇ ಸ್ಥಾನದಲ್ಲಿದ್ದರೂ ಹೈದರಾಬಾದ್‌ನೊಂದಿಗೆ ಗೆಲ್ಲಬೇಕಾದ ಒತ್ತಡವಿದೆ. ಅಂಕಪಟ್ಟಿಯ ಹೊಡೆದಾಟ ಗಮನಿಸಿದರೆ ಎರಡೂ ತಂಡಗಳಿಗೆ ಇದು ಪ್ರಮುಖ ಪಂದ್ಯವಾಗಿರಲಿದೆ. ಜಯ ಗಳಿಸಿದರೆ ಸನ್ ಇನ್ನಷ್ಟು ಭದ್ರವಾಗಲಿದೆ. ಪಂಜಾಬ್ ಗೆದ್ದರೆ ಅಗ್ರಸ್ಥಾನ ಗಟ್ಟಿಗೊಳಿಸಲಿದೆ.

ಗೆಲುವಿನ ಹಂಬಲದಲ್ಲಿ ಹೈದರಾಬಾದ್: ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಶರ್ಮ ಅವರ ಸ್ಫೋಟಕ ಬ್ಯಾಟಿಂಗ್ ಹೊರತಾಗ್ಯೂ ತಂಡ ಬೌಲಿಂಗ್ ವಿಚಾರದಲ್ಲಿ ಹಿನ್ನಡೆ ಅನುಭವಿಸಿದೆ. ಕಳೆದ ಪಂದ್ಯದಲ್ಲಿ ಎಲ್ಲಾ ಬೌಲರ್‌ಗಳು ದುಬಾರಿಯಾಗಿದ್ದಾರೆ. ಕ್ಲಾಸೆನ್, ಇಶಾನ್ ಕಿಶನ್ ಉತ್ತಮ ಬ್ಯಾಟಿಂಗ್ ಮಾಡುತ್ತಿದ್ದರೂ ಅತ್ಯುತ್ತಮ ಫಿನಿಶ್ ತಂಡ ಪಡೆಯುತ್ತಿಲ್ಲ. ಹೆಡ್ ಕಳೆದೆರಡು ಪಂದ್ಯಗಳಲ್ಲಿ ತಮ್ಮ ಅಸಲು ಬ್ಯಾಟಿಂಗ್ ಲಯಕ್ಕೆ ಬಂದಿದ್ದಾರೆ. ಪ್ಯಾಟ್ ಕಮ್ಮಿನ್ಸ್, ಸಾಕೀಬ್ ಲಯದಲ್ಲಿದ್ದರೆ ಇನ್ನುಳಿದ ಬೌಲರ್‌ಗಳು ದುಬಾರಿಯಾಗಿದ್ದಾರೆ. ಶಿವಾಂಗ್ ತಂಡದಲ್ಲಿ ಲಯದಲ್ಲಿರುವ ಏಕೈಕ ಸ್ಪಿನ್ನರ್ ಆಗಿ ಹೊರಹೊಮ್ಮಿದ್ದಾರೆ.

ಲಯಕ್ಕೆ ಮರಳೀತೇ ಪಂಜಾಬ್?: ಪಂಜಾಬ್ ಕಿಂಗ್ಸ್ ತಂಡ ಆಡಿರುವ ಎಲ್ಲಾ ಪಂದ್ಯಗಳಲ್ಲಿ ಚೇಸಿಂಗ್ ಮಾಸ್ಟರ್ ಆಗಿದೆ. ಚೇಸ್ ಮಾಡಿರುವ ಎಲ್ಲಾ ಪಂದ್ಯಗಳಲ್ಲೂ ಗೆದ್ದಿದೆ. ಆದರೆ ಮೊದಲು ಬ್ಯಾಟಿಂಗ್ ಮಾಡುವಾಗ ದೊಡ್ಡ ಹಿನ್ನಡೆ ಅನುಭವಿಸಿದೆ. ಕಳೆದೆರಡು ಪಂದ್ಯದಲ್ಲಿ ಅದೇ ಸ್ಥಿತಿ ಎದುರಿಸಿದೆ. ಮೊದಲು ಬ್ಯಾಟಿಂಗ್ ಮಾಡುವಾಗ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್, ಕೊನೊಲಿ ಬೇಗನೆ ವಿಕೆಟ್ ಕಳೆದುಕೊಂಡರು. ಅತ್ತ ಚೇಸಿಂಗ್ ವೇಳೆ ಮಿಂಚಿರುವ ಶ್ರೇಯಸ್ ಕೂಡ ಮೊದಲು ಬ್ಯಾಟಿಂಗ್ ಮಾಡುವಾಗ ದೊಡ್ಡ ಹಿನ್ನಡೆ ಅನುಭವಿಸಿದ್ದಾರೆ. ಸೂರ್ಯಾಂಶ್ ಸ್ಫೋಟಕ ಅರ್ಧ ಶತಕ ಬಾರಿಸಿರುವುದು ತಂಡಕ್ಕೆ ವಿಶ್ವಾಸ ತಂದಿದೆ. ಸ್ಟೋಯಿನಿಸ್ ಕೂಡ ಲಯದಲ್ಲಿದ್ದು ವಿಶ್ವಾಸ ಹೆಚ್ಚಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ಅರ್ಷದೀಪ್ ದುಬಾರಿಯಾದರೆ, ಬಾರ್ಟ್‌ಲೆಟ್‌ಗೆ ವಿಕೆಟ್ ಬೀಳುತ್ತಿಲ್ಲ. ಸ್ಪಿನ್ನರ್ ಚಹಲ್‌ಗೂ ವಿಕೆಟ್ ಬೀಳುತ್ತಿಲ್ಲ. ಗೆಲುವಿನ ಹಂಬಲದಲ್ಲಿರುವ ಪಂಜಾಬ್ ಎರಡೂ ವಿಭಾಗದೊಂದಿಗೆ ಲಯಕ್ಕೆ ಮರಳೀತೇ ಎಂಬ ಪ್ರಶ್ನೆ ಹುಟ್ಟಿಕೊಂಡಿದೆ.



ಪಿಚ್ ರಿಪೋರ್ಟ್

ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಮತ್ತು ಬೌಲರ್‌ಗಳು ಸಮಾನ ಪ್ರದರ್ಶನ ನೀಡಿದ್ದಾರೆ. ಟ್ರ್ಯಾಕ್ ಸ್ವಿಂಗ್‌ಗೆ ಸಹಾಯ ಮಾಡುತ್ತಿದ್ದರೂ ಬ್ಯಾಟರ್‌ಗಳು ದೊಡ್ಡ ಹೊಡೆತದೊಂದಿಗೆ ಮಿಂಚಿದ್ದಾರೆ. ಸ್ಪಿನ್ನರ್‌ಗಳಿಗೂ ಲಾಭವಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಅಲ್ಪ ಇಬ್ಬನಿ ಕಾಟವೂ ಇದೆ.

ಪಂದ್ಯದ ವಿವರ

ಯಾವಾಗ: ಬುಧವಾರ
ಎಲ್ಲಿ: ಹೈದರಾಬಾದ್
ಸಮಯ: ಸಂಜೆ 7:30
ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಹಾಕಿ: ಆಸೀಸ್‌ನೊಂದಿಗೆ ಭಾರತ ಸರಣಿ

• **ಹೊಸದಿಲ್ಲಿ:** ಏಷ್ಯಾ ಕಪ್ ಸಿದ್ಧತೆಯ ಭಾಗವಾಗಿ ಭಾರತೀಯ ಪುರುಷ ಮತ್ತು ಮಹಿಳಾ ಅಂಡರ್-18 ಹಾಕಿ ತಂಡಗಳು ಮೇ 15 ರಿಂದ 20 ರವರೆಗೆ ಭೋಪಾಲ್‌ನಲ್ಲಿ ನಾಲ್ಕು ಪಂದ್ಯಗಳ ಸರಣಿಯಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿವೆ.

ಏಪ್ರಿಲ್ 19 ರಂದು ಸಾಯ್ ಭೋಪಾಲ್‌ನಲ್ಲಿ ಪ್ರಾರಂಭವಾದ ಯು-18 ರಾಷ್ಟ್ರೀಯ ತರಬೇತಿ ಶಿಬಿರದ ನಂತರದ ಎಕ್ಸ್‌ಪೋಸರ್ ಸರಣಿಯು, ಈ ತಿಂಗಳ ಕೊನೆಯಲ್ಲಿ ಜಪಾನ್‌ನ ಕಾಕಮಿಗಹರಾದಲ್ಲಿ ಪ್ರಾರಂಭವಾಗುವ ಯು-18 ಏಷ್ಯಾ ಕಪ್‌ಗೆ ಪ್ರಮುಖ ತಯಾರಿಯಾಗಿ ಕಾರ್ಯನಿರ್ವಹಿಸುತ್ತದೆ.

ಪುರುಷರ ತರಬೇತುದಾರ ಸರ್ದಾರ್ ಸಿಂಗ್ ಶಿಬಿರದ ಸಮಯದಲ್ಲಿ ಮಾಡಿದ ಪ್ರಗತಿ ಮತ್ತು ಮುಂಬರುವ ಪಂದ್ಯಗಳ ಮಹತ್ವವನ್ನು ಎತ್ತಿ ತೋರಿಸಿದರು.

ಈ ಶಿಬಿರದ ಸಮಯದಲ್ಲಿ ಪ್ರಮುಖ ಗಮನವು ಎಲ್ಲಾ ಸ್ಥಾನಗಳಲ್ಲಿ ಅವರ ಮೂಲಭೂತ ಮತ್ತು ಮೂಲಭೂತ ಅಂಶಗಳನ್ನು ಬಲಪಡಿಸುವುದು, ಆದ್ದರಿಂದ ಅವರು ಆಧುನಿಕ ಹಾಕಿಯ ಬೇಡಿಕೆಗಳಿಗೆ ಉತ್ತಮವಾಗಿ ಸಿದ್ಧರಾಗಿದ್ದಾರೆ ಮತ್ತು ಹಿರಿಯ ಹಂತದತ್ತ ಸ್ಥಿರವಾಗಿ ಮುನ್ನಡೆಯಬಹುದು. ಆಸ್ಟ್ರೇಲಿಯಾದ ಯು18 ತಂಡಗಳ ವಿರುದ್ಧ ಮುಂಬರುವ ಎಕ್ಸ್‌ಪೋಸರ್ ಪಂದ್ಯಗಳು ನಮ್ಮ ತಯಾರಿಯಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ ಎಂದರು.

ಟಿ20 ಶ್ರೇಯಾಂಕ ಪಟ್ಟಿ ಬಿಡುಗಡೆ | 2ನೇ ಸ್ಥಾನಕ್ಕೆ ಇಳಿದ ಇಂಗ್ಲೆಂಡ್

ನಂಬರ್ 1 ಸ್ಥಾನಕ್ಕೆ ಮರಳಿದ ಭಾರತ

• **ದುಬೈ:** ವಿಶ್ವ ಚಾಂಪಿಯನ್, ಹಾಲಿ ಚಾಂಪಿಯನ್ ಭಾರತ ತಂಡವು ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ(ಐಸಿಸಿ) ಶ್ರೇಯಾಂಕದಲ್ಲಿ ಮೊದಲನೇ ಸ್ಥಾನಕ್ಕೇರಿದೆ. ಇಂಗ್ಲೆಂಡ್ ತಂಡವನ್ನು ಹಿಂದಿಕ್ಕಿರುವ ಭಾರತ ಪುರುಷರ ತಂಡವು ತನ್ನ ಸ್ಥಾನಕ್ಕೆ ಮರಳಿದೆ.

ಬುಧವಾರ ಪ್ರಕಟವಾಗಿರುವ ಆಧುನಿಕ ಶ್ರೇಯಾಂಕ ಪಟ್ಟಿಯಲ್ಲಿ ಭಾರತ ಅಗ್ರದಲ್ಲಿರುವುದು ಖಚಿತವಾಗಿದೆ. ಆತಿಥ್ಯ ವಹಿಸಿದ್ದ ಟಿ20 ವಿಶ್ವಕಪ್ ಗೆದ್ದಿರುವ ಭಾರತ, ಟ್ರೋಫಿ ತನ್ನಲ್ಲೇ ಉಳಿಸಿಕೊಂಡ ಏಕೈಕ ತಂಡ ಅನಿಸಿಕೊಂಡಿದೆ. ಕಳೆದ ಮೂರು ವರ್ಷಗಳಲ್ಲಿ ಭಾರತ ನೀಡಿರುವ ಅಸಾಧಾರಣ ಫಲಿತಾಂಶದ ಫಲವಾಗಿ ಮತ್ತೆ ಅಗ್ರಸ್ಥಾನಕ್ಕೇರಿದೆ. ಇದರೊಂದಿಗೆ ವಿಶ್ವದಲ್ಲೇ ತನಗೆ ಯಾರೂ ಸರಿಸಾಟಿಯೇ ಇಲ್ಲ ಎಂಬ ಮಾತನ್ನು ಮತ್ತೊಮ್ಮೆ ಮನವರಿಕೆ ಮಾಡಿದೆ. ಮೇ 2025ರಿಂದ ಪರಿಗಣಿಸಲಾಗಿರುವ ಸರಣಿ ಮತ್ತು ವಿಶ್ವ ಕೂಟಗಳಲ್ಲಿ ಭಾರತ ಪಾರುಪತ್ಯ ಸಾಧಿಸಿದೆ. ಇದರಿಂದಾಗಿ ತನ್ನ ನಂಬರ್ 1 ಸ್ಥಾನಕ್ಕೆ ಮರಳಿದೆ ಎಂದು ಐಸಿಸಿ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

275 ರೇಟಿಂಗ್ ಅಂಕಗಳನ್ನು ಹೊಂದಿರುವ ಭಾರತ ಸರ್ವಶ್ರೇಷ್ಠ ತಂಡವಾಗಿದೆ. ಎರಡನೇ ಸ್ಥಾನದಲ್ಲಿ ಇಂಗ್ಲೆಂಡ್ ಇದ್ದು 262 ಅಂಕಗಳನ್ನು ಹೊಂದಿದೆ. 258 ಅಂಕಗಳನ್ನು ಹೊಂದಿರುವ ಆಸ್ಟ್ರೇಲಿಯಾ 3ನೇ ಸ್ಥಾನದಲ್ಲಿದೆ. ನ್ಯೂಜಿಲೆಂಡ್(247), ಆಫ್ರಿಕಾ(244), ಪಾಕಿಸ್ತಾನ(240) ನಂತರದ ಸ್ಥಾನದಲ್ಲಿವೆ.



ಆರ್ಚರಿ ವಿಶ್ವಕಪ್: ಭಾರತ ಉತ್ತಮ ಆರಂಭ

• **ಶಾಂಘೈ:** ಭಾರತದ ಪುರುಷರ ಕಾಂಪೌಂಡ್ ತಂಡವು ಆರ್ಚರಿ ವಿಶ್ವಕಪ್ ಎರಡನೇ ಹಂತದ ಅರ್ಹತಾ ಸುತ್ತಿನಲ್ಲಿ ಶ್ರೇಷ್ಠ 10 ಸ್ಥಾನಗಳಲ್ಲಿ ಸ್ಥಾನ ಪಡೆದು ಉತ್ತಮ ಆರಂಭ ಮಾಡಿದೆ. ಓಜಸ್ ದಿಯೋತಲೆ ತಂಡವನ್ನು ಮುನ್ನಡೆಸಿದರು.

2023ರಲ್ಲಿ ಬರ್ಲಿನ್‌ನಲ್ಲಿ ನಡೆದ ವಿಶ್ವ ಆರ್ಚರಿ ಚಾಂಪಿಯನ್‌ಶಿಪ್‌ನಲ್ಲಿ ಚಾಂಪಿಯನ್ ಆಗಿ ಇತಿಹಾಸ ನಿರ್ಮಿಸಿದ್ದ ದಿಯೋತಲೆ, 711 ಅಂಕಗಳನ್ನು ಪಡೆದು ಒಟ್ಟು ಏಳನೇ ಸ್ಥಾನದಲ್ಲಿದ್ದು ಭಾರತೀಯರಲ್ಲೇ ಅಗ್ರಸ್ಥಾನ ಪಡೆದರು.


ಸಾಹಿಲ್ ಜಾಧವ್ ಕೂಡ 711 ಅಂಕಗಳನ್ನು ಗಳಿಸಿ ಎಕ್ಸ್ ಎಣಿಕೆಯ ಆಧಾರದ ಮೇಲೆ ಮುಂದಿನ ಸ್ಥಾನ ಪಡೆದರೆ, ಕುಶಾಲ್ ದಲಾಲ್ 18ನೇ ಸ್ಥಾನ ಪಡೆದು ತಂಡದ ಸಮಗ್ರ ಪ್ರದರ್ಶನಕ್ಕೆ ಸಹಾಯ ಮಾಡಿದರು. ಇದರೊಂದಿಗೆ ಭಾರತ ತಂಡ ಸ್ಪರ್ಧೆಯಲ್ಲಿ ಮೂರನೇ ಸೀಡಿಂಗ್ ಪಡೆದುಕೊಂಡಿದೆ.

ಅಭಿಷೇಕ್ 25ನೇ ಸ್ಥಾನಕ್ಕೆ: ಆದರೆ ಏಷ್ಯನ್ ಗೇಮ್ಸ್ ಪದಕ ವಿಜೇತ ಅಭಿಷೇಕ್ ವರ್ಮಾ ನಿರೀಕ್ಷಿತ ಮಟ್ಟದ ಪ್ರದರ್ಶನ ನೀಡದೆ 705 ಅಂಕಗಳೊಂದಿಗೆ 25ನೇ ಸ್ಥಾನಕ್ಕೆ ತೃಪ್ತಿಪಟ್ಟರು. ತಂಡದಲ್ಲಿ ಅವಕಾಶ ತಪ್ಪಿಸಿಕೊಂಡರೂ, ವೈಯಕ್ತಿಕ ವಿಭಾಗದಲ್ಲಿ ಅವರು ಮುಂದುವರಿಯಲಿದ್ದಾರೆ. ಮಹಿಳೆಯರ ಕಾಂಪೌಂಡ್ ವಿಭಾಗದಲ್ಲಿ ಅದಿತಿ ಸ್ವಾಮಿ 700 ಅಂಕಗಳೊಂದಿಗೆ 13ನೇ ಸ್ಥಾನ ಪಡೆದರು. ಅಮೆರಿಕದ ಅಲೆಕ್ಸಿಸ್ ರೂಯಿಸ್ ಅಗ್ರಸ್ಥಾನ ಪಡೆದರು. ಪ್ರಗತಿ 19ನೇ ಸ್ಥಾನ (697 ಅಂಕ) ಪಡೆದರೆ, ಜ್ಯೋತಿ ಸುರೇಖಾ ವೆನ್ನಮ್ 21ನೇ ಸ್ಥಾನಕ್ಕೆ ಜಾರಿದರು. ಈ ಮೂವರು ಸೇರಿ ಮಹಿಳಾ ತಂಡಕ್ಕೆ ಐದನೇ ಸೀಡಿಂಗ್ ಒದಗಿಸಿದ್ದಾರೆ. ಮೆಕ್ಸಿಕೋ, ದಕ್ಷಿಣ ಕೊರಿಯಾ ಹಾಗೂ ಅಮೆರಿಕ ತಂಡಗಳು ಮೊದಲ ಮೂರು ಸ್ಥಾನಗಳನ್ನು ಪಡೆದುಕೊಂಡಿವೆ. ಮಿಶ್ರ ತಂಡ ವಿಭಾಗದಲ್ಲಿ ದಿಯೋತಲೆ ಮತ್ತು ಅದಿತಿ ಸ್ವಾಮಿ ಜೋಡಿ 1411 ಅಂಕಗಳೊಂದಿಗೆ ಆರನೇ ಸೀಡಿಂಗ್ ಪಡೆದಿದೆ.



ಪದಬಂಧ

» ರಾಜಾ ಸಂಗಮೇಶ ಹಿರೇಮಠ



5975

ಎಡದಿಂದ ಬಲಕ್ಕೆ
1.ಮೊಂಡುತನದ ಸ್ವಭಾವವುಳ್ಳವಳು (7)
3.ಆಭರಣ-ವಸ್ತ್ರ ಧರಿಸುವಂತೆ ಮಾಡು (3)
5.ಕಸದ ವಸ್ತು-ಹಳೆಯ ಸಾಮಾನು (3)
7.ಬೆಳಕಿಲ್ಲದೆ ಮಂಕಾಗಿಸು (5)
8.ಕ್ಷೀರಾನ್ನ-ಸಿಹಿಪಾಕವಿದು (3)
9.ಮೃದು ಸ್ವಭಾವದವಳು ಕಡೆಯಲ್ಲಿ ದೀರ್ಘವಾಗಿದ್ದಾಳೆ (3)
11.ಐಹಿಕ ಸುಖ ತ್ಯಜಿಸುವಿಕೆಯಿದು (3)
13.ಆನೆಯ ಶತ್ರು ಈ ಸಿಂಹ (4)
14.ತೋಳಿನ ಹಾವಿನಾಕಾರದ ಆಭರಣ (4)
15.ದಿಕ್ಕಿನ ತುದಿ ತಿರುಗಿದೆ (3)

ಮೇಲಿನಿಂದ ಕೆಳಕ್ಕೆ
1.ದುಡಿಯ ನಡುವೆ ಕಡಿವಾಣವಡಗಿದೆ (3)
2.ಮಗ/ಮಗಳನ್ನು ಹೀಗೂ ಹೇಳಬಹುದು (3)
3.ನೀರಿನಿಂದ ಶುದ್ಧಮಾಡು-ಸ್ವಚ್ಛಗೊಳಿಸು (2)
4.ಮರ ನಡುವೆ ಇರುವ ಮಕರಂದ (4)
5.ಗುಪ್ತವಾಗಿ ಮೆಲ್ಲಗೆ ಮಾತನಾಡು (4)
6.ಋಣದ ರೂಪಾಂತರ ಶಬ್ದ (2)
8. ರಂಗ ನಡುವೆ ಇಟ್ಟುಕೊಂಡ ಚೆನ್ನಾಗಿ ತಿಳಿದವ (4)
10. ನಾಕದೆಡೆಗೆ ಗರಿಯೊಂದಿಗೆ ಹೊರಟ ಪೌರ (4)
11. ಮುಚ್ಚಳವಿರುವ ಪಾತ್ರೆ-ಭರಣಿ (3)
12. ಬಾಯಿಯಿಂದ ಊದುವ ಕೊಳವೆಯಾಕಾರದ ವಾದ್ಯ (3)

5974 ಉತ್ತರ

ಎಡದಿಂದ ಬಲಕ್ಕೆ:
2.ಹಸ್ತಕೌಶಲ 5.ಸಂಪಾದಕ
7.ಒಂದೇಗುರಿ
10.ದುರುಳ 11.ತೊಡುಗೆ
13.ಅಂದಣ
15.ಗುಣವಂತ
16.ರಕ್ತಪಾತ 17.ಕಟಿಕಿ

ಮೇಲಿನಿಂದ ಕೆಳಕ್ಕೆ:
1.ಸಂಕಲ್ಪ 2.ಹರದ
3.ದೇಗುಲ 4.ಜುಗಾರಿ
6.ಪಾಪಭೀರು 8.ಗುಬ್ಬಿಗೂಡು 9.ಗೂಢವಾದ
10.ದುರುಗುಟ್ಟು
12.ಗೆಳೆತನ 13.ಅಂತಕ
14.ಕಿರಣ

ಕಿರುಸುದ್ದಿ

ಕರ್ನಾಟಕದಲ್ಲಿಯೂ ಬಿಜೆಪಿಗೆ ಅದ್ಭುತ ಗೆಲುವು: ಯದುವೀರ್ ಭವಿಷ್ಯ

ಮಡಿಕೇರಿ: ಪಶ್ಚಿಮ ಬಂಗಾಲದಲ್ಲಿ ಬಿಜೆಪಿ ಸಾಧಿಸಿದ ಅದ್ಭುತ ಗೆಲುವಿನ ಕಾರ್ಯತಂತ್ರವನ್ನೇ ಕರ್ನಾಟಕದಲ್ಲಿ 2028ರಲ್ಲಿ ನಡೆಯುವ ವಿಧಾನಸಭಾ ಚುನಾವಣೆಗೆ ಬಳಸಿಕೊಂಡು ಈ ರಾಜ್ಯದಲ್ಲಿಯೂ ಗೆಲವು ಸಾಧಿಸಲಾಗುತ್ತದೆ ಎಂದು ಕೊಡಗು – ಮೈಸೂರು ಕ್ಷೇತ್ರದ ಸಂಸದ ಯದುವೀರ್ ಒಡೆಯರ್ ಹೇಳಿದ್ದಾರೆ. ಮಾದಾಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2028ರಲ್ಲಿ ಕರ್ನಾಟಕದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿಯೂ ಬಂಗಾಲದ ಮಾದರಿಯನ್ನು ಅನುಸರಿಸಿ ಬಿಜೆಪಿ ಕಾರ್ಯಕರ್ತರ ಪಡೆಯೊಂದಿಗೆ ಮತದಾರರ ಮನೆ ಮನ ತಲುಪಲಿದೆ. ಈ ಮೂಲಕ ಜನವಿರೋಧಿ ಕಾಂಗ್ರೆಸ್ ಸರ್ಕಾರದ ಅಂತ್ಯವಾಗಲಿದೆ ಎಂದೂ ಯದುವೀರ್ ಹೇಳಿದರು.

ಕ್ರೇನ್ ಡಿಕ್ಕಿ : ಸ್ಕೂಟರ್ ಸವಾರ ದುರ್ಮರಣ

ಬೆಳ್ತಂಗಡಿ: ಕ್ರೇನ್ ವಾಹನ ದ್ವಿಚಕ್ರ ವಾಹನದ ಹಿಂಭಾಗಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಸವಾರ ಸ್ಥಳದಲ್ಲೇ ದುರ್ಮರಣ ಹೊಂದಿದ ಘಟನೆ ಬೆಳ್ತಂಗಡಿ ತಾಲೂಕಿನ ಬೆಳಾಲು ಪೇಟೆಯಲ್ಲಿ ಸಂಭವಿಸಿದೆ. ಬಳಂಜ ಗ್ರಾಮದ ಬಳಂಜ ನಿವಾಸಿ ಜಯ ಮೇಸ್ತ್ರಿ(49) ಮೃತಪಟ್ಟರಾಗಿದ್ದಾರೆ. ಇವರು ಬೆಳಾಲು ಗ್ರಾಮದ ಬಳಿ ಬಾಡಿಗೆ ಮನೆಯಲ್ಲಿ ವಾಸವಾಗಿ ರಬ್ಬರ್ ಟ್ಯಾಪಿಂಗ್ ಕೆಲಸ ಮಾಡುತ್ತಿದ್ದರು.

ಆಲಿವ್ ರಿಡ್ಲೆ ಕಡಲಾಮೆ ಸಂತತಿ ಸಂರಕ್ಷಣೆಗೆ ವಿಶೇಷ ಒತ್ತು ನೀಡಿದ ಅರಣ್ಯ ಇಲಾಖೆ

2 ವರ್ಷದಲ್ಲಿ 2,392 ಮರಿ ಸಂರಕ್ಷಣೆ

ಮಂಗಳೂರು : 'ಆಲಿವ್ ರಿಡ್ಲೇ'... ಈ ಹೆಸರು ಈಗ ಕರಾವಳಿಯಲ್ಲಿ ಚಿರಪರಿಚಿತ. ಅಪೂರ್ವ ಪ್ರಬೇಧದ ಈ ಕಡಲಾಮೆ ಸಂರಕ್ಷಣೆಗೆ ಅರಣ್ಯ ಇಲಾಖೆ ವಿಶೇಷ ಒತ್ತು ನೀಡಿದೆ. ಕಳೆದ ಎರಡು ವರ್ಷಗಳಲ್ಲಿ 2,392 ಆಲಿವ್ ರಿಡ್ಲೇ ಮರಿಗಳನ್ನು ಸಂರಕ್ಷಿಸಿ ಕಡಲಿಗೆ ಬಿಡುವ ಕಾರ್ಯವನ್ನು ಮಾಡಲಾಗಿದೆ.

2024-25ನೆ ಸಾಲಿನಲ್ಲಿ 24 ಪ್ರದೇಶಗಳಲ್ಲಿ ಕಡಲಾಮೆಗಳು ಮರಿ ಹಾಕಲು ಗೂಡಿನ ವ್ಯವಸ್ಥೆಯನ್ನು ಮಾಡಿ 1842 ಮರಿಗಳನ್ನು ಸಂರಕ್ಷಿಸಿ ಸಮುದ್ರಕ್ಕೆ ಸೇರಿಸುವ ಕಾರ್ಯ ನಡೆಸಲಾಗಿತ್ತು. 2025-26ನೆ ಸಾಲಿನಲ್ಲಿ ಈವರೆಗೆ 7 ಗೂಡುಗಳಲ್ಲಿ 820 ಮೊಟ್ಟೆಗಳನ್ನು ಸಂರಕ್ಷಿಸಿ ಅದರಿಂದ ಹೊರಬಂದ 550 ಕಡಲಾಮೆಗಳನ್ನು ಸಮುದ್ರಕ್ಕೆ ಬಿಡುವ ಕಾರ್ಯವನ್ನು ಅರಣ್ಯ ಇಲಾಖೆ ಮಾಡಿದೆ.

ಅಳಿವಿನಂಚಿನಕ ಆಲಿವ್!

ಆಲಿವ್ ರಿಡ್ಲೇ ಕಡಲಾಮೆ ಸದ್ಯ ಅಳಿವಿನಂಚಿನಲ್ಲಿರುವ ಕಡಲಾಮೆ ಎಂದೇ ಗುರುತಿಸಿಕೊಂಡಿದೆ. ಹಾಗಾಗಿ ಇದರ ಉಳಿವಿಗೆ ಇನ್ನಿಲ್ಲದ ಪ್ರಯತ್ನ ನಡೆಯುತ್ತಲೇ ಇದೆ. ಕಡಲಾಮೆ ಕಳ್ಳರಿಗೆ ಕಡಿವಾಣ ಹಾಕಿರುವ ಇಲಾಖೆ ಇವುಗಳ ಸಂರಕ್ಷಣೆಗೆ ಪಣ ತೊಟ್ಟಿದೆ. ಕಳೆದ ಮೂರು ವರ್ಷಗಳಿಂದ ಇದಕ್ಕಾಗಿ ವಿಶೇಷ ಪ್ರಯತ್ನ ನಡೆಯುತ್ತಿದೆ. ಮಂಗಳೂರು ವಲಯ ಅರಣ್ಯ ಇಲಾಖೆ ಹಾಗೂ ಕೋಸ್ಟಲ್ ಮತ್ತು ಮರೈನ್ ಇಕೋಸಿಸ್ಟಮ್ ಘಟಕದಿಂದ ಕಡಲಾಮೆಗಳ ಸಂತಾನಾಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗುತ್ತಿದೆ.



ಅಳಿವಿನಂಚಿನಲ್ಲಿರುವ ಈ ಆಲಿವ್ ರಿಡ್ಲೇ ಕಡಲಾಮೆಗಳು ಮೊಟ್ಟೆ ಇಡಲು ಕಡಲ ತೀರಕ್ಕೆ ಭೇಟಿ ನೀಡುವ ಸಂದರ್ಭ ಅವುಗಳು ಮೊಟ್ಟೆ ಇಡಲು ಬರುವ ಜಾಗಗಳನ್ನು ಗುರುತಿಸಿ ಸಂರಕ್ಷಣೆಯನ್ನು ಒದಗಿಸಲಾಗುತ್ತದೆ.

ಎಲ್ಲೆಲ್ಲಿ ಮೊಟ್ಟೆಗಳ ಸಂರಕ್ಷಣೆ

ಮಂಗಳೂರಿನ ಸಸಿಹಿತ್ಲು, ಬೆಂಗರೆ, ಇಡ್ಯಾ ಬೀಚ್ ವ್ಯಾಪ್ತಿಯಲ್ಲಿ ಈ ಕಡಲಾಮೆಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದಿದ್ದು, ಆ ಭಾಗದಲ್ಲಿ ಮೊಟ್ಟೆಗಳ ಸಂರಕ್ಷಣಾ ಕಾರ್ಯ ನಡೆದಿದೆ.

ಅರಣ್ಯ ಇಲಾಖೆಯ ಸಹಕಾರದಲ್ಲಿ ನಗರದ ಕೋಸ್ಟಲ್ ಮತ್ತು ಮರೈನ್ ಇಕೋಸಿಸ್ಟಮ್ ಘಟಕವು ಆ ವರ್ಷ ಕಡಲಾಮೆ ಕಂಡು ಬಂದ 21 ಪ್ರದೇಶಗಳನ್ನು ಗುರುತಿಸಿ ಅವುಗಳು ಇಟ್ಟು ಹೋದ ಮೊಟ್ಟೆಗಳ ಸಂರಕ್ಷಣೆ ಕಾರ್ಯ ನಡೆಸಿತ್ತು. ಈ ಹಿಂದೆ 21 ಕಡೆಗಳಲ್ಲಿ 1958 ಮೊಟ್ಟೆಗಳಲ್ಲಿ 927 ಮರಿ ಆಮೆಗಳು ಹೊರಬಂದಿದ್ದು, ಅವುಗಳನ್ನು ಸುರಕ್ಷಿತವಾಗಿ ಸಮುದ್ರಕ್ಕೆ ಸೇರಿಸುವ ಕಾರ್ಯ ನಡೆಸಲಾಗಿತ್ತು ಎಂದು ಮಂಗಳವಾರ ಶಾಸಕ ಡಾ. ಭರತ್ ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆದ ಮಂಗಳೂರು ತಾಪಂ ಕೆಡಿಪಿ ಸಭೆಯಲ್ಲಿ ಮಂಗಳೂರು ವಲಯ ಅರಣ್ಯ ಸಂರಕ್ಷಣಾಧಿಕಾರಿ ರಾಜೇಶ್ ಬಳಿಗಾರ್ ಮಾಹಿತಿ ನೀಡಿದ್ದಾರೆ.

> **ಕಳೆದ ಮೂರು ವರ್ಷಗಳಿಂದ ಕಡಲಾಮೆಗಳ ಚಲನವಲನ ಗಮನಿಸಿ ಅವುಗಳ ಮೊಟ್ಟೆಗಳನ್ನು ಸಂರಕ್ಷಿಸಿ ಮರಿಗಳನ್ನು ಸಮುದ್ರ ಸೇರಿಸುವ ಕಾರ್ಯ ನಡೆಸಲಾಗುತ್ತಿದೆ. ಆದರೆ ಕಳೆದೆರಡು ವರ್ಷಗಳಿಗೆ ಹೋಲಿಕೆ ಮಾಡಿದರೆ ಈ ಬಾರಿ ಕೇವಲ 7 ಕಡೆಗಳಲ್ಲಿ ಮಾತ್ರವೇ ಕಡಲಾಮೆಗಳ ಆಗಮನವಾಗಿದೆ. ಶೇ.60ರಷ್ಟು ಪ್ರಮಾಣದಲ್ಲಿ ಕಡಲಾಮೆಗಳ ಆಗಮನದಲ್ಲಿ ಇಳಿಕೆ ಕಂಡು ಬಂದಿದೆ.**
>
> ■ **ರಾಜೇಶ್ ಬಳಿಗಾರ್, ವಲಯ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು**

75 ವರ್ಷ ಜೀವಿತಾವಧಿ

ಸುಮಾರು 75 ವರ್ಷಗಳ ಜೀವಿತಾವಧಿಯನ್ನು ಹೊಂದಿರುವ ಆಲಿವ್ ರಿಡ್ಲೇ ಆಮೆಗಳು ಅಳಿವಿನಂಚಿನಲ್ಲಿದ್ದು, 2023ರ ಡಿಸೆಂಬರ್ 31ರಂದು ಮಂಗಳೂರಿನ ಸಸಿಹಿತ್ಲು ಕಡಲತೀರದಲ್ಲಿ ಮೊದಲ ಬಾರಿಗೆ ಕಂಡುಬಂದಿತ್ತು. 2024-25ನೆ ಸಾಲಿನಲ್ಲಿ 24 ಕಡೆಗಳಲ್ಲಿ ಹೆಣ್ಣು ಆಲಿವ್ ರಿಡ್ಲೇ ಆಮೆಗಳು 2490 ಮೊಟ್ಟೆಗಳನ್ನು ಇರಿಸಿದ್ದು, ಅವುಗಳಿಂದ ಹೊರಬಂದ 1842 ಮರಿಗಳನ್ನು ಕಡಲಿಗೆ ಸೇರಿಸುವ ಕಾರ್ಯ ನಡೆಸಲಾಗಿತ್ತು.

ಸಾಮಾನ್ಯವಾಗಿ ನವೆಂಬರ್‌ನಿಂದ ಮೇ ತಿಂಗಳ ಅವಧಿಯಲ್ಲಿ ಕಡಲಿನಿಂದ ಹೆಣ್ಣು ಆಲಿವ್ ರಿಡ್ಲೇಗಳು ಮೊಟ್ಟೆ ಇಡಲು ದಡ ಸೇರಿ ಸುರಕ್ಷಿತ ತಾಣಗಳನ್ನು ಹುಡುಕಿಕೊಂಡು ಬರುತ್ತವೆ. ಸುಮಾರು 2 ಅಡಿಯಷ್ಟು ಆಳದ ಗುಂಡಿ ಮಾಡಿ ಅದರಲ್ಲಿ ಮೊಟ್ಟೆ ಇರಿಸಿ ಮಣ್ಣು ಹಾಕಿ ತೆರಳುತ್ತವೆ. ಮೊಟ್ಟೆ ಇಟ್ಟ 45ರಿಂದ 60 ದಿನಗಳಲ್ಲಿ ಮೊಟ್ಟೆಯೊಡೆದು ಮರಿಗಳು ಹೊರ ಬರುತ್ತವೆ. ಮೊಟ್ಟೆ ಇಡುವ ಪ್ರಕ್ರಿಯೆ ಹಾಗೂ ಮೊಟ್ಟೆಯೊಡೆದು ಹೊರ ಬರುವ ಪ್ರಕ್ರಿಯೆಯೂ ಸಾಮಾನ್ಯವಾಗಿ ರಾತ್ರಿ ಹೊತ್ತಿನಲ್ಲಿ ನಡೆಯುತ್ತದೆ. ಕೋಟೆಕಾರಿನಿಂದ ಸಸಿಹಿತ್ಲುವಿನವರೆಗಿನ ಕಡಲ ತೀರವನ್ನು ಕಡಲಾಮೆಗಳ ಆಗಮನದ ಪ್ರದೇಶವಾಗಿ ಗುರುತಿಸಲಾಗಿದೆ.

ದಡಗಳಲ್ಲಿ ಇರಿಸಲಾಗುವ ದೋಣಿಗಳ ಸಮೀಪ ಇತರ ಪ್ರಾಣಿ, ಪಕ್ಷಿಗಳಿಂದ ಹಾನಿಯಾಗದಂತೆ ಎಚ್ಚರಿಕೆ ವಹಿಸಿಕೊಂಡು ಗುಂಡಿ ಮಾಡಿ ಮೊಟ್ಟೆ ಇಡುವ ಹೆಣ್ಣು ಆಲಿವ್ ರಿಡ್ಲೇಗಳು ಬಳಿಕ ಸಮುದ್ರ ಸೇರುತ್ತವೆ. ಈ ಜಾಗಗಳನ್ನು ಗುರುತಿಸಿ ಬಲೆಗಳ ಸಂರಕ್ಷಣೆಯ ಜತೆಗೆ ಸಿಸಿ ಕ್ಯಾಮರಾಗಳನ್ನೂ ಅಳವಡಿಸಿ ಮೊಟ್ಟೆಗಳ ಸಂರಕ್ಷಣೆಗಾಗಿ ವಾಚರ್‌ಗಳನ್ನು ನೇಮಕ ಮಾಡಲಾಗುತ್ತದೆ.



ಇತಿಹಾಸ ಪ್ರಸಿದ್ಧ ಕಾರಣಿಕ ಕ್ಷೇತ್ರ ಪಡುಬಿದ್ರಿ, ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಮಹಾರಥೋತ್ಸವಕ್ಕೆ ಧ್ವಜಾರೋಹಣವು ಮಂಗಳವಾರ ಜರಗಿತು. ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರಗಲಿದ್ದು, ಮೇ 12ರಂದು 11 ಗಂಟೆಗೆ ರಥಾರೋಹಣ, ಮಹಾ ರಥೋತ್ಸವ, 12.30ಕ್ಕೆ ಮಹಾ ಅನ್ನಸಂತರ್ಪಣೆ ನಡೆಯಲಿದೆ.

ಟ್ಯಾಂಕರ್ – ಬೈಕ್ ನಡುವೆ ಭೀಕರ ಅಪಘಾತ: ಇಬ್ಬರು ಸ್ಥಳದಲ್ಲೇ ಸಾವು

ಪುತ್ತೂರು: ಸುಬ್ರಹ್ಮಣ್ಯ- ಮಂಜೇಶ್ವರ ಹೆದ್ದಾರಿ ಸವಣೂರು ಸಮೀಪದ ಚಾವಳ್ಳ ತಿರುವಿನಲ್ಲಿ ಮಂಗಳವಾರ ಸಂಜೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಇನ್ನಿಬ್ಬರು ಗಾಯಗೊಂಡಿರುವ ಘಟನೆ ನಡೆದಿದೆ.





ಇದೇ ಸಂದರ್ಭ ಇನ್ನೊಂದು ಬೈಕ್‌ನಲ್ಲಿ ಹಿಂಬದಿಯಿಂದ ಬರುತ್ತಿದ್ದವರಿಗೂ ಕೂಡ ಗಾಯಗಳಾಗಿವೆ. ಬಂಟ್ವಾಳ ತಾಲೂಕಿನ ಮಿತ್ತೂರು ಬೊಳ್ಳರ ಮಜಲು ನಿವಾಸಿ ಪುರಂದರ ಎಂಬವರ ದ್ವಿತೀಯ ಪುತ್ರ ಯಜ್ಞೇಶ್ (21) ಹಾಗೂ ಆರ್ಲಪದವು ನೋಣಯ್ಯ ಭರಣ್ಯ ಎಂಬವರ ಪುತ್ರ ಜಗನ್(20) ಮೃತಪಟ್ಟ ಯುವಕರು. ಈ ಇಬ್ಬರು ಯುವಕರು ಕಡಬ ತಾಲೂಕಿನ ಆಲಂಗಾರಿಗೆ ಕೆಲಸದ ನಿಮಿತ್ತ ತೆರಳಿದ್ದರು. ಸಂಜೆ 5 ಗಂಟೆ ಸುಮಾರಿಗೆ ವಾಪಸ್ಸು ಮನೆಗೆ ಮರಳುತ್ತಿದ್ದಾಗ, ಚಾವಳ್ಳ ತಿರುವಿನಲ್ಲಿ ಎದುರಿನಿಂದ ಬಂದ ಮುಗೆರೋಡಿ ಕನ್ಸ್ಟ್ರಕ್ಷನ್‌ಗೆ ಸೇರಿದ ನೀರಿನ ಟ್ಯಾಂಕರ್ ಹಾಗೂ ಬೈಕ್ ನಡುವೆ ಡಿಕ್ಕಿ ಸಂಭವಿಸಿದೆ. ಅಲಂಕಾರಿನಲ್ಲಿ ನಡೆಯುತ್ತಿದ್ದ ಕಾಮಗಾರಿಗೆ ಸವಣೂರು ಕಡೆಯಿಂದ ನೀರು ಪೂರೈಸುತ್ತಿದ್ದ ಟ್ಯಾಂಕರ್ ಚಾಲಕ, ಸ್ಕೂಟರ್‌ಗೆ ಡಿಕ್ಕಿಯಾಗುವುದನ್ನು ತಪ್ಪಿಸಲು ವಾಹನವನ್ನು ಎಡಕ್ಕೆ ತಿರುಗಿಸಿದ್ದಾನೆ. ಈ ವೇಳೆಯೆ ಬೈಕ್ ಟ್ಯಾಂಕರ್‌ನ ಚಕ್ರದ ಅಡಿಗೆ ಸಿಲುಕಿದ ಪರಿಣಾಮ ಸವಾರ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಈ ಸಂದರ್ಭ ನಿಯಂತ್ರಣ ತಪ್ಪಿದ ಟ್ಯಾಂಕರ್ 90 ಡಿಗ್ರಿ ತಿರುಗಿ ರಸ್ತೆ ಪಕ್ಕದ ಕಂದಕಕ್ಕೆ ಉರುಳಿದೆ.



> **ಜಗನ್ ಹೋಟೆಲ್ ಮೆನೇಜ್ಮೆಂಟ್ ವಿದ್ಯಾರ್ಥಿ**
>
> ಜಗನ್ ಪುತ್ತೂರಿನ ಅಕ್ಷಯ ಕಾಲೇಜಿನ ಅಂತಿಮ ಪದವಿ ಹೋಟೆಲ್ ಮೆನೇಜ್‌ಮೆಂಟ್ ವಿದ್ಯಾರ್ಥಿಯಾಗಿದ್ದಾನೆ. ಇತ್ತೀಚೆಗೆ ಇಂಟರ್ನ್ ಶಿಪ್ ಗೆ ಆಸ್ಟ್ರೇಲಿಯಾಗೆ ತೆರಳಿ ಕೆಲದಿನಗಳ ಹಿಂದೆ ತವರಿಗೆ ಆಗಮಿಸಿದ್ದನು.

ಅಪಘಾತದ ಭೀಕರತೆ ಎಷ್ಟಿತ್ತೆಂದರೆ, ಅದೇ ಹಾದಿಯಲ್ಲಿ ಬರುತ್ತಿದ್ದ ಮತ್ತೊಂದು ಬೈಕ್ ಸವಾರರು ಅಪಘಾತವನ್ನು ಕಂಡು ಗಾಬರಿಯಿಂದ ಬ್ರೇಕ್ ಹಾಕಿದಾಗ ಬೈಕ್ ಸ್ಕಿಡ್ ಆಗಿದೆ. ಈ ಘಟನೆಯಲ್ಲಿ ಬೈಕ್‌ನಲ್ಲಿದ್ದ ಇಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಘಟನಾ ಸ್ಥಳಕ್ಕೆ ಬೆಳ್ಳಾರೆ ಪೊಲೀಸರು ಭೇಟಿ ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ, ಬಳಿಕ ಮನೆಯವರಿಗೆ ಹಸ್ತಾಂತರಿಸಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ ಸಂಗಮ
ರಾಷ್ಟ್ರ ಜಾಗೃತಿಯ ದೈನಿಕ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಕೊಡಗಿನ ಎನ್‌ಸಿಸಿ ಕೆಡೆಟ್‌ಗಳಿಗೆ ಸಿಕ್ಕಿತು 'ಶಾರ್ಟ್ ರೇಂಜ್ ರೈಫಲ್ ಫೈರಿಂಗ್ ರೇಂಜ್' ಕೊಡುಗೆ



ಮಡಿಕೇರಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದ ಮೂಲಕ 5.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ 'ಶಾರ್ಟ್ ರೇಂಜ್ ರೈಫಲ್ ಫೈರಿಂಗ್ ರೇಂಜ್' ಅನ್ನು 19ನೇ ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಕಮಾಂಡಿಂಗ್ ಆಫೀಸರ್ ಕರ್ನಲ್ ರೆಜಿತ್ ಮುಕುಂದನ್ ಮತ್ತು ಕೊಡಗು ವಿಶ್ವವಿದ್ಯಾನಿಯದ ಉಪ ಕುಲಪತಿ ಪ್ರೊ. ಅಶೋಕ್ ಸಂಗಪ್ಪ ಆಲೂರ ಉದ್ಘಾಟಿಸಿದರು.

‘ಅಮೃತ’ದ ಬೇಡಿಕೆ ಏರಿಸಿದೆ ಸುಡು ಬಿಸಿಲು
ಥಂಡ ಥಂಡ ಬೊಂಡ!
ಹಣ್ಣು ಹಂಪಲಿಗೂ ಈಗ ಭರ್ಜರಿ ಬೇಡಿಕೆ

ಮಂಗಳೂರು: ಕರಾವಳಿ ಭಾಗದಲ್ಲಿ ಈಗ ದಿನದಿಂದ ದಿನಕ್ಕೆ ಬಿಸಿಲಿನ ಝಳ ಹೆಚ್ಚಳವಾಗುತ್ತಿದ್ದು, ಈ ನಡುವೆ ದಾಹ ತಣಿಸಿಕೊಳ್ಳಲು ಎಲ್ಲೆಡೆ ಎಳನೀರಿಗೆ ಸಖತ್ ಬೇಡಿಕೆ ಕಾಣಿಸಿಕೊಂಡಿದೆ.

ನೈಸರ್ಗಿಕ ಪಾನೀಯಗಳಿಗೆ ಒತ್ತು

ಎಲ್ಲೆಡೆ ಸಾಮಾಜಿಕ ಜಾಲತಾಣಗಳಲ್ಲಿ ಈಗ ವ್ಯಾಪಕವಾಗಿ ಕಾಣಿಸಿಕೊಳ್ಳುತ್ತಿರುವ ವಿವಿಧ ಜಾಗೃತಿ ಪೋಸ್ಟ್‌ಗಳ ಹಿನ್ನೆಲೆಯಲ್ಲಿ ಮಾರುಕಟ್ಟೆಯಲ್ಲಿ ಸಿಗುವ ಬಗೆಬಗೆಯ ಫ್ಲೇವರ್ಡ್ ತಂಪು ಪಾನೀಯಗಳಿಂದ ಒಂದಿಷ್ಟು ಹಿಂದಕ್ಕೆ ಸರಿಯುತ್ತಿರುವ ಜನತೆ ಈಗ ನೈಸರ್ಗಿಕ ಪಾನೀಯಗಳತ್ತ ಮುಖಮಾಡುತ್ತಿದ್ದಾರೆ.

ಬೆಲೆ ಏರಿಸಿಕೊಂಡ ಎಳನೀರು

ಎಳನೀರಿಗೆ ಭಾರೀ ಬೇಡಿಕೆ ಬಂದಿರುವ ಬೆನ್ನಲ್ಲೇ ಎಳನೀರಿನ ಬೆಲೆಯೂ ಕೂಡಾ ಏರಿಕೆಯಾಗಿದ್ದು, ಸಾಮಾನ್ಯ ತಳಿಯ ಎಳನೀರೊಂದಕ್ಕೆ 70 ರಿಂದ 75 ರೂ.ಗಳಾಗಿವೆ. ಇನ್ನು ಗೆಂದಾಳಿ ತಳಿ 80ರಿಂದ 85 ರೂಪಾಯಿಗೆ ಮಾರಾಟವಾಗುತ್ತಿವೆ.

ಪ್ರಾತಿನಿಧಿಕ ಚಿತ್ರ



ಬಲೆ ಬಲೆ... ಪುನರ್ಪುಳಿ, ಎಳ್ಳು, ರಾಗಿ ಪರ್ಕ!

ಸೆಕೆಗೆ ಮೈ ಬೆವರಿಳಿಯುತ್ತಿದ್ದರೆ ದಾಹ ತಣಿಸಿಕೊಳ್ಳಲು ಈಗ ಅಂಗಡಿಗಳಲ್ಲಿ ಸಿಗುತ್ತಿರುವ ಪುನರ್ಪುಳಿ, ಎಳ್ಳು, ರಾಗಿ ಜ್ಯೂಸ್‌ಗಳು ‘ಅಮೃತ’ವಾಗುತ್ತಿವೆ. ಈ ಪಾನೀಯಗಳು ರಾಸಾಯನಿಕ ರಹಿತವಾಗಿ ಆರೋಗ್ಯಕ್ಕೂ ಉತ್ತಮವಾಗಿವೆ. ಹೀಗಾಗಿ ಜನತೆ ಇವುಗಳತ್ತ ಹೆಚ್ಚು ಒಲವು ತೋರುತ್ತಿರುವುದು ಕಂಡುಬರುತ್ತಿದೆ. ಜೊತೆಗೆ ಮಜ್ಜಿಗೆ, ಲಸ್ಸಿ ಮೊದಲಾದವುಗಳಿಗೂ ಎಲ್ಲೆಡೆ ಹೆಚ್ಚಿನ ಬೇಡಿಕೆ ಕಂಡುಬರುತ್ತಿದೆ. ಈ ಬೆಳವಣಿಗೆಗಳಿಂದ ಮನೆಗಳಲ್ಲಿಯೇ ತಯಾರಿಸುವ ವ್ಯಾಪಾರಿಗಳು ಹೆಚ್ಚು ಖುಷ್ ಆಗಿದ್ದಾರೆ.

ಬೆಲೆ ಏರಿಕೆ ನಡುವೆಯೂ ಸಾಗಿದೆ ಭರಪೂರ ಖರೀದಿ

ಹಣ್ಣು ಹಂಪಲುಗಳಿಗೂ ಈಗ ಹೆಚ್ಚುತ್ತಿದೆ ಬೇಡಿಕೆ

ಈಗ ಮಾರುಕಟ್ಟೆಯಲ್ಲಿ ಹಣ್ಣು ಹಂಪಲುಗಳಿಗೆ ಕೂಡಾ ಬೇಡಿಕೆ ಹೆಚ್ಚುತ್ತಿವೆ. ಕಲ್ಲಂಗಡಿ, ಮೂಸಂಬಿ, ಕಿತ್ತಳೆ ಮೊದಲಾದವುಗಳಿಗೆ ಈಗ ಹೆಚ್ಚಿ ಬೇಡಿಕೆ ಇದೆ ಎನ್ನುತ್ತಾರೆ ವ್ಯಾಪಾರಿಗಳು.

ದಾಖಲೆ ಸಂಖ್ಯೆಯಲ್ಲಿ ಕಲ್ಲಂಗಡಿ ಪೂರೈಕೆ!

ಈ ಬಾರಿ ಉತ್ತಮ ಇಳುವರಿಯೂ ಆಗಿರುವ ಹಿನ್ನೆಲೆಯಲ್ಲಿ ಮಾರುಕಟ್ಟೆಗೆ ಕಲ್ಲಂಗಡಿ ಹಣ್ಣುಗಳ ಪೂರೈಕೆಯೂ ದಾಖಲೆಯ ಪ್ರಮಾಣದಲ್ಲಿ ನಡೆಯುತ್ತಿದೆ.

ಮನಪಾ ವ್ಯಾಪ್ತಿಯಲ್ಲಿ ಬೌಬೌ ಭೀತಿ
ನಾಲ್ಕು ತಿಂಗಳ ಅವಧಿ: 8,456 ಅಟ್ಯಾಕ್‌ಗಳು
ಕೆಡಿಪಿ ಸಭೆಯಲ್ಲೂ ಪ್ರತಿಧ್ವನಿ

ಮಂಗಳೂರು: ಮಂಗಳೂರು ತಾಲೂಕು ಪಂಚಾಯತ್ ವ್ಯಾಪ್ತಿಯಲ್ಲಿ ಜನವರಿಯಿಂದ ಎಪ್ರಿಲ್‌ವರೆಗಿನ ನಾಲ್ಕು ತಿಂಗಳಲ್ಲಿ 8,456 ನಾಯಿ ಕಡಿತದ ಪ್ರಕರಣಗಳು ದಾಖಲಾಗಿವೆ. ಮಂಗಳೂರು ನಗರ ವ್ಯಾಪ್ತಿಯಲ್ಲಿ 50 ಸಾವಿರಕ್ಕೂ ಅಧಿಕ ಬೀದಿನಾಯಿಗಳಿರುವುದನ್ನು ಪಾಲಿಕೆ ಪತ್ತೆ ಹಚ್ಚಿದೆ. ಈ ಪೈಕಿ ಹಲವೆಡೆ ನಾಯಿಕಡಿತ ಪ್ರಕರಣ ಕಂಡು ಬರುತ್ತಿದ್ದು, ಪಾಲಿಕೆ ಗಂಭೀರವಾಗಿ ಪರಿಗಣಿಸಬೇಕಿದೆ.

ಆಡಳಿತ ಎಚ್ಚೆತ್ತುಕೊಳ್ಳಬೇಕಿದೆ

ಮಂಗಳವಾರ ಮಂಗಳೂರು ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯಲ್ಲೂ ಇದೇ ವಿಷಯ ಪ್ರತಿಧ್ವನಿಸಿದೆ. ತಾಲೂಕಿನಲ್ಲಿ ಅತ್ಯಧಿಕ ನಾಯಿ ಕಡಿತ ಪ್ರಕರಣಗಳು ದಾಖಲಾಗುತ್ತಿರುವುದರ ಬಗ್ಗೆ ಆಡಳಿತ ಎಚ್ಚೆತ್ತುಕೊಳ್ಳಬೇಕಿದೆ ಎಂಬ ಆಗ್ರಹ ಈ ಸಂದರ್ಭದಲ್ಲಿ ಕೇಳಿಬಂದಿದೆ.

ಬೀದಿ ನಾಯಿ ಕಡಿತದ ಜೊತೆಗೆ ಮನೆಗಳಲ್ಲಿ ಸಾಕು ನಾಯಿಗಳು ಮಕ್ಕಳನ್ನು ಕಚ್ಚುವುದು ಹೆಚ್ಚಳವಾಗಿ ಕಂಡು ಬರುತ್ತಿವೆ. 1000ಕ್ಕೂ ಅಧಿಕ ಪ್ರಕರಣಗಳು ಬೀದಿ ನಾಯಿಗಳಿಂದ ಕಡಿತ, ದಾಳಿಯದ್ದಾಗಿವೆ. »ಪುಟ 6



ಹೆಗ್ಗಣ ಕಡಿತದಿಂದಲೂ ರೇಬೀಸ್ ಬರಬಹುದು

ರೇಬಿಸ್‌ಗೊಳಗಾದ ನಾಯಿ ಕಡಿತದಿಂದ ಮಾತ್ರ ರೇಬೀಸ್ ಹರಡಬೇಕೆಂದೇನಿಲ್ಲ, ಸಾಕು ನಾಯಿಗಳಿಗೆ ಹೆಗ್ಗಣಗಳು ಕಚ್ಚುವುದರಿಂದಲೂ ರೇಬೀಸ್ ಬರಬಹುದು. ಸಾಕು ನಾಯಿ ಬಗ್ಗೆಯೂ ಜಾಗ್ರತೆ ಅಗತ್ಯ. ಈ ಬಗ್ಗೆ ಸಾರ್ವಜನಿಕವಾಗಿ ಜಾಗೃತಿ ಕಾರ್ಯಕ್ರಮಗಳ ಮೂಲಕ ಸೂಚನೆ ನೀಡಲಾಗುತ್ತಿದೆ ಎಂದು ಅಧಿಕಾರಿಗಳು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಸುತ್ತ ಮುತ್ತ

ಮರೀಚಿಕೆಯಾದ ಬೇಸಿಗೆ ಮಳೆ: ದಕ್ಷಿಣ ಕನ್ನಡದಲಿ ಸಂಜೆ ಬಳಿವೂ ಸೆಕೆ ಸೆಕೆ!

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಪಮಾನ ಮಂಗಳವಾರ 35 ಡಿಗ್ರಿ ಸೆಲ್ಸಿಯೆಸ್ ದಾಖಲಾಗಿದೆ. ಈ ನಡುವೆ ಬೇಸಿಗೆ ಮಳೆ ಮರೀಚಿಕೆಯಾಗುತ್ತಿದ್ದು, ಸುಡು ಬಿಸಿಲು ನಾಗರಿಕರನ್ನು ಹೈರಾಣಾಗಿಸುತ್ತಿದೆ.

ಸಂಜೆಯ ಬಳಿಕವೂ ಸೆಕೆ ಜೋರು

ಈ ನಡುವೆ ಕನಿಷ್ಠ ತಾಪಮಾನದಲ್ಲೂ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಸಂಜೆ ಬಳಿಕ ರಾತ್ರಿಯೂ ಎಲ್ಲೆಡೆ ಸೆಕೆ ಮುಂದುವರಿಯುತ್ತಿದೆ. ಜಿಲ್ಲೆಯಲ್ಲಿ ಕನಿಷ್ಠ ತಾಪಮಾನ 28 ಡಿಗ್ರಿ ಸೆಲ್ಸಿಯೆಸ್ ದಾಖಲಾಗಿತ್ತು.

ಟೈಮಿಂಗ್ ವಿಚಾರದಲಿ ಬಸ್ ನಿರ್ವಾಹಕರ ನಡುವೆ ಹೊಡೆದಾಟ: ದೂರು

ಮಂಗಳೂರು: ಬಸ್ಸಿನ ಟೈಮಿಂಗ್ ವಿಚಾರವಾಗಿ ಬಜಪೆ ಬಸ್ಸು ನಿಲ್ದಾಣದಲ್ಲಿ ಖಾಸಗಿ ಬಸ್ಸಿನ ಚಾಲಕ, ನಿರ್ವಾಹಕರ ನಡುವೆ ಹೊಡೆದಾಟ ನಡೆದಿದ್ದು, ಬಜಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಖಾಸಗಿ ಬಸ್ಸೊಂದರ ಚಾಲಕ ಶ್ರೀನಿವಾಸ (26) ಮತ್ತು ಇನ್ನೊಂದು ಬಸ್ಸಿನ ನಿರ್ವಾಹಕ ಸಂತೋಷ್ ಶೆಟ್ಟಿ (52) ಪರಸ್ಪರ ಹೊಡೆದಾಡಿಕೊಂಡವರು. ಘಟನೆಗೆ ಸಂಬಂಧಿಸಿ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕರಾವಳಿ ಜಿಲೆಗಳಲ್ಲಿ ಇಂದಿನಿಂದ ಗುಡುಗಿನ ಸಹಿತ ಮಳೆಯ ಸಾಧ್ಯತೆ?

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಹಾಗೂ ನೆರೆಯ ಕಾಸರಗೋಡು ಜಿಲ್ಲೆಗಳ ಒಂದೆರಡು ಕಡೆ ಇಂದಿನಿಂದ (ಮೇ 6) ಮುಂದಿನ ಒಂದೆರಡು ದಿನಗಳ ಕಾಲ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ದಟ್ಟವಾಗಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಉಳಿದ ಭಾಗಗಳಲ್ಲಿ ಒಣ ಹವೆ ಮುಂದುವರಿಯಲಿದ್ದು, ಉಷ್ಣಾಂಶದಲ್ಲಿ ಗಣನೀಯ ಏರಿಕೆ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಕರಾವಳಿಯ ಕೆಲವು ಜಿಲೆಗಳಲಿ ವಾಡಿಕೆಗಿಂತ 3 ಡಿಗ್ರಿ ಹೆಚ್ಚಳವಾದ ತಾಪ

ಮಂಗಳೂರು: ಕರಾವಳಿ ಭಾಗದ ಕೆಲವು ಜಿಲ್ಲೆಗಳಲ್ಲಿ ಈ ಬಾರಿ ವಾಡಿಕೆಗಿಂತ ಬರೋಬ್ಬರಿ 3 ಡಿಗ್ರಿ ಸೆಲ್ಸಿಯೆಸ್ ಹೆಚ್ಚಿನ ತಾಪಮಾನ ಕಂಡುಬಂದಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಹೇಳಿದೆ. ಉಳಿದ ಜಿಲ್ಲೆಗಳಲ್ಲಿ ಸದ್ಯ ಯಥಾಸ್ಥಿತಿ ಇದೆ.

ತರಕಾರಿ, ಮರಗೆಣಸು, ತೆಂಗು, ಕಂಗು ಎಲ್ಲಾ ಇಲ್ಲಿ ಮಟಾಶ್
ಕೃಷಿಭೂಮಿಯಲ್ಲಿ ಹಂದಿಗಳ ದರ್ಬಾರ್

ಕಾಸರಗೋಡು: ಮಲೆನಾಡು ಪ್ರದೇಶಗಳ ಕೃಷಿಕರು ಈಗ ಕಾಡುಹಂದಿಗಳ ಭೀತಿಯಿಂದ ಕಂಗೆಟ್ಟಿದ್ದಾರೆ. ಹಗಲು ರಾತ್ರಿಯೆನ್ನದೆ ಇಲ್ಲಿ ಕೃಷಿಕರ ಸಂಕಷ್ಟ ಮುಂದುವರಿಯುತ್ತಿದೆ. ಅರಣ್ಯ ಪ್ರದೇಶದ ಗಡಿಭಾಗಗಳಲ್ಲಿ, ಹೆಚ್ಚಿನ ಮನೆ, ಜನ ವಸತಿ ಪ್ರದೇಶ ಮಾತ್ರವಲ್ಲ ವಾಹನದಟ್ಟಣೆ ಇರುವ ರಸ್ತೆಗಳಲ್ಲೂ ಹಾಡು ಹಂದಿ ಓಡಾಟ ನಿರಂತರವಾಗಿದೆ.

ಗುಂಪು ಗುಂಪಾಗಿ ಮನೆಯತ್ತ ಬರುತ್ತವೆ

ಹಂದಿಗಳು ಗುಂಪಾಗಿ ಮನೆಗಳ ಪರಿಸರಕ್ಕೆ ಬರುತ್ತಿದ್ದು, ಮಹಿಳೆಯರು ಹಾಗೂ ಮಕ್ಕಳು ಹೆಚ್ಚಾಗಿ ಭಯಪಡುತ್ತಾರೆ. ಹೀಗೆ ಬರುವ ಕಾಡುಹಂದಿಗಳು ತೋಟಗಳನ್ನೆಲ್ಲ ಧ್ವಂಸ ಮಾಡುತ್ತಿದ್ದು, ಕೊಯ್ಲಿಗೆ ಸಜ್ಜಾದ ಭತ್ತದ ಗದ್ದೆ, ಫಸಲಿಗೆ ಬಂದ ಮರಗೆಣಸು, ತರಕಾರಿ, ತೆಂಗು, ಕಂಗು ಮೊದಲಾದವುಗಳನ್ನೆಲ್ಲಾ ಹಾನಿ ಮಾಡುತ್ತಿವೆ.

ಬಿದ್ದ ತೆಂಗಿನಕಾಯಿಯನ್ನೂ ಬಿಡಲ್ಲ

ತೆಂಗಿನಕಾಯಿ ಮರದಿಂದ ಬಿದ್ದರೆ ಅದನ್ನು ಬಿಡದೆ ತಿನ್ನುತ್ತದೆ. ಇದರಿಂದ ಬಿದ್ದ ತೆಂಗಿನ ಕಾಯಿ ಹಂದಿಪಾಲಾಗುತ್ತಿದೆ. »ಪುಟ 6



ಭತ್ತ ಕೃಷಿಯತ್ತ ನಿರಾಸಕ್ತಿ

ಕೆಸರು ನೀರು ಇರುವ ಗದ್ದೆಗೆ ಇಳಿದು ಉರುಳಿಕೊಂಡು ಪೈರನ್ನು ಧ್ವಂಸಗೊಳಿಸುತ್ತವೆ. ಇದರಿಂದಾಗಿ ಇಲ್ಲಿನ ಕೃಷಿಕರು ಈಗ ಭತ್ತ ಕೃಷಿಯಲ್ಲಿ ನಿರಾಸಕ್ತಿ ತಳೆಯುತ್ತಿರುವುದು ಕಂಡುಬರುತ್ತಿದೆ.

ರಬ್ಬರ್ ಟ್ಯಾಪಿಂಗ್‌ಗೂ ಕಾರ್ಮಿಕರ ಹಿಂದೇಟು

ಕಾಡುಹಂದಿಯ ಭಯದಿಂದ ರಬ್ಬರ್ ಟ್ಯಾಪಿಂಗ್‌ಗೆ ತೆರಳಲು ಕಾರ್ಮಿಕರು ಕೂಡಾ ಹಿಂಜರಿಯುತ್ತಿದ್ದಾರೆ. ಇದರಿಂದ ಅನೇಕ ತೋಟಗಳಲ್ಲಿ ಟ್ಯಾಪಿಂಗ್ ಸ್ಥಗಿತಗೊಂಡಿದೆ.

ಶರವು ದೇಗುಲದಲ್ಲಿ ಅಂಗಾರಕ ಸಂಕಷ್ಟಿ ಆಚರಣೆ



ಕರಾವಳಿ ಜಿಲ್ಲೆಯಾದ್ಯಂತ ಮಂಗಳವಾರ ವರ್ಷದ 2ನೇ ಅಂಗಾರಕ ಸಂಕಷ್ಟಿ ವ್ರತಾಚರಣೆ ಆಚರಿಸಲಾಯಿತು. ಶರವು ಶ್ರೀ ಮಹಾಗಣಪತಿ ದೇವಳದಲ್ಲಿ ವಿವಿಧ ಕಾರ್ಯಕ್ರಮ ನಡೆಯಿತು. ಬೆಳಗ್ಗಿನಿಂದಲೇ ಭಕ್ತಾದಿಗಳು ದೇವಳಕ್ಕೆ ಭೇಟಿ ನೀಡಿ ದೇವರಿಗೆ ಗರಿಕೆ, ಹಿಂಗಾರ, ಪಂಚಕಜ್ಜಾಯ, ಗಣಹೋಮ ಸೇವೆ ಸಲ್ಲಿಸಿದರು.

ಇದ್ದೂ ಇಲ್ಲದಂತಾಗಿದೆ ಗಂಗೊಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿ 13ನೇ ವಾರ್ಡ್‌ನ ಈ ಹಿಂದೂ ರುದ್ರಭೂಮಿ
ನೀರು, ವಿದ್ಯುತ್ ಬಿಡಿ, ಈ ಸ್ಮಶಾನದಲ್ಲಿ ಶವ ಸುಡಲು ಪೆಟ್ಟಿಗೆಯೂ ಇಲ್ಲ!

ಕುಂದಾಪುರ: ಗಂಗೊಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿ, 13ನೇ ವಾರ್ಡ್‌ನ ಹಿಂದೂ ರುದ್ರಭೂಮಿಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಕಾಡುತ್ತಿದ್ದು, ಇಲ್ಲಿನ ಗ್ರಾಮಸ್ಥರು ಮೃತಪಟ್ಟ ತಮ್ಮವರ ಅಂತ್ಯಸಂಸ್ಕಾರಕ್ಕೆ ಪರದಾಡುವ ಪರಿಸ್ಥಿತಿಯಿದೆ.

ಈ ಭಾಗದಲ್ಲಿ 500ಕ್ಕೂ ಮಿಕ್ಕಿ ಮನೆಗಳಿವೆ

ಗಂಗೊಳ್ಳಿಯ ಭಾಗದ 500ಕ್ಕೂ ಮಿಕ್ಕಿ ಮನೆಗಳಲ್ಲಿ ಯಾರಾದರೂ ಮೃತಪಟ್ಟರೆ ಈ ರುದ್ರಭೂಮಿಯಲ್ಲೇ ಸುಡುವುದು ಕ್ರಮ. ಆದರೆ, ಇಲ್ಲಿ ಅಂತ್ಯಸಂಸ್ಕಾರಕ್ಕಾಗಿ ಅಗತ್ಯ ಸೌಕರ್ಯವೇ ಇಲ್ಲ ಸ್ಥಿತಿಯಲ್ಲಿದೆ. ಕಳೆದ ಒಂದು ವರ್ಷದಿಂದ ಇಲ್ಲಿ ಯಾವುದೇ ಅಂತ್ಯಸಂಸ್ಕಾರ ನಡೆದಿಲ್ಲ ಎಂದು ಹೇಳಲಾಗುತ್ತಿದೆ.

ಏನೆಲ್ಲ ಇದೆ ಈ ರುದ್ರಭೂಮಿಯಲ್ಲಿ ಸಮಸ್ಯೆ ?

ಇಲ್ಲಿನ ರುದ್ರಭೂಮಿಯಲ್ಲಿ ಮುಖ್ಯವಾಗಿ ನೀರಿನ ಸೌಲಭ್ಯವಿಲ್ಲ, ಇಲ್ಲಿ ವಿದ್ಯುತ್ ವ್ಯವಸ್ಥೆಯಿಲ್ಲ, ಶವ ದಹನಕ್ಕೆ ಅಗತ್ಯವಾದ ಕಟ್ಟಿಗೆ ಸಂಗ್ರಹಿಸಿಡಲು ಸೂಕ್ತ ಕೋಣೆ ಇಲ್ಲದಿರುವುದು ಮಾತ್ರವಲ್ಲ, ಶವ ಸುಡಲು ಬೇಕಾದ ವ್ಯವಸ್ಥಿತ ಪೆಟ್ಟಿಗೆಯೂ ಇಲ್ಲ, ಯಾವುದೇ ಸುಸೂತ್ರವಿಲ್ಲದೆ, ಸರಿಯಾದ ನಿರ್ವಹಣೆಯೂ ಇಲ್ಲದೇ ಪಾಳು ಬಿದ್ದಂತಿದೆ ಈ ರುದ್ರಭೂಮಿ.

ಮಳೆಗಾಲದಲ್ಲೂ ತುಂಬಾ ಸಮಸ್ಯೆ

ಇಲ್ಲಿನ ನೆಲದ ಇಂಟರ್‌ಲಾಕ್ ಹಲವೆಡೆ ಕಿತ್ತು ಹೋಗಿವೆ. ರುದ್ರಭೂಮಿಯಲ್ಲಿ ನಿರ್ವಹಣೆಯಿಲ್ಲದೆ ಗಿಡಗಂಟಿ ಬೆಳೆದಿವೆ. ಮಳೆಗಾಲದಲ್ಲಂತೂ ಇನ್ನಷ್ಟು ಸಮಸ್ಯೆ. ಮಣ್ಣು ಜಾರಿ, ನೀರು ತುಂಬಿಕೊಂಡು ಅಂತ್ಯಕ್ರಿಯೆ ನಡೆಸುವುದೇ ಕಷ್ಟ. »ಪುಟ 6



ಮನವಿ ಮೇಲೆ ಕ್ರಮ

ಗಂಗೊಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ 13ನೇ ವಾರ್ಡ್‌ನ ಹಿಂದೂ ರುದ್ರಭೂಮಿಗೆ ಮೂಲಭೂತ ಸೌಕರ್ಯ ಒದಗಿಸಲು ಈ ಬಗ್ಗೆ ಸ್ಥಳೀಯರು ಮನವಿ ನೀಡಿದರೆ, ಗ್ರಾ. ಪಂ. ವತಿಯಿಂದ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

● ರವಿ, ಗಂಗೊಳ್ಳಿ ಗ್ರಾಮ ಪಂಚಾಯತ್, ಪಿಡಿಒ

ಕೊನೆಗೆ ಅಂತಿಮ ಸಂಸ್ಕಾರಕ್ಕಾದರೂ...

ಈ ಸಮಸ್ಯೆಯನ್ನು ಹಲವು ಬಾರಿ ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತಂದಿದ್ದರೂ ಯಾವುದೇ ಸ್ಪಷ್ಟ ಕ್ರಮ ಕೈಗೊಂಡಿಲ್ಲ, ಅಂತಿಮ ಸಂಸ್ಕಾರಕ್ಕಾದರೂ ಕನಿಷ್ಠ ಸೌಲಭ್ಯ ದೊರಕಿಸಿಕೊಡಲು, ಗೌರವಯುತ ಅಂತ್ಯಸಂಸ್ಕಾರ ಆಗಲು ಆಳುವ ವರ್ಗ ಗಮನಹರಿಸಬೇಕು. ವಿದ್ಯುತ್ ದಹನ ಪೆಟ್ಟಿಗೆ ಹಾಗೂ ಕಟ್ಟಿಗೆಯಿಂದ ಸುಡಲು ಪೆಟ್ಟಿಗೆ ಶೀಘ್ರ ಒದಗಿಸಬೇಕು

● ಭಾಸ್ಕರ್ ಎಚ್.ಜಿ., ಗೌರವಾಧ್ಯಕ್ಷರು, ಡಾ. ಬಿ.ಆರ್ ಅಂಬೇಡ್ಕರ್ ಯುವಕ ಮಂಡಲ, ಮೇಲ್ ಗಂಗೊಳ್ಳಿ

ಶ್ರೀಮಂತ ಭಾಷೆಯಾಗಿರುವ ಕನಡವನ್ನು ಉಳಿಸಿ ಬೆಳೆಸುವ ಕಾರ್ಯವಾಗಲಿ 2
ಮೇ 7ರಂದು ಅಂಬಿಕಾದಲ್ಲಿ ಶೃಂಗೇರಿ ಪೀಠಾಧ್ಯಕ್ಷ ಜಗದ್ಗುರುಗಳಿಗೆ ಗುರುವಂದನೆ 3
ಕಾಸರಗೋಡು ಜಿಲ್ಲೆಯ ಭೂಜಲ ಇಲಾಖೆಗೆ ನೂತನ ಬೋರ್‌ವೆಲ್ ರಿಗ್ 5
ಪರಿಸರಕ್ಕೆ ಕಂಟಕವಾಗಿದ್ದ ತ್ಯಾಜ್ಯ ರಾಶಿಯ ಕೊನೆಗೂ ತೆರವು 6

ಇಂದಿನಿಂದ ಉಡುಪಿ ಜಿಲ್ಲೆಯಲ್ಲಿ ಬೇಸಿಗೆ ಮಳೆ ಸಾಧ್ಯತೆ | ಈ ಬಾರಿ ಅವಧಿ ಪೂರ್ವ ಮುಂಗಾರು

ಮಳೆಗಾಲದ ಸಿದ್ಧತೆಯಲ್ಲಿ ಜಿಲ್ಲಾಡಳಿತಕ್ಕೆ 'ಪೂರ್ವಭಾವಿ' ಪರೀಕ್ಷೆ!

ಉಡುಪಿ: ಬಿಸಿಲಿನ ಬೇಗೆಯಿಂದ ಕಂಗಾಲಾಗಿರುವ ಕರಾವಳಿ ಜನತೆಗೆ ಹವಮಾನ ಇಲಾಖೆ ತಂಪು ಸುದ್ದಿಯೊಂದನ್ನು ನೀಡಿದೆ. ಮೇ 6ರಿಂದ ಅಂದರೆ ನಾಳೆಯಿಂದಲೇ ಜಿಲ್ಲೆಯಾದ್ಯಂತ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಲಾಗಿದೆ. ಆದರೆ, ಒಂದು ಕಡೆ ವರುಣನ ಆಗಮನಕ್ಕೆ ಜನ ಕಾತರರಾಗಿದ್ದರೆ, ಇನ್ನೊಂದೆಡೆ ಜಿಲ್ಲಾಡಳಿತದ ಅಪೂರ್ಣ ಸಿದ್ಧತೆಗಳು ಮಳೆಗಾಲದ ಆತಂಕವನ್ನು ಹೆಚ್ಚಿಸಿವೆ.

4 ದಿನ ಗುಡುಗು ಸಹಿತ ಮಳೆ

ಬುಧವಾರದಿಂದ ವಾರಾಂತ್ಯದವರೆಗೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಹಲವೆಡೆ ಬಿರುಗಾಳಿ ಹಾಗೂ ಸಿಡಿಲು ಸಹಿತ ಮಳೆಯಾಗುವ ನಿರೀಕ್ಷೆಯಿದೆ. ವಿಶೇಷವಾಗಿ ದಕ್ಷಿಣ ಒಳನಾಡು ಮತ್ತು ಉತ್ತರ ಒಳನಾಡಿನಲ್ಲೂ ವರುಣನ ಅರ್ಭಟ ಇರಲಿದೆ. ಮಂಗಳೂರಿನಲ್ಲಿ ಪ್ರಸ್ತುತ ಗರಿಷ್ಠ ತಾಪಮಾನ 34 ಡಿ.ಸೆ. ದಾಖಲಾಗಿದ್ದು, ಬಿಸಿಲ ತಾಪ ತಗ್ಗಿಸಲು ಈ ಮಳೆ ಸಹಕಾರಿಯಾಗಲಿದೆ. ಮೇ 14ರ ಸುಮಾರಿಗೆ ಕೇರಳಕ್ಕೆ ಮುಂಗಾರು ಪ್ರವೇಶಿಸುವ ಸಾಧ್ಯತೆಯಿದ್ದು,



ಕರಾವಳಿಯಲ್ಲೂ ಮಳೆಗಾಲದ ಮುನ್ಸೂಚನೆ ದಟ್ಟವಾಗಿದೆ.

ಕುಂಟುತ್ತಿರುವ ಹೆದ್ದಾರಿ ಕಾಮಗಾರಿ

ಮಳೆಗಾಲ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಉಳಿದಿದ್ದರೂ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ಮಾತ್ರ ಇನ್ನೂ ಕುಂಟುತ್ತಾ ಸಾಗುತ್ತಿವೆ. ಅಂಬಲಪಾಡಿ ಮತ್ತು ಕಿನ್ನಿಮೂಲ್ಕಿ ಬಳಿಯ ಹೆದ್ದಾರಿ ಕೆಲಸಗಳು ಆಮೆಗತಿಯಲ್ಲಿವೆ. ಇನ್ನು ಕಟಪಾಡಿಯಲ್ಲಿ ಓವರ್ ಪಾಸ್ ಕಾಮಗಾರಿ ಅರ್ಧವಷ್ಟೇ ಪೂರ್ಣಗೊಂಡಿದ್ದು, ಮಳೆಗಾಲದಲ್ಲಿ ಈ ಭಾಗದಲ್ಲಿ ಸಂಚಾರ ದುಸ್ತರವಾಗುವ ಲಕ್ಷಣಗಳು ಕಾಣಿಸುತ್ತಿವೆ. ಕಾಮಗಾರಿ ನಡೆಯುತ್ತಿರುವ ಜಾಗಗಳಲ್ಲಿ ಸಮರ್ಪಕ ಪರ್ಯಾಯ ವ್ಯವಸ್ಥೆ ಮಾಡದಿದ್ದರೆ ಮಳೆಗಾಲದಲ್ಲಿ ಕೃತಕ ನೆರೆ ಸೃಷ್ಟಿಯಾಗುವ ಭೀತಿ ಎದುರಾಗಿದೆ.

ಹಾಳಾದ ಚರಂಡಿ ವ್ಯವಸ್ಥೆ: ಜನರಲ್ಲಿ ದಿಗಿಲು

ನಗರದ ಪ್ರಮುಖ ಭಾಗಗಳಲ್ಲಿ ಒಳಚರಂಡಿ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಕಲ್ಸಂಕ, ಇಂದ್ರಾಳಿ, ಈಶ್ವರ ನಗರ, ಮಣಿಪಾಲ, ಸಿಂಡಿಕೇಟ್ ಸರ್ಕಲ್, ಪರ್ಕಳ ಸೇರಿದಂತೆ ಕೊಡವೂರು ಮತ್ತು ಮಲ್ಪೆಯ ಅನೇಕ ಭಾಗಗಳಲ್ಲಿ ಚರಂಡಿಗಳು ಹೂಳು ತುಂಬಿ ಹೋಗಿವೆ. ಮಳೆಗಾಲಕ್ಕೂ ಮುನ್ನ ಈ ಚರಂಡಿಗಳನ್ನು ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿದು ಹೋಗಲು ದಾರಿ ಮಾಡಿಕೊಡದಿದ್ದರೆ, ರಸ್ತೆಗಳೇ ನದಿಗಳಂತಾಗುವುದರಲ್ಲಿ ಸಂಶಯವಿಲ್ಲ.

ಕಳೆದ ವರ್ಷ ಭಾರೀ ಹಾನಿಯಾಗಿತ್ತು

ಕಳೆದ ವರ್ಷ ಮೇಯಲ್ಲೇ ಮಳೆ ಅಬ್ಬರ ಆರಂಭವಾಗಿತ್ತು. ಇದರ ಪರಿಣಾಮ ಮಣಿಪಾಲದ ಲಕ್ಷ್ಮೀಂದ್ರ ನಗರದ ಬಳಿ ರಾಷ್ಟ್ರೀಯ ಹೆದ್ದಾರಿಯು ಕಾಲುವೆಯಂತಾಗಿತ್ತು. ಕಲ್ಲು ಮಣ್ಣು ಸೇರಿದ ಕೆಸರು ನೀರು ರಭಸದಿಂದ ಇಳಿಜಾರು ರಸ್ತೆಯಲ್ಲಿ ಹರಿದಿತ್ತು. ನೀರು ಹರಿದ ರಭಸಕ್ಕೆ ರಸ್ತೆಯ ಪಕ್ಕ ಕಣಿವೆ ನಿರ್ಮಾಣವಾಗಿತ್ತು. ಚರಂಡಿಯಲ್ಲಿ ಹೂಳು ತುಂಬಿದ್ದ ಕಾರಣ ನೀರು ಉಕ್ಕಿ ರಸ್ತೆಗೆ ಹರಿದಿತ್ತು. ನೀರು ಹರಿಯುವುದು ನಿಂತ ಬಳಿಕ ರಸ್ತೆಯಲ್ಲಿ ಕಲ್ಲುಗಳ ರಾಶಿ ತುಂಬಿತ್ತು. ಸಮೀಪದ ಅಂಗಡಿಗಳಿಗೂ ಮಳೆ ನೀರು ನುಗ್ಗಿದ ಕಾರಣ ಹಾನಿಯುಂಟಾಗಿತ್ತು.

ರಸ್ತೆಯಲ್ಲೇ ಮಳೆ ನೀರು ಸಂಗ್ರಹ

ಅಂಬಲಪಾಡಿಯಲ್ಲಿ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿರುವುದರಿಂದ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳು ಸಹಿತ ಎಲ್ಲಾ ವಾಹನಗಳು ಸರ್ವೀಸ್ ರಸ್ತೆಗಳಲ್ಲಿಯೆ ಸಂಚರಿಸುತ್ತಿವೆ. ಈ ಸರ್ವೀಸ್ ರಸ್ತೆಗಳ ಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲದ ಕಾರಣ ರಸ್ತೆಯಲ್ಲೇ ಮಳೆ ನೀರು ಸಂಗ್ರಹವಾಗುತ್ತದೆ. ಇದರಿಂದ ದ್ವಿಚಕ್ರ ವಾಹನ ಸವಾರರಿಗೆ ಹೆಚ್ಚಿನ ತೊಂದರೆಯಾಗಿತ್ತು. ಶಿವಪ್ಪಾಡಿ, ಸಗ್ರಿಯಲ್ಲೂ ತಗ್ಗು ಪ್ರದೇಶಗಳು ಜಲಾವೃತವಾಗುವುದನ್ನು ತಪ್ಪಿಸಬೇಕಿದೆ.

ಕಾಗದಕ್ಕಷ್ಟೇ ಸೀಮಿತವೇ?

ಪ್ರತಿ ವರ್ಷ ಮಳೆ ಬರುವ ಮುನ್ನ ಚರಂಡಿ ಸ್ವಚ್ಛತೆ ಮತ್ತು ರಸ್ತೆ ದುರಸ್ತಿ ಕಾರ್ಯಗಳು ನಡೆಯಬೇಕಿತ್ತು. ಆದರೆ ಈ ಬಾರಿ ಜಿಲ್ಲೆಯಲ್ಲಿ ನಿರೀಕ್ಷಿತ ಮಟ್ಟದ ಪೂರ್ವ ಸಿದ್ಧತೆಗಳು ಕಂಡುಬರುತ್ತಿಲ್ಲ, ಪ್ರಮುಖ ಜಂಕ್ಷನ್‌ಗಳಲ್ಲಿ ಚರಂಡಿ ವ್ಯವಸ್ಥೆ ಹದಗೆಟ್ಟಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಮಳೆಗಾಲದ ಅನಾಹುತಗಳನ್ನು ತಪ್ಪಿಸಲು ಜಿಲ್ಲಾಡಳಿತ ಕೂಡಲೇ ಎಚ್ಚೆತ್ತುಕೊಂಡು ಸಮರೋಪಾದಿಯಲ್ಲಿ ಕೆಲಸ ಮಾಡಬೇಕಿದೆ.

ಸುತ್ತ ಮುತ್ತ

ಮೇ 6ರಿಂದ 12ರವರೆಗೆ ಪಡುಕುತ್ಯಾರಿನಲ್ಲಿ ವಸಂತ ವೇದ ಶಿಬಿರ

ಕಾಪು: ಶ್ರೀಮತ್ ಜಗದ್ಗುರು ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠ ಕಟಪಾಡಿ ಪಡುಕುತ್ಯಾರು ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಸ್ವಾಮೀಜಿ ಅವರ ಸನ್ನಿಧಾನದಲ್ಲಿ ವಸಂತ ವೇದ ಶಿಬಿರವು ಮೇ 6ರಿಂದ ಮೇ 12ರ ಪರ್ಯಂತ ಜರಗಲಿದೆ. ಮೇ 6ರಂದು ಬೆಳಗ್ಗೆ 9ಕ್ಕೆ ಕಾಳಹಸ್ತೇಂದ್ರ ಸರಸ್ವತೀ ಮಹಾ ಸ್ವಾಮೀಜಿ ಶಿಬಿರದ ಉದ್ಘಾಟನೆ ನಡೆಸಲಿದ್ದಾರೆ. ಪ್ರತಿಷ್ಠಾನದ ಅಧ್ಯಕ್ಷ ವಿ. ಶ್ರೀಧರ ಆಚಾರ್ಯ ವಡೇರಹೋಬಳಿ ಅಧ್ಯಕ್ಷತೆ ವಹಿಸಲಿದ್ದು, ಶ್ರೀ ನಾಗಧರ್ಮೇಂದ್ರ ಸಂಸ್ಕೃತ ಪಾಠಶಾಲಾ ಪಡುಕುತ್ಯಾರು ಇದರ ಪ್ರಧಾನ ಸಂಚಾಲಕ ಸೂರ್ಯಕುಮಾರ್, ಶಿಬಿರ ಅಧಿಕಾರಿ ಲೋಲಾಕ್ಷ ಶರ್ಮ ಉಪಸ್ಥಿತರಿರುವರು. ಶಿಬಿರದ ಸಮಾರೋಪದ ಮೇ 12 ರಂದು ಶ್ರೀ ಗುರುಗಳ ಪಟ್ಟಾಭಿಷೇಕ ವರ್ಧಂತ್ಯುತ್ಸವ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ 11: ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ

ಉಡುಪಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ ಮೇ 11ರಂದು ಬೆಳಗ್ಗೆ 10ರ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿಗಳ ಕಚೇರಿ ಕೋರ್ಟ್ ಹಾಲ್‌ನಲ್ಲಿ ನಡೆಯಲಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಉದ್ಘಾಟಿಸಲಿದ್ದು, ಶಾಸಕ ಯಶ್ ಪಾಲ್ ಎ. ಸುವರ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಕೋಟ ಶ್ರೀನಿವಾಸ ಪೂಜಾರಿ, ಬಿ.ವೈ. ರಾಘವೇಂದ್ರ, ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ.ಗಫೂರ್, ಶಾಸಕರಾದ ವಿ. ಸುನೀಲ್ ಕುಮಾರ್, ಗುರುರಾಜ್ ಶೆಟ್ಟಿ ಗಂಟಿಹೊಳೆ, ಎ. ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರ್ಮೆ ಸುರೇಶ್ ಶೆಟ್ಟಿ ವಿಧಾನಪರಿಷತ್ ಶಾಸಕರಾದ ಎಸ್.ಎಲ್. ಭೋಜೇಗೌಡ, ಮಂಜುನಾಥ್ ಭಂಡಾರಿ, ಡಾ. ಧನಂಜಯ ಸರ್ಜಿ ಹಾಗೂ ಕಿಶೋರ್ ಕುಮಾರ್ ಪುತ್ತೂರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಉಡುಪಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರೋಹಿಣಿ ಸಿಂಧೂರಿ ದಾಸರಿ, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ., ಜಿ.ಪಂ. ಸಿಇಒ ಪ್ರತೀಕ್ ಬಾಯಲ್, ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಂ ಶಂಕರ್ ಭಾಗವಹಿಸಲಿದ್ದು, ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಅಧ್ಯಕ್ಷ ಡಾ. ನಿರಂಜನ ಯು.ಸಿ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜಿಟಿಟಿಸಿ ಡಿಪ್ಲೋಮಾ ಕೋರ್ಸ್ ಪ್ರವೇಶಾತಿಗೆ ಅರ್ಜಿ ಆಹ್ವಾನ

ಉಡುಪಿ: ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ರಾಜ್ಯ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಧೀನದ ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ), ಉಡುಪಿ ಸಂಸ್ಥೆಯಲ್ಲಿ ಡಿಪ್ಲೋಮಾ ಇನ್ ಮೆಕಾಟ್ರಾನಿಕ್ಸ್, ಡಿಪ್ಲೋಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್ ಹಾಗೂ ಡಿಪ್ಲೋಮಾ ಇನ್ ಪ್ರಿಸಿಷನ್ ಮ್ಯಾನುಫ್ಯಾಕ್ಚರಿಂಗ್‌ನಲ್ಲಿ ಸೀಟುಗಳ ಹಂಚಿಕೆ ಆನ್ ಲೈನ್ ಅರ್ಜಿ ಸಲ್ಲಿಕೆ ಮೂಲಕ ನಡೆಯುತ್ತಿದೆ. ಮೊದಲನೇ ಸುತ್ತಿನ ಆನ್‌ಲೈನ್ ಅರ್ಜಿ ಸಲ್ಲಿಕೆ ಆರಂಭವಾಗಿದ್ದು ಅರ್ಜಿ ಸಲ್ಲಿಕೆಗೆ ಮೇ 10 ಕೊನೆಯ ದಿನವಾಗಿದೆ. ಮೇ 15ರಿಂದ 20 ರ ವರೆಗೆ ಮೊದಲನೇ ಸುತ್ತಿನ ಸೀಟು ಹಂಚಿಕೆ ಮತ್ತು ಪ್ರವೇಶಾತಿ ಪ್ರಕ್ರೀಯೆ ನಡೆಯಲಿದೆ. ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅಥವಾ ಜಿ.ಟಿ.ಟಿ.ಸಿ ಸಂಸ್ಥೆಯಲ್ಲಿ ದಾಖಲಾತಿಗಳನ್ನು ಸಲ್ಲಿಸಿದಲ್ಲಿ ವಿದ್ಯಾರ್ಥಿಗಳ ಪರವಾಗಿ ಆನ್ ಲೈನ್ ಅರ್ಜಿ ಸಲ್ಲಿಸಲಾಗುವುದು. ಐಟಿಐ ಮತ್ತು ಪಿಯುಸಿ ವಿಜ್ಞಾನ ವಿಭಾಗದಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ನೇರವಾಗಿ ಎರಡನೇ ವರ್ಷದ ಡಿಪ್ಲೋಮಾ ಕೋರ್ಸ್ಗೆ ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ), ಕೊಳಲಗಿರಿ, ಉಪ್ಪೂರು, ಉಡುಪಿ ದೂರವಾಣಿ ಸಂಖ್ಯೆ 9880510585 ಅಥವಾ 8618760169 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಾಂಶುಪಾಲರ ಕಚೇರಿ ಪ್ರಕಟಣೆ ತಿಳಿಸಿದೆ.

ಎಸ್‌ಎಫ್‌ಸಿ ಮುಕ್ತನಿಧಿ ಪ್ರೋತ್ಸಾಹ ಧನ: ಅರ್ಜಿ ಆಹ್ವಾನ

ಉಡುಪಿ: ಉಡುಪಿ ನಗರಸಭೆಯ ಪ್ರಸಕ್ತ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿಯ ಶೇ. 7.25ರ ಇತರೆ ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮದಡಿ ಪ್ರಸಕ್ತ ಸಾಲಿನಲ್ಲಿ ಉತ್ತೀರ್ಣರಾದ ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ ಮತ್ತು ವೃತ್ತಿಪರ ತರಬೇತಿಗಳಾದ ಬಿಎ, ಬಿಎಸ್ಸಿ, ಬಿಕಾಂ, ಬಿಬಿಎ, ಬಿಬಿಎಂ, ಬಿಸಿಎ, ಇತರ ಪದವಿ, ಬಿಎಡ್, ಬಿಪಿಎಡ್, ಎಂ.ಎ, ಎಂಎಸ್ಸಿ, ಎಂಕಾಂ, ಎಂಎಸ್‌ಡಬ್ಲ್ಯು, ಎಂಬಿಎ, ಎಂಎಡಿ, ಎಂಪಿಇಡಿ, ಜೆಓ, ಎಂಬಿಬಿಎಸ್, ಬಿಡಿಎಸ್, ಎಂಟೆಕ್, ಎಂಇ, ಎಂಡಿ, ಎಂಎಸ್ ಇತರ ಯಾವುದೇ ಸ್ನಾತಕೋತ್ತರ ಪದವಿ ವಿದಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವ ಸಲುವಾಗಿ ಆಸಕ್ತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಮೇ 11 ಕೊನೆಯ ದಿನ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಪೌರಾಯುಕ್ತರು, ನಗರಸಭೆ, ಉಡುಪಿ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪಂಚವರ್ಣ ಸಂಘಟನೆ 300ನೇ ಅಭಿಯಾನ ಆನಂದ್ ಕುಂದರ್‌ಗೆ ಸಮರ್ಪಣೆ

ಸಮಾಜಕ್ಕಾಗಿ ಅರ್ಪಿಸಿಕೊಂಡ ಕುಂದರ್: ಕೊಡ್ಗಿ

ಕೋಟ: ಆನಂದ್ ಸಿ. ಕುಂದರ್ ಎಂದರೆ ಅದೊಂದು ಶಕ್ತಿ ಜಿಲ್ಲೆಯಲ್ಲೆ ಸಾಂಸ್ಕೃತಿಕ ಕಾಶಿಯನ್ನಾಗಿಸಿದ ಕೀರ್ತಿ ಆನಂದಗೆ ಸಿ. ಕುಂದರ್ ಅವರಿಗೆ ಲಭಿಸುತ್ತದೆ. ಇಂತಹ ವ್ಯಕ್ತಿಗೆ ಪಂಚವರ್ಣ ಸಂಘಟನೆ 300ನೇ ವಾರದ ಪರಿಸರಸ್ನೇಹಿ ಅಭಿಯಾನ ಸಮರ್ಪಿಸಿದ್ದು ಅರ್ಥಪೂರ್ಣ ಎಂದು ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅಭಿಪ್ರಾಯಪಟ್ಟರು.



ಅವರು ಭಾನುವಾರ ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲ ನೇತೃತ್ವದಲ್ಲಿ ಜಿಲ್ಲಾಡಳಿತ, ಸ್ಥಳೀಯಾಡಳಿತ, ಗೀತಾನಂದ ಫೌಂಡೇಶನ್ ಮಣೂರು, ಕೋಡಿ ಪಂಚಾಯತ್ ನೇತೃತ್ವದಲ್ಲಿ ಕೋಡಿ ಗ್ರಾ.ಪಂ.ನಿಂದ ಕೋಟ ಪಂಚಾಯತ್ ವರೆಗಿನ 5ವರೆ ಕಿ.ಮೀ. ಬೃಹತ್ ಬೀಚ್ ಸ್ವಚ್ಛತಾ ಅಭಿಯಾನದ ಮಣೂರು ಪಡುಕರೆಯಲ್ಲಿ ಸಮಾರೋಪ ಕಾರ್ಯಕ್ರಮದಲ್ಲಿ ಆನಂದ್ ಸಿ ಕುಂದರ್ ರವರನ್ನು ಸನ್ಮಾನಿಸಿ ಅವರು ಮಾತನಾಡಿದರು.

300ನೇ ವಾರವನ್ನು ಆನಂದ್ ಸಿ. ಕುಂದರ್ ಅವರಿಗೆ ಪಂಚವರ್ಣ ಸಂಘಟನೆ ಸಮರ್ಪಿಸಿ ಗೌರವಿಸಿತು.

ಈ ವೇಳೆ ಬೃಹತ್ ಸ್ವಚ್ಛತಾ ಅಭಿಯಾನದಲ್ಲಿ ಭಾಗಿಯಾದ ಶಿಕ್ಷಣ ಸಂಸ್ಥೆ ಸಂಘಸಂಸ್ಥೆಗಳಾದ ನರ್ಸಿಂಗ್ ಕಾಲೇಜು, ಗೀತಾನಂದ ಫೌಂಡೇಶನ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಶೌರ್ಯ ತಂಡ, ರೋಟರಿ ಸಮುದಾಯದಳ ಮೂಡುಗಿಳಿಯಾರು, ತೋಳಾರ್ ಓಷಿಯನ್ ಪ್ರಾಡೆಕ್ಟ್, ಸ್ಥಳೀಯಾಡಳಿತಗಳಿಗೆ ಅಭಿನಂದನಾ ಪತ್ರವನ್ನು ಶಾಸಕರ ಸಮ್ಮುಖದಲ್ಲಿ ನೀಡಲಾಯಿತು.

ಈ ಸಂದರ್ಭದಲ್ಲಿ ನಿವೃತ್ತ ಪ್ರಾಂಶುಪಾಲ ಡಾ. ಬಾಲಕೃಷ್ಣ ಶೆಟ್ಟಿ ಕೋಟ ಸಹಕಾರಿ ವ್ಯವಸಾಯಕ ಸಂಘದ ಅಧ್ಯಕ್ಷ ಡಾ. ಕೃಷ್ಣ ಕಾಂಚನ್, ನಿರ್ದೇಶಕ ತಿಮ್ಮ ಪೂಜಾರಿ, ತೋಳಾರ್ ಓಷಿಯನ್ ಪ್ರಾಡೆಕ್ಟ್ ಮ್ಯಾನೇಜರ್ ಯೋಗೀಶ್ ಕುಮಾರ, ಜಿಲ್ಲಾ ಸ್ವಚ್ಛ ಭಾರತ್ ಮಿಷನ್ ಸಂಯೋಜಕ ರಘುನಾಥ್, ಕೋಡಿ ಪಂಚಾಯತ್ ಪಿಡಿಒ ರವೀಂದ್ರ ರಾವ್, ಕ್ಯಾಪ್ಸ್ ಫೌಂಡೇಶನ್ ಪ್ರವರ್ತಕ ಸಿ.ಎ. ಚಂದ್ರಶೇಖರ ಶೆಟ್ಟಿ ಕೋಟ ಲಕ್ಷ್ಮೀ ಸೋಮಬಂಗೇರ ಕಾಲೇಜಿನ ಪ್ರಭಾರ ಪ್ರಾಂಶುಪಾಲ ರಮೇಶ ಆಚಾರ್, ಪಂಚವರ್ಣದ ಅಧ್ಯಕ್ಷ ಮನೋಹರ್ ಪೂಜಾರಿ, ಸ್ಥಾಪಕಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ, ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ, ಜನತಾ ಸಂಸ್ಥೆಯ ವ್ಯವಸ್ಥಾಪಕ ಶ್ರೀನಿವಾಸ ಕುಂದರ್, ಕೋಡಿ ಪಂಚಾಯತ್ ಮಾಜಿ ಅಧ್ಯಕ್ಷರಾದ ಪ್ರಭಾಕರ್ ಮೆಂಡನ್, ಗೀತಾ ಖಾರ್ವಿ,ಕೆ. ಎಂ ಎಫ್ ನಿರ್ದೇಶಕ ಶಿವಮೂರ್ತಿ ಉಪಾಧ್ಯಾ,ಗೀತಾನಂದ ಫೌಂಡೇಶನ್ ಸಮಾಜಕಾರ್ಯ ವಿಭಾಗದ ರವಿಕಿರಣ್ ಕೋಟ, ಧರ್ಮಸ್ಥಳ ಗ್ರಾ.ಯೋಜನೆಯ ನಾಗೇಶ್,ಉದ್ಯಮಿ ರಕ್ಷಿತ್ ಶೆಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕಲಾವತಿ ಅಶೋಕ್ ಸ್ವಾಗತಿಸಿ,ಸುಜಾತ ಬಾಯರಿ ನಿರೂಪಿಸಿ,ರವೀಂದ್ರ ಕೋಟ ವಂದಿಸಿದರು.

ಡಾ.ಬಿ.ಬಿ. ಹೆಗ್ಡೆ ಕಾಲೇಜಿನ ಸಂಸ್ಥಾಪನಾ ದಿನಾಚರಣೆಯಲ್ಲಿ ಕೃಷ್ಣಮೂರ್ತಿ ಸಲಹೆ

ವಿದ್ಯಾರ್ಥಿಗಳು ಪರಿಶ್ರಮದಿಂದ ಬದುಕು ರೂಪಿಸಲಿ

ಕುಂದಾಪುರ: ನಮ್ಮ ಬದುಕಿನ ಶಿಲ್ಪಿಗಳು ನಾವೇ. ವಿದ್ಯಾರ್ಥಿ ದೆಸೆಯಲ್ಲಿಯೇ ಪಠ್ಯ ಕೇಂದ್ರಿತ ಶಿಕ್ಷಣದೊಂದಿಗೆ ಬದುಕಿಗೆ ಬೇಕಾಗಿರುವ ಮೌಲ್ಯಗಳನ್ನು ರೂಪಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಪರಿಶ್ರಮದ ಬದುಕನ್ನು ರೂಪಿಸಿಕೊಂಡರೆ ಯಶಸ್ಸಿನ ಹಾದಿ ತಲುಪಲು ಸಾಧ್ಯ ಎಂದು ಹೈದರಾಬಾದಿನ ಹೋಟೇಲ್ ಉದ್ಯಮಿ ಕೃಷ್ಣಮೂರ್ತಿ ಮಂಜರು ಮಾರಣಕಟ್ಟೆ ಹೇಳಿದರು.



ಕುಂದಾಪುರದ ಡಾ.ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಬಿ.ಎಂ. ಎಸ್. ಕ್ರೀಡಾಂಗಣದ ತೆರೆದ ವೇದಿಕೆಯಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಇನ್ನೋರ್ವ ಮುಖ್ಯ ಅತಿಥಿ ಉಡುಪಿ ಜಿಲ್ಲೆಯ ಡಾ. ಶಿವರಾಮ ಕಾರಂತ ಟ್ರಸ್ಟ್ ಅಧ್ಯಕ್ಷ ಹಾಗೂ ಉಡುಪಿ ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಡಾ.ಗಣನಾಥ ಶೆಟ್ಟಿ ಎಕ್ಕಾರು ಶುಭ ಹಾರೈಸಿದರು. ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಬಿ.ಎಂ. ಸುಕುಮಾರ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಸಂಸ್ಥೆಯ ಕಾರ್ಯದರ್ಶಿ ಸೀತಾರಾಮ ನಕ್ಕತ್ತಾಯ, ಜೊತೆ ಕಾರ್ಯದರ್ಶಿ ಸುಧಾಕರ ಶೆಟ್ಟಿ ಬಾಂಡ್ಯ, ಸಂಸ್ಥೆಯ ಉಪ ಪ್ರಾಂಶುಪಾಲ ಡಾ. ಚೇತನ ಶೆಟ್ಟಿ ಕೋವಾಡಿ ಉಪಸ್ಥಿತರಿದ್ದರು.

ಕಾರ್ಯಕ್ರಮ ಸಂಯೋಜಕಿ ಹಾಗೂ ನಿರ್ವಹಣಾ ವಿಭಾಗದ ಮುಖ್ಯಸ್ಥೆ ನಂದಾ ರೈ ಸ್ವಾಗತಿಸಿದರು. ಪ್ರಾಂಶುಪಾಲ ಪ್ರೊ. ಡಾ.ಕೆ. ಉಮೇಶ ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕ್ರಮ ಸಂಯೋಜಕ ಪ್ರವೀಣ್ ಮೊಗವೀರ ಗಂಗೊಳ್ಳಿ ಅತಿಥಿಗಳನ್ನು ಪರಿಚಯಿಸಿದರು. ನಿರ್ವಹಣಾ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಅವಿತಾ ಕೊರೆಯಾ ಸನ್ಮಾನ ಪತ್ರ ವಾಚಿಸಿದರು. ಗಣಕ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ವಿಲ್ಮಾ ಶೆರಲ್ ವಂದಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ರೇಷ್ಮಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಪ್ರಾಂಶುಪಾಲರಿಗೆ ಸನ್ಮಾನ

ಇದೇ ಸಂದರ್ಭ ತಮಿಳುನಾಡಿನ ಕೊಯಮುತ್ತೂರು ಭಾರತೀಯಾರ್ ವಿಶ್ವವಿದ್ಯಾನಿಲಯದಿಂದ 'ಕರಾವಳಿ ಕರ್ನಾಟಕದಲ್ಲಿ ಮಹಿಳಾ ಉದ್ಯಮಿಗಳಿರುವ ಅವಕಾಶಗಳು ಮತ್ತು ಸವಾಲುಗಳು' ಎಂಬ ಸಂಶೋಧನಾ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪಡೆದ ಸಂಸ್ಥೆಯ ಪ್ರಾಂಶುಪಾಲ ಪ್ರೊ. ಡಾ.ಕೆ. ಉಮೇಶ ಶೆಟ್ಟಿ ಅವರನ್ನು ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು.

■ ಕಾಲೇಜಿನ ಬಿ.ಎಂ.ಎಸ್. ಕ್ರೀಡಾಂಗಣದ ತೆರೆದ ವೇದಿಕೆಯಲ್ಲಿ ಜರಗಿದ ಸಂಸ್ಥಾಪನಾ ದಿನಾಚರಣೆ

'ಅಮರ್ಥ' ಕನಡ ಚಲನಚಿತ್ರದ ಲಿರಿಕಲ್ ವೀಡಿಯೋ ಬಿಡುಗಡೆ



ಪಡುಬಿದ್ರಿ: ಡಾ.ಕನ್ಯಾನ ಸದಾಶಿವ ಶೆಟ್ಟಿ ಅವರ ಜತೆಯಲ್ಲಿ ಚಿತ್ರ ತಯಾರಿಕೆಯ ಸಾಹಸಕ್ಕಿಳಿದಿರುವ ಕರಾವಳಿ ಕರ್ನಾಟಕದ ಪಡುಬಿದ್ರಿಯ ಹುಟ್ಟು ಪ್ರತಿಭೆ, ಚಿತ್ರರಂಗದಲ್ಲಿ ಈಗಾಗಲೇ ಸಾಕಷ್ಟು ಹೆಸರು ಮಾಡಿರುವ ಗುರು ಹೆಗ್ಡೆ ಅವರು ಮುಂದೆ ಚಿತ್ರ ನಿರ್ಮಾಣದಲ್ಲೂ ಇನ್ನಷ್ಟು ಮಿಂಚಲಿ ಎಂದು ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿದೇವಸ್ಥಾನದಜೀರ್ಣೋದ್ಧಾರ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಡಾ.ಕೆ. ಪ್ರಕಾಶ್ ಶೆಟ್ಟಿ ಹೇಳಿದರು.

ಅವರು ಪಡುಬಿದ್ರಿ ದೇಗುಲದ ಬ್ರಹ್ಮಕಲಶೋತ್ಸವದಲ್ಲಿ ವಿಜಯಪ್ರಕಾಶ್ ಸಂಗೀತ ರಸಸಂಜೆಯ ಕಾರ್ಯಕ್ರಮದಲ್ಲಿ 'ಪಂಚರಂಗಿ ಫಿಲಂಸ್' ಸಂಸ್ಥೆಯಿಂದ ಡಾ. ಕನ್ಯಾನ ಸದಾಶಿವ ಶೆಟ್ಟಿ ಮತ್ತು ಗುರು ಹೆಗ್ಡೆ ನಿರ್ಮಾಣದಲ್ಲಿನ, ಗುರು ಹೆಗ್ಡೆ ಮತ್ತು ವಿನಯ್ ಪ್ರೀತಮ್ ಅವರ ನಿರ್ದೇಶನದಲ್ಲಿ ನಿರ್ಮಾಣಗೊಂಡು ಬಿಡುಗಡೆಯ ಹಂತದಲ್ಲಿರುವ ಕನ್ನಡ ಚಲನಚಿತ್ರ 'ಅಮರ್ಥ'ದ ಲಿರಿಕಲ್ ವೀಡಿಯೋ ಬಿಡುಗಡೆ ಸಂದರ್ಭ ಮಾತನಾಡಿದರು. ಈ ಚಿತ್ರದ ಮುಖ್ಯಭೂಮಿಕೆಯಲ್ಲಿ ಶ್ರೀನಗರ್ ಕಿಟ್ಟಿ ಮೇಘನಾ ರಾಜ್, ಗುರು ಹೆಗ್ಡೆ ಮಂಜು ಭಾಷಿಣಿ, ಉಷಾ ಬಂಡಾರಿ, ಹರೀಶ್ ಹಿರಿಯೂರ್ ಅವರೊಂದಿಗೆ ಕರ್ನಾಟಕ ಕರಾವಳಿಯ ಪ್ರಮುಖ ಕಲಾವಿದರು, ತಂತ್ರಜ್ಞರು ಭಾಗಿಗಳಾಗಿದ್ದಾರೆ. ಖ್ಯಾತ ಗಾಯಕ ವಿಜಯ ಪ್ರಕಾಶ್ ಅವರೇ ಹಾಡಿರುವ ಲಿರಿಕಲ್ ವೀಡಿಯೋವನ್ನು ಸ್ವತಹಾ ವಿಜಯಪ್ರಕಾಶ್ ಬಿಡುಗಡೆಗೊಳಿಸಿದರು. ದೇವಸ್ಥಾನದ ಆನುವಂಶಿಕ ಮೊಕ್ತೇಸರ ಭವಾನಿಶಂಕರ ಹೆಗ್ಡೆ ಸಾಂಸ್ಕೃತಿಕ ಸಮಿತಿಯ ಸಂಚಾಲಕ ಡಾ. ವೈ. ಎನ್. ಶೆಟ್ಟಿ ಸಹ ಸಂಚಾಲಕ ನಟರಾಜ್ ಪಿ. ಎಸ್., ಯಶೋದಾ ಪೂಜಾರಿ, ಚಿತ್ರನಟ ಪಡುಬಿದ್ರಿ ಗುರು ಹೆಗ್ಡೆ ಮತ್ತಿತರರಿದ್ದರು.

ರೂ. 40 ಲಕ್ಷ ವೆಚ್ಚದಲ್ಲಿ 2 ಅಂಗನವಾಡಿ ಕಟ್ಟಡದ ಕಾಮಗಾರಿಗಳಿಗೆ ಶಿಲಾನ್ಯಾಸ



ಉಡುಪಿ: ನಗರಸಭಾ ವ್ಯಾಪ್ತಿಯ ಇಂದ್ರಾಳಿ ವಾರ್ಡಿನ ಮಂಚಿ ಕುಮೇರಿ ಹಾಗೂ ಬನ್ನಂಜೆ ವಾರ್ಡಿನ ಮೀನು ಮಾರುಕಟ್ಟೆ ಬಳಿಯ 2 ನೂತನ ಅಂಗನವಾಡಿ ಕೇಂದ್ರದ ಕಾಮಗಾರಿಗೆ ಉಡುಪಿ ಶಾಸಕ ಯಶ್ ಪಾಲ್ ಸುವರ್ಣ ಶಿಲಾನ್ಯಾಸ ನೆರವೇರಿಸಿದರು.

ಶಿಲಾನ್ಯಾಸ ನೆರವೇರಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದ ಶೈಕ್ಷಣಿಕ ಸಾಧನೆಗೆ ಅಡಿಪಾಯವಾಗಿರುವ ಅಂಗನವಾಡಿ ಕೇಂದ್ರಗಳು ಪುಟಾಣಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಪೌಷ್ಟಿಕ ಆಹಾರದ ವ್ಯವಸ್ಥೆ ಕಲ್ಪಿಸುವ ಮೂಲಕ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗೆ ವಿಶೇಷ ಕೊಡುಗೆ ನೀಡುತ್ತಿದೆ ಎಂದು ಅವರು ಹೇಳಿದರು.

ಹಲವು ವರ್ಷಗಳ ಬೇಡಿಕೆಯಾಗಿದ್ದ ಆದಿ ಉಡುಪಿ ಹಾಗೂ ಮಂಚಿ ಕುಮೇರಿ ಅಂಗನವಾಡಿ ಕೇಂದ್ರದ ನಿರ್ಮಾಣಕ್ಕೆ ತಲಾ 20 ಲಕ್ಷ ಅನುದಾನ ಬಿಡುಗಡೆಯಾಗಿದ್ದು ಶೀಘ್ರದಲ್ಲೇ ಕಾಮಗಾರಿ ಪೂರ್ಣಗೊಂಡು ಸ್ಥಳೀಯ ಪುಟಾಣಿಗಳ ಶಿಕ್ಷಣಕ್ಕೆ ಲೋಕಾರ್ಪಣೆಗೊಳ್ಳಲಿದೆ ಎಂದರು.

ಈ ಸಂದರ್ಭದಲ್ಲಿ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ದಿನಕರ ಹೇರೂರು, ಮಾಜಿ ನಗರಸಭಾ ಸದಸ್ಯರಾದ ಅಶೋಕ್ ನಾಯ್ಕ್, ಕಲ್ಪನಾ ಸುಧಾಮ, ಹರೀಶ್ ರಾಮ್, ಸವಿತಾ ಹರೀಶ್ ರಾಮ್, ರಮೇಶ್, ಉಡುಪಿ ನಗರ ಬಿಜೆಪಿ ಅಧ್ಯಕ್ಷ ದಿನೇಶ್ ಅಮೀನ್, ಪ್ರಧಾನ ಕಾರ್ಯದರ್ಶಿ ಜಗದೀಶ್ ಆಚಾರ್ಯ, ಸ್ಥಳೀಯ ಮುಖಂಡರು, ಇಲಾಖೆಯ ಅಧಿಕಾರಿಗಳು, ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

94ಸಿ, 94ಸಿಸಿ ಹಕ್ಕುಪತ್ರಗಳ ವಿತರಣೆಗೆ ಕ್ರಮ ವಹಿಸಿ: ಗುರ್ಮೆ



ಕಾಪು: ಕಾಪು ತಾಲೂಕು ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅಧ್ಯಕ್ಷತೆಯಲ್ಲಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ನಡೆಯಿತು.

ಅರಣ್ಯ ಮತ್ತು ಕಂದಾಯ ಇಲಾಖೆ 94ಸಿ, 94ಸಿಸಿ ಹಕ್ಕುಪತ್ರವನ್ನು ವಿತರಿಸಲು ಕ್ರಮ ವಹಿಸಬೇಕು ಹಾಗೂ ಡೀಮ್ಡ್ ಫಾರೆಸ್ಟ್ ಇರುವ ಸ್ಥಳದಲ್ಲಿ ಕಂದಾಯ ಹಾಗೂ ಅರಣ್ಯ ಇಲಾಖೆಯವರು ಜಂಟಿ ಸಮೀಕ್ಷೆ ನಡೆಸಿ ಕಂದಾಯ ಭೂಮಿ ಹಸ್ತಾಂತರಿಸಲು ಕ್ರಮವಹಿಸುವಂತೆ, ಅಲ್ಲಲ್ಲಿ ನೀರಿನ ಸಮಸ್ಯೆ ದಿನೇ ದಿನೇ ಹೆಚ್ಚುತ್ತಿದ್ದು ಗಂಗಾ ಕಲ್ಯಾಣ ಯೋಜನೆಯಡಿ ಬಾಕಿ ಇರುವ ಕೊಳವೆ ಬಾವಿ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸುವಂತೆ, ಕೆಲ ದಿನಗಳಿಂದ ಕಾಪು ಭಾಗದ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ಅಪಘಾತಗಳು ಹೆಚ್ಚುತ್ತಿದ್ದು ಅಪಘಾತ ತಡೆಗೆ ಸರ್ವಿಸ್ ರಸ್ತೆಯಲ್ಲಿ ಸ್ಪೀಡ್ ಬ್ರೇಕರ್ ಅಳವಡಿಸುವಂತೆ, ಕಿಂಡಿ ಅಣೆಕಟ್ಟುಗಳ ಸಮರ್ಪಕ ನಿರ್ವಹಣೆ ಬಗ್ಗೆ ಹಾಗೂ ಮುಂಗಾರು ಪ್ರವೇಶಿಸುತ್ತಿರುವುದರಿಂದ ರೈತರಿಗೆ ಬಿತ್ತನೆ ಬೀಜ ಪೂರೈಸುವಂತೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.


ತಾ.ಪಂ. ಆಡಳಿತಾಧಿಕಾರಿಗಳಾದ ಪೂರ್ಣಿಮಾ ಬಿ.ಸಿ, ಕಾಪು ತಾ.ಪಂ. ಇಒ ವಿಜಯ ಕುಮಾರ್, ತಹಶೀಲ್ದಾರ್ ಅನಂತ ಶಂಕರ್, ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾಪು ಗ್ರಂಥಾಲಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು 112ನೇ ಸಂಸ್ಥಾಪನಾ ದಿನಾಚರಣೆ | ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಸಲಹೆ

ಶ್ರೀಮಂತ ಭಾಷೆಯಾಗಿರುವ ಕನ್ನಡ ಭಾಷೆ ಉಳಿಸಿ ಬೆಳೆಸುವ ಕಾರ್ಯವಾಗಲಿ

ಶಿರ್ವ: ಭಾಷೆಗೆ ಜಾತಿ,ಮತದ ಭೇದಭಾವವಿಲ್ಲ, ಕನ್ನಡ ಶ್ರೀಮಂತ ಭಾಷೆಯಾಗಿದ್ದು ಇದನ್ನು ಉಳಿಸಿ ಬೆಳೆಸುವ ಕಾರ್ಯ ಆಗಬೇಕು. ಅತೀ ಪುರಾತನ ಭಾಷೆಗಳಲ್ಲಿ ಕನ್ನಡವೂ ಒಂದಾಗಿದ್ದು ಅನೇಕ ಮಹನೀಯರು ನಾಡು, ನುಡಿ, ಸಂಸ್ಕೃತಿ, ಈ ನೆಲದ ಪರಂಪರೆಯನ್ನು ಉಳಿಸಿ ಬೆಳೆಸಿದ್ದು ಅವರ ಕೊಡುಗೆ ಅವಿಸ್ಮರಣೀಯ. ಈ ಬಗ್ಗೆ ಮಕ್ಕಳಿಗೆ ತರಬೇತಿ ನೀಡಬೇಕು. ನಾವೂ ಒದುಗರಾಗಬೇಕು ಎಂದು ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ನುಡಿದರು.

ಅವರು ಮಂಗಳವಾರ ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಕಾಪು ತಾಲೂಕು ಘಟಕದ ವತಿಯಿಂದ ಕಾಪು ಸಾರ್ವಜನಿಕ ಗ್ರಂಥಾಲಯದಲ್ಲಿ ಏರ್ಪಡಿಸಿದ ಕನ್ನಡ ಸಾಹಿತ್ಯ ಪರಿಷತ್ತು ಇದರ '112ನೇ ಸಂಸ್ಥಾಪನಾ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ಈಸಂದರ್ಭದಲ್ಲಿಪುರಸಭಾ ವ್ಯಾಪ್ತಿಯ ಸಾರ್ವಜನಿಕ ಗ್ರಂಥಾಲಯಗಳ ಗ್ರಂಥ ಮೇಲ್ವಿಚಾರಕರಾದ ಆಶಾ ಉಳಿಯಾರಗೋಳಿ, ಪೂರ್ಣಿಮಾ ಕಾಪು, ನಸ್ರಿನ್ ಫಾತಿಮಾ ಮಲ್ಲಾರು ಅವರನ್ನು ಪರಿಷತ್ತು ವತಿಯಿಂದ ಸನ್ಮಾನಿಸಿ ಮೂರೂ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ನೀಡಲಾಯಿತು. ಪುರಸಭೆಯ ನೂತನ ಅಧ್ಯಕ್ಷೆ ಮೋಹಿನಿ ಶೆಟ್ಟಿ ಅವರನ್ನು ಗ್ರಂಥಾಲಯದ ಮೇಲ್ವಿಚಾರಕರು ಸನ್ಮಾನಿಸಿದರು. ಯಶೋದಾ ಎಲ್ಲೂರು ಸನ್ಮಾನಿತರನ್ನು ಪರಿಚಯಿಸಿದರು.

ಪುರಸಭಾ ಮುಖ್ಯ ಅಧಿಕಾರಿ ನೀಲಕಂಠ ಮೇಸ್ತ ದಿಕ್ಸೂಚಿ ಭಾಷಣದಲ್ಲಿ, ಕನ್ನಡದ ಪ್ರಾಚೀನ ಶಾಸನದ ಬಗ್ಗೆ ಉಲ್ಲೇಖಿಸಿ, ಹಳೆಗನ್ನಡ, ನಡುಗನ್ನಡ, ಹೊಸಗನ್ನಡದ ಪರಂಪರೆಯ ಬಗ್ಗೆ ಗಮನ ಸೆಳೆದರು. ಕನ್ನಡ ಸಾಹಿತ್ಯ, ಸಂಗೀತ, ಕಲೆ, ವಿಜ್ಞಾನ, ತಂತ್ರಜ್ಞಾನ ಸಹಿತ ಇನ್ನಿತರ ವಿದ್ಯಾಮಾನಗಳಲ್ಲಿ ಕನ್ನಡಿಗರ ಸಾಧನೆಗಳು, ಕೊಡುಗೆಗಳು ಸ್ಮರಣೀಯವಾಗಿದ್ದು ಕೃಷ್ಣರಾಜ ಒಡೆಯರ್, ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಅವರಿಂದ ಆರಂಭವಾದ ಕನ್ನಡ ಸಾಹಿತ್ಯ ಪರಿಷತ್ತು ಈ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಅಪಾರ ಕೊಡುಗೆ ನೀಡಿದೆ ಎಂದರು.

ಉಡುಪಿ ಜಿಲ್ಲಾ ಕಸಾಪ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಆಶಯದ ನುಡಿಗಳನ್ನಾಡಿದರು. ಮುಖ್ಯ ಅತಿಥಿಗಳಾಗಿ ಪುರಸಭಾ ಅಧ್ಯಕ್ಷೆ ಮೋಹಿನಿ ಶೆಟ್ಟಿ ಕಾಪು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಅಬ್ದುಲ್ ಹಮೀದ್ ಪಡುಬಿದ್ರಿ, ಕಸಾಪ ಜಿಲ್ಲಾ ಸಮಿತಿ ಪ್ರತಿನಿಧಿ ಕಟ್ಟಿಂಗೇರಿ ದೇವದಾಸ್ ಹೆಬ್ಬಾರ್ ಮಾತನಾಡಿದರು. ಅಧ್ಯಕ್ಷತೆಯನ್ನು ಕಸಾಪ ಕಾಪು ತಾಲೂಕು ಅಧ್ಯಕ್ಷ ಬಿ. ಪುಂಡಲೀಕ ಮರಾಠೆ ವಹಿಸಿದ್ದರು. ಜಿಲ್ಲಾ ಸಮಿತಿಯ ಸದಸ್ಯ ನರಂಹಮೂರ್ತಿ ರಾವ್, ತಾಲೂಕು ಸಂಘಟನಾ ಕಾರ್ಯದರ್ಶಿ ದೀಪಕ್ ಬೀರ, ಮಧುಕರ್ ಎಸ್. ಕಲ್ಯಾ, ಪುರಸಭಾ ಕೌನ್ಸಿಲರ್‌ಗಳಾದ ಅನಿಲ್ ಕುಮಾರ್, ಸರಿತಾ ಉಪಸ್ಥಿತರಿದ್ದರು. ತಾಲೂಕು ಕೋಶಾಧ್ಯಕ್ಷ ವಿದ್ಯಾಧರ್ ಪುರಾಣಿಕ್ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ನೀಲಾನಂದ ನಾಯ್ಕ್ ಧನ್ಯವಾದವಿತ್ತರು. ಸಮಿತಿ ಸದಸ್ಯರಾದ ಸತ್ಯಸಾಯಿ ರಸಾದ್ ನಿರೂಪಿಸಿದರು.

ಸುತ್ತಮುತ್ತ

ಪ್ರವಾಸೋದ್ಯಮ ಇಲಾಖೆ ಸಚಿವರ ಜಿಲ್ಲಾ ಪ್ರವಾಸ

ಉಡುಪಿ: ಕರ್ನಾಟಕ ಸರಕಾರದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರಾದ ಎಚ್.ಕೆ ಪಾಟೀಲ್ ಅವರು, ಮೇ 6 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.
ಅಂದು ಬೆಳಗ್ಗೆ 10.30 ಕ್ಕೆ ಬ್ರಹ್ಮಾವರ ತಾಲೂಕು ಬಾರಕೂರು ಇಲ್ಲಿನ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ಭೇಟಿ ಹಾಗೂ ಸುತ್ತಮುತ್ತಲಿನ ಪ್ರವಾಸಿ ಸ್ಥಳಗಳ ವೀಕ್ಷಣೆ, ಮ. 12.40 ಕ್ಕೆ ಖಾಸಗಿ ಕಾರ್ಯಕ್ರಮ, ಸಂಜೆ 4.30 ಕ್ಕೆ ನಗರದ ಮಣಿಪಾಲದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ನಂತರ ಮಂಗಳೂರಿಗೆ ತೆರಳಿ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ.

ಆಕಾಶವಾಣಿಯಲ್ಲಿ 'ಶ್ರೀ ಶನೈಶ್ಚರ ಮಹಿಮೆ' ಯಕ್ಷಗಾನ ತಾಳಮದ್ದಳೆ

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಶ್ರೀ ಶನೀಶ್ವರ ಪೂಜಾ ಪ್ರಸಂಗವೆಂದೇ ಪ್ರಸಿದ್ಧಿ ಪಡೆದ ಚಿನ್ಮಯ ದಾಸರ 'ಶ್ರೀ ಶನೀಶ್ವರ ಮಹಾತ್ಮೆ'ಯು ಈಗ ಮಂಗಳೂರು ಆಕಾಶವಾಣಿಯಿಂದ ಯಕ್ಷಗಾನ ತಾಳಮದ್ದಳೆಯಾಗಿ ಪ್ರಸಾರಗೊಳ್ಳಲಿದೆ. ಕರ್ನಾಟಕ ಯಕ್ಷ ಭಾರತಿ ಪುತ್ತೂರು ತಂಡದ ಕಲಾವಿದರು ಇದನ್ನು ಎರಡು ಕಂತುಗಳಾಗಿ ಪ್ರಸ್ತುತಪಡಿಸಲಿದೆ

ಶನಿ ಪ್ರಭಾವ

ಭರತವರ್ಷದ ಚಕ್ರವರ್ತಿ ರಾಜಾ ವಿಕ್ರಮಾದಿತ್ಯನ ಜನ್ಮ ರಾಶಿಗೆ ಶನಿ ಪ್ರವೇಶವಾಗುವ ಸಂದರ್ಭದ ತಾಳಮದ್ದಳೆಯ ಮೊದಲನೇ ಭಾಗ ಆಶನಿ ಪ್ರಭಾವಟಿ ಮೇ 8 ರಂದು ರಾತ್ರಿ ಗಂಟೆ 9.30ಕ್ಕೆ ಪ್ರಸಾರವಾಗಲಿದೆ.
ಅರ್ಥಧಾರಿಗಳಾಗಿ ಭಾಸ್ಕರ ರೈ ಕುಕ್ಕುವಳ್ಳಿ (ವಿಕ್ರಮಾದಿತ್ಯ),ಗಣರಾಜ ಕುಂಬ್ಳೆ(ಶನೈಶ್ಚರ), ಎಂ.ಕೆ.ರಮೇಶ ಆಚಾರ್ಯ(ಆಲೋಲಿಕೆ), ರಮೇಶ ಸಾಲ್ವಣ್ಕರ್(ನಂದಿ ಶ್ರೇಷ್ಠಿ), ಉಮೇಶಾಚಾರ್ಯ ಗೇರುಕಟ್ಟೆ(ಸುಶೀಲೆ) ಮತ್ತು ಹರಿಶ್ಚಂದ್ರ ನಾಯಗೆ ಮಾಡೂರು (ಚಂದ್ರಶಯನ) ವಿವಿಧ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಭಾಗವತರಾಗಿ ಪ್ರಶಾಂತ ರೈ ಪುತ್ತೂರು, ಹಿಮ್ಮೇಳದಲ್ಲಿ ಪಿ.ಟಿ. ಜಯರಾಮ ಭಟ್, ಕೋಳ್ಯೂರು ಭಾಸ್ಕರ ಭಾಗವಹಿಸಿದ್ದಾರೆ.

ವಿಕ್ರಮಾದಿತ್ಯ ವಿಜಯ

ಪ್ರಸಂಗದ ಎರಡನೇ ಭಾಗ 'ವಿಕ್ರಮಾದಿತ್ಯ ವಿಜಯ' ಮೇ 15 ರಂದು ರಾತ್ರಿ 9.30ಕ್ಕೆ ಪ್ರಸಾರವಾಗುವುದು.
ಕರ್ನಾಟಕ ಯಕ್ಷ ಭಾರತಿ ಸಂಚಾಲಕ ಭಾಸ್ಕರ ರೈ ಕುಕ್ಕುವಳ್ಳಿ ಸಂಯೋಜಿಸಿದ ಈ ಯಕ್ಷಗಾನವನ್ನು ಮಂಗಳೂರು ಆಕಾಶವಾಣಿಯ ಲತೀಶ್ ಪಾಲ್ದನೆ ನಿರ್ಮಿಸಿ ಬಾನುಲಿ ಪ್ರಸಾರಕ್ಕೆ ಸಿದ್ಧಪಡಿಸಿದ್ದಾರೆ.
ಚೈತನ್ಯ ಪ್ರಶಾಂತ್ ಧ್ವನಿ ಮುದ್ರಣ ಹಾಗೂ ಸಂಕಲನ ಕಾರ್ಯದಲ್ಲಿ ಸಹಕರಿಸಿದ್ದಾರೆ ಎಂದು ಪುತ್ತೂರಿನ ಕರ್ನಾಟಕ ಯಕ್ಷ ಭಾರತಿಯ ಪ್ರಕಟಣೆ ತಿಳಿಸಿದೆ.

ಮೇ 12ರಂದು ಬೀದಿನಾಯಿಗಳಿಗೆ ಸಂತಾನಹರಣ

ಮುಲ್ಕಿ: ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂತಾನ ಹರಣ (ಅನಿಮಲ್ ಬರ್ತ್ ಕಂಟ್ರೋಲ್ ರೂಲ್ಸ್ 2023) ರಂತೆ ಅನಿಮಲ್ ಕೇರ್ ಟ್ರಸ್ಟ್ ಮಂಗಳೂರು ಸಂಸ್ಥೆ ವತಿಯಿಂದ ಮೇ 12 ಮಂಗಳವಾರದಂದು ಬೀದಿ ನಾಯಿಗಳನ್ನು ಹಿಡಿಯುವ ಕಾರ್ಯವನ್ನು ಬೆಳಿಗ್ಗೆ 6.00 ಗಂಟೆಯಿಂದ ಪ್ರಾರಂಭಿಸಲಾಗುತ್ತದೆ.
ಆದುದರಿಂದ ಸಾರ್ವಜನಕರು ದಿನದಂದು ತಮ್ಮ ಮನೆಯ ಸಾಕು ನಾಯಿಗಳನ್ನು ಮನೆಯ ಒಳಗೆ ಕಟ್ಟಿ ಹಾಕಿ ನಗರ ಪಂಚಾಯತ್ ನೊಂದಿಗೆ ಸಹಕರಿಸಬೇಕಾಗಿ ಮುಲ್ಕಿ ನಗರ ಪಂಚಾಯತ್ ಮುಖ್ಯಾಧಿಕಾರಿ ಮಧುಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಮೂಡ್ಲಕಟ್ಟೆಯಲ್ಲಿ ಬ್ಯಾಂಡ್ ಸ್ಟ್ರಿಂಗ್ಸ್ ತಂಡದ ಸಂಗೀತ ರಸಮಂಜರಿ

ಕುಂದಾಪುರ: ಮೂಡ್ಲಕಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಜರುಗಿದ ರಾಷ್ಟ್ರೀಯ ಮಟ್ಟದ ಅಂತರಕಾಲೇಜು ತಾಂತ್ರಿಕ ಮತ್ತು ಸಾಂಸ್ಕೃತಿಕ ಉತ್ಸವ 'ಸಾವಿಷ್ಕಾರ್ 2026' ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ 'ಬ್ಯಾಂಡ್ ಸ್ಟ್ರಿಂಗ್ಸ್' ತಂಡದ ಸಂಗೀತ ರಸಮಂಜರಿ ಕಾರ್ಯಕ್ರಮವು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು. ಈ ಸಂಗೀತ ಸಂಜೆಯಲ್ಲಿ ಪ್ರಸಿದ್ಧ ಗಾಯಕರಾದ ಜಸ್ಕರಣ್ ಸಿಂಗ್, ಸಂದೇಶ್, ಪಲ್ಲವಿ, ರಾಜುಗೋಪಾಲ್, ಗಣೇಶ್ ಕಾರಂತ್ ಮತ್ತು ಶಮಾ ಅವರು ತಮ್ಮ ಸುಮಧುರ ಧ್ವನಿಯ ಮೂಲಕ ಕಾರ್ಯಕ್ರಮಕ್ಕೆ ಕಳೆ ನೀಡಿದರು. ಎರಡು ದಿನಗಳ ಕಾಲ ನಡೆದ ಉತ್ಸವವು ಸಂಗೀತ, ಕಲೆ ಮತ್ತು ತಾಂತ್ರಿಕತೆಯ ಅಪೂರ್ವ ಸಂಗಮಕ್ಕೆ ಸಾಕ್ಷಿಯಾಯಿತು. ಕಾರ್ಯಕ್ರಮದಲ್ಲಿ ಸಾವಿರಾರು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸಿ ಸಂಭ್ರಮಿಸಿದರು.

ಮುಲ್ಕಿ: ಶುದ್ಧ ಕುಡಿಯುವ ನೀರಿನ ಘಟಕ ಹಸ್ತಾಂತರ

ಮುಲ್ಕಿ: ಲಯನ್ಸ್ ಕ್ಲಬ್ ಲಿಯೋ ಕ್ಲಬ್ ಮತ್ತು ಕಿಲ್ಪಾಡಿ ಎಂ.ಸಿ.ಟಿ. ಪಬ್ಲಿಕ್ ಸ್ಕೂಲ್ ಆಶ್ರಯದಲ್ಲಿ ಎಂಸಿಟಿ ಪಬ್ಲಿಕ್ ಶಾಲೆಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಹಸ್ತಾಂತರಿಸಲಾಯಿತು. ಈ ಸಂದರ್ಭ ಮುಲ್ಕಿ ಲಯನ್ಸ್ ಕ್ಲಬ್ ಅಧ್ಯಕ್ಷ ಹರ್ಷರಾಜ್ ಶೆಟ್ಟಿ ಜಿ.ಎಂ. ಮಾತನಾಡಿದರು. ಈ ಸಂದರ್ಭ ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷ ಎಂ.ಬಿ. ಖಾನ್, ಶಾಲಾ ಸಂಚಾಲಕ ಹಾಜಿ ಎಚ್. ಆಬೂಬಕ್ಕರ್, ಕಾರ್ಯದರ್ಶಿ ಉಮ್ಮರ್ ಫಾರೂಕ್, ಲಯನ್ಸ್ ಕಾರ್ಯದರ್ಶಿ ಶೀತಲ್ ಸುಶೀಲ್, ಕೋಶಾಧಿಕಾರಿ ಸುಶೀಲ್ ಎನ್. ಬಂಗೇರ, ಮುಖ್ಯೋಪಾಧ್ಯಾಯರಾದ ಹರೀಶ್ ಉಪಸ್ಥಿತರಿದ್ದರು. ಶಿಕ್ಷಕ ನಮ್ರತಾ ಸ್ವಾಗತಿಸಿದರು. ಶ್ರೀಲತಾ ವಂದಿಸಿದರು.

ಮಾದಾಪುರದಲ್ಲಿ ಕೊಡವ ಸಮಾಜದ ಭವನ ಲೋಕಾರ್ಪಣೆ | ಬಸವರಾಜ ಬೊಮ್ಮಾಯಿ ಶ್ಲಾಘನೆ

ಕೊಡವರು ಪ್ರಬಲ-ಶ್ರೀಮಂತ ಸಂಸ್ಕೃತಿ ಹೊಂದಿದ ಜನಾಂಗ



ಮಡಿಕೇರಿ: ಎಲ್ಲರೂ ಆಧುನಿಕತೆಯತ್ತ ನಾಗಾಲೋಟದಲ್ಲಿ ಸಾಗುತ್ತಿರುವಾಗ ಕೊಡವರು ಮಾತ್ರ ತಮ್ಮ ಹಳೇ ಸಂಸ್ಕೃತಿಯ ಬುನಾದಿಯೊಂದಿಗೆ ಆಧುನಿಕತೆ ಅಳವಡಿಸಿಕೊಂಡು ಪ್ರಬಲ ಮತ್ತು ಶ್ರೀಮಂತ ಸಂಸ್ಕೃತಿಯನ್ನು ಹೊಂದಿದ ಜನಾಂಗವಾಗಿದ್ದಾರೆ ಎಂದು ಹಾವೇರಿ ಸಂಸದ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶ್ಲಾಘಿಸಿದರು.
ಮಾದಾಪುರದಲ್ಲಿ ಕೊಡವ ಸಮಾಜದ ನೂತನ ಭವನ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಪ್ರಾಮಾಣಿಕ ರೀತಿಯಲ್ಲಿ ತಮ್ಮ ಶ್ರೀಮಂತ ಮತ್ತು ವಿಶಿಷ್ಟವಾದ ಮೂಲ ಸಂಸ್ಕೃತಿಯನ್ನು ಸಂರಕ್ಷಿಸಿಕೊಂಡು ಹೋಗುವ ಮೂಲಕ ಕೊಡವ ಸಮುದಾಯವರು ಮಾದರಿಯಾಗಿದ್ದಾರೆ.
ಕೊಡವರ ಈ ಜೀವನ ಕ್ರಮ ಎಲ್ಲಾ ಸಮುದಾಯಕ್ಕೂ ಮಾದರಿಯಾಗಿದೆ ಎಂದು ನುಡಿದರು.
ತಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭ ಕೊಡಗಿನ ಅಭಿವೃದ್ಧಿಗಾಗಿ ಸಾಕಷ್ಟು ಅನುದಾನ ನೀಡಿದ್ದನ್ನು ಸ್ಮರಿಸಿಕೊಂಡರು.
ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೊಡಗು ಮೈಸೂರು ಸಂಸದ ಯದುವೀರ್ ಒಡೆಯರ್, ಮಾದಾಪುರ ಕೊಡವ ಸಮಾಜದ ಭವನಕ್ಕೆ ಸಂಸದರ ಅನುದಾನದಲ್ಲಿ 25 ಲಕ್ಷ ರೂ. ನೀಡುವುದಾಗಿ ಘೋಷಿಸಿದರಲ್ಲದೆ, ಇದು ಕೊಡವರಿಗೆ ಸಲ್ಲಬೇಕಾದ ಗೌರವದ ಅನುದಾನ. ಕೊಡವ ಸಂಸ್ಕೃತಿ ಸಂರಕ್ಷಣೆಗೆ ಈ ಭವನ ಸೂಕ್ತ ವೇದಿಕೆಯಾಗಲಿ ಎಂದರು.
ವಿಧಾನ ಪರಿಷತ್ ಶಾಸಕ ಮಂಡೇಪಂಡ ಸುಜಾ ಕುಶಾಲಪ್ಪ ಮಾತನಾಡಿ, ಕೊಡವರ ಸಂಸ್ಕೃತಿಯ ಹಿರಿಮೆಯ ಸಂರಕ್ಷಣೆಗಾಗಿ ಕೊಡವ ಸಮಾಜಗಳು ಬಹಳ ಮುಖ್ಯ ಪಾತ್ರವನ್ನು ವಹಿಸುತ್ತಿವೆ ಎಂದರಲ್ಲದೆ, ಮಾದಾಪುರ ಕೊಡವ ಸಮಾಜದ ಕಟ್ಟಡದ ಉಳಿದ ಕಾಮಗಾರಿಗಳಿಗೆ ಶಾಸಕರ ಅನುದಾನದಿಂದ 10 ಲಕ್ಷ ರೂ. ನೀಡುವುದಾಗಿ ಘೋಷಿಸಿದರು.
ಮಾಜಿ ಸಚಿವ ಮಂಡೇಪಂಡ ಅಪ್ಪಚ್ಚು ರಂಜನ್ ಮಾತನಾಡಿ, ಕೊಡವ ಸಮುದಾಯದ ಅಭಿವೃದ್ಧಿಗಾಗಿ ಬೊಮ್ಮಾಯಿಯವರು ನೀಡಿದ್ದ 10 ಕೋಟಿ ಅನುದಾನದಲ್ಲಿ 5 ಕೋಟಿ ರೂ. ಕೊಡವ ಸಮಾಜಗಳ ಒಕ್ಕೂಟಕ್ಕೆ ನೀಡಲಾಗಿದ್ದು, ಉಳಿದ 6 ಕೋಟಿ ರೂ. ಅನುದಾನ ಎಲ್ಲಾ ಕೊಡವ ಸಮಾಜಗಳಿಗೆ ತಲಾ 10 ಲಕ್ಷ ರೂ.ಗಳಂತೆ ನೀಡಲಾಗಿತ್ತು ಎಂದು ಮಾಹಿತಿ ನೀಡಿದರು.
ಮಡಿಕೇರಿಯಲ್ಲಿ ಜಿಲ್ಲಾ ಆಸ್ಪತ್ರೆಯ ಆಧುನೀಕರಣಕ್ಕೆ ಬಸವರಾಜ ಬೊಮ್ಮಾಯಿಯವರು 200 ಕೋಟಿ ರೂ. ನೀಡಿದ್ದಲ್ಲದೇ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಗೆ ಮೊದಲ ಬಾರಿ 1 ಕೋಟಿ ರೂ. ಅನುದಾನ ನೀಡಿದ್ದರು ಎಂದೂ ರಂಜನ್ ಸ್ಮರಿಸಿದರು.

> **ಕೊಡವರನ್ನು ಯಾರೂ ಗೆಲ್ಲಲಾಗದು..!**
>
> **ಕೊಡಗಿಗೆ ಯಾರೇ ಬಂದರೂ ಇಲ್ಲಿನ ಕೊಡವರನ್ನು ಗೆಲ್ಲಲಾಗುವುದಿಲ್ಲ, ಕೊಡವರು ತಮ್ಮ ಪ್ರೀತಿ, ವಿಶ್ವಾಸ, ಆತಿಥ್ಯದಿಂದ ಎಲ್ಲರನ್ನೂ ಸೋಲಿಸಿ ಬಿಡುತ್ತಾರೆ. ಕೊಡವರ ಸಾಂಪ್ರದಾಯಿಕ ಧಿರಿಸು, ಆಚಾರ, ವಿಚಾರಗಳು ಕೂಡಾ ಎಲ್ಲರ ಮನಗೆಲ್ಲುವಂತಿದೆ. ಹೀಗಾಗಿಯೇ ಯಾರೂ ಗೆಲ್ಲಲಾಗದ ಕೊಡವರು ನಿಜವಾದ ಅರ್ಥದಲ್ಲಿಯೂ ವೀರರಾಗಿದ್ದಾರೆ.**
>
> ● ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ, ಹಾವೇರಿ ಸಂಸದ

ಬೆಂಗಳೂರು ಕೊಡವ ಸಮಾಜಕ್ಕೆ 7 ಎಕರೆ ಜಮೀನು ದೊರಕುವಲ್ಲಿಯೂ ಬೊಮ್ಮಾಯಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಹೇಳಿದ ಅಪ್ಪಚ್ಚು ರಂಜನ್, ಶೀಘ್ರದಲ್ಲಿ ಬೊಮ್ಮಾಯಿಯವರು ಕೇಂದ್ರದ ಸಚಿವರಾಗಲಿ ಎಂದು ಕೊಡಗಿನ ಜನತೆಯ ಪರವಾಗಿ ಹಾರೈಸಿದರು.
ವಿಧಾನಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಮಾತನಾಡಿದರು. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ, ಎಸ್‌ಎಲ್‌ಎನ್ ಸಂಸ್ಥೆಯ ಉದ್ಯಮಿ ಸಾತಪ್ಪನ್, ಮಾದಾಪುರ ಕೊಡವ ಸಮಾಜದ ಅಧ್ಯಕ್ಷ ಮಂಡೇಪಂಡ ಮನು ಮೇದಪ್ಪ ಮಾತನಾಡಿದರು. ವೇದಿಕೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಮಂಡೇಪಂಡ ಸುನಿಲ್ ಸುಬ್ರಮಣಿ, ಉದ್ಯಮಿಗಳಾದ ವಿಶ್ವನಾಥನ್, ನಾಪಂಡ ಮುತ್ತಪ್ಪ ತೆರಿಗೆ ಇಲಾಖೆಯ ಆಯುಕ್ತ ಜಯರಾಮ್, ಪದ್ಮಶ್ರೀ ಮಚ್ಚಂಡ ರೋಹನ್ ಬೋಪಣ್ಣ ಅವರ ತಂದೆ ಮಚ್ಚಂಡ ಬೋಪಣ್ಣ ಸಮಾಜದ ಉಪಾಧ್ಯಕ್ಷಪಾಸುರ ಎನ್. ಉತ್ತಪ್ಪ ಆಡಳಿತ ಮಂಡಳಿಯ ನಿರ್ದೇಶಕರು ಹಾಜರಿದ್ದರು. ಅಜ್ಜಿಕುಟ್ಟೀರ ಗಿರೀಶ್ ಮತ್ತು ಸುನೀತಾ ನಿರೂಪಿಸಿದರು. ಮಾದಾಪುರ ಕೊಡವ ಸಮಾಜದ ಕಾರ್ಯದರ್ಶಿ ನಾಗಂಡ ಸಿ. ಕಾಳಪ್ಪ ವಂದಿಸಿದರು. ಕೊಡವ ಸಮಾಜ ಭವನ ನಿರ್ಮಾಣಕ್ಕೆ ಸಹಕರಿಸಿದ ದಾನಿಗಳು, ತಾಂತ್ರಿಕ ಸಿಬ್ಬಂದಿಗಳನ್ನು ಈ ಸಂದರ್ಭ ಸನ್ಮಾನಿಸಿ ಗೌರವಿಸಲಾಯಿತು. ವಿವಿಧ ತಂಡಗಳ ಕೊಡವ ಸಾಂಪ್ರದಾಯಿಕ ನೃತ್ಯಗಳ ಪ್ರದರ್ಶನ ಕಾರ್ಯಕ್ರಮದ ಆಕರ್ಷಣೆಯಾಗಿತ್ತು.

ವಿದ್ಯಾಭಾರತಿ 'ಅಂಗಳ-2026'ರಲ್ಲಿ ಎಸ್ಸೆಸ್ಸೆಲ್ಸಿ ಸಾಧಕ ವಿದ್ಯಾರ್ಥಿಗೆ ಸನ್ಮಾನ



ಹೆಬ್ರಿ: ಮಕ್ಕಳು ಪ್ರತಿದಿನವೂ ಶ್ರದ್ಧೆ ದೃಢಸಂಕಲ್ಪ ಕಾರ್ಯ ತತ್ಪರತೆಯಿಂದ ಓದುವುದರಮೂಲಕಶಿಕ್ಷಣದಲ್ಲಿಯಶಸ್ಸನ್ನು ಪಡೆಯಬಹುದು ಅವರು ಕಿರಿಯರಿಗೆ ಮಾದರಿಯಾಗಿ ಬೆಳೆಯಬಹುದು ಎಂದು ವಿದ್ಯಾಭಾರತಿ ಕರ್ನಾಟಕ ಉಡುಪಿ ಜಿಲ್ಲೆ ಇದರ ಅಧ್ಯಕ್ಷ ಪಾಂಡುರಂಗ ಪೈ ಸಿದ್ದಾಪುರ ಅಭಿಪ್ರಾಯಪಟ್ಟರು.
ಅವರು ಡ್ಯುಯಲ್ ಸ್ಟಾರ್ ಎಜುಕೇಶನ್ ಇನ್ಸ್ಟಿಟ್ಯೂಷನ್ ಅಮಾಸೆಬೈಲು ಇಲ್ಲಿಯ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ 614 ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನವನ್ನು ಪಡೆದಿರುವ ಪೃಥ್ವಿಕ್ ಶೇಖರ್ ಪೂಜಾರಿ ಅವರ ಮನೆಯಲ್ಲಿ ವಿದ್ಯಾಭಾರತಿ ಕರ್ನಾಟಕ ಉಡುಪಿ ಜಿಲ್ಲೆ ಆಯೋಜಿಸಿದ ಅಂಗಳ – 2026 ಎಂಬ ಕಾರ್ಯಕ್ರಮದ ಅಡಿಯಲ್ಲಿ ಸನ್ಮಾನಿಸಿ ಶಿಕ್ಷಣದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿದಾಗ ಶಾಲೆ ಸಮಾಜ ಗೌರವಿಸುತ್ತದೆ ಆ ಗೌರವ ಹೆತ್ತವರಿಗೆ ಆನಂದವನ್ನು ತರುತ್ತದೆ ಎಂದು ಹೇಳಿದರು.
ಸಭೆಯಲ್ಲಿ ವಿದ್ಯಾಭಾರತಿ ಕರ್ನಾಟಕ ಉಡುಪಿ ಜಿಲ್ಲೆ ಇದರ ಉಪಾಧ್ಯಕ್ಷ ವಡ್ಡರ್ಸೆ ಪ್ರಕಾಶ್ ಆಚಾರ್ಯ, ಪೋಷಕರಾದ ಶೇಖರ್ ಪೂಜಾರಿ, ವಸಂತಿ ಪೂಜಾರಿ, ರಾಮ ಪೂಜಾರಿ, ಮೋಹನ್ ನಾಯಕ್, ಗ್ರಾಮ ಪಂಚಾಯತ್ ಸದಸ್ಯರಾದ ಗಣೇಶ ಶೆಟ್ಟಿ ಮಠದ ಜಡ್ಡು ಇದ್ದರು. ವಡ್ಡರ್ಸೆ ಪ್ರಕಾಶ್ ಆಚಾರ್ಯ ಸ್ವಾಗತಿಸಿದರು. ಶಿಕ್ಷಕ ವಿಘ್ನೇಶ್ ಜಿ ಎಲ್ ರವರು ಸನ್ಮಾನ ಪತ್ರ ವಾಚಿಸಿದರು. ವಿದ್ಯಾ ಭಾರತಿ ಕರ್ನಾಟಕ ಉಡುಪಿ ಜಿಲ್ಲೆಯ ಕಾರ್ಯದರ್ಶಿ ಮಹೇಶ್ ಹೈಕಾಡಿ ನಿರೂಪಿಸಿದರು.

ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯ ಸಾಧನೆ ಗುರಿ ಇರಲಿ: ಅರವಿಂದ ಅಯ್ಯಪ್ಪ



ಸುಬ್ರಹ್ಮಣ್ಯ: ಯುವ ಜನಾಂಗ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸಾಧನೆ ಮಾಡುವ ಗುರಿಯನ್ನು ಹೊಂದಿರಬೇಕು. ಇದು ಭವಿಷ್ಯಕ್ಕೆ ಆಧಾರವಾಗಿರುತ್ತದೆ. ಸರಕಾರಿ ಉದ್ಯೋಗ ಪಡೆಯುವಲ್ಲಿ ಈ ಭಾಗದ ಯುವ ವಿದ್ಯಾರ್ಥಿಗಳು ಹೆಚ್ಚಿನ ಶ್ರಮ ವಹಿಸಬೇಕು ಎಂದು ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಮತ್ತು ಕಾಲೇಜಿನ ಆಡಳಿತ ಮಂಡಳಿಯ ಪದನಿಮಿತ್ತ ಕಾಯದರ್ಶಿ ಅರವಿಂದ ಅಯ್ಯಪ್ಪ ಸುತಗುಂಡಿ ಹೇಳಿದರು.
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತಕ್ಕೊಳಪಟ್ಟ ಕೆ.ಎಸ್.ಎಸ್. ಕಾಲೇಜಿನ ವಾರ್ಷಿಕೋತ್ಸವದ ಅಂಗವಾಗಿ ಮಂಗಳವಾರ ನಡೆದ ಬಹುಮಾನ ವಿತರಣಾ ಸಮಾರಂಭವನ್ನು ಉದ್ಘಾಟಿಸಿ, ಅವರು ಮಾತನಾಡಿದರು.
ಕಷ್ಟ ಪರಿಶ್ರಮದ ಮೂಲಕ ವಿದ್ಯೆ ಕಲಿಯುವುದರಿಂದ ಜೀವನದಲ್ಲಿ ಮಾನವೀಯತೆ ಅಧಿಕವಾಗುತ್ತದೆ. ಸೋಲು ಗೆಲುವು ಎನ್ನುವುದು ಜೀವನದ ಅವಿಭಾಜ್ಯ ಅಂಗ. ಇದನ್ನು ಸಮನಾಗಿ ಸ್ವೀಕರಿಸಿ ಗುರಿಯತ್ತ ಸಾಗುವುದು ಅತ್ಯಗತ್ಯ ಎಂದು ತಿಳಿಸಿದರು.
ಕುಮಾರಸ್ವಾಮಿ ಪಿಯು ಕಾಲೇಜಿನ ಪ್ರಾಂಶುಪಾಲ ಡಾ. ಸಂಕೀರ್ತ್ ಹೆಬ್ಬಾರ್ ಮುಖ್ಯ ಅತಿಥಿಗಳಾಗಿದ್ದರು. ಕಾಲೇಜಿನ ಪ್ರಾಂಶುಪಾಲ ಡಾ. ದಿನೇಶ್ ಪಿ.ಟಿ., ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಡಾ. ರವಿ ಕಕ್ಕೆಪದವು ಸದಸ್ಯ ಭವಾನಿ ಶಂಕರ್ ಪೈಲಾಜೆ, ಐಕ್ಯುಎಸಿ ಸಂಯೋಜಕಿ ಲತಾ ಬಿ.ಟಿ., ವಿದ್ಯಾರ್ಥಿ ಸಂಘದ ಅಧ್ಯಕ್ಷೆ ನಿಶಾ ಗೌರಿ, ಉಪಾಧ್ಯಕ್ಷ ಕೀರ್ತನ್, ಕಾರ್ಯದರ್ಶಿ ದೀಕ್ಷ ವೇದಿಕೆಯಲ್ಲಿದ್ದರು. ಮನೋಹರ್ ಸ್ವಾಗತಿಸಿ, ಶ್ರೀಲತಾ ವಂದಿಸಿದರು. ಉಪನ್ಯಾಸಕಿ ಆರತಿ ಕಾರ್ಯಕ್ರಮ ನಿರ್ವಹಿಸಿದರು.

ಸುಜೀರು ವೈದ್ಯನಾಥ ಕ್ರಿಕೆಟರ್ಸ್ ರಜತ ಮಹೋತ್ಸವದ ಸಂಭ್ರಮ



ಬಂಟ್ವಾಳ: 25 ವರ್ಷಗಳಿಂದ ಸಾಮಾಜಿಕ, ಧಾರ್ಮಿಕವಾಗಿ ತೊಡಗಿಸಿಕೊಂಡು ಸಂಘಟನೆಯೊಂದು ರಜತ ಸಂಭ್ರಮದ ಆಚರಿಸುವುದು ಹೆಮ್ಮೆಯ ವಿಚಾರ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿದರು.
ಪುದು ಗ್ರಾಮದ ಸುಜೀರು ಶ್ರೀ ಅರಸು ವೈದ್ಯನಾಥ ಧೂಮಾವತಿ ಬಂಟ ದೈವಸ್ಥಾನದ ಆವರಣದಲ್ಲಿ ನಡೆದ ವೈದ್ಯನಾಥ ಕ್ರಿಕೆಟರ್ಸ್ ಇದರ ರಜತ ಮಹೋತ್ಸವ ಸಂಭ್ರಮದ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.
ಅಧ್ಯಕ್ಷತೆಯನ್ನು ಉದ್ಯಮಿ ಐತಪ್ಪ ಆಳ್ವ ಸುಜೀರುಗುತ್ತು ವಹಿಸಿದ್ದರು. ದೈವ ಪಾತ್ರಿ ಮುಂಡ ಯಾನೆ ಮೋನಪ್ಪ ಪೂಜಾರಿ ಸುಜೀರು ದೀಪ ಪ್ರಜ್ವಲನಗೈದರು. ಫರಂಗಿಪೇಟೆ ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೆ. ಕೃಷ್ಣ ಕುಮಾರ್ ಪೂಂಜ, ಪುದು ಗ್ರಾ.ಪಂ. ಪಿಡಿಒ ಡಾ. ಸ್ಮೃತಿ ಯು., ಉದ್ಯಮಿ ಉಮೇಶ ಸಾಲ್ಯಾನ್ ಬೆಂಜನಪದವು, ತಾ.ಪಂ. ಮಾಜಿ ಸದಸ್ಯ ಗಣೇಶ ಸುವರ್ಣ ತುಂಬೆ, ಅಡ್ಯಾರ್ ಶ್ರೀ ವೀರಾಂಜನೇಯ ದೇವಸ್ಥಾನದ ಅಧ್ಯಕ್ಷ ರಮೇಶ ತುಂಬೆ, ಆದರ್ಶ ಆಟೋ ವರ್ಕ್ಸ್ ಮಾಲಕ ನಾಗೇಶ ಕೊಟ್ಟಾರಿ, ರಜತ ಮಹೋತ್ಸವ ಸಮಿತಿ ಅಧ್ಯಕ್ಷ ರವೀಂದ್ರ ಕಲ್ಲಾಜೆ, ಪ್ರಧಾನ ಕಾರ್ಯದರ್ಶಿ ರಾಜೇಶ್ ಮೆಜಪೆ, ಕೋಶಾಧಿಕಾರಿ ಸುಶಾನ್ ಸುಜೀರು, ವೈದ್ಯನಾಥ ಕ್ರಿಕೆಟರ್ಸ್ ಅಧ್ಯಕ್ಷ ಸತೀಶ್ ಮೆಜಪೆ, ಗೌರವಾಧ್ಯಕ್ಷ ಸಂಜೀವ ಪೂಜಾರಿ ಉಪಸ್ಥಿತರಿದ್ದರು.ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು.
ರಜತ ಮಹೋತ್ಸವ ಸಮಿತಿಯ ಗೌರವಾಧ್ಯಕ್ಷ ಕಿಶೋರ್ ಸುಜೀರು ಪ್ರಸ್ತಾವಿಕವಾಗಿ ಮಾತನಾಡಿದರು,ಕು. ಸಿಂಚನ ಪ್ರಾರ್ಥಿಸಿ, ನಾಗೇಶ್ ಅಮೀನ್ ದತ್ತನಗರ ಸ್ವಾಗತಿಸಿದರು, ಯಶೋದಾ ಜಯಂತ್ ವಂದಿಸಿದರು. ನಿಖಿತ್ ಕೊಟ್ಟಾರಿ ಕಣ್ಣೂರು ನಿರೂಪಿಸಿದರು. ಇದಕ್ಕು ಮುನ್ನ ಶ್ರೀ ಲಕ್ಷ್ಮೀ ಸತ್ಯನಾರಾಯಣ ಪೂಜೆ, ಬಳಿಕ ಸ್ಥಳೀಯ ಪ್ರತಿಭೆಗಳಿಂದ ನೃತ್ಯ, ಜೋಡು ಜೀಟಿಗೆ ತುಳು ನಾಟಕ ಪ್ರದರ್ಶನಗೊಂಡಿತು.

ಅವಕಾಶ ಸದ್ಬಳಕೆಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕೊರತೆ ಇದೆ: ಇಬ್ರಾಹಿಂ



ಕೋಟ: ಇಂದು ಮಕ್ಕಳಿಗೆ ಮಾಹಿತಿಯ ಕೊರತೆ ಇದೆ. ಅವಕಾಶಗಳ ಸದ್ಬಳಕೆಗೆ ಮಾರ್ಗದರ್ಶನದ ಕೊರತೆ ಇದೆ. ಆ ದೃಷ್ಟಿಯಿಂದ ಶೈಕ್ಷಣಿಕವಾಗಿ ಮಕ್ಕಳನ್ನು ಅಭಿವೃದ್ಧಿಪಡಿಸುವುದು ಬಲಯುತರಾಗಿ ಮಾಡುವುದು ಇಂದಿನ ಕಾಲದ ಬಹಳ ಮುಖ್ಯವಾದ ವಿಚಾರವಾಗಿದೆ. ಈ ದಿಸೆಯಲ್ಲಿ ಶೈಕ್ಷಣಿಕ ಹಲವುಗಳು ವಿಸ್ತಾರಗೊಳ್ಳಬೇಕು. ಆ ಎಲ್ಲಾ ಹಿನ್ನೆಲೆಯಿಂದ ಶಿಕ್ಷಣ ಸಂಪದ ಕಾರ್ಯಕ್ರಮವನ್ನು ಆರಂಭಿಸುವ ಯೋಚನೆ ಮಾಡಿದ್ದು ಇದಕ್ಕೆ ಎಲ್ಲರ ಸಹಕಾರ ಬೇಕು ಎಂದು ಸಾಂಸ್ಕೃತಿಕ ಚಿಂತಕ ಇಬ್ರಾಹಿಂ ಸಾಹೇಬ್ ಹಂಗಾರಕಟ್ಟೆ ನುಡಿದರು.
ಅವರು ಕಾರಂತ ಅನೌಪಚಾರಿಕ ಶಿಕ್ಷಣ ಕೇಂದ್ರ ಕೋಟ ಕಾರಂತ ಪ್ರತಿಷ್ಠಾನ ಕೋಟ ಕೋಟತಟ್ಟು ಗ್ರಾಮ ಪಂಚಾಯತ್ ಅರಿವು ಡಿಜಟಲ್ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ ಕೋಟತಟ್ಟು ಆಸರೆಯಲ್ಲಿ ನಡೆದ ಶಿಕ್ಷಣ ಸಂಪದ ಸರಣಿ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.
ಅಧ್ಯಕ್ಷ ಆನಂದ ಸಿ. ಕುಂದರ್ ಮಾತನಾಡಿ, ಶೈಕ್ಷಣಿಕದಲ್ಲಿ ಸಾಕಷ್ಟು ಅವಕಾಶಗಳಿದ್ದರೂ ಆದರ ಸದ್ಬಳಕೆ ಇನ್ನು ಆಗಿಲ್ಲ. ಆ ದೃಷ್ಟಿಯಿಂದ ಶಿಕ್ಷಣ ಸಂಪದ ಕಾರ್ಯಕ್ರಮ ಬಹಳ ಶ್ಲಾಘನೀಯವಾದುದು. ಹಾಗಾಗಿ ಇಬ್ರಾಹಿಂ ಸಾಹೇಬರು ಅಭಿನಂದನೆಗೆ ಅರ್ಹರು ಎಂದರು.
ವೇದಿಕೆಯಲ್ಲಿ ಸುಬ್ರಾಯ ಆಚಾರ್, ಶಿಬಿರದ ಮೇಲ್ವಿಚಾರಕಿ ಶಾರದಾ ಜೈನ್, ಶಿಬಿರದ ವಿವಿಧ ತಂಡಗಳ ನಾಯಕರು ಉಪಸ್ಥಿತರಿದ್ದರು. ಶಿಬಿರದ ನಿರ್ದೇಶಕರಾದ ನರೇಂದ್ರ ಕುಮಾರ್ ಕೋಟ ಸ್ವಾಗತಿಸಿ, ಪ್ರಸ್ತಾವಿಸಿದರು. ಸಂಪನ್ಮೂಲ ವಿದ್ಯಾರ್ಥಿ ಉನ್ನತಿ ಹಂದಟ್ಟು ನಿರೂಪಿಸಿದರು.



ಕುಂದಾಪುರ ತಾಲೂಕಿನ ಕೆರಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಚಿತ್ತೂರು - ಹೆಮ್ಮಕ್ಕಿಹರದಲ್ಲಿ ಲೋಕೋಪಯೋಗಿ ಇಲಾಖೆಯಿಂದ ನದಿಗೆ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಕೆರಾಡಿ ಗ್ರಾ.ಪಂ. ಮಾಜಿ ಅಧ್ಯಕ್ಷ ಸುದರ್ಶನ ಶೆಟ್ಟಿ ಮತ್ತಿತರರು ಇದ್ದರು.



ಎಂಐಟಿ ಕುಂದಾಪುರದ ಸಾವಿಷ್ಕರ್-2026 ಕಾರ್ಯಕ್ರಮದಲ್ಲಿ ಬೈಂದೂರು ಸರಕಾರಿ ಪಿಯು ಕಾಲೇಜಿನ ರಾಜ್ಯ ಪ್ರಶಸ್ತಿ ಪುರಸ್ಕೃತ ಪ್ರಾಧ್ಯಾಪಕ ಉದಯ್ ಕುಮಾರ್ ಎಂ. ಸಿ. ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಐಎಂಜೆ ವಿದ್ಯಾಸಂಸ್ಥೆಗಳ ಚೇರ್ಮನ್ ಸಿದ್ಧಾರ್ಥ ಜೆ. ಶೆಟ್ಟಿ ಮತ್ತಿತರರು ಇದ್ದರು.

ಸ್ವಾವಲಂಬಿ ಸಾರಥಿ ಯೋಜನೆಯಡಿ ಫಲಾನುಭವಿಗಳಿಗೆ ವಾಹನ ಹಸ್ತಾಂತರ



ಕಾಪು: ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಉಡುಪಿ ಜಿಲ್ಲೆ ವತಿಯಿಂದ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರ ಶಿಫಾರಸ್ಸಿನ ಮೇರೆಗೆ ಸ್ವಾವಲಂಬಿ ಸಾರಥಿ ಯೋಜನೆಯಡಿ ಗೂಡ್ಸ್ ವಾಹನ ಮಂಜೂರಾಗಿದ್ದು ಮಂಗಳವಾರ ಕಾಪು ತಾಲೂಕು ಪಂಚಾಯತ್ ಕಟ್ಟಡದ ಬಳಿ ಫಲಾನುಭವಿಗಳಿಗೆ ಶಾಸಕರು ವಿತರಿಸಿದರು.
ಸ್ವಾವಲಂಬಿ ಸಾರಥಿ ಯೋಜನೆಯಡಿ ಎರ್ಮಾಳು ಗ್ರಾಮದ ಸುಜೀಂದ್ರ, ಕಟಪಾಡಿ ಏಣಗುಡ್ಡೆ ಗ್ರಾಮದ ಸೂರಜ್ ಅವರಿಗೆ ಸೇರಿದಂತೆ ಒಟ್ಟು 2 ಫಲಾನುಭವಿಗಳಿಗೆ ಗೂಡ್ಸ್ ವಾಹನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಕಾಪು ತಹಶೀಲ್ದಾರರಾದ ಅನಂತ್ ಶಂಕರ್, ಕಾಪು ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ವಿಜಯ್ ಕುಮಾರ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕರಾದ ಶಂಕರ್ ಉಪಸ್ಥಿತರಿದ್ದರು.

ನಾಳೆ ಅಂಬಿಕಾದಲ್ಲಿ ಶೃಂಗೇರಿ ಪೀಠಾಧ್ಯಕ್ಷ ಜಗದ್ಗುರುಗಳಿಗೆ ಗುರು ವಂದನೆ



ಪುತ್ತೂರು: ಶ್ರೀ ಶಂಕರಾಚಾರ್ಯರು ಸ್ಥಾಪಿಸಿದ ಶೃಂಗೇರಿ ಪೀಠಾಧ್ಯಕ್ಷ ಜಗದ್ಗುರು ಶ್ರೀ ವಿಧುಶೇಖರಭಾರತೀ ಸನ್ನಿಂದಾನಂಗಳವರ ಗುರು ವಂದನೆ ಮತ್ತು ಪಾದಪೂಜೆ ಕಾರ್ಯಕ್ರಮ ಮೇ 7ರಂದು ಬಪ್ಪಳಿಗೆಯಲ್ಲಿರುವ ಅಂಬಿಕಾ ಸಮೂಹ ವಿದ್ಯಾ ಸಂಸ್ಥೆಯ ಪ್ರಾಂಗಣದಲ್ಲಿ ನಡೆಯಲಿದ್ದು ಸಮಸ್ತ ಹಿಂದೂ ಬಾಂಧವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಎಂದು ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಅಭಿನಂದನಾ ಸಮಿತಿ ಅಧ್ಯಕ್ಷ ಚಿದಾನಂದ ಬೈಲಾಡಿ ವಿನಂತಿಸಿದ್ದಾರೆ.
ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 6ರಂದು ಸಂಜೆ ಶ್ರೀ ಗುರುಗಳು ಪುತ್ತೂರಿಗೆ ಆಗಮಿಸಲಿದ್ದು ಅವರನ್ನು ಕಟಕ ಗ್ರಾಮದ ಪೋಳ್ಯದಿಂದ ವಾಹನ ಜಾಥಾದೊಂದಿಗೆ ಬರಮಾಡಿಕೊಂಡು, ಬಪ್ಪಳಿಗೆ ಜಂಕ್ಷನ್‌ನಿಂದ ಪೂರ್ಣ ಕುಂಭ ಸ್ವಾಗತದೊಂದಿಗೆ ಅಂಬಿಕಾ ವಿದ್ಯಾಸಂಸ್ಥೆಯ ಪ್ರಾಂಗಣಕ್ಕೆ ಮೆರವಣಿಗೆಯಲ್ಲಿ ಕರೆತರಲಾಗುವುದು. ಅಂದು ಶ್ರೀಗಳು ನಟ್ಟೋಜ ಅವರ ನಿವಾಸದಲ್ಲಿ ವಾಸ್ತವ್ಯ ಹೊಂದಿ ಮೇ 7ರಂದು ಬೆಳಗ್ಗೆ ನಟ್ಟೋಜ ಮನೆತನದ ಜಾಗದಲ್ಲಿರುವ ಉಳ್ಳಾಲ್ತಿ ಮೂಲಸ್ಥಾನದಲ್ಲಿ ಅವರ ಉಪಸ್ಥಿತಿಯಲ್ಲಿ ಚಂಡಿಕಾ ಯಾಗ ನಡೆಯಲಿದೆ ಎಂದರು.
ಬೆಳಗ್ಗೆ ಗಂಟೆ 9ಕ್ಕೆ ಶ್ರೀ ಗುರುಗಳು ಅಂಬಿಕಾ ವಿದ್ಯಾಸಂಸ್ಥೆಯ ಪ್ರಾಂಗಣಕ್ಕೆ ಆಗಮಿಸಲಿದ್ದು ಬಳಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭ ಹಿಂದೂ ಬಾಂಧವರ ವತಿಯಿಂದ ಗುರುವಂದನಾ ಕಾರ್ಯಕ್ರಮ ನಡೆಯಲಿದೆ. ಶ್ರೀ ಗುರುಗಳ ಅಭಿನಂದನಾ ನುಡಿಯನ್ನು ವಿದ್ಯಾವಾಚಸ್ಪತಿ ವಿದ್ವಾನ್ ಕರೆಕ್ಕೆ ಉಮಾಕಾಂತ ಭಟ್ ಅವರು ಮಾಡಲಿದ್ದಾರೆ. ಗುರುವಂದನಾ ಕಾರ್ಯಕ್ರಮದ ಬಳಿಕ ಪುತ್ತೂರು ತಾಲೂಕು ಧರ್ಮಾಭ್ಯುದಯದ ಸಮಿತಿ ಮೂಲಕ ನಡೆದ ಶಿಬಿರದ ಶಿಬಿರಾರ್ಥಿಗಳಿಗೆ ವಿಶೇಷ ಗೌರವಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಇದರೊಂದಿಗೆ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವದ ಪ್ರಯುಕ್ತ ವಿವಿಧ ಕಾರ್ಯಕ್ರಮಗಳೊಂದಿಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದರು.
ವಿಶೇಷವಾಗಿ ಚಂದ್ರಮೌಳೀಶ್ವರ ದೇವರ ಸಹಿತ ಶ್ರೀ ಗುರುಗಳು ಪುತ್ತೂರಿಗೆ ಆಗಮಿಸಲಿದ್ದಾರೆ. ಹಾಗಾಗಿ ಹಿಂದೂ ಬಾಂಧವರು ತಮ್ಮ ತರವಾಡು ಮತ್ತು ಇನ್ನಿತರ ಮನೆಗಳಲ್ಲಿ ಪ್ರಶ್ನಾ ಚಿಂತನೆಯಲ್ಲಿ ಶೃಂಗೇರಿಗೆ ಹೋಗಿ ಪಾದ ಪೂಜೆಯನ್ನು ಮಾಡಿಸಿ ಗುರುಗಳ ಅನುಗ್ರಹವನ್ನು ಪಡೆದುಕೊಳ್ಳಬೇಕಾಗಿ ಕಂಡು ಬಂದಲ್ಲಿ ತೆರಳುವುದು ವಾಡಿಕೆ. ಈಗ ಶ್ರೀ ಗುರುಗಳೇ ಪುತ್ತೂರಿಗೆ ಆಗಮಿಸಿ ಪಾದಪೂಜೆ ಸ್ವೀಕರಿಸುವ ಹಿನ್ನೆಲೆಯಲ್ಲಿ ಹಿಂದೂ ಬಾಂಧವರು ಇದರ ಸದುಪಯೋಗ ಪಡೆದುಕೊಂಡು ಶ್ರೀ ಗುರುಗಳ ಅನುಗ್ರಹಕ್ಕೆ ಪಾತ್ರರಾಬೇಕಾಗಿ ವಿನಂತಿಸುವ ಜೊತೆಗೆ ಶೃಂಗೇರಿಯಲ್ಲಿ ನೆರವೇರುವ ರೀತಿಯಲ್ಲಿಯೇ ಪಾದಪೂಜೆ ನಡೆಯಲಿದೆ. ಆಸಕ್ತರು ಮೇ 7ರ ಪೂರ್ವಾಹ್ನ 9 ಗಂಟೆಗೆ ಆಗಮಿಸಿ ಪಾದಪೂಜಾ ರಶೀದಿಯನ್ನು ಪಡೆದುಕೊಂಡು ಪಾದಪೂಜೆಯಲ್ಲಿ ಭಾಗವಹಿಸಬಹುದು. ಸಭಾ ಕಾರ್ಯಕ್ರಮದ ಬಳಿಕ ಎಲ್ಲಾ ಭಕ್ತರಿಗೆ ಶ್ರೀಗಳು ಮಂತ್ರಾಕ್ಷತೆ ವಿತರಿಸಲಿದ್ದಾರೆ ಎಂದು ಚಿದಾನಂದ ಬೈಲಾಡಿ ತಿಳಿಸಿದರು.
ಸುದ್ದಿಗೋಷ್ಠಿಯಲ್ಲಿ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಹ್ಮಣ್ಯ ನಟ್ಟೋಜ, ಅಭಿನಂದನಾ ಸಮಿತಿ ಗೌರವಾಧ್ಯಕ್ಷ ಮುಗರೋಡಿ ಬಾಲಕೃಷ್ಣ ರೈ, ಕಾರ್ಯಾಧ್ಯಕ್ಷ ಶಿವರಾಮ ಆಳ್ವ ಪ್ರಧಾನ ಕಾರ್ಯದರ್ಶಿ ಆರ್.ಸಿ.ನಾರಾಯಣ ರೆಂಜ, ಧರ್ಮಾಭ್ಯುದಯ ತಾಲೂಕು ಸಮಿತಿ ಅಧ್ಯಕ್ಷ ದಂಬೆಕಾನ ಸದಾಶಿವ ರೈ ಉಪಸ್ಥಿತರಿದ್ದರು.

ಸುತ್ತ ಮುತ್ತ

ಮೇ 9, 10ರಂದು 'ಎಲ್‌ಸಿಎಲ್ ಸೀಸನ್ ಕ್ರಿಕೆಟ್ ಹಬ್ಬ

ಮಂಗಳೂರು: ಸುರತ್ಕಲ್ ಸ್ಪೋರ್ಟ್ಸ್ ಆ್ಯಂಡ್ ಕಲ್ಚರಲ್ ಕ್ಲಬ್ ಮತ್ತು ಸುರತ್ಕಲ್ ಸ್ಪೋರ್ಟ್ಸ್ ಆ್ಯಂಡ್ ಕಲ್ಚರಲ್ ಸೇವಾ ಟ್ರಸ್ಟ್ ಜಂಟಿ ಆಶ್ರಯದಲ್ಲಿ ರಾಜ್ಯ ಮಟ್ಟದ 45 ವರ್ಷ ಮೇಲ್ಪಟ್ಟ ಆಟಗಾರರ ತಂಡಗಳ ಓವರ್ ಆರ್ಮ್ ಕ್ರಿಕೆಟ್ ಪಂದ್ಯಾಟ 'ಎಲ್‌ಸಿಎಲ್ ಸೀಸನ್ –5 ಹಿರಿಯರ ಕ್ರಿಕೆಟ್ ಹಬ್ಬ' ಮೇ 9 ಮತ್ತು 10ರಂದು ಸುರತ್ಕಲ್ ಗೋವಿಂದದಾಸ ಕಾಲೇಜಿನ ಕ್ರೀಡಾಂಗಣದಲ್ಲಿ ನಡೆಯಲಿದೆ.

ಪಂದ್ಯಾವಳಿಯಲ್ಲಿ ಬೆಂಗಳೂರು, ಹಾಸನ, ಶಿವಮೊಗ್ಗ, ಅರಸೀಕೆರೆ, ದ.ಕ., ಉಡುಪಿ ಸೇರಿದಂತೆ ರಾಜ್ಯದ ವಿವಿಧೆಡೆಯ 12 ತಂಡಗಳು ಭಾಗವಹಿಸಲಿವೆ. ಆರು ಓವರ್‌ಗಳ ಪಂದ್ಯ ನಡೆಯಲಿದೆ. ವಿಜೇತ ತಂಡಕ್ಕೆ 1,00,005 ರೂ. ನಗದು ಸಹಿತ ಟ್ರೋಫಿ, ದ್ವಿತೀಯ 50,005 ರೂ. ನಗದು ಸಹಿತ ಟ್ರೋಫಿ ದೊರೆಯಲಿದೆ. ತೃತೀಯ ಮತ್ತು ಚತುರ್ಥ ಬಹುಮಾನವಾಗಿ ಆಕರ್ಷಕ ಟ್ರೋಫಿ ನೀಡಲಾಗುವುದು ಎಂದು ಕ್ಲಬ್‌ನ ಪ್ರಧಾನ ಕಾರ್ಯದರ್ಶಿ ಕರುಣ್ ಹೊಸಬೆಟ್ಟು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮೇ 9ರಂದು ಬೆಳಗ್ಗೆ 8 ಗಂಟೆಗೆ ಉದ್ಘಾಟನೆ ನಡೆಯಲಿದ್ದು, ಗಣ್ಯರು ಭಾಗವಹಿಸಲಿದ್ದಾರೆ. ಮೇ 10ರಂದು ಸಂಜೆ 5 ಗಂಟೆಗೆ ಗಣ್ಯರ ಉಪಸ್ಥಿತಿಯಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ ಎಂದರು.

ಅಧ್ಯಕ್ಷ ಮಹಾಬಲ ಪೂಜಾರಿ ಕಡಂಬೋಡಿ, ಸದಸ್ಯ ಪುಷ್ಪರಾಜ್ ಶೆಟ್ಟಿ ಉಪಸ್ಥಿತರಿದ್ದರು.

ಮೇ 8: ಕನ್ನಡ ಚಲನಚಿತ್ರ 'ಮಂಗಮ್ಮಾಯಿ' ತೆರೆಗೆ

ಪುತ್ತೂರು: ಪುತ್ತೂರು ಬ್ರದರ್ಸ್ ಎಂಟರ್ಟೇನ್ಮೆಂಟ್ ನಿರ್ಮಾಣದ ಕನ್ನಡ ಚಲನಚಿತ್ರ 'ಮಂಗಮ್ಮಾಯಿ' ಮೇ 8ರಂದು ರಾಜ್ಯದಾದ್ಯಂತ ತೆರೆ ಕಾಣಲಿದೆ ಎಂದು ಚಿತ್ರದ ಕಾರ್ಯಕಾರಿ ನಿರ್ಮಾಪಕ, ವ್ಯವಸ್ಥಾಪಕರು ಆಗಿರುವ ಪ್ರಸನ್ನ ಪುತ್ತೂರು ಮತ್ತು ಅವರ ಸಹೋದರ ಕಲಾ ನಿರ್ದೇಶಕ ಪ್ರಸಾದ್ ಪುತ್ತೂರು ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಣ್ಣ ವೆಚ್ಚದ, ನೈಜ ಘಟನೆ ಆಧಾರಿತ, ಒಂದೇ ದಿನ ನಡೆಯುವ ಕಥಾ ಹಂದರವಾಗಿದ್ದು ಹಲವು ಕರಾವಳಿಯ ಕಲಾವಿದರ, ತಂತ್ರಜ್ಞರ ಸಮಾಗಮದಲ್ಲಿ ಈ ಚಿತ್ರವು ಕರಾವಳಿ ಕನ್ನಡದ ಭಾಷಾ ಸೊಗಡು ಇರುವ ಚಿತ್ರವಾಗಿದೆ ಎಂದರು. ಮೈಸೂರು ವಿದ್ಯಾರಣ್ಯಪುರದ ವಸತಿ ಗೃಹದಲ್ಲಿ ಶೂಟಿಂಗ್ ಮಾಡಲಾಗಿದ್ದು ಕೇವಲ 43 ದಿನದಲ್ಲಿ ಶೂಟಿಂಗ್ ನಡೆದಿದೆ ಎಂದು ತಿಳಿಸಿದರು. ಚಿತ್ರದ ಮಾರ್ಕೆಟಿಂಗ್ ಮತ್ತು ಸೋಶಿಯಲ್ ಮೀಡಿಯಾ ಫಿಲ್ಮ್ ಸಂಸ್ಥೆಯ ಹರ್ಷ ಕಟ್ಟಿಮನಿ, ಚಿತ್ರದ ವಿತರಕ ಬಾಲಕೃಷ್ಣ ಶೆಟ್ಟಿ ಕುಕ್ಕಾಡಿ ಉಪಸ್ಥಿತರಿದ್ದರು.

ಕೊಡಗಿನ ಆರಾಧ್ಯ ದೈವ ಅಜ್ಜಪ್ಪನ ವಾರ್ಷಿಕ ಉತ್ಸವ



ವೀರಾಜಪೇಟೆ: ಕೊಡಗಿನ ಮೂಲ ಪುರುಷ ಎಂದೇ ಖ್ಯಾತಿಯಾಗಿರುವ ಅಜ್ಜಪ್ಪ ದೇವರು ಇಲ್ಲಿಯ ಜನರ ಭಕ್ತಿ ಭಾವದ ಆರಾಧ್ಯ ದೈವ. ಕೊಡಗಿನ ಸಂಸ್ಕೃತಿಯಲ್ಲಿ ಗುರು ಕಾರಣ ಅಜ್ಜಪ್ಪನನ್ನು ಪೂಜಿಸುವ ಸಂಪ್ರದಾಯ ಮೊದಲಿಂದಲೂ ನಡೆದು ಬಂದಿದೆ ಆದರಂತೆ ಕಲ್ಯಾಟಅಜ್ಜಪ್ಪ ದೈವವು ನಾಪೋಕ್ಲುವಿನ ಮಕ್ಕಿ ಶಾಸ್ತಾವು ದೇವಾಲಯದಲ್ಲಿ ನೆಲೆ ನಿಂತಿದೆ ಎನ್ನಲಾಗುತ್ತದೆ. ಆದರಂತೆ ಪ್ರತೀ ವರ್ಷ ನಾಪೋಕ್ಲು ಬಳಿಯ ಬೇತು ಗ್ರಾಮದ ಶಾಸ್ತಾವು ದೇವಾಲಯದಲ್ಲಿ ಭಕ್ತಿ ಭಾವದಿಂದ ಪೂಜೆ ಸಲ್ಲಿಸಲಾಗುತ್ತದೆ. ಬೇತು ಗ್ರಾಮದ ಮಕ್ಕಿ ಶಾಸ್ತಾವು ದೇವರ ವಾರ್ಷಿಕ ಉತ್ಸವದ ಅಂಗವಾಗಿ ಎತ್ತು ಪೋರಾಟ ನಡೆಯಿತು.ಹೆಚ್ಚಿನ ಸಂಖ್ಯೆಯ ಭಕ್ತರು ಉತ್ಸವದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಎತ್ತುಗಳ ಮೇಲೆ ಅಕ್ಕಿಯ ಚೀಲಗಳನ್ನಿರಿಸಿ ಭಕ್ತರು ಹರಕೆ ಸಲ್ಲಿಸುವುದು ಹಲವು ವರ್ಷಗಳಿಂದ ನಡೆದು ಬಂದ ಪದ್ಧತಿ. ಈ ಅಪೂರ್ವ ಕ್ಷಣ ವೀಕ್ಷಿಸಲು ವಿವಿಧ ಗ್ರಾಮಗಳ ಭಕ್ತರು ನೆರೆದಿದ್ದರು. ಬಳಿಕ ದೇವಳದಲ್ಲಿ ಪೂಜೆ ಸಲ್ಲಿಸಲಾಯಿತು. ನೆರೆದಿದ್ದ ಭಕ್ತರಿಗೆ ದೇವಾಲಯದ ವತಿಯಿಂದ ಪ್ರಸಾದ ವಿತರಿಸಲಾಯಿತು. ರಾತ್ರಿ ವಿವಿಧ ಸಾಂಪ್ರದಾಯಿಕ ಆಚರಣೆಗಳಿಗೆ ಚಾಲನೆ ನೀಡಲಾಯಿತು. ದೀಪಾರಾಧನೆ–ಅಂದಿಬೊಳಕ್ ನಡೆಯಿತು. ಬಳಿಕ ಕರಿಬಾಳೆ, ಕುಟ್ಟಿಚಾತ, ನುಚ್ಚುಟ್ಟೆ ಕೋಲ ಜರುಗಿದವು. ದೇವಳದ ಆಡಳಿತ ಮಂಡಳಿ ಅಧ್ಯಕ್ಷ ಕುಟ್ಟಂಜೆಟ್ಟಿರ ಶ್ಯಾಮ್ ಬೋಪಣ್ಣ ಉಸ್ತುವಾರಿ ವಹಿಸಿದ್ದರು.

ಕರಾವಳಿ ಕಲೋತ್ಸವ, ಬಹು ಸಂಸ್ಕೃತಿ ಉತ್ಸವ ಉದ್ಘಾಟಿಸಿ ಮಾಜಿ ಸಚಿವ ರಮಾನಾಥ ರೈ ಅಭಿಪ್ರಾಯ

ಸಮಾಜದಲ್ಲಿ ಭಾಷಾ ಸಾಮರಸ್ಯ, ಸೌಹಾರ್ದತೆ ಮೂಡಲಿ



ಬಂಟ್ವಾಳ: ಚಣ್ಣರಲೋಕ ಮೋಕೆದ ಕಲಾವಿದೆರ್ ಸೇವಾ ಟ್ರಸ್ಟ್ ಬಂಟ್ವಾಳ ಇದರ ಆಶ್ರಯದಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಕರ್ನಾಟಕ ಬ್ಯಾರಿ, ತುಳು, ಕೊಂಕಣಿ ಹಾಗೂ ಅರೆಭಾಷಾ ಸಾಹಿತ್ಯ ಅಕಾಡೆಮಿಗಳ ಸಂಯುಕ್ತ ಸಹಕಾರದೊಂದಿಗೆ ಮೇ 4 ರಿಂದ 9ರವರೆಗೆ ನಡೆಯುವ ಕರಾವಳಿ ಕಲೋತ್ಸವ ಬಹು ಸಂಸ್ಕೃತಿ ಉತ್ಸವ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ ಬಿ.ಸಿ. ರೋಡಿನ ಸ್ಪರ್ಶ ಕಲಾ ಮಂದಿರದ ಕೀರ್ತಿಶೇಷ ಬಿ.ಎ.ಅಕ್ಬರ್ ಹಾಜಿ ಕಲಾ ವೇದಿಕೆಯಲ್ಲಿ ಸೋಮವಾರ ರಾತ್ರಿ ನಡೆಯಿತು.

ಮಾಜಿ ಸಚಿವ ಬಿ. ರಮಾನಾಥ ರೈ ಕಾರ್ಯಕ್ರಮ ಉದ್ಘಾಟಿಸಿ, ಭಾಷಾ ಸಾಮರಸ್ಯದ ಮೂಲಕ ಸಮಾಜದಲ್ಲಿ ಶಾಂತಿ ಸೌಹಾರ್ದತೆ ಮೆಳ್ಯೆಸಲಿ ಎಂದು ಹಾರೈಸಿದರು.

ತಾಲೂಕು ತಹಶೀಲ್ದಾರ್ ಮಂಜುನಾಥ್ ಅವರು ಜಾನಪದ ದಿಬ್ಬಣ ಹಾಗೂ ಕೀರ್ತಿ ಶೇಷ ಬಿ.ಎ.ಅಕ್ಬರ್ ಹಾಜಿ ಕಲಾ ವೇದಿಕೆ ಉದ್ಘಾಟಿಸಿ, ಕರಾವಳಿ ಕಲೋತ್ಸವದ ಮೂಲಕ ಸಂಸ್ಕೃತಿ ಅನಾವರಣ ಹಾಗೂ ಪರಿಚಯವಾಗಲಿ ಎಂದು ಹೇಳಿದರು.

ಕರಾವಳಿ ಕಲೋತ್ಸವ ಅಧ್ಯಕ್ಷ ಸುದರ್ಶನ್ ಜೈನ್ ಅಧ್ಯಕ್ಷತೆ ವಹಿಸಿದ್ದರು. ಇದಕ್ಕೂ ಮುನ್ನ ಬಿ.ಸಿ.ರೋಡಿನ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಿಂದ ಸ್ಪರ್ಶ ಕಲಾಮಂದಿರದ ಕೀರ್ತಿಶೇಷ ಬಿ ಅಕ್ಬರ್ ಹಾಜಿ ವೇದಿಗೆ ಜಾನಪದ ದಿಬ್ಬಣ ಮೆರವಣಿಗೆಯು ರಾಜ್ಯ ಹಾಗೂ ಹೊರ ರಾಜ್ಯದ ಜಾನಪದ ತಂಡಗಳ ಪ್ರಸ್ತುತಿಯೊಂದಿಗೆ ಸಾಗಿಬಂತು.

ಇದೇ ವೇಳೆ ಬಂಟ್ವಾಳ ತಾಲೂಕಿನಲ್ಲಿ ಪ್ರಥಮ ಬಾರಿಗೆ ನಡೆದ ಮಹಿಳೆಯರ ಸೀರೆ ನಡಿಗೆ ಸ್ಪರ್ಧೆಯನ್ನು ರಾಜ್ಯ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಡಿ.ಎಸ್. ಗಟ್ಟಿ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್, ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವಸ್ಥಾನದ ಅಧ್ಯಕ್ಷ ಪ್ರಕಾಶ್ ಕಾರಂತ್, ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶ್ರೀನಾಥ್ ಎಂ.ಪಿ., ಮಾತನಾಡಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಚಣ್ಣರಲೋಕ ಮೋಕೆದ ಕಲಾವಿದೆರ್ ಸೇವಾ ಟ್ರಸ್ಟ್ ಸ್ಥಾಪಕಾಧ್ಯಕ್ಷ ಮೋಹನ್ ದಾಸ್ ಕೊಟ್ಟಾರಿ ಮುನ್ನೂರು, ಕರಾವಳಿ ಕಲೋತ್ಸವ ಸ್ವಾಗತ ಸಮಿತಿ ಅಧ್ಯಕ್ಷ ಸೀತಾರಾಮ ಶೆಟ್ಟಿ ಕಾಂತಾಡಿ ಗುತ್ತು, ಪ್ರಣಾಮ ಉದಯ ಚೌಟ, ತುಳು ಸಾಹಿತ್ಯ ಸಂಭ್ರಮದ ಅಧ್ಯಕ್ಷ ಬೇಬಿ ಕುಂದರ್, ಬ್ಯಾರಿ ಸಾಹಿತ್ಯ ಸಂಭ್ರಮದ ಅಧ್ಯಕ್ಷ ಅಬ್ದುಲ್ ರಝಾಕ್ ಕುಕ್ಕಾಜೆ, ಕೊಂಕಣಿ ಸಾಹಿತ್ಯ ಸಂಭ್ರಮದ ಅಧ್ಯಕ್ಷ ಪಿಯೂಸ್ ಎಲ್ ರೋಡ್ರಿಗಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು. ಬಳಿಕ ಚಣ್ಣರಲೋಕ ಸೇವಾ ಟ್ರಸ್ಟ್ ಬಂಟ್ವಾಳ ಇದರ ಯಕ್ಷಗಾನ ಗುರುಗಳಾದ ಓಂಪ್ರಕಾಶ್ ರೈ ಕಲ್ಲಡ್ಕ ಇವರ ಶಿಷ್ಯ ವೃಂದದವರಿಂದ ಶ್ರೀ ರಾಮ ದರ್ಶನ ಯಕ್ಷಗಾನ ನಡೆಯಿತು.

ಆಡಳಿತ ಟ್ರಸ್ಟಿ ತೇವು ತಾರಾನಾಥ್ ಕೊಟ್ಟಾರಿ ಪ್ರಾಸ್ತಾವಿಸಿ, ಸ್ವಾಗತಿಸಿದರು. ಶೈಲಜಾ ರಾಜೇಶ್ ವಂದಿಸಿದರು. ಕಲಾವಿದ ಎಚ್ಕೆ ನಯನಾಡು ಹಾಗೂ ಕಾರ್ಯಕ್ರಮ ನಿರೂಪಿಸಿದರು.

ಸೌರಭ ಪ್ರಶಸ್ತಿ ಪ್ರದಾನ

ಅಂತಾರಾಷ್ಟ್ರೀಯ ಕಬಡ್ಡಿ ಪಟು ರೋಹಿತ್ ಮಾರ್ಲ ಅವರಿಗೆ ಉದಯ ಚೌಟ ಸಾಧಕ ಪ್ರಶಸ್ತಿ, ಸಾಮಾಜಿಕ ಸಂಘಟಕ ಎಲಿಯಾಸ್ ಸ್ಯಾಂಕ್ತಿಸ್ ಅವರಿಗೆ ಕರಾವಳಿ ಸೌರಭ ರಾಜ್ಯ ಪ್ರಶಸ್ತಿ, ಕರಾಟೆ, ನೃತ್ಯ, ಕ್ರೀಡಾ ಕ್ಷೇತ್ರದ ಸಾಧಕ ವಿದ್ಯಾರ್ಥಿನಿ ಸಾನ್ವಿ ಅವರಿಗೆ ಚಿಣ್ಣರ ಸೌರಭ ಪ್ರಶಸ್ತಿ ಪ್ರದಾನ ಮಾಡಲಾಯಿತು. ಚಣ್ಣರಲೋಕ ಸೇವಾ ಟ್ರಸ್ಟ್ ಸಂಸ್ಥೆಯು ದತ್ತು ಸ್ವೀಕರಿಸಿದ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ, ಕೊಡೆ ವಿತರಿಸಲಾಯಿತು.

ಖಂಬದಕೋಣೆ ರೈತರ ಸೇವಾ ಸಹಕಾರಿ ಸಂಘದ ವ್ಯವಸ್ಥಾಪಕರಿಗೆ ಬೀಳ್ಕೊಡುಗೆ



ಬೈಂದೂರು: ವೃತ್ತಿ ಬದುಕು ನಮ್ಮ ಜೀವನದ ಒಂದು ಭಾಗವೇ ಹೊರತು ಸಂಪೂರ್ಣವಲ್ಲ, ಹಾಗಿರುವಾಗ ನಿವೃತ್ತಿಯ ಭೂತ ನಮ್ಮ ಆತ್ಮವಿಶ್ವಾಸ, ಲವಲವಿಕೆ, ಪ್ರೀತಿ, ವಾತ್ಸಲ್ಯಗಳನ್ನು ಕಬಳಿಸಲು ಬಿಡಬಾರದು. ವೃತ್ತಿ ಬದುಕಿನ ಹೊರಗೂ ಮಾಡಲು ಬೇಕಾದಷ್ಟಿದೆ ಎನ್ನುವ ಗಟ್ಟಿತನ ತೋರಿದರೆ ನಿವೃತ್ತಿಯ ಕೊರಗು ನಮ್ಮನ್ನು ಆವರಿಸದು. ನಿವೃತ್ತಿ ಸಾಮಾನ್ಯ ಪ್ರಕ್ರಿಯೆ. ಸೇವೆಯಲ್ಲಿ ಸಿಗುವ ಸಂತೃಪ್ತಿ ಬದುಕಿಗೆ ನೆಮ್ಮದಿ ದೊರಕಿಸುತ್ತದೆ ಎಂದು ಸಾಹಿತಿ ಕೆ. ಪುಂಡಲೀಕ ನಾಯಕ್ ಹೇಳಿದರು.

ಅಭಿನಂದನೆ ಸಲ್ಲಿಕೆ

ಏ.30ರಂದು ವಯೋ ನಿವೃತ್ತಿ ಹೊಂದಿದ ಖಂಬದಕೋಣೆ ರೈತರ ಸೇವಾ ಸಹಕಾರಿ ಸಂಘದ ಖಂಬದಕೋಣೆ ಶಾಖಾ ವ್ಯವಸ್ಥಾಪಕ ಚಂದ್ರ ಬಿ. ಅವರನ್ನು ಸಂಘದ ಸ್ಥಳೀಯ ಗ್ರಾಹಕರ ವತಿಯಿಂದ ಗೌರವಿಸಿ ಅಭಿನಂದಿಸಿ ಮಾತನಾಡಿದರು.

ನಿಷ್ಠಾವಂತ, ಪ್ರಾಮಾಣಿಕ ಹಾಗೂ ಸರಳ ಸಜ್ಜನಿಕೆಯ ಚಂದ್ರ ಅವರು ಸೇವಾ ಕಾರ್ಯದ ಮೂಲಕ ಗ್ರಾಹಕರ ಮತ್ತು ಆಡಳಿತ ಮಂಡಳಿಯ ಮೆಚ್ಚುಗೆಗೆ ಪಾತ್ರರಾಗಿದ್ದರು. ಇವರ ನಿವೃತ್ತಿ ಬದುಕು ಸುಖ ನೆಮ್ಮದಿಯಿಂದಿರಲಿ ಎಂದು ಹಾರೈಸಿದರು.

ಸ್ಥಳೀಯ ಆಯುಷ್ ವೈದರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಗೌರವ ಕಾರ್ಯದರ್ಶಿ ಡಾ. ಸುಬ್ರಹ್ಮಣ್ಯ ಭಟ್, ಸಹಕಾರಿ ಸಂಘದ ನಿರ್ದೇಶಕ ಗುರುರಾಜ ಹೆಬ್ಬಾರ್, ಸ್ಥಳೀಯ ಸಾಮಾಜಿಕ ಕಾರ್ಯಕರ್ತ ಬಾಲಕೃಷ್ಣ ಪ್ರಭು, ಶಿಕ್ಷಕ ಮಾರುತಿ ನಾಯ್ಕ್, ಹಿರಿಯ ನಿತ್ಯನಿಧಿ ಸಂಗ್ರಾಹಕ ವಿಶ್ವನಾಥ ನಾಯಕ್, ಸಂಘದ ಕೃಷಿ ಅಧಿಕಾರಿ ಈಶ್ವರ ನಾಯ್ಕ್, ಶಾಖಾ ವ್ಯವಸ್ಥಾಪಕ ಎಚ್. ರಾಮ, ಶಾಖಾ ಸಿಬ್ಬಂದಿ ಗಣೇಶ್ ಶೇಟ್, ನವೀನ್, ನಾಗರಾಜ ಗಾಣಿಗ, ನಾಗರಾಜ ಪೂಜಾರಿ, ರೈತಸಿರಿ ಪ್ರತಿನಿಧಿ ಆಶಾ ಗಾಣಿಗ, ಭಾರತಿ ದೇವಾಡಿಗ ಉಪಸ್ಥಿತರಿದ್ದರು.

ಮೇ 6-8: ವಳಾಲು ಶ್ರೀ ಪಾರ್ಶ್ವನಾಥ ಬಸದಿಯಲ್ಲಿ ಸಂಪ್ರೋಕ್ಷಣ ಮಹೋತ್ಸವ



ಪುತ್ತೂರು: ಸುಮಾರು 600 ವರ್ಷಗಳ ಪುರಾತನ ಇತಿಹಾಸ ಇರುವ ತಾಲೂಕಿನ ಬಾರಿಕೆ ವಳಾಲು ಭಗವಾನ್ 1008 ಶ್ರೀ ಪಾರ್ಶ್ವನಾಥ ಸ್ವಾಮಿ ಬಸದಿಯ ಧಾಮ ಸಂಪ್ರೋಕ್ಷಣಪೂರ್ವಕ ಮಹೋತ್ಸವ ಜಿನ ಬಿಂಬಗಳ ಪುನಃಪ್ರತಿಷ್ಠಾ ಮಹೋತ್ಸವವು ಮೇ 6ರಿಂದ 8 ರವರೆಗೆ ನಡೆಯಲಿದೆ.

ಮೇ 8ರ ಶುಕ್ರವಾರ ಸಂಜೆ 6ರಿಂದ 8ರವರೆಗೆ ನಡೆಯಲಿರುವ ಧಾರ್ಮಿಕ ಸಭೆಯಲ್ಲಿ ಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಹೊಂಬುಜ ಅತಿಶಯ ಕ್ಷೇತ್ರದ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರು ಆಶೀರ್ವಚನ ನೀಡಲಿದ್ದಾರೆ. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಿ. ಹರ್ಷೇಂದ್ರ ಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಗೌರವ ಉಪಸ್ಥಿತರಿರುವರು. ಗುರುವಾಯನಕೆರೆಯ ಎಕ್ಸೆಲ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸುಮಂತ್ ಕುಮಾರ್ ಜೈನ್ ದೀಪ ಪ್ರಜ್ವಲನೆ ಮಾಡಲಿದ್ದಾರೆ. ಶಾಸಕ ಅಶೋಕ್ ಕುಮಾರ್ ರೈ, ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ. ವಿಜಯ ಬ್ಯಾಂಕ್‌ನ ನಿವೃತ್ತ ಪ್ರಬಂಧಕ ಮೋಹನ್ ಪಡಿವಾಳ್, ದಂತ ವೈದ್ಯ ಡಾ. ರಾಜಾರಾಮ್, ಬಜತ್ತೂರು ಗ್ರಾ.ಪಂ. ಮಾಜಿ ಸದಸ್ಯ ಉಮೇಶ್ ಓಡ್ರಪಾಲ್, ನಿವೃತ್ತ ಗ್ರಾಮ ಸಹಾಯಕ ಲಿಂಗಪ್ಪ ಗೌಡ, ಮುದ್ಯ ಶ್ರೀ ಗಣೇಶೋತ್ಸವ ಸಮಿತಿಯ ಅಧ್ಯಕ್ಷ ಧನಂಜಯ ಬಾರಿಕೆ, ರುಕ್ಕಯ್ಯ ಗೌಡ ಪುಯಿಲ ಮತ್ತಿತರ ಪ್ರಮುಖರು ಭಾಗವಹಿಸಲಿದ್ದಾರೆ. ಮೂಡಬಿದಿರೆ ಶ್ರೀ ಜೈನ ಮಠದ ಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಕಾರ್ಕಳ ಶ್ರೀ ಜೈನ ಮಠದ ಶ್ರೀ ಲಲಿತ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ ಮಾರ್ಗದರ್ಶನದೊಂದಿಗೆ ಹಾಗೂ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಗೌರವಾಧ್ಯಕ್ಷತೆಯಲ್ಲಿ ಸದ್ಧರ್ಮ ಬಂಧುಗಳ ಸಹಕಾರದೊಂದಿಗೆ ಬಸದಿಯ ಜೈನ ಆಗಮೋಕ್ತ ವಿಧಿ ವಿಧಾನಗಳೊಂದಿಗೆ ಸಂಪನ್ನಗೊಳ್ಳಲಿದೆ.

ಪಿಡಿಒಗಳ ಭದ್ರತೆಗೆ ಆಗ್ರಹ: ಸಚಿವ ಭೋಸರಾಜುಗೆ ಮನವಿ



ನಾಪೋಕ್ಲು: ಗದಗ ಜಿಲ್ಲೆಯ ಸಹೋದ್ಯೋಗಿ ಪಿಡಿಒ ಮುಕ್ತಮ್ ಹುಸೇನ್ ಕರಡಿಗುಡ್ಡ ಅವರ ಅಕಾಲಿಕ ಸಾವಿನ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಿ ನ್ಯಾಯ ಒದಗಿಸಿಕೊಡಬೇಕೆಂದು ಹಾಗೂ ಪಿಡಿಒಗಳ ಸೇವಾ ರಕ್ಷಣೆಗೆ ಆಗ್ರಹಿಸಿ ಕೊಡಗು ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರಮುಖರು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರು ಎನ್.ಎಸ್. ಬೋಸರಾಜು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೇಖರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಗದಗ ಜಿಲ್ಲೆಯ ಸಹೋದ್ಯೋಗಿ ಪಿಡಿಒ ಅವರ ಅಕಾಲಿಕ ಸಾವು ತೀವ್ರ ಆಘಾತ ಉಂಟುಮಾಡಿದೆ. ಇದು ಕೇವಲ ಒಂದು ವೈಯಕ್ತಿಕ ದುರಂತವಲ್ಲ, ಇದು ನಮ್ಮ ಇಡೀ ಪಿಡಿಒ ಸಮುದಾಯದ ಮೇಲೆ ವ್ಯವಸ್ಥೆ ಹೇರುತ್ತಿರುವ ಮಾನಸಿಕ ಒತ್ತಡ, ಆಡಳಿತಾತ್ಮಕ ವಿಳಂಬ ನೀತಿ ಹಾಗೂ ದೌರ್ಜನ್ಯದ ಸ್ಪಷ್ಟ ನಿದರ್ಶನವಾಗಿದೆ ಎಂದು ಮನವಿಯಲ್ಲಿ ತಿಳಿಸಿದರು.

ಕೊಡಗು ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷರಾದ ಚಂದ್ರಮೌಳಿ ಹಾಗೂ ಖಜಾಂಚಿ ತಿಮಯ್ಯ ರಾಜ್ಯ ಪರಿಷತ್ ಸದಸ್ಯರಾದ ನಂಜುಂಡಸ್ವಾಮಿ, ಗೌರವಾಧ್ಯಕ್ಷರಾದ ಎಚ್ ಡಿ ಹರೀಶ್ ಹಾಗೂ ನಿಕಟ ಪೂರ್ವ ಅಧ್ಯಕ್ಷ ರವೀಶ್ ಹಾಗೂ ಪದಾಧಿಕಾರಿಗಳಾದ ಆಶಾ ಕುಮಾರಿ, ಪೂರ್ಣ ಕುಮಾರ್ ನಂದೀಶ್ ಕುಮಾರ್, ಆಯಿಷ, ಲೋಕೇಶ್ ವಿಜಿ ಶೋಭಾ ರಾಣಿ ಹಾಗೂ ಜಿಲ್ಲೆಯ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಜರಿದ್ದರು.

ಡಾ. ಸೋನಾರಾಮ್ ತಂಡದಿಂದ ಬಳಂಜ ದೇವಳದಲ್ಲಿ ಭಜನಾ ಸತ್ಸಂಗ



ಬೆಳ್ತಂಗಡಿ: ಬಳಂಜ ಶ್ರೀ ಪಂಚಲಿಂಗೇಶ್ವರ ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದಲ್ಲಿ ಸೋಮವಾರ ದುಬೈಯಲ್ಲಿ ಸಾವಿರಾರು ಭಾರತೀಯರಿಗೆ ಉದ್ಯೋಗದಾತರಾಗಿದ್ದುಕೊಂಡು, ದುಬಾಯಿಯಂತಹ ಹೊರ ದೇಶದಲ್ಲಿ ತಮಿಳ್ ರೇಡಿಯೋವನ್ನು ಕಳೆದ ಒಂದು ದಶಕಗಳಿಂದ ನಡೆಸಿಕೊಂಡು ಬರುತ್ತಿದ್ದು ತಮಿಳುನಾಡಿನ ಶಿವಕಾಶಿ, ಮದುರೈ ಮೀನಾಕ್ಷಿ ದೇವಸ್ಥಾನ ಸೇರಿದಂತೆ ಅನೇಕ ಧಾರ್ಮಿಕ ಸಂಸ್ಥೆಗಳಿಗೆ ಪೋಷಕರಾಗಿರುವ ಡಾ. ಸೋನಾ ರಾಮ್ ಮತ್ತು ಶಕ್ತಿ ರಾಮ್ ಅವರು ತಮ್ಮ ಭಕ್ತಾಧಿಗಳ ತಂಡದೊಂದಿಗೆ ದೇವಸ್ಥಾನಕ್ಕೆ ಆಗಮಿಸಿ ಭಜನಾ ಸತ್ಸಂಗವನ್ನು ನೆರವೇರಿಸಿದರು.

ಕ್ಷೇತ್ರದ ವತಿಯಿಂದ ಸನ್ಮಾನ

ಸುಮಾರು 50 ಜನರ ತಂಡ ಆಗಮಿಸಿ ಸತ್ಸಂಗ ನೆರವೇರಿಸಿದರು. ಬಳಂಜ ಶ್ರೀ ಪಂಚಲಿಂಗೇಶ್ವರ ಶ್ರೀ ದುರ್ಗಾ ಪರಮೇಶ್ವರಿ ಕ್ಷೇತ್ರದ ವತಿಯಿಂದ ಅವರನ್ನು ಆಡಳಿತ ಮೊಕ್ತೇಸರ ಶೀತಲ್ ಪಡಿವಾಳ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸತೀಶ್ ರೈ ಬಾರ್ದಡ್ಕ, ಗುರು ಹೆಗ್ಡೆ ಪ್ರಭಾಕರ ಹೆಗ್ಡೆ ಕೋಡಿ, ಚಂದ್ರಶೇಖರ ಪಿ.ಕೆ, ದಿನೇಶ್ ಪಿ.ಕೆ, ಜಗದೀಶ್ ರೈ, ವಿನು ಬಳಂಜ, ಸಂತೋಷ್ ಸಾಲಿಯಾನ್ ಕಾಪಿನಡ್ಕ ಚಿತ್ತರಂಜನ್ ಹೆಗ್ಡೆ ರತ್ನರಾಜ್ ಜೈನ್ ಪೇರಂದಬೈಲ್, ಗಣೇಶ್ ಬೊಂಟ್ರೊಟ್ಟು ಸದಾನಂದ ಬೊಂಟ್ರೊಟ್ಟು, ಮನೋಹರ್ ಬಳಂಜ, ಸುನಂದ ಕುಳೆಂಜಿರೋಡಿ ಗುತ್ತು, ಸತೀಶ್ ಶೆಟ್ಟಿ ಕುರೇಲ್ಯ, ಅರ್ಚಕರಾದ ಸುರೇಶ್ ಭಟ್, ಮಂಜುನಾಥ್ ಭಟ್, ವಿಕ್ರಮ್ ಭಟ್, ಮತ್ತು ಊರವರು ಸ್ವಾಗತಿಸಿದರು. ಕ್ಷೇತ್ರದ ವತಿಯಿಂದ ಭಜನಾ ತಂಡವನ್ನು ಗೌರವಿಸಲಾಯಿತು.

ಇದೇ ಸಂದರ್ಭ ಉದ್ಯಮಿ ಅಶ್ವಥ್ ಹೆಗ್ಡೆ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಮೇ 7-10: ಶ್ರೀ ಆದಿಬ್ರಹ್ಮ ಮೊಗೇರ ದೈವಸ್ಥಾನದ ಪುನರ್ ಪ್ರತಿಷ್ಠೆ, ಬ್ರಹ್ಮಕಲಶ

ಉಳ್ಳಾಲ: ಬಾಳೆಪುಣಿ ಗ್ರಾಮದ ಶ್ರೀ ಆದಿಬ್ರಹ್ಮ ಮೊಗೇರರು ಮತ್ತು ಪರಿವಾರ ದೈವಗಳ ಕ್ಷೇತ್ರದಲ್ಲಿ ಪುನರ್ ಪ್ರತಿಷ್ಠೆ ಬ್ರಹ್ಮಕಲಶೋತ್ಸವ ಹಾಗೂ ನೇಮವು ಮೇ 7ರಿಂದ 10 ರವರೆಗೆ ನಡೆಯಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲ್ ತಿಳಿಸಿದ್ದಾರೆ.

ಉಳ್ಳಾಲ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್ಥಿಕವಾಗಿ ಹಿಂದುಳಿದ ವರ್ಗದವರು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಾ ಬಂದಿದ್ದು ಸಮಸ್ತ ಹಿಂದೂ ಸಮಾಜ ತನು, ಮನ, ಧನಗಳೊಂದಿಗೆ ಕ್ಷೇತ್ರದ ಅಭಿವೃದ್ಧಿಗೆ ಕೈಜೋಡಿಸಬೇಕಿದೆ ಎಂದರು.

ಬ್ರಹ್ಮಕಲಶೋತ್ಸವ ಸಮಿತಿಯ ಕೋಶಾಧಿಕಾರಿ ರವಿ ರೈ ಪಜೀರು ಮಾತನಾಡಿ, ಮೇ 7 ರಂದು ಸಂಜೆ 3ಕ್ಕೆ ಮುಡಿಪು ಶ್ರೀ ಕಿರಾತೇಶ್ವರ ಮುಡಿಪಿನ್ನಾರ್ ದೈವಸ್ಥಾನದಿಂದ ಹಸಿರು ಹೊರೆಕಾಣಿಕೆ ಮೆರವಣಿಗೆ ಹೊರಡಲಿದೆ. ಮೇ 8ರಂದು ಬೆಳಿಗ್ಗೆ 11ಕ್ಕೆ ಮೊಗೇರರು, ತನ್ನಿಮಾನಿಗ, ಕೊರಗ ತನಿಯ, ಗುಳಿಗ,ಚಾಮುಂಡಿ, ಕಿರಾತ, ವನದೇವತೆ, ಭೈರವ ದೈವಗಳ ಪುನರ್ ಪ್ರತಿಷ್ಠೆ ಬ್ರಹ್ಮಕಲಶಾಭಿಷೇಕ ನಡೆಯಲಿದೆ. ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಒಡಿಯೂರು ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ, ಆರ್‌ಎಸ್‌ಎಸ್ ಮುಖಂಡರಾದ ಡಾ.ಕಲ್ಲಡ್ಕ ಪ್ರಭಾಕರ್ ಭಟ್, ಶ್ರೀ ಕ್ಷೇತ್ರ ಕಣಂತೂರಿನ ಅನುವಂಶಿಕ ಮೊಕ್ತೇಸರ ಪದ್ಮನಾಭ ರೈ ಯಾನೆ ಮಂಜು ಭಂಡಾರಿ, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ.ಶ್ಯಾಮ ಭಟ್ ಮೊದಲಾದವರು ಭಾಗವಹಿಸಲಿದ್ದಾರೆ. ಮಧ್ಯಾಹ್ನ ಭಕ್ತಿ ರಸಮಂಜರಿ, ರಾತ್ರಿ ಸಸಿಹಿತ್ಲು ಶ್ರೀ ಭಗವತಿ ಪ್ರಸಾದಿತ ಯಕ್ಷಗಾನ ಮಂಡಳಿಯಿಂದ ಶ್ರೀ ಭಗವತಿ ಕ್ಷೇತ್ರ ಮಹಾತ್ಮೆ ಯಕ್ಷಗಾನ ನಡೆಯಲಿದೆ. ಮೇ 9ರಂದು ಸಾಮೂಹಿಕ ಶ್ರೀ ಶನೈಶ್ಚರ ಪೂಜೆ, ಸಂಜೆ ಸ್ಥಳೀಯ ಪ್ರತಿಭೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಮೇ 10ರಂದು ಭಂಡಾರ ಏರಿ, ಭಜನಾ ಕಾರ್ಯಕ್ರಮ ನಡೆಯಲಿದೆ. ರಾತ್ರಿ ಶ್ರೀ ಮೊಗೇರ ದೈವಗಳ ಗರಡಿ ಇಳಿಯುವುದು ಹಾಗೂ ಶ್ರೀ ತನ್ನಿಮಾನಿಗ ದೈವದ ಕಾರ್ಯಕ್ರಮಗಳು ನಡೆಯಲಿವೆ. ಮುಂಜಾನೆ ಗುಳಿಗ ಹಾಗೂ ಕೊರಗತನಿಯ ನೇಮ ಜರಗಲಿದೆಯೆಂದರು.

ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಬಾಬು ಎನ್.ತಚ್ಚಮಜಲು, ಬ್ರಹ್ಮಕಲಶೋತ್ಸವ ಸಮಿತಿಯ ಮಹಿಳಾ ಸಮಿತಿ ಕಾರ್ಯಾಧ್ಯಕ್ಷೆ ಸುಮಲತಾ ಕೊಣಾಜೆ, ಮಹಿಳಾ ಸಮಿತಿ ಅಧ್ಯಕ್ಷೆ ಮೀನಾಕ್ಷಿ ನಡಿಗುತ್ತು, ಬ್ರಹ್ಮಕಲಶ ಸಮಿತಿ ಉಪಾಧ್ಯಕ್ಷ ರಾಘವ ಎನ್.ಟಿ, ಜತೆ ಕೋಶಾಧಿಕಾರಿ ಸುಧೀರ್ ಬಾಳೆಪುಣಿ, ಮಹಿಳಾ ಸಮಿತಿ ಗೌರವಾಧ್ಯಕ್ಷೆ ಚಂದ್ರಾವತಿ ಉಪಸ್ಥಿತರಿದ್ದರು.

ಬಿಲ್ಲವ ಬ್ರಿಗೇಡ್-ನಂದಾದೀಪ ಫೌಂಡೇಶನ್‌ನಿಂದ ಮನೆ ಹಸ್ತಾಂತರ



ಮಂಗಳೂರು: ಬಿಲ್ಲವ ಬ್ರಿಗೇಡ್ ಮತ್ತು ನಂದಾದೀಪ ಫೌಂಡೇಶನ್ ಮಂಗಳೂರು ಆಶ್ರಯದಲ್ಲಿ ನಿರ್ಮಿಸಲಾದ 14ನೇ ಮತ್ತು 15ನೇ ಮನೆ ಹಸ್ತಾಂತರ ಕಾರ್ಯಕ್ರಮ ಸೇವಾ ಸಂಭ್ರಮ್ ಬಂಟ್ವಾಳ ಪಂಬದಬೆಟ್ಟು ಕ್ರೀಡಾಂಗಣದಲ್ಲಿ ಇತ್ತೀಚೆಗೆ ನಡೆಯಿತು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖರಾದ ಡಾ.ಪ್ರಭಾಕರ್ ಭಟ್, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ದ.ಕ. ಸಂಸದ ಕ್ಯಾ.ಬ್ರಿಜೇಶ್ ಚೌಟ, ಶಾಸಕರಾದ ಸುನೀಲ್ ಕುಮಾರ್, ಉಮಾನಾಥ ಕೋಟ್ಯಾನ್, ಕಿಶೋರ್ ಕುಮಾರ್ ಪುತ್ತೂರು, ಮಾಜಿ ಶಾಸಕ ರಮಾನಾಥ ರೈ, ದ.ಕ. ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲ, ಕಂಬಳ ಅಸೋಸಿಯೇಶನ್ ಗೌರವಾಧ್ಯಕ್ಷ ಭಾಸ್ಕರ್ ಎಸ್. ಕೋಟ್ಯಾನ್, ಬಿಲ್ಲವ ಬ್ರಿಗೇಡ್ ಸಂಸ್ಥಾಪಕ ಸದಾನಂದ ಪೂಜಾರಿ, ಭುವನೇಶ್ ಪಚ್ಚಿನಡ್ಕ ಹರಿಕೃಷ್ಣ ಬಂಟ್ವಾಳ, ಮಾಲಿಕಯ್ಯ ಗುತ್ತೇದಾರ್, ಶರಣ್ ಪಂಪ್‌ವೆಲ್, ರುಕ್ಮಯ ಪೂಜಾರಿ, ಜಗದೀಪ್ ಡಿ. ಸುವರ್ಣ, ಕೆ.ಟಿ. ಸುವರ್ಣ, ರವಿ ಶಾಂತಿ ಮರೋಳಿ, ಗಂಗಾಧರ್ ಪೂಜಾರಿ ಮುಂಬಯಿ, ಬಿಲ್ಲವ ಬ್ರಿಗೇಡ್ ಅಧ್ಯಕ್ಷ ಅವಿನಾಶ್ ಸುವರ್ಣ, ನಿಶಾನ್ ಪೂಜಾರಿ, ಕೃಷ್ಣಪ್ಪ ಪೂಜಾರಿ, ಪ್ರಕಾಶ್ ತುಂಬೆ ಮತಿತರರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಮರೋಳಿ ಫೀಡರ್ ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವ ಕಾರಣದಿಂದ ಮರೋಳಿ, ಜಯನಗರ, ವಸಂತ ನಗರ, ಅಂಜಲೋರ್ ಚರ್ಚ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 7ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಬಂಟ್ವಾಳ ಕಸಾಪ ಸಂಸ್ಥಾಪನಾ ದಿನಾಚರಣೆಯಲ್ಲಿ ಡಾ. ಶ್ರೀನಾಥ ಅಭಿಪ್ರಾಯ

ಸಾಹಿತ್ಯ ಕಾರ್ಯಕ್ರಮದಿಂದ ಮಕ್ಕಳಲ್ಲಿ ಸಾಹಿತ್ಯಾಭಿರುಚಿ



ಬಂಟ್ವಾಳ: ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಾಹಿತ್ಯದ ಅಭಿವೃದ್ಧಿಗೆ ನಿರಂತರ ಶ್ರಮಿಸುತ್ತಿದೆ. ವಿದ್ಯಾರ್ಥಿಗಳು ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳ ಸದುಪಯೋಗಪಡಿಸಿಕೊಳ್ಳುವುದರ ಮೂಲಕ ಸಾಹಿತ್ಯಾಭಿರುಚಿ ಬೆಳೆಸಿಕೊಳ್ಳಬೇಕೆಂದು ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಎಂ.ಪಿ ಶ್ರೀನಾಥ ಹೇಳಿದ್ದಾರೆ.

ಬಂಟ್ವಾಳ ಶ್ರೀ ವೆಂಕಟರಮಣಸ್ವಾಮೀ ಮಹಾವಿದ್ಯಾಲಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಂಗಳೂರು ಹಾಗೂ ಶ್ರೀ ವೆಂಕಟರಮಣಸ್ವಾಮೀ ಮಹಾವಿದ್ಯಾಲಯ ಬಂಟ್ವಾಳ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ, ಮಾತನಾಡಿದರು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ನಿವೃತ್ತಮುಖ್ಯೋಪಾಧ್ಯಾಯಮಹಾಬಲೇಶ್ವರ ಹೆಬ್ಬಾರ್ ಮಾತನಾಡಿ, ಭಾಷೆ ಇತಿಹಾಸವನ್ನು ಕೊಂಡೊಯ್ಯುವ ಪ್ರವಾಹವಿದ್ದಂತೆ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಕಾರಣರಾದ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್, ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯ ಹಾಗೂ ಸರ್ ಮಿರ್ಜಾ ಇಸ್ಮಾಯಿಲ್‌ರವರ ಕೊಡುಗೆ ಅಪಾರವಾಗಿದೆ ಎಂದರು.

ಎಸ್.ವಿ.ಎಸ್.ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಡಿ. ಮಂಚಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆಯ ಉಳಿವು ಹಾಗೂ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ ಎಂದರು.

ಬಂಟ್ವಾಳ ತಾಲೂಕು ಕಸಾಪ ಅಧ್ಯಕ್ಷ ವಿಶ್ವನಾಥ ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕಾರ್ಯಕಾರಿ ಸಮಿತಿ ಸದಸ್ಯ ಪೂವಪ್ಪ ನೇರಳಕಟ್ಟೆ ಉಪಸ್ಥಿತರಿದ್ದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಶಿವಣ್ಣಪ್ರಭು ಸ್ವಾಗತಿಸಿ, ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಸುಯೋಗವರ್ಧನ್ ಡಿ.ಎಮ್. ವಂದಿಸಿದರು. ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಡಾ.ಕಾಶೀನಾಥ ಶಾಸ್ತ್ರಿ

ಕಿನ್ನಿಗೋಳಿಯಲ್ಲಿ ಕಸಾಪಾ ಸಂಸ್ಥಾಪನಾ ದಿನ



ಕಿನ್ನಿಗೋಳಿ: ಗ್ರಂಥಾಲಯಗಳಿಗೆ ಹೆಚ್ಚು ಹೆಚ್ಚು ಮಂದಿ ಭೇಟಿ ಕೊಟ್ಟು ಇಲ್ಲಿನ ಪುಸ್ತಕಗಳನ್ನು ಓದುವ ಹವ್ಯಾಸ ಹೆಚ್ಚಬೇಕು. ಇಂತಹವರನ್ನು ಉತ್ತೇಜಿಸುವ ಸಾಹಿತ್ಯ ಪರಿಷತ್ತು ಕಾರ್ಯವನ್ನು ಬೆಂಬಲಿಸೋಣ ಎಂದು ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ ಹೇಳಿದರು.

ಅವರು ಕಿನ್ನಿಗೋಳಿ ಪಟ್ಟಣ ಪಂಚಾಯತ್ ಗ್ರಂಥಾಲಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥಾಪನಾ ದಿನದ ಆಚರಣೆಯ ಸಂದರ್ಭ ಮಾತನಾಡಿದ ಅವರು, ಗ್ರಂಥಾಲಯದಲ್ಲಿ ಸಿಗುವ ಪುಸ್ತಗಳನ್ನು ಓದುವ ಮೂಲಕ ಜ್ಞಾನ ವೃದ್ಧಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಕಿನ್ನಿಗೋಳಿ ಪಟ್ಟಣ ಪಂಚಾಯತ್ ಗ್ರಂಥಾಲಯ ಹಾಗೂ ಮೆನ್ನಬೆಟ್ಟು ಗ್ರಂಥಾಲಯವನ್ನು ಹೆಚ್ಚು ಉಪಯೋಗಿಸುವ ಓದುಗರಿಗೆ ರೂಪಾಯಿ ಒಂದು ಸಾವಿರ ಮೌಲ್ಯದಂತೆ ಪುಸ್ತಕಗಳನ್ನು ವಿತರಿಸಲಾಯಿತು.

ಸಾಹಿತಿ ಉದಯಕುಮಾರ ಹಬ್ಬು, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಸದಸ್ಯರಾದ ಪ್ರಣೀತ್, ಕಸಾಪ ಕಾರ್ಯದರ್ಶಿಗಳಾದ ಹೆರಿಕ್ ಪಾಯಸ್, ಗ್ರಂಥಪಾಲಕ ರಮಣಿ, ಶಶಿಕಲಾ ಕೆಮ್ರಾಡೆ, ಕಸಾಪ ಮೂಲ್ಕಿ ಘಟಕಾಧ್ಯಕ್ಷ ಮಿಥುನ ಕೊಡೆತ್ತೂರು ಮತ್ತಿತರರಿದ್ದರು. ಕಸಾಪ ಕಾರ್ಯ ದರ್ಶಿ ಹಾಗೂ ಪ.ಪಂ. ಸದಸ್ಯ ಪ್ರಕಾಶ್ ಆಚಾರ್ ನಿರೂಪಿಸಿದರು.

ಸುತ್ತಮುತ್ತ

ನಾಳೆ 'ನೀವ' ಆಶ್ರಯದಲ್ಲಿ ನಿರ್ಮಿಸಲಾದ 13ನೇ ಮನೆಯ ಗೃಹ ಪ್ರವೇಶ

ಕಾಸರಗೋಡು: ಕಾಸರಗೋಡು ನಾಯರ್ ಎಕ್ಸ್‌ಪಾಟ್ರಿಯೇಟ್ಸ್ ವೆಲ್ಫೇರ್ ಅಸೋಸಿಯೇಶನ್ 'ನೀವ' ಆಶ್ರಯದಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ಮನೆಯಿಲ್ಲದ ಕುಟುಂಬಗಳಿಗೆ ಸಹಾಯ ಒದಗಿಸಲು ಒಂದು ವರ್ಷ ಒಂದು ಮನೆ ಎಂಬ ಯೋಜನೆಯಡಿ ಪಾಡಿಯ ರಮಣಿ ಎಂಬವರಿಗೆ ನಿರ್ಮಿಸಲಾದ ನೂತನ ಮನೆಯ ಗೃಹ ಪ್ರವೇಶವು ಮೇ 7ರಂದು ಬೆಳಗ್ಗೆ 10 ಗಂಟೆಗೆ ಜರಗಲಿದೆ ಎಂದು ಪದಾಧಿಕಾರಿಗಳು ಮಂಗಳವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.
ಅಸೋಸಿಯೇಶನ್‌ನ 13ನೇ ಮನೆ ಇದಾಗಿದೆ. ಈ ಹಿಂದೆ 12 ಮನೆಗಳನ್ನು ಈಗಾಗಲೇ ನಿರ್ಮಿಸಿ ಅರ್ಹರಿಗೆ ವಿತರಿಸಲಾಗಿದೆ. ಇದೇ ರೀತಿ ಕೊಳತ್ತೂರಿನ ರತ್ನಾವತಿಯವರ ಕುಟುಂಬದ 14ನೇ ಮನೆಯ ಕುತ್ತಿ ಹಾಕುವ ಕಾರ್ಯಕ್ರಮ ಮೇ 6ರಂದು ಬೆಳಗ್ಗೆ 8 ಗಂಟೆಗೆ ಮತ್ತು ಮುಂಡಕೈಯ ಪಿ.ಮೀನಾಕ್ಷಿ ಅವರ ಕುಟುಂಬದ 15ನೇ ಮನೆಯ ಕುತ್ತಿ ಹಾಕುವ ಕಾರ್ಯಕ್ರಮವು ಮೇ 8ರಂದು ಬೆಳಗ್ಗೆ 8 ಗಂಟೆಗೆ ನಡೆಯಲಿದೆ ಎಂದು ಅವರು ತಿಳಿಸಿದರು.
ಇದೇ ರೀತಿ ನೀವ ಪೊಯಿನಾಚಿಯಲ್ಲಿ ನೂತನ ನಿರ್ಮಿಸಿದ ನೀವ ಕಾಂಪ್ಲೆಕ್ಸ್‌ನ್ನು ಮೇ 9ರಂದು ಅಪರಾಹ್ನ 2 ಗಂಟೆಗೆ ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಉದ್ಘಾಟಿಸುವರು. ಖ್ಯಾತ ಚಲನಚಿತ್ರ ತಾರೆ ಮನೋಜ್ ಕೆ.ಜಯನ್ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು. ಕ್ರೈಮ್ ಬ್ರಾಂಚ್ ಪೊಲೀಸ್ ವರಿಷ್ಠಾಧಿಕಾರಿ ಪಿ.ಬಾಲಕೃಷ್ಣನ್ ನಾಯರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ವಿವಿಧ ಕ್ಷೇತ್ರಗಳ ಗಣ್ಯರು ಉಪಸ್ಥಿತರಿರುವರು ಎಂದರು.
ಗೋಷ್ಠಿಯಲ್ಲಿ ರಾಧಾಕೃಷ್ಣನ್ ನಾಯರ್, ವಿ.ನಾರಾಯಣನ್ ನಾಯರ್, ಸುರೇಶ್, ಅಶೋಕನ್ ಉಪಸ್ಥಿತರಿದ್ದರು.

ಫಿಟ್‌ನೆಸ್ ಟ್ರೈನರ್ ಕೋರ್ಸ್‌ಗೆ ಪ್ರವೇಶ

ಕಾಸರಗೋಡು: ಎಎಸ್‌ಎಪಿ ಕೇರಳ ಫಿಟ್‌ನೆಸ್ ಟ್ರೈನರ್ ಕೋರ್ಸ್‌ಗೆ ಪ್ರವೇಶಾತಿ ಪ್ರಾರಂಭವಾಗಿದ್ದು ಕೊನೆಯ ದಿನಾಂಕ ಮೇ 8 ಆಗಿದೆ. ಕಲ್ಲಿಕೋಡುವಿನ ಪವರ್ ಹಾರ್ಸ್ ಜಿಮ್‌ನಲ್ಲಿ ಕೋರ್ಸ್ ಕಲಿಸಲಾಗುತ್ತದೆ. ವಿದ್ಯಾರ್ಹತೆ ಪ್ಲಸ್ ಟು ಆಗಿದೆ. ಕೋರ್ಸ್ ಯಶಸ್ವಿಯಾಗಿ ಪೂರ್ಣಗೊಳಿಸಿದವರಿಗೆ ಕೇಂದ್ರ ಕೌಶಲ್ಯ ಅಭಿವೃದ್ಧಿ ಸಚಿವಾಲಯದಡಿ ಕ್ರೀಡಾ ಮತ್ತು ಫಿಟ್‌ನೆಸ್ ವಲಯ ಕೌಶಲ್ಯ ಮಂಡಳಿಯು ನೀಡುವ ಎನ್‌ಸಿವಿಇಟಿ ಲೆವೆಲ್ 4 ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಕಾಸರಗೋಡು ಜಿಲ್ಲೆಯ ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗೆ 9495999667 ಅಥವಾ 9895967998 ಸಂಪರ್ಕಿಸಬಹುದು.

ಅರ್ಜಿಗಳ ಆಹ್ವಾನ

ಕಾಸರಗೋಡು: ವಿದ್ಯುತ್ ವಾಹನ ಕ್ಷೇತ್ರದಲ್ಲಿ ಉತ್ತಮ ವೃತ್ತಿಜೀವನ ಬಯಸುವವರಿಗಾಗಿ ತವನೂರು ಎಎಸ್‌ಪಿ ಸಮುದಾಯ ಕೌಶಲ್ಯ ಉದ್ಯಾನವನ ನಡೆಸುವ ವಿದ್ಯುತ್ ವಾಹನ ಸೇವಾ ತಂತ್ರಜ್ಞ ಕೋರ್ಸ್‌ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಐಟಿಐ, ಡಿಪ್ಲೊಮಾ, ಬಿ.ಟೆಕ್, ಪ್ಲಸ್ ಟು ವಿದ್ಯಾರ್ಹತೆಯಾಗಿದ್ದು, ಮಾಹಿತಿಗೆ 9495999667 ಅಥವಾ 9895967998 ಕರೆ ಮಾಡಬಹುದು.

ರೇಶನ್ ವ್ಯಾಪಾರಿಗಳ ಎರಡು ತಿಂಗಳ ವೇತನ ವಿತರಣೆ ಬಾಕಿ

ಕಾಸರಗೋಡು: ಕೇರಳದಲ್ಲಿ 14 ಸಾವಿರದಷ್ಟು ರೇಶನ್ ವ್ಯಾಪಾರಿಗಳಿದ್ದು, ಅವರಿಗೆ ಮಾರ್ಚ್ ಮತ್ತು ಏಪ್ರಿಲ್ ತಿಂಗಳ ವೇತನ ಇನ್ನೂ ಲಭಿಸಿಲ್ಲ. ಹಣಕಾಸು ಇಲಾಖೆ ವೇತನವನ್ನು ಮಂಜೂರು ಮಾಡಿದ್ದರೂ, ಅದಕ್ಕೆ ಹೊಂದಿಕೊಂಡು ಮುಂದಿನ ಕ್ರಮ ವಿಳಂಬಗೊಂಡಿರುವುದೇ ರೇಶನ್ ವ್ಯಾಪಾರಿಗಳಿಗೆ ವೇತನ ಇನ್ನೂ ಕೈ ಸೇರದಿರುವುದರ ಪ್ರಧಾನ ಕಾರಣವಾಗಿದೆ. ರೇಶನ್ ವ್ಯಾಪಾರಿಗಳ ಮಾತ್ರವಲ್ಲ ರೇಶನ್ ಅಂಗಡಿಗಳ ಸೇಲ್ಸ್‌ಮ್ಯಾನ್‌ಗಳಿಗೂ ವೇತನ ಸರಿಯಾಗಿ ಲಭಿಸಲು ಸಾಧ್ಯವಾಗದ ಸ್ಥಿತಿಯೂ ಈಗ ನಿರ್ಮಾಣವಾಗಿದೆ. ಅಲ್ಲದೆ ಅಂಗಡಿ ಬಾಡಿಗೆ, ವಿದ್ಯುತ್ ಶುಲ್ಕ, ರೇಶನ್ ಸಾಮಗ್ರಿಗಳಿಗಾಗಿ ಹಣ ಪಾವತಿ ಇತ್ಯಾದಿ ವ್ಯವಹಾರಗಳೂ ಇದರಿಂದ ಸಂಕಷ್ಟದಲ್ಲಿ ಸಿಲುಕುವಂತೆ ಮಾಡಿದೆ. ಹೀಗೆ ಸ್ಥಗಿತಗೊಂಡ ವೇತನವನ್ನು ವಿತರಿಸಲು ತ್ವರಿತ ಕ್ರಮ ಕೈಗೊಳ್ಳಬೇಕೆಂದು ಆಲ್ ಕೇರಳ ರಿಟೈಲ್ ರೇಶನ್ ಡೀಲರ್ಸ್ ಅಸೋಸಿಯೇಶನ್‌ನ ರಾಜ್ಯ ಸಮಿತಿ ಸಭೆ ಆಗ್ರಹಿಸಿದೆ. ರೇಶನ್ ಅಂಗಡಿಗಳಿಗೆ ಸಕಾಲದಲ್ಲಿ ರೇಶನ್ ಸಾಮಗ್ರಿಗಳನ್ನು ತಲುಪಿಸದ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸಭೆ ಆಗ್ರಹಿಸಿತು.

ಯುಪಿಎಸ್‌ಸಿ ತರಬೇತಿ ನೋಂದಣಿ

ಕಾಸರಗೋಡು: ಕೇರಳ ಕಾರ್ಮಿಕ ಮತ್ತು ಉದ್ಯೋಗ ಸಂಸ್ಥೆ (ಕೆಐಎಲ್‌ಇ) ಐಎಎಸ್ ಅಕಾಡೆಮಿ ಯುಪಿಎಸ್‌ಸಿ ತರಬೇತಿಗಾಗಿ ನೋಂದಣಿ ಪ್ರಾರಂಭವಾಗಿದೆ. ಕಲ್ಯಾಣ ನಿಧಿ ಮಂಡಳಿಯಲ್ಲಿ ನೋಂದಾಯಿಸಲಾದ ಕಾರ್ಮಿಕರ ಅವಲಂಬಿತರು ಅರ್ಧದಷ್ಟು ಶುಲ್ಕವನ್ನು ಮಾತ್ರ ಪಾವತಿಸಿದರೆ ಸಾಕು ಎಂದು ಸಂಬಂಧಿತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿಜಯೋತ್ಸವ ವೇಳೆ ಸಿಪಿಎಂ ಕಚೇರಿಗೆ ಹಾನಿ

ಕಾಸರಗೋಡು: ವಿಧಾನಸಭಾ ಚುನಾವಣೆ ವಿಜಯೋತ್ಸವ ಮೆರವಣಿಗೆ ವೇಳೆ ಬೇಕಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಉದುಮ ನಾಲಾಂವಾದುಕ್ಕಲ್ ಎಂಬಲ್ಲಿ ಸಿಪಿಎಂ ಕಚೇರಿಗೆ ಹಾನಿಗೈದ ಬಗ್ಗೆ ದೂರಲಾಗಿದೆ. ಈ ಸಂಬಂಧ 3 ಯುಡಿಎಫ್ ಕಾರ್ಯಕರ್ತರ ವಿರುದ್ಧ ಕೇಸು ದಾಖಲಿಸಲಾಗಿದೆ. ಯುಡಿಎಫ್ ಕಾರ್ಯ ಕರ್ತರು ವಿಜಯೋತ್ಸವ ಮೆರವಣಿಗೆ ವೇಳೆ ಸಿಪಿಎಂ ಕಚೇರಿಯೊಳಗೆ ಅತಿಕ್ರಮಿಸಿ ನುಗ್ಗಿ ಹಾನಿಗೊಳಿಸಿರುವುದಾಗಿಯೂ, ಪೂಚಕ್ಕಾಡ್‌ನಲ್ಲಿ ವೈಟಿಂಗ್ ಶೆಡ್‌ಗೆ ಹಾನಿಗೊಳಿಸಿರುವುದಾಗಿ ದೂರಲಾಗಿದೆ.

ಕೇರಳ ರಾಜ್ಯ ವಿಧಾನಸಭಾ ಚುನಾವಣೆ | ಕಾಸರಗೋಡು ಜಿಲ್ಲೆಯಲ್ಲಿ ಭಾರೀ ಬದಲಾವಣೆ

ಐಕ್ಯರಂಗ ಏರಿಕೆ, ಎಡರಂಗ ಕುಸಿತ, ಎನ್‌ಡಿಎಗೆ ಮತ ಹೆಚ್ಚಳ

ಕಾಸರಗೋಡು: ಹಲವು ವರ್ಷಗಳಿಂದ ಕಾಸರಗೋಡು ಜಿಲ್ಲೆ ಐದು ವಿಧಾನಸಭಾ ಕ್ಷೇತ್ರಗಳ ಫಲಿತಾಂಶ 3 ಎಡರಂಗ ಮತ್ತು 2 ಐಕ್ಯರಂಗ ಸಮೀಕರಣದಲ್ಲಿಯೇ ಬರುತ್ತಿದ್ದವು. ಆದರೆ ಈ ಬಾರಿಯ ಚುನಾವಣೆಯಲ್ಲಿ ಆ ಸಮೀಕರಣವು ತಲೆಕೆಳಗಾಗಿದೆ. ಈ ಬಾರಿ ಐಕ್ಯರಂಗ ನಾಲ್ಕು ಮತ್ತು ಎಡರಂಗ ಒಂದು ಸ್ಥಾನ ಗಳಿಸಿಕೊಂಡಿದೆ. ಈ ಮಧ್ಯೆ ಬಿಜೆಪಿ ನೇತೃತ್ವದ ಎನ್‌ಡಿಎ 5 ವಿಧಾನಸಭಾ ಕ್ಷೇತ್ರಗಳಲ್ಲೂ ಅಭೂತಪೂರ್ವ ಮತಗಳ ಪಡೆದುಕೊಂಡಿದೆ.
ಜಿಲ್ಲೆಯಲ್ಲಿ ಯುಡಿಎಫ್ ಉತ್ತಮ ಪ್ರದರ್ಶನ ತೋರಿದ್ದು, ಜನಮನ್ನಣೆ ಪಡೆದಿದೆ. ಎಲ್‌ಡಿಎಫ್‌ನ ಭದ್ರಕೋಟೆಯಾದ ಉದುಮ ಮತ್ತು ತೃಕ್ಕರೀಪ್ಪುರ ಕ್ಷೇತ್ರಗಳನ್ನು ಯುಡಿಎಫ್ ತನ್ನದಾಗಿಸಿಕೊಂಡಿದೆ. ಮಂಜೇಶ್ವರ ಮತ್ತು ಕಾಸರಗೋಡಿನಲ್ಲಿ ಮುಸ್ಲಿಂಲೀಗ್‌ನ ಅಭ್ಯರ್ಥಿಗಳು ಜಯ ಗಳಿಸಿದರೆ, ಉದುಮ ಮತ್ತು ತೃಕ್ಕರೀಪ್ಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಕಾಞಂಗಾಡು ಮಾತ್ರ ಸಿಪಿಐ ಅಭ್ಯರ್ಥಿಯ ಪಾಲಾಗಿದೆ. ಅದರಂತೆ ಮಂಜೇಶ್ವರದಲ್ಲಿ ಹಾಲಿ ಶಾಸಕ ಎ.ಕೆ.ಎಂ.ಅಶ್ರಫ್ (ಗೆಲುವಿನ ಅಂತರ – 29,252), ಕಾಸರಗೋಡಿನಲ್ಲಿ ಕಲ್ಲಟ್ರ ಮಾಹಿನ್ ಹಾಜಿ (ಗೆಲುವಿನ ಅಂತರ – 22,698), ಉದುಮದಲ್ಲಿ ಕೆ.ನೀಲಕಂಠನ್ (ಗೆಲುವಿನ ಅಂತರ – 4,847), ಕಾಞಂಗಾಡಿನಲ್ಲಿ ಗೋವಿಂದನ್ ಪಳ್ಳಿಕಾಪ್ಪಿಲ್ (ಗೆಲುವಿನ ಅಂತರ – 15,316), ತೃಕ್ಕರೀಪ್ಪುರದಲ್ಲಿ ಸಂದೀಪ್ ಪಾರಿಯರ್ (ಗೆಲುವಿನ ಅಂತರ – 4,431) ಜಯ ದಾಖಲಿಸಿದ್ದಾರೆ.



ಜಿಲ್ಲೆಯಲ್ಲಿ ಮುಸ್ಲಿಂ ಮತಗಳು ಧ್ರುವೀಕರಣ
ಈ ಬಾರಿಯ ವಿಧಾನಸಭಾ ಚುನಾವಣೆಯನ್ನು ಅವಲೋಕಿಸಿದಾಗ ಐದು ವಿಧಾನಸಭಾ ಕ್ಷೇತ್ರಗಳಲ್ಲೂ ಮುಸ್ಲಿಂ ಮತಗಳು ಕ್ರೋಢೀಕರಣಗೊಂಡು ಯುಡಿಎಫ್ ಅಭ್ಯರ್ಥಿಗಳಿಗೆ ಚಲಾವಣೆಯಾಗಿರುವುದು ಕಂಡುಬರುತ್ತಿದೆ. ಈ ನಡುವೆ ಐದು ಕ್ಷೇತ್ರಗಳ ಎಲ್‌ಡಿಎಫ್ ಒಕ್ಕೂಟದ ಮುಸ್ಲಿಂ ಮತಗಳು ಕೂಡಾ ಯುಡಿಎಫ್ ಪಾಲಾಗಿರುವುದು ಅಂಕಿ ಅಂಶಗಳಿಂದ ದೃಢಗೊಳ್ಳುತ್ತಿದೆ. ಇದೇ ವೇಳೆ ಮಂಜೇಶ್ವರದಲ್ಲಿ ಎಡರಂಗದ ಮತಗಳ ಪೈಕಿ ಸುಮಾರು 25 ಸಾವಿರದಷ್ಟು ಮತಗಳು ಐಕ್ಯರಂಗಕ್ಕೆ ಬಿದ್ದಿರುವುದು ಅಚ್ಚರಿಗೂ ಕಾರಣವಾಗಿದ್ದು, ಪ್ರಜಾಪ್ರಭುತ್ವಕ್ಕೇ ಮಾರಕವಾಗಿದೆ. ಇನ್ನೊಂದೆಡೆ ಕಾಸರಗೋಡಿನಲ್ಲೂ ಎಡರಂಗದ ಪರಂಪರಾಗತ ಮತಗಳು ಯುಡಿಎಫ್ ಅಭ್ಯರ್ಥಿ ಪಾಲಾಗಿರುವುದು ಫಲಿತಾಂಶದಿಂದ ಗೋಚರಿಸುತ್ತಿದೆ.

ಉತ್ತಮ ಪ್ರಚಾರ ಕಾರ್ಯ
ಕಾಸರಗೋಡು ಜಿಲ್ಲೆಯ ಮಂಜೇಶ್ವರ, ಕಾಸರಗೋಡು ವಿಧಾನಸಭಾ ಕ್ಷೇತ್ರಗಳಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳು ಸಾಕಷ್ಟು ಮತ ಪಡೆದುಕೊಳ್ಳುವಲ್ಲಿ ಸಫಲರಾಗಿದ್ದರೂ, ಗೆಲುವಿನ ಸನಿಹಕ್ಕೆ ತಲುಪಲು ಸಾಧ್ಯವಾಗಲಿಲ್ಲ, ಉಭಯ ಒಕ್ಕೂಟಗಳ ಒಳ ಒಪ್ಪಂದಗಳು , ಸಮುದಾಯವೊಂದರ ಧ್ರುವೀಕರಣ ಇದಕ್ಕೆ ಪ್ರಮುಖ ಕಾರಣವಾಗಿದೆ. ಹಾಗೆ ನೋಡಿದಲ್ಲಿ ಈ ಬಾರಿಯ ಚುನಾವಣೆ ಯಲ್ಲಿ ಇತರ ಎಲ್ಲಾ ಒಕ್ಕೂಟಗಳಿಗಿಂತ ಎನ್‌ಡಿಎ ಮೈತ್ರಿಕೂಟ ಅತ್ಯುತ್ತಮ ಪ್ರಚಾರ ಕಾರ್ಯ ನಡೆಸಿತ್ತು. ಸ್ಟಾರ್ ಪ್ರಚಾರಕರನ್ನೂ ಕರೆಸಿ ಮತಯಾಚಿಸಲಾಗಿತ್ತು.

ಎಡರಂಗ ಒಕ್ಕೂಟ ಭದ್ರಕೋಟೆ ಛಿದ್ರ
ಜಿಲ್ಲೆಯಲ್ಲಿ ಎಡರಂಗದ ಭದ್ರಕೋಟೆಯೆಂದೇ ಬಿಂಬಿತವಾಗಿರುವ ಉದುಮ ಕ್ಷೇತ್ರದಲ್ಲಿ ಈ ಬಾರಿ ಸಿಪಿಎಂ ಅಭ್ಯರ್ಥಿ ಭಾರೀ ಹಿನ್ನಡೆ ಅನುಭವಿಸಿದ್ದಾರೆ. ಕಾಞಂಗಾಡು ವಿಧಾನಸಭಾ ಕ್ಷೇತ್ರವನ್ನು ಮಾತ್ರ ಎಡರಂಗ ಉಳಿಸಿಕೊಳ್ಳುವಲ್ಲಿ ಸಫಲವಾಗಿದೆ. ಇನ್ನೊಂ ದೆಡೆ ಕೇರಳದ ರಾಜಕೀಯ ಇತಿಹಾಸದಲ್ಲಿ ವಿಶೇಷ ಸ್ಥಾನಮಾನ ಹೊಂದಿರುವ ತೃಕ್ಕರೀಪ್ಪುರ ಕ್ಷೇತ್ರ ಈ ಬಾರಿ ರಾಜ್ಯಮಟ್ಟದಲ್ಲಿ ಗಮನ ಸೆಳೆದಿತ್ತು. ಎಡಪಕ್ಷಗಳ ಕ್ಷೇತ್ರವೆಂದೇ ಕರೆಯಲ್ಪಡುತ್ತಿದ್ದ ತೃಕ್ಕರೀಪ್ಪುರವನ್ನು ಕಾಂಗ್ರೆಸ್ ತನ್ನ ತೆಕ್ಕೆಗೆ ಸೆಳೆದುಕೊಂಡಿದೆ. ಒಟ್ಟಾರೆಯಾಗಿ ಈ ಬಾರಿಯ ಚುನಾವಣೆಯಲ್ಲಿ ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ರಾಜಕೀಯ ಪಕ್ಷಗಳ ಲೆಕ್ಕಾಚಾರ ತಲೆಕೆಳಗಾಗಿದ್ದು, ಮುಂದಿನ ದಿನಗಳಲ್ಲಿ ಯಾವ ರೀತಿಯ ಪ್ರಭಾವ ಬೀರಬಹುದು ಎಂಬುದನ್ನು ಕಾದುನೋಡಬೇಕಾಗಿದೆ.

ಅಗ್ನಿಶಾಮಕ ದಳದಿಂದ ಸಾರ್ವಜನಿಕರಿಗೆ ರಕ್ಷಣಾ ಕಾರ್ಯಾಚರಣೆಯ ತರಬೇತಿ



ಕಾಸರಗೋಡು: ಅವಘಡಗಳು ಸಂಭವಿಸಿದಾಗ ನೋಡಿಕೊಂಡು ನಿಲ್ಲದೆ ರಕ್ಷಣಾ ಕಾರ್ಯಾಚರಣೆಗಳನ್ನು ನಡೆಸುವುದಕ್ಕಾಗಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಸಲುವಾಗಿ ಕಾಸರಗೋಡು ಅಗ್ನಿಶಾಮಕ ದಳವು ರಂಗಕ್ಕಿಳಿದಿದೆ. ಬೇಸಿಗೆಯ ಉಷ್ಣತೆ ತೀವ್ರಗೊಂಡಿರುವುದರಿಂದ ಬೆಂಕಿ ಆಕಸ್ಮಿಕಗಳು ಹೆಚ್ಚುತ್ತಿದ್ದು, ಅದನ್ನು ನಿಯಂತ್ರಿಸಲು ಮತ್ತು ದುರಂತಕ್ಕೊಳಗಾದವರನ್ನು ರಕ್ಷಿಸಲು, ವಿದ್ಯುತ್ ಅಪಘಾತಗಳು, ಅಡುಗೆ ಅನಿಲ ಸೋರಿಕೆ ಮೊದಲಾದ ಸಂದರ್ಭ ನಡೆಸಬೇಕಾದ ಕಾರ್ಯಾಚರಣೆಗಳ ಬಗ್ಗೆ ತರಬೇತಿ ನೀಡಲಾಯಿತು.

ಗ್ಯಾಸ್ ಸೋರಿಕೆಯ ಮಾಹಿತಿ
ಹಾವು ಕಡಿತ, ಜಲಮೂಲಗಳ ಅಪಘಾತಗಳು, ಅಗ್ನಿ ಪ್ರತಿರೋಧ, ಸಿಪಿಆರ್ ಇತ್ಯಾದಿಗಳ ಕುರಿತು ತಿಳುವಳಿಕೆ ಮೂಡಿಸಲು ಆದ್ಯತೆ ನೀಡಲಾಯಿತು. ರೆಸಿಡೆಂಟ್ಸ್ ಅಸೋಸಿಯೇಶನ್‌ಗಳಲ್ಲಿ, ಶಾಲೆಗಳಲ್ಲಿ ಕಾಲೇಜುಗಳಲ್ಲಿ, ವ್ಯಾಪಾರ ಸಂಸ್ಥೆಗಳಲ್ಲಿ ತಿಳುವಳಿಕಾ ತರಗತಿಗಳು, ಅಣಕು ಪ್ರದರ್ಶನಗಳು ನಡೆದವು. ಅವೈಜ್ಞಾನಿಕವಾದ ವಯರಿಂಗ್‌ನ ಮೂಲಕ ವಾಹನಗಳಿಗೆ ಕೂಡಲೇ ಬೆಂಕಿ ತಗುಲುವ ಪರಿಸ್ಥಿತಿಯಲ್ಲಿ ಪ್ರಾಥಮಿಕ ಸುರಕ್ಷತೆಯ ಕುರಿತು ಗ್ಯಾಸ್ ಸೋರಿಕೆ ಮೊದಲಾದ ಅಪಘಾತಗಳಿಂದ ಸಂರಕ್ಷಣೆ ಪಡೆಯುವ ಬಗ್ಗೆ ತಿಳುವಳಿಕೆ ಒದಗಿಸಲಾಯಿತು.
ಕಾಸರಗೋಡು ಪಾರೆಕಟ್ಟೆ ವೆಲ್‌ನೆಸ್ ಸೆಂಟರ್‌ನಲ್ಲಿ ಜರಗಿದ ತಿಳುವಳಿಕೆ ಕಾರ್ಯಕ್ರಮದಲ್ಲಿ ಸೀನಿಯರ್ ಫಯರ್ ಆ್ಯಂಡ್ ರೆಸ್ಕ್ಯೂ ಅಧಿಕಾರಿ ಇ.ಪ್ರಸೀದ್, ಫಯರ್ ಆ್ಯಂಡ್ ರೆಸ್ಕ್ಯೂ ಅಧಿಕಾರಿಗಳಾದ ಅರುಣ ಪಿ.ನಾಯರ್, ಕೆ.ಶ್ರೀಜಿಶ್ ತರಗತಿ ನಡೆಸಿದರು.
ಬಿ.ಎಸ್.ವಿಶ್ವನಾಥ್, ಕೆ.ಪ್ರದೀಪ್‌ಕುಮಾರ್, ಪಿ.ನಾರಾಯಣ ನಾಯ್ಕ್, ಅಮಿತ ವಿಶ್ವನಾಥ್ ಮಾತನಾಡಿದರು.

ಇಂದಿನಿಂದ ಬಾರ ವಣ್ಣಾರತ್ ಶ್ರೀ ಭಗವತಿ ಕ್ಷೇತ್ರದ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ

ಕಾಸರಗೋಡು: ಉದುಮ ಪಂಚಾಯತ್‌ನ ಬಾರ ಎಂಬಲ್ಲಿರುವ ಬಾರ ವಣ್ಣಾರತ್ ಶ್ರೀ ಭಗವತಿ ಕ್ಷೇತ್ರದ ನವೀಕರಣ ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಮೇ 6ರಿಂದ 8ರ ತನಕ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ ಎಂದು ಪದಾಧಿಕಾರಿಗಳು ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.
ಮೇ 6ರಂದು ಬೆಳಿಗ್ಗೆ 9.30ಕ್ಕೆ ಬಾರ ವೆಡಿಕುನ್ನು ಶ್ರೀ ವಿಷ್ಣುಮೂರ್ತಿ ಕ್ಷೇತ್ರದಿಂದ ಶ್ರೀ ಭಗವತಿ ಕ್ಷೇತ್ರಕ್ಕೆ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ, ಬೆಳಗ್ಗೆ 10 ಗಂಟೆಗೆ ನಡೆಯುವ ಧಾರ್ಮಿಕ ಸಭೆಯಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ದೀಪ ಪ್ರಜ್ವಲನೆಗೊಳಿಸಿ ಆಶೀರ್ವಚನ ನೀಡುವರು. ವಿವಿಧ ಕ್ಷೇತ್ರಗಳ ಗಣ್ಯರು ಉಪಸ್ಥಿತರಿರುವರು. ಮಧ್ಯಾಹ್ನ 12 ಗಂಟೆಗೆ ಅನ್ನದಾನ, ರಾತ್ರಿ 7 ಗಂಟೆಗೆ ಸಾಮೂಹಿಕ ಪ್ರಾರ್ಥನೆ, ವಾಸ್ತುಬಲಿ, ರಾತ್ರಿಪೂಜೆ ನಡೆಯಲಿದೆ.
ಮೇ 7ರಂದು ಬೆಳಿಗ್ಗೆ 7 ಗಂಟೆಗೆ ಗಣಪತಿ ಹೋಮ, ಭಗವತಿ ಸೇವೆ, ಅನುಜ್ಞಾ ಪ್ರಾರ್ಥನೆ, 10 ಗಂಟೆಗೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಚಿನ್ಮಯ ಮಿಷನ್ ಮುಖ್ಯಸ್ಥ ಸ್ವಾಮೀ ವಿವಿಕ್ತಾನಂದ ಸರಸ್ವತೀಯವರು ಆಶೀರ್ವಚನ ನೀಡುವರು. ಮಧ್ಯಾಹ್ನ 12ಕ್ಕೆ ಅನ್ನದಾನ, ಸಂಜೆ 6 ಗಂಟೆಗೆ ಕಲಶಪೂಜೆ, ಅಧಿವಾಸ ಹೋಮ ಜರಗಲಿದೆ.

- ಮೇ 6ರಂದು ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ, ಧಾರ್ಮಿಕ ಸಭೆ
- ಮೇ 7ರಂದು ಭಗವತಿ ಸೇವೆ, ಅನುಜ್ಞಾ ಪ್ರಾರ್ಥನೆ, ಧಾರ್ಮಿಕ ಸಭೆ
- ಮೇ 8ರಂದು 108 ತೆಂಗಿನಕಾಯಿಯ ಮಹಾಗಣಪತಿ ಹೋಮ , ದೇವಿ ಪ್ರತಿಷ್ಠೆ, ಧಾರ್ಮಿಕ ಸಭೆ

ಮೇ 8ರಂದು ಬೆಳಿಗ್ಗೆ 5ರಿಂದ 108 ತೆಂಗಿನಕಾಯಿಯ ಮಹಾಗಣಪತಿ ಹೋಮ, ಬೆಳಿಗ್ಗೆ 7.58ರಿಂದ 8.38ರ ಶುಭಮುಹೂರ್ತದಲ್ಲಿ ದೇವಿ ಪ್ರತಿಷ್ಠೆ, ಬಳಿಕ ನಡೆಯುವ ಧಾರ್ಮಿಕ ಸಭೆಯಲ್ಲಿ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಸಾಧ್ವಿ ಶ್ರೀ ಮಾತಾನಂದಮಯಿ ಆಶೀರ್ವಚನ ನೀಡುವರು. ಮಧ್ಯಾಹ್ನ 12 ಗಂಟೆಗೆ ಅನ್ನದಾನ ನಡೆಯುವುದು ಎಂದು ಅವರು ತಿಳಿಸಿದರು.
ಸುದ್ದಿಗೋಷ್ಠಿಯಲ್ಲಿ ಕೆ.ಕುಂಞಿಕೃಷ್ಣನ್ ನಾಯರ್, ರಾಜೀವನ್, ಎಂ.ಬಾಲಕೃಷ್ಣನ್, ಕೆ.ವಿ.ಸುಕುಮಾರನ್, ವಿ.ಮನೋಜ್, ರಾಮಕೃಷ್ಣನ್ ಉಪಸ್ಥಿತರಿದ್ದರು.

ಮಂಗಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿ: ಸ್ವಚ್ಛತಾ ಕಾರ್ಯಕ್ಕೆ ಚಾಲನೆ



ಉಪ್ಪಳ: ಮಳೆಗಾಲ ಸಮೀಪಿಸುತ್ತಿರುವಂತೆ ಮಂಗಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ತ್ಯಾಜ್ಯ ಸಹಿತ ಕಸಕಡ್ಡಿಗಳನ್ನು ತೆರವುಗೊಳಿಸಿ ಸ್ವಚ್ಛತಾ ಕಾರ್ಯಕ್ಕೆ ಪಂಚಾಯತ್ ಆಡಳಿತ ಸಮಿತಿಯ ನೇತೃತ್ವದಲ್ಲಿ ಚಾಲನೆ ನೀಡಲಾಯಿತು. ಈ ನಿಟ್ಟಿನಲ್ಲಿ ಉಪ್ಪಳ ಗೇಟ್ ಪ್ರದೇಶದಲ್ಲಿ ನಡೆದ ಶುಚೀಕರಣ ಕಾರ್ಯವನ್ನು ಪಂಚಾಯತ್ ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಿಮಾನ್ ಉದ್ಘಾಟಿಸಿದರು. ಆರೋಗ್ಯ ಇಲಾಖೆ ಅಧಿಕಾರಿಗಳು, ಜನಪ್ರತಿನಿಧಿಗಳು, ಪಂ. ಅಧಿಕಾರಿಗಳು, ಆಶಾವರ್ಕರ್, ಹಸಿರುಕ್ರಿಯಾಸೇನೆ ಶುಚೀಕರಣ ಕಾರ್ಯದಲ್ಲಿ ಭಾಗವಹಿಸಿದ್ದರು.

24 ವಾರ್ಡ್‌ಗಳಲ್ಲಿ ಸ್ವಚ್ಛತೆ
ಅದೇ ರೀತಿ 24 ವಾರ್ಡ್‌ಗಳಲ್ಲಿಯೂ ಶುಚೀಕರಣ ನಡೆಯಲಿದೆ. ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯವನ್ನು ಉಪೇಕ್ಷಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಪಂಚಾಯತ್ ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಿಮಾನ್ ತಿಳಿಸಿದ್ದಾರೆ.

ಕಲೆಕ್ಟರೇಟ್‌ನ ಗೋದಾಮು ಸೇರಿದ ಇಲೆಕ್ಟ್ರಾನಿಕ್ಸ್ ಮತಯಂತ್ರ

ಕಾಸರಗೋಡು: 2026ರ ಕೇರಳ ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ ಮತದಾನಕ್ಕೆ ಬಳಸಲಾದ ಇಲೆಕ್ಟ್ರಾನಿಕ್ಸ್ ಮತ ಯಂತ್ರಗಳನ್ನು ಸೋಮವಾರ ಮತ ಎಣಿಕೆ ಕಾರ್ಯ ಮುಕ್ತಾಯಗೊಳಿಸಿದ ಬಳಿಕ ಕಲೆಕ್ಟರೇಟ್‌ನ ಗೋದಾಮಿನಲ್ಲಿ ಸಂಗ್ರಹಿಸಿಡಲಾಯಿತು.
ಮತ ಎಣಿಕೆಯ ನಂತರ ವಿವಿಧ ಮತ ಎಣಿಕೆ ಕೇಂದ್ರಗಳಿಂದ ಭಾರೀ ಪೊಲೀಸ್ ಭದ್ರತೆಯಲ್ಲಿ ಇಲೆಕ್ಟ್ರಾನಿಕ್ಸ್ ಮತ ಯಂತ್ರಗಳನ್ನು ಕಲೆಕ್ಟರೇಟ್‌ನ ಗೋದಾಮಿನ ಸ್ಟ್ರಾಂಗ್ ರೂಮ್‌ಗೆ ತರಲಾಯಿತು. ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನೇತೃತ್ವದಲ್ಲಿ ಇವಿಎಂಗಳನ್ನು ಕಲೆಕ್ಟರೇಟ್‌ನ ಗೋದಾಮಿನಲ್ಲಿ ಸ್ವೀಕರಿಸಲಾಯಿತು.

45 ದಿನಗಳೊಳಗೆ ದೂರು ಸಲ್ಲಿಸಬಹುದು
ಎಲ್ಲಾ ಕ್ಷೇತ್ರಗಳಲ್ಲಾಗಿ ಒಟ್ಟು 1136 ಬ್ಯಾಲಟ್ ಯೂನಿಟ್‌ಗಳು, 1136 ಕಂಟ್ರೋಲ್ ಯೂನಿಟ್‌ಗಳು ಮತ್ತು 1153 ವಿವಿಪ್ಯಾಟ್ ಯಂತ್ರಗಳಿದ್ದವು. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ನಿಗದಿಪಡಿಸಿದ ವಿಶೇಷ ಕ್ಯಾಬಿನ್‌ನಲ್ಲಿ ಯಂತ್ರಗಳನ್ನು ಸಂಗ್ರಹಿಸಲಾಗಿದೆ. ಮತ ಎಣಿಕೆಗೆ ಸಂಬಂಧಿಸಿದಂತೆ ಯಾವುದೇ ದೂರುಗಳಿದ್ದರೆ ಅವುಗಳನ್ನು 45 ದಿನಗಳೊಳಗೆ ಸಲ್ಲಿಸಬಹುದು. ಮುಂದಿನ ಚುನಾವಣೆವರೆಗೆ ಈ ಮತ ಯಂತ್ರಗಳನ್ನು ಗೋದಾಮಿನಲ್ಲಿ ಸಂಗ್ರಹಿಸಲಾಗುತ್ತದೆ.

ಜಿಲ್ಲೆಯಲ್ಲಿ ಏರಿಕೆಯಾದ ವಿಪರೀತ ಉಷ್ಣಾಂಶ: ಮುನ್ನೆಚ್ಚರಿಕೆಯ ಕ್ರಮ ಕೈಗೊಳ್ಳಲು ಸೂಚನೆ

ಕಾಸರಗೋಡು: ನೇರಳಾತೀತ ಕಿರಣಗಳಿಗೆ ಅಥವಾ ಕಾಸರಗೋಡು ಜಿಲ್ಲೆಯಲ್ಲಿ ಏರಿಕೆಯಾದ ವಿಪರೀತ ಉಷ್ಣತೆಗೆ ದೀರ್ಘಕಾಲದವರೆಗೆ ನಿರಂತರವಾಗಿ ಮೈಯೊಡ್ಡಿಕೊಳ್ಳುವುದರಿಂದ ಬಿಸಿಲು, ಚರ್ಮ ರೋಗಗಳು, ಕಣ್ಣಿನ ಕಾಯಿಲೆಗಳು ಮತ್ತು ಇತರ ಆರೋಗ್ಯ ಸಮಸ್ಯೆಗಳು ಉಂಟಾಗಬಹುದು.
ಆದ್ದರಿಂದ ಸಾರ್ವಜನಿಕರು ಸುರಕ್ಷತಾ ಮುನ್ನೆಚ್ಚರಿಕೆ ಗಳನ್ನು ತೆಗೆದುಕೊಳ್ಳಬೇಕು. ಅತ್ಯಧಿಕ ನೇರಳಾತೀತ ಸೂಚ್ಯಂಕ ಬೆಳಗ್ಗೆ 10 ರಿಂದ ಅಪರಾಹ್ನ 3ಗಂಟೆಯ ನಡುವೆ ದಾಖಲಾಗುತ್ತದೆ. ಆ ಸಮಯದಲ್ಲಿ ಸಾಧ್ಯವಾದಷ್ಟು ಕಾಲ ಶರೀರಕ್ಕೆ ನೇರ ಸೂರ್ಯನ ಬೆಳಕು ಬೀಳುವುದನ್ನು ತಪ್ಪಿಸಬೇಕು. ಹೊರಾಂಗಣದಲ್ಲಿ ಕೆಲಸ ಮಾಡುವವರು, ಸಮುದ್ರ ಮತ್ತು ಒಳನಾಡಿನ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರು, ಜಲ ಸಾರಿಗೆಯಲ್ಲಿ ತೊಡಗಿರುವವರು, ಪ್ರವಾಸಿಗರು, ಚರ್ಮ ರೋಗಗಳಿಂದ ಬಳಲುತ್ತಿರುವ ಜನರು, ಆಲ್ಬಿನಿಸಂ ಇರುವ ಜನರು, ಕಣ್ಣಿನ ಕಾಯಿಲೆಗಳಿಂದ ಬಳಲುತ್ತಿರುವವರು, ಕ್ಯಾನ್ಸರ್ ರೋಗಿಗಳು ಮತ್ತು ಕಡಿಮೆ ರೋಗನಿರೋಧಕ ಶಕ್ತಿ ಹೊಂದಿರುವವರು ವಿಶೇಷವಾಗಿ ಜಾಗರೂಕರಾಗಿರಬೇಕು ಎಂದು ಜಿಲ್ಲಾ ಆರೋಗ್ಯ ಇಲಾಖೆ ತಿಳಿಸಿದೆ. ಪರ್ವತ ಪ್ರದೇಶಗಳಲ್ಲಿ (ಎತ್ತರದ ಪ್ರದೇಶಗಳು) , ಉಷ್ಣವಲಯದ ಪ್ರದೇಶಗಳಲ್ಲಿ ಬಿಸಿಲಿನ ಸೂಚ್ಯಂಕ ಸಾಮಾನ್ಯವಾಗಿ ಹೆಚ್ಚಾಗಿರುತ್ತದೆ. ಮೋಡಗಳಿಲ್ಲದ ಸ್ಪಷ್ಟ ಆಕಾಶವಿದ್ದರೂ ಯುವಿ ಸೂಚ್ಯಂಕ ಹೆಚ್ಚಿರಬಹುದು. ಇದರ ಜೊತೆಗೆ ಜಲಮೂಲಗಳು, ಮರಳಿನಂತಹ ಮೇಲ್ಮೈಗಳು ನೇರಳಾತೀತ ಕಿರಣ ಗಳನ್ನು ಪ್ರತಿಬಿಂಬಿಸುತ್ತವೆ. ಆದಕಾರಣ ಅಂತಹ ಪ್ರದೇಶಗಳಲ್ಲಿ ತಾಪಮಾನ ಅಧಿಕವಿರುತ್ತದೆ ಎಂದು ಜಿಲ್ಲಾ ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.



ಹತ್ತಿ ಬಟ್ಟೆಗಳನ್ನು ಧರಿಸಿ
ಹಗಲಿನಲ್ಲಿ ಹೊರಗೆ ಹೋಗುವಾಗ ಟೋಪಿ, ಛತ್ರಿ ಮತ್ತು ಸನ್ ಗ್ಲಾಸ್ ಬಳಸಬೇಕು. ಇಡೀ ದೇಹವನ್ನು ಆವರಿಸುವ ಹತ್ತಿ ಬಟ್ಟೆ ಧರಿಸುವುದು ಸೂಕ್ತವಾಗಿದ್ದು, ಪ್ರಯಾಣ ಮಾಡು ವಾಗ ವಿರಾಮದ ಸಮಯದಲ್ಲಿ ನೆರಳಿನಲ್ಲಿ ವಿಶ್ರಾಂತಿ ಪಡೆಯಲು ಪ್ರಯತ್ನಿಸಬೇಕು.

ಕಾಸರಗೋಡು ಜಿ.ಪಂ.ನಿರ್ಲಕ್ಷ್ಯದ ವಿರುದ್ಧ ಸಾರ್ವಜನಿಕರ ಪ್ರತಿಭಟನೆ



ಮುಳ್ಳೇರಿಯ: ಶಿಕ್ಷಣ ಮತ್ತು ಆರೋಗ್ಯದ ದೃಷ್ಟಿಯಿಂದ ಬಹಳ ಹಿಂದುಳಿದಿರುವ ಕುಂಬ್ಡಾಜೆಯ ಗುಡ್ಡಗಾಡು ಪ್ರದೇಶವನ್ನು ಇತರ ಪಂಚಾಯತ್‌ಗಳೊಂದಿಗೆ ಸಂಪರ್ಕಿಸುವ , ದಿನನಿತ್ಯ ಸಾವಿರಾರು ಜನರು ಪ್ರಯಾಣಿಸುವ ಕುಂಬ್ಡಾಜೆ ಪಂ.ನ ಬಹುತೇಕ ವಾರ್ಡ್‌ಗಳ ಮೂಲಕ ಹಾದುಹೋಗುವ ಕಾಸರಗೋಡು ಜಿಲ್ಲಾ ಪಂಚಾಯತ್ ರಸ್ತೆಯಾದ ಪೊಡಿಪಳ್ಳ – ಬೆಳಿಂಜ – ನಟ್ಟಕಲ ರೋಡ್ ಬಿರುಕು ಬಿಟ್ಟಿದ್ದು, ಹೊಂಡ ಗುಂಡಿ ರಸ್ತೆಯಲ್ಲಿ ನಡೆದಾಡಲೂ ಕಷ್ಟಕರವಾಗಿದೆ. ಈ ಎಲ್ಲಾ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಸಾರ್ವಜನಿಕರು ಪ್ರತಿಭಟನೆ ನಡೆಸಿದರು.
ಈ ಮಳೆಗಾಲಕ್ಕೂ ಮುನ್ನ ರಸ್ತೆ ದುರಸ್ತಿ ಮಾಡುವುದಾಗಿ ಜಿ.ಪಂ. ಅಧಿಕಾರಿಗಳು ಭರವಸೆ ನೀಡಿದ್ದರು. ಆದರೆ ಕೆಲಸ ಇನ್ನೂ ಪ್ರಾರಂಭವಾಗಿಲ್ಲ, ಕುಡಿಯುವ ನೀರಿಗಾಗಿ ರಸ್ತೆಯ ಬದಿಗಳನ್ನು ಅಗೆದ ಕಾರಣ ಸ್ಥಳೀಯರು ಮತ್ತು ಪ್ರಯಾಣಿಕರು ಈಗ ಧೂಳಿನ ಮೇಲೆ ನಡೆದಾಡುವಂತಾಗಿದೆ. ಕಳೆದ ಆಡಳಿತ ಸಮಿತಿಯು ಈ ರಸ್ತೆ ದುರಸ್ತಿ ಕಾರ್ಯಕ್ಕೆ ಜಿಲ್ಲಾ ಪಂಚಾಯತ್ 80 ಲಕ್ಷ ರೂ.ಗಳನ್ನು ನಿಗದಿಪಡಿಸಿತ್ತು, ಆದರೆ ಕೆಲಸ ಇನ್ನೂ ನಡೆದಿಲ್ಲ, ಹೊಸ ಬಜೆಟ್‌ನಲ್ಲಿ ಮತ್ತೆ 50 ಲಕ್ಷ ರೂ. ಗಳನ್ನು ನಿಗದಿಪಡಿಸಲಾಗಿದೆ ಎಂದು ಹೇಳಲಾಗಿದ್ದರೂ ಕೆಲಸ ಯಾವಾಗ ಪ್ರಾರಂಭವಾಗುತ್ತದೆ ಎಂಬ ಪ್ರಶ್ನೆಗೆ ಉತ್ತರವಿಲ್ಲ, ಈ ರಸ್ತೆಯನ್ನು ಲೋಕೋಪ ಯೋಗಿ ಇಲಾಖೆಗೆ ಹಸ್ತಾಂತರಿಸಬೇಕೆಂದು ಸ್ಥಳೀಯರು ದಶಕಗಳಿಂದ ಒತ್ತಾಯಿಸುತ್ತಿದ್ದಾರೆ. ಶಿಕ್ಷಣ ಕ್ಷೇತ್ರದ ಪರಿಸ್ಥಿತಿಯೂ ಶೋಚನೀಯವಾಗಿದೆ. ಈ ಪಂ.ನಲ್ಲಿ ಮಲೆಯಾಳದಲ್ಲಿ ಪ್ರೌಢಶಾಲೆ ಇಲ್ಲದ ಕಾರಣ ವಿದ್ಯಾರ್ಥಿಗಳು ಹತ್ತಿರದ ಪಂ.ಗಳಿಗೆ ಕಿಲೋ ಮೀಟರ್ ಪ್ರಯಾಣಿಸಬೇಕಾಗುತ್ತದೆ. ಕಳಪೆ ರಸ್ತೆ ಮತ್ತು ಸಾರಿಗೆ ಸೌಲಭ್ಯಗಳ ಕೊರತೆ ಅಧ್ಯಯನವನ್ನೇ ಹೋರಾಟವಾಗಿ ಪರಿವರ್ತಿಸುತ್ತಿದೆ. ಬಜೆಟ್‌ನಲ್ಲಿ ಕೋಟಿಗಟ್ಟಲೆ ಹಣ ಘೋಷಿಸಿದರೂ ಮೂಲಭೂತ ಅಗತ್ಯ ಮಾಡಲಾಗುತ್ತಿಲ್ಲ ಎಂದು ದೂರಿದರು.



ಕಾಞಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದಲ್ಲಿ ನಡೆದ ಬ್ರಹ್ಮಕಲಶದ ಅಂಗವಾಗಿ ಶ್ರೀ ಮೂಕಾಂಬಿಕಾ ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್ ಪ್ರಾಯೋಜಕರಲ್ಲಿ ಮಾತೃ ಸಮಿತಿ ನೇತೃತ್ವದಲ್ಲಿ ಕಲಾವಿದೆಯರು ನಡೆಸಿಕೊಟ್ಟ ಕೈಕೊಟ್ಟು ಕಳಿ ತನ್ನದೇ ವೈಶಿಷ್ಟ್ಯದಿಂದ ಜನಮನ ರಂಜಿಸಿದೆ.

ಕಾಸರಗೋಡು ಜಿಲ್ಲೆಯ ಭೂಜಲ ಇಲಾಖೆಗೆ ನೂತನ ಬೋರ್‌ವೆಲ್ ರಿಗ್ ಮಂಜೂರು

ಉತ್ತಮ ಕಾಮಗಾರಿ ನಿರೀಕ್ಷೆ: ಫಲಪ್ರದವಾಗಲಿದೆ ಅಧಿಕಾರಿಗಳ ಯೋಜನೆ

ಕಾಸರಗೋಡು: ದೀರ್ಘಕಾಲದ ಬೇಡಿಕೆಯ ನಂತರ ಕಾಸರಗೋಡು ಜಿಲ್ಲೆಯಲ್ಲಿ ಭೂಗರ್ಭ ಇಲಾಖೆಗೆ ನೂತನ ಬೋರ್‌ವೆಲ್ ರಿಗ್ ಮಂಜೂರುಗೊಂಡಿದೆ. ಈ ಮೂಲಕ ನೀರಾವರಿ ವ್ಯವಸ್ಥೆಯಲ್ಲಿ ಉತ್ತಮ ಕಾರ್ಯಚಟುವಟಿಕೆ ಸಾಧ್ಯವಾಗಲಿದ್ದು ಅಧಿಕಾರಿಗಳ ಯೋಜನೆಯು ಫಲಪ್ರದವಾಗಲಿದೆ.
ಇಲಾಖೆಯ ಕೊಲ್ಲಂನ ಕೇಂದ್ರ ವರ್ಕ್ ಶಾಪ್‌ನಲ್ಲಿ ಕಾಮಗಾರಿ ಮತ್ತು ನೋಂದಣಿ ಪೂರ್ಣಗೊಳಿಸಿದ ರಿಗ್‌ನ್ನು ಅಧಿಕಾರಿಗಳು ಒಂದು ವಾರದೊಳಗೆ ಕಾಸರಗೋಡಿಗೆ ತಲುಪಿಸುವರು. ಬೇಸಿಗೆಕಾಲ ಮುಗಿಯುತ್ತಾ ಬಂದರೂ ಮಳೆ ತೀವ್ರಗೊಳ್ಳುವ ಮುನ್ನ ಜಿಲ್ಲೆಯಲ್ಲಿ ಅತೀ ಅಗತ್ಯವಿರುವಲ್ಲಿ ಕೊಳವೆ ಬಾವಿಗಳನ್ನು ನಿರ್ಮಿಸಲು ಸಾಧ್ಯವಿದೆ ಎಂಬ ನಿರೀಕ್ಷೆ ಭೂಗರ್ಭ ಇಲಾಖೆಯದ್ದಾಗಿದೆ.
ರಿಗ್‌ನ್ನು ಕಾರ್ಯಪ್ರವೃತ್ತಗೊಳಿಸಲಿರುವ ಕಾರ್ಮಿಕರು ಇರುವುದರಿಂದ ಹೊಸ ರಿಂಗ್ ತಲುಪಿಸಿದರೆ ಕೂಡಲೇ ಕಾಮಗಾರಿ ಆರಂಭಿಸಬಹುದು ಎಂಬ ಲೆಕ್ಕಾಚಾರ ಇಲಾಖೆಯದ್ದಾಗಿದೆ. 150 ಮೀಟರ್ (492 ಅಡಿ) ವರೆಗೆ ಆಳದಲ್ಲಿ ಅಗೆಯಲು ಸಾಮರ್ಥ್ಯ ಹೊಂದಿರುವ ಈ ಹೊಸ ರಿಗ್ ಕೆಲವು ವಿಶೇಷತೆಗಳನ್ನು ಹೊಂದಿದೆ. 140 ಮಿಲ್ಲಿ ಮೀಟರ್ ವ್ಯಾಸವಿರುವ ಪೈಪ್, 120 ಮಿಲ್ಲಿ ಮೀಟರ್ ಬೋರ್ ಕೊರೆಯಬಹುದು. ಬಾವಿಯ ವ್ಯಾಸ ಹಾಗೂ ಅದರಲ್ಲಿ ಉಪಯೋಗಿಸುವ ಪೈಪ್‌ನ ಗಾತ್ರವನ್ನು ಇದು ಸೂಚಿಸುತ್ತದೆ.
140 ಮಿಲ್ಲಿ ಮೀಟರ್ ವ್ಯಾಸವಿರುವ ಪೈಪ್‌ನ್ನು ಕೇಸಿಂಗ್ ಪೈಪ್ ಎನ್ನಲಾಗುತ್ತದೆ. ಮಣ್ಣು ಮತ್ತು ಕೆಸರು ಬಾವಿಗೆ ಕುಸಿದು ಬೀಳದಿರಲು ಮೇಲ್ಭಾಗದಿಂದ ಇಳಿಸುವ ಪೈಪ್‌ನ ಗಾತ್ರವು ಇದಾಗಿದೆ. ಇದರ ಹೊರಗಿನ ವ್ಯಾಸವು 140 ಮಿಲ್ಲಿ ಮೀಟರ್ ಆಗಿದೆ. ಅಂದರೆ ಸುಮಾರು 5.5 ಇಂಚು ಆಗಿರಲಿದೆ.
ಪಾರೆ ಇರುವ ಭಾಗದ ಕೊಳವೆ ಬಾವಿಯ ವ್ಯಾಸವು 120 ಮಿಲ್ಲಿ ಮೀಟರ್ ಬೋರ್ ಆಗಿದ್ದು, ಸಾಮಾನ್ಯವಾಗಿ ಕೇಸಿಂಗ್ ಪೈಪ್ ಇಳಿಸಿದ ನಂತರ ಅದರೊಳಗಿನಿಂದ ಸಣ್ಣ ಗಾತ್ರದಲ್ಲಿರುವ ಡ್ರಿಲ್ಲಿಂಗ್ ಬಿಟ್ ಉಪಯೋಗಿಸಿ ಕೆಳಭಾಗಕ್ಕೆ ತೆರೆಯಲಾಗುತ್ತದೆ. ಒಟ್ಟಿನಲ್ಲಿ ಮಂಜೂರುಗೊಂಡಿರುವ ನೂತನ ರಿಗ್ ಮೂಲಕ ಉತ್ತಮ ಚಟುವಟಿಕೆ ನಡೆಸಲು ಸಾಧ್ಯವಿದೆ.



ನೂತನ ರಿಗ್‌ಗೆ ಬೇಡಿಕೆ
ಜಿಲ್ಲೆಯಲ್ಲಿ ಭೂಗರ್ಭ ಇಲಾಖೆಯ ಬಳಿ ಯಿದ್ದ ರಿಗ್ 15 ವರ್ಷಗಳಷ್ಟು ಹಳೆಯದಾಗಿದ್ದು, ಈ ಹಿನ್ನೆಲೆ 2025ರ ಜೂನ್ ತಿಂಗಳಿನಲ್ಲಿ ಕೊಲ್ಲಂನ ಕೇಂದ್ರ ವರ್ಕ್ ಶಾಪ್‌ಗೆ ಕೊಂಡೊಯ್ಯಲಾಗಿತ್ತು. 15 ವರ್ಷ ಗಳು ತುಂಬಿದ ವಾಹನಗಳನ್ನು ಸ್ಕ್ರ್ಯಾಪ್ ಮಾಡಬೇಕೆಂಬ ಕೇಂದ್ರದ ಸೂಚನೆಯಂತೆ ರಿಗ್‌ನ್ನು ಕೊಲ್ಲಂಗೆ ಕಳುಹಿಸಲಾಗಿತ್ತು. ಅಂದಿನಿಂದ ನೂತನ ರಿಗ್‌ಗಾಗಿ ಬೇಡಿಕೆ ಕೇಳಿಬರುತ್ತಿದೆ.

ಇತ್ಯರ್ಥವಾಗದ 80 ಅರ್ಜಿಗಳು
ಕಾಸರಗೋಡು ಜಿಲ್ಲೆಯಲ್ಲಿ ನೀರಾವರಿ ವ್ಯವಸ್ಥೆಗಾಗಿ ಕೊಳವೆ ಬಾವಿ ನಿರ್ಮಿಸಲು 80ರಷ್ಟು ಕೃಷಿಕರ ಅರ್ಜಿಗಳು ಭೂಜಲ ಇಲಾಖೆಯ ಕಚೇರಿಯಲ್ಲಿ ರಾಶಿ ಬಿದ್ದಿವೆ. ಇವರೆಲ್ಲರೂ ಹಣ ಪಾವತಿಸಿ ಕೃಷಿ ನೀರಿನ ಬೋರ್‌ಗಾಗಿ ಕಾಯುತ್ತಿದ್ದಾರೆ. ಖಾಸಗಿ ಏಜೆನ್ಸಿಗಳು ಕೊಳವೆಬಾವಿ ನಿರ್ಮಿಸುತ್ತವೆಯಾದರೂ ಭಾರೀ ಮೊತ್ತ ಪಾವತಿಸಬೇಕು. ಭೂಜಲ ಇಲಾಖೆಯಾದರೆ ಸಬ್ಸಿಡಿ ಹಾಗೂ ಇತರ ಸವಲತ್ತುಗಳು ಲಭಿಸುತ್ತವೆ.

ಮಂಗಳೂರು ತಾಲೂಕು ಪಂಚಾಯತ್ ಕೆಡಿಪಿ ತ್ರೈಮಾಸಿಕ ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕ ಭರತ್ ಸೂಚನೆ

ಕುಡಿಯುವ ನೀರಿನ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ

ಮಂಗಳೂರು: ಕುಡಿಯುವ ನೀರಿನ ಸಮಸ್ಯೆ ಇರುವ ಪ್ರದೇಶಗಳಿಗೆ ತುರ್ತಾಗಿ ಅಗತ್ಯ ನೀರಿನ ಸರಬರಾಜು ಮಾಡುವಂತೆ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ವೈ. ಭರತ್ ಶೆಟ್ಟಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಮಂಗಳೂರು ತಾಲೂಕು ಪಂಚಾಯತ್ ಸಭಾಂಗಣ ದಲ್ಲಿ ಮಂಗಳವಾರ ನಡೆದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗುರುಪುರ-ಕೈಕಂಬ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಿಂದಾಗಿ ಸಮಸ್ಯೆ ಉಂಟಾಗಿದೆ. ಗುರುಪುರ, ಗಂಜಿಮಠ, ಅದ್ಯಪಾಡಿ, ಕಂದಾವರ, ಪಡುಪೆರಾರ ಮೊದಲಾದ ಕಡೆ ನೀರಿನ ಸಮಸ್ಯೆ ಇರುವುದರಿಂದ ಅಗತ್ಯ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಉಪಸ್ಥಿತಿಯಲ್ಲಿ ಮಂಗಳೂರು ತಾಲೂಕು ಪಂಚಾಯತ್ ವ್ಯಾಪ್ತಿಯ ಪ್ರತ್ಯೇಕ ಸಭೆ ಕರೆಯುವಂತೆ ನಿರ್ದೇಶನ ನೀಡಿದರು.

ಪೈಪ್ ಅಳವಡಿಕೆಗೆ ಆಗಿಲ್ಲ

ಗುರುಪುರ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಯುತ್ತಿದ್ದು, ಅಲ್ಲಿ ನೀರಿನ ಪೈಪ್ ಅಳವಡಿಕೆಗೆ ಯುಟಿಲಿಟಿ ವ್ಯವಸ್ಥೆ ಮಾಡಲಾಗಿಲ್ಲ. ಪಂಚಾಯತ್ ವತಿಯಿಂದ ಕ್ರಮ ವಹಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಆ ಭಾಗದ ಕೆಲ ಕಡೆ ನೀರಿನ ಸಮಸ್ಯೆ ಎದುರಾಗಿದೆ ಎಂದು ನೀರು ಪೂರೈಕೆ ವಿಭಾಗದ ಇಂಜಿನಿಯರ್ ಸಭೆಗೆ ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಡಾ. ಭರತ್, ಯಾವುದೇ ಸಮಸ್ಯೆ ಇದ್ದರೂ ಅದನ್ನು ಬಗೆಹರಿಸಿ ಸಾರ್ವಜನಿಕರಿಗೆ ನೀರು ಕೊಡುವುದು ನಮ್ಮ ಕರ್ತವ್ಯ ಎಂದರು.

ಗುರುಪುರ, ಮುತ್ತೂರು, ಮುಚ್ಚೂರು, ಉಳಾಯಿಬೆಟ್ಟು, ಬಡಗ ಎಡಪದವು, ಎಡಪದವು ಗ್ರಾಪಂಗಳಿಗೆ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದ್ದು, ಬೇಸಿಗೆ ಕಾಲದಲ್ಲಿ ನೀರಿನ ಅಭಾವ ಇರುವುದರಿಂದ ನೀರಿನ ಸರಬರಾಜಿನಲ್ಲಿ ಏರುಪೇರಾಗುತ್ತಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.



ಫಲಾನುಭವಿಗಳಿಗೆ ಸವಲತ್ತುಗಳ ವಿತರಣೆ

ಸಭೆಯ ಬಳಿಕ ವಿವಿಧ ಇಲಾಖೆಗಳಿಂದ ಕೊಡಮಾಡಲಾಗುವ ವಿವಿಧ ಸವಲತ್ತುಗಳನ್ನು ಅರ್ಹ ಫಲಾನುಭವಿಗಳಿಗೆ ಶಾಸಕ ಡಾ.ವೈ. ಭರತ್ ಶೆಟ್ಟಿ ವಿತರಿಸಿದರು. ಹೊಲಿಗೆ ಯಂತ್ರ, ಗಾಲಿ ಕುರ್ಚಿಗಳನ್ನು ಪಡೆದ ಫಲಾನುಭವಿಗಳು ಶಾಸಕರಿಗೆ ಕೃತಜ್ಞತೆ ಸಲ್ಲಿಸಿದರು.

ಅರಣ್ಯದಲ್ಲಿ ಚಿರತೆ ಸಂತತಿ ಹೆಚ್ಚಳ

ಮಂಗಳೂರು ತಾಲೂಕಿನಲ್ಲಿ ಮೀಸಲು ಅರಣ್ಯ ಪ್ರದೇಶ ಶೂನ್ಯವಾಗಿದೆ. ತೋಡಾರು, ಮೂಡುಬಿದಿರೆ ಕಡೆಯಿಂದ ಚಿರತೆಗಳು ಮಂಗಳೂರು ತಾಲೂಕಿನತ್ತ ಬರುತ್ತಿವೆ. ಸುತ್ತಮುತ್ತಲಿನ ಕಾಡು ಪ್ರದೇಶಗಳಲ್ಲಿ ಚಿರತೆಗಳ ಸಂತತಿ ಹೆಚ್ಚಳವಾಗಿದೆ. ಬೇಸಿಗೆಯಲ್ಲಿ ಆಹಾರ, ನೀರು ಅರಸಿಕೊಂಡು ನಾಡಿನತ್ತ ಬರುತ್ತಿವೆ. ಕುಲಶೇಖರ ಮತ್ತು ಬಡಗ ಎಕ್ಕಾರುವಿನಲ್ಲಿ ತಿರುಗಾಡುತ್ತಿದ್ದ ಎರಡು ಚಿರತೆಗಳನ್ನು ಈಗಾಗಲೇ ಅರಣ್ಯಕ್ಕೆ ಅಟ್ಟಲಾಗಿದೆ. ಈ ರೀತಿಯಾಗಿ ರಕ್ಷಣೆ ಮಾಡಿ ಕಾಡಿಗೆ ಬಿಡುವ ವನ್ಯ ಜೀವಿಗಳ ಮೇಲ್ವಿಚಾರಣೆಯನ್ನೂ ಮಾಡಲಾಗುತ್ತದೆ ಎಂದು ಅರಣ್ಯ ಅಧಿಕಾರಿ ಸಭೆಗೆ ಮಾಹಿತಿ ನೀಡಿದರು.

ಕಳಪೆ ಎಣ್ಣೆ ಬಳಸದಂತೆ ತಪಾಸಣೆ ನಡೆಸಿ

ಹೊಟೇಲ್-ಬೀದಿಬದಿ ವ್ಯಾಪಾರದಲ್ಲಿ ಕಳಪೆ ಅಡುಗೆ ಎಣ್ಣೆ ಬಳಕೆಯಾಗುತ್ತಿರುವ ದೂರುಗಳಿದ್ದು ಈ ಬಗ್ಗೆ ಆಹಾರ ಸುರಕ್ಷತಾ ಅಧಿಕಾರಿಗಳಿಂದ ತಪಾಸಣೆ ನಡೆಸಬೇಕು. ಮುಂದಿನ ಸಭೆಯಿಂದ ಈ ಅಧಿಕಾರಿಗಳು ಹಾಜರಿರುವಂತೆ ಸೂಚನೆ ನೀಡಬೇಕು ಎಂದು ಡಾ.ಭರತ್ ಶೆಟ್ಟಿ ತಾಪಂ ಇಒಗೆ ನಿರ್ದೇಶಿಸಿದರು. ಸಭೆಯಲ್ಲಿ ತಾ.ಪಂ. ಆಡಳಿತಾಧಿಕಾರಿ ಶಕುಂತಳಾ ಶೆಣೈ, ಕಾರ್ಯನಿರ್ವಾಹಕ ಅಧಿಕಾರಿ ಮಹೇಶ್ ಕುಮಾರ್ ಹೊಳ್ಳ, ತಹಶೀಲ್ದಾರ್ ರಮೇಶ್ ಬಾಬು, ತಾಲೂಕು ಯೋಜನಾಧಿಕಾರಿ ಸುಕನ್ಯಾ ರಾವ್ ಉಪಸ್ಥಿತರಿದ್ದರು.

ಸುತ್ತಮುತ್ತ

ನಾಳೆ ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಬೆಥನಿ, ಸೈಂಟ್ ಥೆರೆಸಾ, ಎಸ್.ಸಿ.ಎಸ್ ಹಾಸ್ಪಿಟಲ್, ಕಲೆಕ್ಟರ್ಸ್ ಗೇಟ್, ಬಲ್ಮಠ, ಕೊಲಾಸೋ ಹಾಸ್ಪಿಟಲ್, ಕ್ವೀನ್ಸ್ ಕಾರ್ನರ್, ಕುಮಾರ್ ಇಂಟರ್ ನ್ಯಾಷನಲ್, ಡೊಮಿನೋಸ್ ಪಿಜ್ಜಾ, ಮರ್ಕೆರಾ ಹಿಲ್, ಲೋಬೋ ಲೇನ್, ಸೈಂಟ್ ಆಗ್ನೇಸ್, ಹಾರ್ಟಿಕಲ್ಚರ್ ಆಫೀಸ್, ವಾಟರ್ ಸಪ್ಲೈ, ಮಂಗಳೂರು ಸಿಟಿ ಕಾರ್ಪೊರೇಷನ್, ವಾಸ್‌ಲೇನ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 7ಕ್ಕೆ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ತಿಳಿಸಿದೆ.

ಮೇ 8: ಶ್ರೀ ದತ್ತಾನಂದ ಸ್ವಾಮಿ ಪಟ್ಟಾಭಿಷೇಕ ಮಹೋತ್ಸವ

ಮಂಗಳೂರು: ಮಹಾರಾಷ್ಟ್ರ ರಾಜ್ಯದ ಸಿಂಧುದುರ್ಗ ಜಿಲ್ಲೆಯ ದಾಭೋಲಿ ಕ್ಷೇತ್ರದಲ್ಲಿರುವ ಶ್ರೀ ಪೂರ್ಣಾನಂದ ಸ್ವಾಮಿ ಮಠದಲ್ಲಿ ಪರಮಪೂಜ್ಯ ಶ್ರೀಮತ್ ಪ್ರದ್ಯುಮ್ನಾನಂದ ಸ್ವಾಮಿಗಳವರ ಆಶೀರ್ವಾದದಿಂದ ನಿಯುಕ್ತರಾದ ಉತ್ತರಾಧಿಕಾರಿ ಶಿಷ್ಯರಾದ ಶ್ರೀಮತ್ ದತ್ತಾನಂದ ಸರಸ್ವತಿ ಸ್ವಾಮಿಗಳವರ ಪಟ್ಟಾಭಿಷೇಕ ಮಹೋತ್ಸವವು ಮೇ 8ರಂದು ಶ್ರೀ ಸಂಕೇಶ್ವರ-ಕರವೀರ ಮಠದ ಜಗದ್ಗುರು ಶ್ರೀ ಸಚ್ಚಿದಾನಂದ ಅಭಿನವ ವಿದ್ಯಾನೃಸಿಂಹ ಭಾರತಿ ಸ್ವಾಮೀಜಿಯವರ ಪಾವನ ಉಪಸ್ಥಿತಿಯಲ್ಲಿ ನೆರವೇರಲಿದೆ. ಈ ಮಹೋತ್ಸವದ ಅಂಗವಾಗಿ ವೇದಘೋಷಗಳೊಂದಿಗೆ ವಿವಿಧ ಪೂಜೆಗಳು, ಹೋಮಗಳು, ಗುರುಪಾದ ಪೂಜೆ ಹಾಗೂ ಆಶೀರ್ವಚನ ಕಾರ್ಯಕ್ರಮಗಳು ನಡೆಯಲಿದ್ದು, ದೇಶದ ವಿವಿಧ ಭಾಗಗಳಿಂದ ಗಣ್ಯರು, ಧಾರ್ಮಿಕ ಮುಖಂಡರು, ಶಿಷ್ಯವೃಂದ ಹಾಗೂ ಭಕ್ತರು ಭಾಗವಹಿಸಲಿದ್ದಾರೆ. ಸಮಾಜದ ಸರ್ವ ಗಣ್ಯರು, ಸಮಾಜಬಾಂಧವರು, ಶಿಷ್ಯವೃಂದ ಹಾಗೂ ಭಕ್ತಜನರು ಕುಟುಂಬ ಸಮೇತರಾಗಿ ಆಗಮಿಸಿ, ಈ ಮಹಾಮಂಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ, ಗುರುಪೀಠಕ್ಕೆ ಶ್ರದ್ಧಾಭಕ್ತಿಯಿಂದ ಗೌರವ ಸಲ್ಲಿಸುವಂತೆ ಪೂರ್ಣಾನಂದ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಮುರಳೀಧರ ಪ್ರಭು ವಗ್ಗ ಪ್ರಕಟಣೆಯಲ್ಲಿ ಕೋರಿದ್ದಾರೆ.

ಸಾಂಸ್ಕೃತಿಕ ಪ್ರಕೋಷ್ಠ: ಚೇತಕ್ ನೇಮಕ



ಮಂಗಳೂರು: ಭಾರತೀಯ ಜನತಾ ಪಾರ್ಟಿ ಕಲೆ ಮತ್ತು ಸಾಂಸ್ಕೃತಿಕ ಪ್ರಕೋಷ್ಠ ದಕ್ಷಿಣ ಕನ್ನಡ ಜಿಲ್ಲಾ ಸಂಚಾಲಕರಾಗಿ ರಂಗಭೂಮಿ ಕಲಾವಿದ ಚೇತಕ್ ಪೂಜಾರಿ ನೇಮಕಗೊಂಡಿದ್ದಾರೆ. ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಅವರು ಈ ನೇಮಕ ಮಾಡಿದ್ದಾರೆ.

ಮೊದಲನೇ ಪುಟದಿಂದ

ಬೌಬೌ ಭೀತಿ

ಎಂದು ಪಶು ಸಂಗೋಪನಾ ಇಲಾಖೆಯ ಅಧಿಕಾರಿ ಕೆಡಿಪಿ ಸಭೆಯಲ್ಲಿ ಮಾಹಿತಿ ನೀಡಿದ್ದಾರೆ. ಬೀದಿ ನಾಯಿ ಕಡಿತ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸುವಂತೆ ಶಾಸಕ ಡಾ. ಭರತ್ ಶೆಟ್ಟಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಹಂದಿಗಳ ದರ್ಬಾರ್

ತೆಂಗಿನ ಕಾಯಿ ಹೆಕ್ಕಲು ಸ್ವಲ್ಪ ತಡವಾದರೂ ಅದು ಕೃಷಿಕರಿಗೆ ಲಭಿಸುತ್ತಿಲ್ಲ, ಅದೇ ರೀತಿ ಗೇರುಬೀಜ ಕೂಡ ಕಾಡುಹಂದಿಗಳ ಪಾಲಾಗುತ್ತಿದೆ. ಹೆಚ್ಚಿನ ಸ್ಥಳಗಳಲ್ಲಿ ಹಂದಿಗಳು ಕೃಷಿ ಪ್ರದೇಶಗಳನ್ನು ಹಾನಿ ಮಾಡುತ್ತಿದೆ. ಹಂದಿಗಳನ್ನು ಓಡಿಸಲು ತಗಡು ಪಾತ್ರೆ, ಬಾಟಲಿಗಳನ್ನು ಕಟ್ಟಿ ಸದ್ದು ಮಾಡಿದರೂ ಪ್ರಯೋಜನವಾಗಿಲ್ಲ. ಇನ್ನು ತೆಂಗಿನ ಗಿಡ, ಅಡಿಕೆ ಗಿಡ, ಬಾಳೆ ಗಿಡಗಳ ರಕ್ಷಣೆಗೆ ಪ್ಲಾಸ್ಟಿಕ್, ಸೀರೆ ಇತ್ಯಾದಿಗಳನ್ನು ಕಟ್ಟಿ ರಕ್ಷಿಸುವ ಕಾರ್ಯ ಮಾಡುತ್ತಿದ್ದಾರೆ. ಈ ಮಧ್ಯೆ ಕಾಡುಹಂದಿ ಆಕ್ರಮಣಕ್ಕೊಳಗಾಗಿ ಗಾಯಗೊಳ್ಳುವವರ ಸಂಖ್ಯೆ ದಿನಕ್ಕೆ ಏರಿಕೆಯಾಗುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಕೃಷಿಕರು ಒತ್ತಾಯಿಸಿದ್ದಾರೆ.

ಹಿಂದೂ ರುದ್ರಭೂಮಿ

ಮೂಲಸೌಕರ್ಯಗಳ ಕೊರತೆಯಿಂದ ವರ್ಷವಿಡಿ ಇಲ್ಲಿನ ಜನರು ಮೃತದೇಹಗಳನ್ನು ಬೇರೆಡೆ ಕೊಂಡೊಯ್ದು ಸುಡುವ ಅನಿವಾರ್ಯತೆಯಿದೆ. ಮಳೆಗಾಲ ಹತ್ತಿರವಾಗುತ್ತಿರುವ ಹಿನ್ನೆಲೆ, ತಕ್ಷಣವೇ ನೀರು, ವಿದ್ಯುತ್, ಶವದಹನ ಪೆಟ್ಟಿಗೆ, ಕಟ್ಟಿಗೆ ಸಂಗ್ರಹ ಕೋಣೆ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿ, ರುದ್ರಭೂಮಿ ಅಭಿವೃದ್ಧಿಪಡಿಸಬೇಕು ಎನ್ನುವುದಾಗಿ ಮೇಲ್‌ಗಂಗೊಳ್ಳಿಯ ಡಾ. ಬಿ.ಆರ್. ಅಂಬೇಡ್ಕರ್ ಯುವಕ ಮಂಡಲ ಅಧ್ಯಕ್ಷ ನಾಗೇಶ ಆಗ್ರಹಿಸಿದ್ದಾರೆ.

ಪಂಚ ರಾಜ್ಯಗಳ ಚುನಾವಣೆ: ಮೂರು ರಾಜ್ಯಗಳಲ್ಲಿ ಬಿಜೆಪಿ ಸಾಧನೆ

ಮಾಣಿ ಮಹಾಶಕ್ತಿ ಕೇಂದ್ರದಲ್ಲಿ ವಿಜಯೋತ್ಸವ

ಬಂಟ್ವಾಳ: ಪುದುಚೇರಿ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿ ಏಕಾಂಗಿಯಾಗಿ ಸಂಪೂರ್ಣ ಬಹುಮತದೊಂದಿಗೆ ಆಡಳಿತಕ್ಕೆ ಬಂದಿರುವ ನಿಟ್ಟಿನಲ್ಲಿ ಪ್ರಧಾನಿ ಮೋದಿ, ದೇಶದ ಗೃಹ ಮಂತ್ರಿ ಅಮಿತ್ ಶಾ, ಯೋಗಿ ಆದಿತ್ಯನಾಥ್ ಸೇರಿದಂತೆ ಅಲ್ಲಿನ ಪಕ್ಷದ ಕಾರ್ಯಕರ್ತರಿಗೆ ಅಭಿನಂದನೆಗಳ ಸಲ್ಲಿಸಿ ಮಾಣಿ ಮಹಾಶಕ್ತಿಕೇಂದ್ರದಿಂದಕೊಡಾಜೆಯಲ್ಲಿ ವಿಜಯೋತ್ಸವ ಆಚರಿಸಲಾಯಿತು.

ಬಿಜೆಪಿ ಮಂಡಲ ಕಾರ್ಯದರ್ಶಿ ಸನತ್ ಕುಮಾರ್ ರೈ, ಮಹಾಶಕ್ತಿ ಕೇಂದ್ರ ಅಧ್ಯಕ್ಷ ಅರವಿಂದ್ ರೈ, ಪ್ರಧಾನ ಕಾರ್ಯದರ್ಶಿ ನಾಗೇಶ್ ಭಂಡಾರಿ, ನೆರಳಕಟ್ಟೆ ಸಿಎ ಬ್ಯಾಂಕ್ ಅಧ್ಯಕ್ಷ ಪುಷ್ಪರಾಜ ಚೌಟ, ನಿರ್ದೇಶಕ ನಾರಾಯಣ ಶೆಟ್ಟಿ, ಅಶೋಕ್ ರೈ, ಮಾಣಿ ಶಕ್ತಿ ಕೇಂದ್ರ ಪ್ರಮುಖ್ ಹರೀಶ್ ಕುಲಾಲ್, ನೆಟ್ಲ ಮೂಡ್ನೂರು ಶಕ್ತಿ ಕೇಂದ್ರ ಪ್ರಮುಖ್ ಶ್ರೀ ಧನಂಜಯ, ಪೆರಾಜೆ ಶಕ್ತಿ ಕೇಂದ್ರ ಪ್ರಮುಖ್ ಶ್ರೀನಿವಾಸ್, ಹರೀಶ್ ಪಾಣೇರ್, ಪಂ. ಮಾಜಿ ಅಧ್ಯಕ್ಷ ಗಣೇಶ್ ಬಂಟ್ರಿಂಜಾ, ಜೀವನ್ ಪೆರಾಜೆ, ಸುಶೀಲ ಆನಂದ್, ಬೂತ್ ಅಧ್ಯಕ್ಷ ರಮೇಶ್ ಗೌಡ, ಲೋಕೇಶ್ ಗೌಡ, ಪದಾಧಿಕಾರಿಗಳಾದ ಕಿರಣ್ ಬಂಟ್ರಿಜ, ದಯಾನಂದ ಗೌಡ, ಶಿವರಾಮ್ ಶೆಟ್ಟಿ, ಸತೀಶ್ ಗೌಡ, ವಿನೀತ್, ಕುಸುಮಧರ್ ಗೌಡ, ಪೂವಪ್ಪ ಗೌಡ, ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು.



ಶಕ್ತಿ ಕೇಂದ್ರದ ಕಾರ್ಯಕರ್ತರು ಭಾಗಿ

ಅನಂತಾಡಿ, ನೆಟ್ಲಮೂಡ್ನೂರು, ಮಾಣಿ, ಪೆರಾಜೆ ಶಕ್ತಿ ಕೇಂದ್ರಗಳ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಕೊಡಾಜೆಯ ಜಂಕ್ಷನ್ ನಲ್ಲಿ ಸಿಡಿಮದ್ದು ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಲಾಯಿತು.

ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ ಉದ್ಘಾಟನೆ

ಪಕ್ಷ ಸಂಘಟನೆಗೆ ಸಹಕಾರಿ: ಕ್ಯಾ. ಬ್ರಿಜೇಶ್ ಚೌಟ

ಮಂಗಳೂರು: ಭಾರತೀಯ ಜನತಾ ಪಾರ್ಟಿ ಮಂಗಳೂರು ನಗರ ದಕ್ಷಿಣ ಮಂಡಲದ ವತಿಯಿಂದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026 ವರ್ಗದ ಉದ್ಘಾಟನಾ ಸಮಾರಂಭವು ಗಂಜಿಮಠ ಬಳಿಯ ಒಡ್ದೂರು ಫಾರ್ಮ್‌ನಲ್ಲಿ ಮಂಗಳವಾರ ನಡೆಯಿತು.

ಸಂಸದ ಕ್ಯಾ. ಬ್ರಿಜೇಶ್ ಚೌಟ ಮಾತನಾಡಿ, ಇಂತಹ ವರ್ಗಗಳು ಪಕ್ಷ ಸಂಘಟನೆಗೆ ಸಹಕಾರಿಯಾಗುವುದರ ಜೊತೆಗೆ ಕಾರ್ಯಕರ್ತರನ್ನು ರೂಪುಗೊಳಿಸುವಲ್ಲಿ ಸಹಕಾರಿ ಎಂದರು.

ಶಾಸಕ ಡಿ.ವೇದವ್ಯಾಸ ಕಾಮತ್ ಶಿಬಿರಾರ್ಥಿಗಳನ್ನು ಉದ್ದೇಶಿಸಿ, ಮಾತನಾಡಿ, ಪಕ್ಷ ಸಂಘಟನೆ ಹಾಗೂ ಕೇಂದ್ರದ ಸಾಧನೆಗಳ ಬಗ್ಗೆ ಮಾಹಿತಿ ನೀಡಿದರು.

ಜಿಲ್ಲಾ ನಾಯಕರು ಭಾಗಿ

ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಮಂಗಳೂರು ದಕ್ಷಿಣ ಮಂಡಲ ಅಧ್ಯಕ್ಷ ರಮೇಶ್ ಕಂಡೆಟ್ಟು, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪ್ರೇಮಾನಂದ ಶೆಟ್ಟಿ ಮತ್ತು ಯತೀಶ್ ಆರ್ವಾರ್, ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ರಮೇಶ್ ಹೆಗ್ಡೆ ಹಾಗೂ ಲಲ್ಲೇಶ್ ಕುಮಾರ್, ರಾಜ್ಯ ಕಾರ್ಯಕಾರಿಣಿ ಸದಸ್ಯ ನಿತಿನ್ ಕುಮಾರ್, ವಿಧಾನಪರಿಷತ್ ಮಾಜಿ ಸದಸ್ಯ ಮೋನಪ್ಪ ಭಂಡಾರಿ, ಜಿಲ್ಲಾ ಪದಾಧಿಕಾರಿಗಳು, ನಿಕಟ ಪೂರ್ವ ಮನಪಾ ಸದಸ್ಯರು, ಮಂಡಲ ಪದಾಧಿಕಾರಿಗಳು, ಜಿಲ್ಲೆ ಮತ್ತು ಮಂಡಲದ ಮೋರ್ಚಾದ ಪದಾಧಿಕಾರಿಗಳು, ಪ್ರಕೋಷ್ಠದ ಪ್ರಮುಖರು, ಮಹಾಶಕ್ತಿ ಕೇಂದ್ರದ ಪ್ರಮುಖರು, ಶಕ್ತಿಕೇಂದ್ರದ ಪ್ರಮುಖರು, ಬೂತ್ ಪ್ರಮುಖರು ಉಪಸ್ಥಿತರಿದ್ದರು.



ಎರಡು ದಿನ ಶಿಬಿರ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆಗಳು ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯಗಳ ಬಗ್ಗೆ ವಿಸ್ತಾರವಾಗಿ ಶಾಸಕ ಡಿ.ವೇದವ್ಯಾಸ ಕಾಮತ್ ಮಾಹಿತಿ ನೀಡಿದರು. ಎರಡು ದಿನಗಳ ಕಾಲ ವರ್ಗ ನಡೆಯಲಿದ್ದು, ಶಿಬಿರಾರ್ಥಿಗಳಿಗೆ ಹಲವು ಪ್ರಮುಖರು ಪಕ್ಷ ಸಂಘಟನೆ, ಚಟುವಟಿಕೆ ಕುರಿತಂತೆ ವಿವಿಧ ಅವಧಿಗಳನ್ನು ತೆಗೆದುಕೊಳ್ಳಲಿದ್ದಾರೆ.

ಮೇ 28ಕ್ಕೆ ಮಂಗಳೂರಿನ 'ಅಮ್ಮ' ಭೇಟಿ, ಭರದ ಸಿದ್ಧತೆ

ಮಂಗಳೂರು: ಸದ್ಗುರು ಶ್ರೀ ಮಾತಾ ಅಮೃತಾನಂದಮಯಿ ದೇವಿಯವರು ಮೇ 28ರಂದು ಮಂಗಳೂರಿಗೆ ಆಗಮಿಸಲಿದ್ದು, ಎರಡು ದಿನಗಳ ಕಾಲ ಜರುಗುವ ಬ್ರಹ್ಮಸ್ಥಾನಂ ಮಹೋತ್ಸವದಲ್ಲಿ ಭಾಗವಹಿಸಲಿರುವರು. ಆ ಪ್ರಯುಕ್ತ ಮಂಗಳೂರಿನ ಶಾಖಾ ಮಠದಲ್ಲಿ ಅನೇಕ ಚಟುವಟಿಕೆಗಳು ಈಗಾಗಲೇ ಪ್ರಾರಂಭವಾಗಿವೆ. ಏಳು ವರ್ಷಗಳ ನಂತರ ಅಮ್ಮನವರು ಮಂಗಳೂರಿಗೆ ಬಂದು ಭಕ್ತರನ್ನು ಅನುಗ್ರಹಿಸುವ 'ಅಮೃತಾಲಿಂಗನ', ಅಮ್ಮನ ದಿವ್ಯ ಸಾನ್ನಿಧ್ಯದಲ್ಲಿ ಜರಗಲಿರುವ 'ಉದಯಾಸ್ತಮಾನ ಪೂಜೆ'ಗಳಿಗೆ ಭರದ ಸಿದ್ಧತೆ ನಡೆಯುತ್ತಿದೆ.

ಆ ಪ್ರಯುಕ್ತ ಅಮ್ಮನ ಭಕ್ತರು, ಸೇವಾ ಸಮಿತಿಗಳ ಪದಾಧಿಕಾರಿಗಳು ಸೇರಿ ಕರ ಸೇವೆಯ ಮೂಲಕ ಆಶ್ರಮ, ದೇವಸ್ಥಾನಗಳ ಸ್ವಚ್ಛತಾ ಕಾರ್ಯ ನಡೆಸಿದರು. ದೇಶ ವಿದೇಶಗಳ ಭಕ್ತರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಅವರಿಗೆ ಸೂಕ್ತ ವಾಸ್ತವ್ಯದ ವ್ಯವಸ್ಥೆಗೆ ಪೂರ್ವ ಸಿದ್ಧತೆ ಮಾಡಲಾಗುತ್ತಿದೆ. ಮಠದ ಮುಖ್ಯಸ್ಥ ಸ್ವಾಮಿನಿ ಮಂಗಳಾಮೃತ ಪ್ರಾಣ ಇವರ ನೇತೃತ್ವದಲ್ಲಿ ಭಾನುವಾರ ನಡೆದ ಕರಸೇವೆ ಯಲ್ಲಿ ಸೇವಾ ಸಮಿತಿಯ ಅಧ್ಯಕ್ಷ ಸುರೇಶ್ ಅಮೀನ್, ಯುವ ಸೇವಾ ವಿಭಾಗ ಅಯುಧ್ ಮಂಗಳೂರು ಇದರ ಅಧ್ಯಕ್ಷೆ ವಕೀಲೆ ಸ್ವಸ್ತಿ ಶೆಟ್ಟಿ ವಿವಿಧ ಸಮಿತಿಗಳ ಪದಾಧಿಕಾರಿಗಳು ಅಮ್ಮನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.



ವಿವಿಧ ದೇಗುಲಗಳಲ್ಲಿ ಅಂಗಾರಕ ಸಂಕಷ್ಟಿ ವ್ರತಾಚರಣೆ

ಮಂಗಳೂರು: ನಾಡಿನಾದ್ಯಂತ ವರ್ಷದ 2ನೇ ಅಂಗಾರಕ ಸಂಕಷ್ಟಿ ವ್ರತಾಚರಣೆಯು ಶರವು ಶ್ರೀ ಮಹಾ ಗಣಪತಿ ದೇವಸ್ಥಾನ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ಮಂಗಳವಾರ ಶ್ರದ್ಧಾಭಕ್ತಿಯಿಂದ ನಡೆಯಿತು.

ದೇಗುಲಗಳಲ್ಲಿ ಸಂಭ್ರಮ

ಕದ್ರಿ ಶ್ರೀ ಮಂಜುನಾಥ ದೇವಸ್ಥಾನ, ರಥಬೀದಿ ವೆಂಕಟರಮಣ ದೇವಸ್ಥಾನ, ಮಹತೋಭಾರ ಮಂಗಳಾದೇವಿ ದೇವಸ್ಥಾನ, ಕುದ್ರೋಳಿ ಶ್ರೀ ಗೋಕರ್ಣನಾಥ ದೇವಸ್ಥಾನ, ಉರ್ವಸ್ಟೋರ್ ಮಹಾಗಣಪತಿ ದೇವಸ್ಥಾನ, ಉರ್ವ ಮಾರಿಯಮ್ಮ ದೇವಸ್ಥಾನ, ಕಂಕನಾಡಿ ಗರಡಿ ಬ್ರಹ್ಮಬೈದರ್ಕಳ ಕ್ಷೇತ್ರ ಸೇರಿದಂತೆ ವಿವಿಧ ಕಡೆ ಅಂಗಾರಕ ಸಂಕಷ್ಟ ವಿಶೇಷ ಪೂಜೆ, ಹೋಮಗಳು ನಡೆಯಿತು.

ಬೆಳಗ್ಗಿನಿಂದಲೇ ಭಕ್ತಾದಿಗಳು ದೇವಸ್ಥಾನಕ್ಕೆ ಭೇಟಿ ನೀಡಿ ಮಹಾಗಣಪತಿ ದೇವರಿಗೆ ಗರಿಕೆ, ಹಿಂಗಾರ, ಪಂಚಕಜ್ಜಾಯ, ಗಣಹೋಮ ಸೇವೆಯನ್ನು ಸಲ್ಲಿಸಿದರು. ಶರವು ಕ್ಷೇತ್ರದಲ್ಲಿ ಬೆಳಗ್ಗೆ ಗಣಹೋಮ ಆರಂಭಗೊಂಡು ಮಧ್ಯಾಹ್ನ ಪೂರ್ಣಾಹುತಿ ನಡೆಯಿತು. ನಂತರ ಮಹಾಗಣಪತಿ ದೇವರಿಗೆ ಮಹಾಪೂಜೆ ನಡೆದು ಗಣಹೋಮ ಪ್ರಸಾದ ವಿತರಣೆ ಆರಂಭಗೊಂಡಿತು. ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸರತಿ ಸಾಲಿನಲ್ಲಿ ನಿಂತು ಪ್ರಸಾದ ಸ್ವೀಕರಿಸಿದರು. ಈ ಸಂದರ್ಭ ಶರವು ಕ್ಷೇತ್ರದ ಶಿಲೆಶಿಲೆ ಆಡಳಿತ ಮೊಕ್ತೇಸರ ಶರವು ರಾಘವೇಂದ್ರ ಶಾಸ್ತ್ರಿ, ಸುದೇಶ್ ಶಾಸ್ತ್ರಿ ರಾಹುಲ್ ಶಾಸ್ತ್ರಿ ಉಪಸ್ಥಿತರಿದ್ದರು.



ಸ್ಥಳೀಯರ, ಜನಪ್ರತಿನಿಧಿಗಳ ಪ್ರತಿಭಟನೆಗೆ ಮಣಿದ ಕಡಬ ಪಟ್ಟಣ ಪಂಚಾಯತ್ ಆಡಳಿತ

ಪರಿಸರಕ್ಕೆ ಕಂಟಕವಾಗಿದ್ದ ತ್ಯಾಜ್ಯ ರಾಶಿಯ ಕೊನೆಗೂ ತೆರವು

ಕಡಬ: ಕಡಬ ಪಟ್ಟಣ ಪಂಚಾಯತ್ ವ್ಯಾಪ್ತಿಯ ಕೋಡಿಂಬಾಳ ಗ್ರಾಮದ ಕಕ್ಕೆತ್ತಿಮಾರ್‌ನ ಘನ ತ್ಯಾಜ್ಯ ವಿಲೇವಾರಿ ಘಟಕದ ಅವ್ಯವಸ್ಥೆ ವಿರುದ್ಧ ಆಕ್ರೋಶಗೊಂಡಿದ್ದ ಸ್ಥಳೀಯರು ಕಳೆದ ವಾರ ಘಟಕಕ್ಕೆ ತ್ಯಾಜ್ಯ ಸಾಗಾಟ ಮಾಡುತ್ತಿದ್ದ ವಾಹನ ತಡೆದು ಪ್ರತಿಭಟಿಸಿದ್ದಲ್ಲದೇ ಸೋಮವಾರ ಪಟ್ಟಣ ಪಂಚಾಯತ್‌ಗೆ ಮನವಿ ಮಾಡಿ ಪ್ರತಿಭಟನೆಯ ಎಚ್ಚರಿಕೆ ನೀಡಿದ ಬೆನ್ನಲ್ಲೇ ರಾಶಿ ಬಿದ್ದಿದ್ದ ತ್ಯಾಜ್ಯವನ್ನು ತೆರವು ಮಾಡುವ ಕಾರ್ಯಕ್ಕೆ ಚಾಲನೆ ದೊರೆತಿದೆ.

ಪ.ಪಂ. ಅಧ್ಯಕ್ಷೆ ತಮನ್ನಾ ಜಬೀನ್, ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಎಂ. ಹನೀಫ್, ಮುಖ್ಯಾಧಿಕಾರಿ ಲೀಲಾವತಿ ಇ., ಸದಸ್ಯರಾದ ಅಕ್ಷತಾ ಬಾಲಕೃಷ್ಣ ರೋಹಿತ್ ಪಣೆಮಜಲು, ಕೃಷ್ಣಪ್ಪ ಬೈಲಂಗಡಿ ಮತ್ತಿತರರು ಘಟಕ್ಕೆ ಭೇಟಿ ನೀಡಿ ತ್ಯಾಜ್ಯ ತೆರವು ಕಾರ್ಯದ ವೀಕ್ಷಣೆ ಮಾಡಿದರು.

ಕೊನೆಗೂ ಜೆಸಿಬಿಗೆ ಸಿಬ್ಬಂದಿ ನೇಮಕ

ಚರಂಡಿ ದುರಸ್ತಿ, ತ್ಯಾಜ್ಯ ನಿರ್ವಹಣೆ ಸೇರಿ ದಂತೆ ಪ.ಪಂ.ನ ಕೆಲಸ ಕಾರ್ಯಗಳಿಗಾಗಿ ಬಳಸಲು ಒಂದು ಜೆಸಿಬಿ ಯಂತ್ರವನ್ನು ಖರೀದಿಸಿ ಹಲವು ತಿಂಗಳುಗಳೇ ಕಳೆದಿದ್ದರೂ ಅದಕ್ಕೆ ಚಾಲಕನ ನೇಮಕವಾಗದೇ ಪಟ್ಟಣ ಪಂಚಾಯತ್‌ನ ಆವರಣದಲ್ಲಿ ಅದನ್ನು ನಿಲ್ಲಿಸಲಾಗಿತ್ತು. ಈ ಬಾರಿ ಆ ಹೊಸ ಜೆಸಿಬಿಯನ್ನು ತಾತ್ಕಾಲಿಕ ನೆಲೆಯಲ್ಲಿ ಚಾಲಕನನ್ನು ನೇಮಿಸಿ ತ್ಯಾಜ್ಯ ತೆರವಿಗೆ ಬಳಕೆ ಮಾಡಲಾಗುತ್ತಿದೆ. ಈ ತಿಂಗಳ ಕೊನೆಯೊಳಗೆ ತ್ಯಾಜ್ಯ ಸಮಸ್ಯೆ ಬಗೆಹರಿಸುವುದಾಗಿ ಪ್ರತಿಭಟನಕಾರರಿಗೆ ಪ.ಪಂ. ಅಧ್ಯಕ್ಷೆ ತಮನ್ನಾ ಜಬೀನ್ ಭರವಸೆ ನೀಡಿದಂತೆ ಕಸ ತೆರವು ಕಾರ್ಯ ಶೀಘ್ರ ಮುಗಿಯಲಿದೆ ಎಂದು ನಿರೀಕ್ಷಿಸಲಾಗಿದೆ.



ಮಂಗಳೂರಿನ ಪಚ್ಚನಾಡಿ ಘಟಕಕ್ಕೆ ತ್ಯಾಜ್ಯ ರವಾನೆ!

ಬೃಹತ್ ಟ್ರಕ್‌ನಲ್ಲಿ ಮಂಗಳವಾರ ಸಂಜೆಯ ವೇಳೆಗೆ ಒಟ್ಟು 4 ಲೋಡ್ ತ್ಯಾಜ್ಯವನ್ನು ತೆರವುಗೊಳಿಸಲಾಗಿದೆ. ತ್ಯಾಜ್ಯವನ್ನು ಮಂಗಳೂರಿನ ಪಚ್ಚನಾಡಿ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಾಗಿಸಲಾಗುತ್ತಿದೆ ಎಂದು ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಲೀಲಾವತಿ ಇ. ತಿಳಿಸಿದ್ದಾರೆ.